ವಿಶ್ವವಾಣಿ
ವಿಶ್ವಾಸವೇ ವಿಶ್ವ

ಇಂದು ಕಿರಿಯರ ವಿಶ್ವಕಪ್ ಫೈನಲ್ ಭಾರತ-ಇಂಗ್ಲೆಂಡ್ ಹಣಾಹಣಿ

ಇಂದು ಹರಾರೆಯಲ್ಲಿ ನಡೆಯಲಿರುವ ಅಂಡರ್-19 ವಿಶ್ವ ಕಪ್ ಕ್ರಿಕೆಟ್ ಫೈನಲ್‌ನಲ್ಲಿ ಆಯುಷ್ ಮ್ಹಾತ್ರೆ ನಾಯಕತ್ವದ ಭಾರತ ತಂಡವು ಥಾಮಸ್ ರೀವ್ ನಾಯಕತ್ವದ ಇಂಗ್ಲೆಂಡ್ ತಂಡವನ್ನು ಎದುರಿಸಲಿದೆ. 10ನೇ ಬಾರಿ ಫೈನಲ್ ತಲುಪಿರುವ ಭಾರತ ಈ ಪಂದ್ಯದ ಮೂಲಕ 6ನೇ ಸಲ ಚಾಂಪಿಯನ್ ಆಗುವ ನಿರೀಕ್ಷೆಯಲ್ಲಿದೆ.

ಮಹಾತ್ಮರನ್ನೇ ಬಂಡವಾಳ ಮಾಡಿಕೊಂಡ ನುಂಗಪ್ಪಗಳು !

ಸಿದ್ದಪ್ಪ, ರಾಗಪ್ಪ, ಮಲ್ಲಪ್ಪ ಹಾಗೂ ಎಲ್ಲಾ ನುಂಗಪ್ಪಗಳೇ,
ನನ್ನ ಹೆಸರಲ್ಲಿ 60 ವರ್ಷ ಲೂಟಿ ಮಾಡಿದ್ದಲ್ಲದೇ,
ನನ್ನ ಗ್ರಾಮ ಸ್ವರಾಜ್ಯ ಕನಸು ನನಸಾಗಿಸಲು
ಮೋದಿ ಸರ್ಕಾರ ಜಾರಿಗೆ ತಂದಿರುವ
VB-G RAM G ಯೋಜನೆ ಕುರಿತು
ಅಪಪ್ರಚಾರ ಮಾಡ್ತಿರಾ ?

ಶ್ರಮಿಕರ ಬದುಕಿಗೆ ಭರವಸೆ ವಿಬಿ-ಜಿ ರಾಮ್ ಜಿ
Viksit Bharat Guarantee for Rozgar and Ajeevika Mission (Gramin)

ಉದ್ಯೋಗ ಮತ್ತು ನ್ಯಾಯಯುತ ವೇತನ ಗ್ರಾಮೀಣ ಕಾರ್ಮಿಕರ ಹಕ್ಕು ಎಂದು ಪ್ರತಿಪಾದಿಸಿ ಕೆಲಸದ ದಿನಗಳನ್ನು 100 ರಿಂದ 125 ದಿನಗಳಿಗೆ ಹೆಚ್ಚಿಸಲಾಗಿದೆ

ವಿಬಿ-ಜಿ ರಾಮ್ ಜಿ ಅಡಿ ಹದಿನೈದು ದಿನದೊಳಗೆ ಡಿಬಿಟಿ ಮೂಲಕ ವೇತನ ಪಾವತಿಯಾಗಲಿದೆ. ಮನ್ರೇಗಾದಲ್ಲಿ ತಿಂಗಳಾನುಗಟ್ಟಲೆ ವೇತನ ಪಾವತಿಯಾಗುತ್ತಿರಲಿಲ್ಲ

ಗ್ರಾಮ ಸಭೆಗಳಲ್ಲಿ ನಿರ್ಧಾರವಾಗಿ ಗ್ರಾಮ ಪಂಚಾಯಿತಿಗಳ ಮೂಲಕವೇ ಕೆಲಸಗಳು ನಡೆಯುತ್ತವೆ

ಬಯೋಮೆಟ್ರಿಕ್ ಹಾಜರಾತಿ, ಮೊಬೈಲ್ ಆಧಾರಿತ ಮೇಲ್ವಿಚಾರಣೆ, AI ಡಿಜಿಟಲ್, GPS ವ್ಯವಸ್ಥೆ ಮೂಲಕ ಭ್ರಷ್ಟಾಚಾರಕ್ಕೆ ಕಡಿವಾಣ ಹಾಕಲಾಗಿದೆ

ನಿಗದಿತ ಸಮಯದೊಳಗೆ ಉದ್ಯೋಗ ಸಿಗದಿದ್ದರೆ ನಿರುದ್ಯೋಗ ಭತ್ಯೆ ಪಾವತಿಯಾಗಲಿದೆ

ಮಹಾತ್ಮ ಗಾಂಧೀಜಿಯವರ ರಾಮರಾಜ್ಯದ ಕನಸನ್ನು ವಿಬಿ-ಜಿ ರಾಮ್ ಜಿ ಮೂಲಕ ನನಸು ಮಾಡುವುದೇ ಮೋದಿ ಸರ್ಕಾರದ ಸಂಕಲ್ಪವಾಗಿದೆ

- ನಕಲಿ ಗಾಂಧಿಗಳಿಂದ ಮಹಾತ್ಮ ಗಾಂಧೀಜಿ ಅವರಿಗೆ ಅವಮಾನ
- ಮಹಾತ್ಮರು ಹೇಳಿದ್ದು ಸ್ವಾತಂತ್ರ್ಯ ನಂತರ 'ಕಾಂಗ್ರೆಸ್ ಪಕ್ಷವನ್ನು ವಿಸರ್ಜಿಸಿ ' ಆದರೆ ನುಂಗಪ್ಪಗಳು ಕಾಂಗ್ರೆಸ್ಸನ್ನೇ ' ಬಂಡವಾಳ ಮಾಡಿಕೊಂಡರು !
- ಮಹಾತ್ಮ ಗಾಂಧಿ ಅವರ ಕನಸು ಸ್ವಚ್ಛ ಭಾರತ್ ಜಾರಿಗೆ ತಂದಿದ್ದು ನರೇಂದ್ರ ಮೋದಿಜಿ

ಮಹಾತ್ಮ ಗಾಂಧೀಜಿ ಅವರ "ಗ್ರಾಮ ಸ್ವರಾಜ್ಯ" ಕನಸನ್ನು "ವಿಬಿ-ಜಿ ರಾಮ್ ಜಿ" ಮೂಲಕ ನನಸಾಗಿಸಲು ಪ್ರಧಾನಿ ಶ್ರೀ ನರೇಂದ್ರ ಮೋದಿಜಿ ಅವರಿಂದ ದೃಢ ಹೆಜ್ಜೆ

Published by: Bharatiya Janata Party, Karnataka

ಕೆನರಾ ಬ್ಯಾಂಕ್ Canara Bank
SyndicateBank
(ಭಾರತ ಸರ್ಕಾರದ ಒಂದು ಉದ್ಯಮ)
ಪ್ರಧಾನ ಕಛೇರಿ: ಬೆಂಗಳೂರು

ಎಆರ್‌ಎಂ–1 ಶಾಖೆ,
2ನೇ ಮಹಡಿ, ನಂ.86, ಸ್ಪೆನ್ಸರ್ ಟವರ್, ಎಂ.ಜಿ. ರಸ್ತೆ,
ಬೆಂಗಳೂರು–560001. ದೂ: 080–25310066
ಇ–ಮೇಲ್: cb2366@canarabank.com

ಹರಾಜು ಮಾರಾಟ ಪ್ರಕಟಣೆ

ಪ್ರೊವಿಜೊ ನಿಯಮ 8(6)ರ ಸೆಕ್ಯೂರಿಟಿ ಇಂಟರೆಸ್ಟ್ (ಎನ್‌ಫೋರ್ಸ್‌ಮೆಂಟ್) ನಿಯಮ 2002ರ ಸೆಕ್ಯೂರಿಟೈಜೇಷನ್ ಆಂಡ್ ರಿಕನ್‌ಸ್ಟ್ರಕ್ಷನ್ ಆಫ್ ಫೈನಾನ್ಷಿಯಲ್ ಅಸ್ಸೆಟ್ಸ್ ಆಂಡ್ ಎನ್‌ಫೋರ್ಸ್‌ಮೆಂಟ್ ಆಫ್ ಸೆಕ್ಯೂರಿಟಿ ಆಕ್ಟ್ 2002ರ ಅಡಿಯಲ್ಲಿ ಸ್ಥಿರಾಸ್ತಿಗಳ ಇ–ಹರಾಜು ಮಾರಾಟ

ಸಾಮಾನ್ಯವಾಗಿ ಸಾರ್ವಜನಿಕರಿಗೆ, ಸಾಲಗಾರರು ಮತ್ತು ಜಾಮೀನುದಾರರಿಗೆ ಈ ಸೂಚನೆ ಮೂಲಕ ತಿಳಿಸುವುದೇನೆಂದರೆ ಭದ್ರತಾ ಸಾಲದಾತರಿಗೆ ಈ ಕೆಳಗೆ ವಿವರಿಸಿದ ಅಡಮಾನಾದ/ವಿಧಿಸಿದ ಚರಾಸ್ತಿ/ಸ್ಥಿರಾಸ್ತಿಯನ್ನು ಅಧಿಕೃತ ಅಧಿಕಾರಿ, **ಎಆರ್‌ಎಂ–1 ಶಾಖೆ (2366) ಕೆನರಾ ಬ್ಯಾಂಕ್, ಬೆಂಗಳೂರು,** ರವರು ರಚನಾತ್ಮಕ/ಭೌತಿಕವಾಗಿ (ಅನ್ವಯಿಸದೇ ಇರುವುದನ್ನು ತೆಗೆದು ಹಾಕುವುದು) ಸ್ವಾಧೀನಪಡಿಸಿಕೊಂಡಿರುತ್ತಾರೆ ಮತ್ತು **ದಿನಾಂಕ: 24.02.2026 ರಂದು (ಬೆಳಿಗ್ಗೆ 10.30 ರಿಂದ 11.30 ರವರೆಗೆ)** ಸ್ವತ್ತನ್ನು **"ಎಲ್ಲಿದೆಯೊ ಹಾಗೆ", "ಏನಿದೆಯೊ ಹಾಗೆ", "ಹೇಗಿದೆಯೋ ಹಾಗೆ"** ಆಧಾರದಲ್ಲಿ ಸಾಲ ವಸೂಲಾತಿಗಾಗಿ ಮಾರಾಟ ಮಾಡಲಾಗುವುದು. ಸಂದಾಯವಾಗತಕ್ಕ ಮೊಬಲಗು: **ರೂ. 1,30,16,157.92 (ರೂಪಾಯಿ ಒಂದು ಕೋಟಿ ಮೂವತ್ತು ಲಕ್ಷದ ಹದಿನಾರು ಸಾವಿರದ ಒಂದುನೂರ ಐವತ್ತೇಳು ಮತ್ತು ತೊಂಭತ್ತೆರಡು ಪೈಸೆ ಮಾತ್ರ)** ಜೊತೆಗೆ **ದಿನಾಂಕ: 30.01.2026** ರಿಂದ ಬಡ್ಡಿ ಇತರೆ ಖರ್ಚು ವೆಚ್ಚಗಳು ಚುಕ್ತಾ ಮಾಡುವುದಕ್ಕೆ ಋಣ ಬಾಧ್ಯವಾಗಿರುತ್ತದೆ. **ಕೆನರಾ ಬ್ಯಾಂಕ್, ಎಆರ್‌ಎಂ–1 ಶಾಖೆ (2366), ಬೆಂಗಳೂರು** ರವರಿಂದ **ಸಾಲಗಾರರಾದ: (1) ಮೆ॥ ಓಂ ಸರವಣ ಪ್ರಿಂಟ್ಸ್ (ಸಾಲಗಾರರು), ಮಾಲೀಕರು: ಶ್ರೀ ಸರವಣನ್ ಮುನಿಸ್ವಾಮಿ,** ನಂ. 524 15–24–25 13ನೇ ಮೇನ್, 5ನೇ ಕ್ರಾಸ್ ವಿರಾಟ್‌ನಗರ, ಬೊಮ್ಮನಹಳ್ಳಿ, ಬೆಂಗಳೂರು –560068 **(2) ಶ್ರೀ.ಸರವಣನ್ ಮುನಿಸ್ವಾಮಿ (ಮಾಲೀಕರು),** ಕೇರಾಫ್ ಮುನಿಸ್ವಾಮಿ, ನಂ.57, ನೆಲಮಹಡಿ, 5ನೇ ಮೇನ್, 10ನೇ ಎ ಕ್ರಾಸ್, ರಾಜ್ ಗಾರ್ಮೆಂಟ್ಸ್ ರಸ್ತೆ, ರಾಜ್ ಗಾರ್ಮೆಂಟ್ಸ್ ರಸ್ತೆ ಹತ್ತಿರ, ವಿರಾಟ್ ನಗರ ಬೊಮ್ಮನಹಳ್ಳಿ, ಬೆಂಗಳೂರು ದಕ್ಷಿಣ –560068. **ಜಾಮೀನುದಾರರು : (1) ಶ್ರೀ. ಪಿ. ವಿಜಯಕುಮಾರ್ (ಅಡಮಾನದಾರರು),** ಬಿನ್ ವಿ ಪೆರುಮಾಳ್, # 69, ವಿಭೂತಿಪುರ, ಮಾರತಹಳ್ಳಿ ಅಂಚೆ, ಬೆಂಗಳೂರು–560037, ಇವರುಗಳಿಗೆ ಸಾಲವನ್ನು ನೀಡಿರುತ್ತದೆ.

ಅರ್ನೆಸ್ಟ್ ಹಣವನ್ನು **M/s PSB Alliance Private Limited (https://baanknet.com/)** ಪೋರ್ಟಲ್‌ನ ಇ–ವ್ಯಾಲೆಟ್ ಮೂಲಕ ನೇರವಾಗಿ ಅಥವಾ ಚಲನ್ ಅನ್ನು ರಚಿಸುವ ಮುಖಾಂತರ RTGS/NEFT ಮೂಲಕ ಖಾತೆಯ ವಿವರಗಳಲ್ಲಿ ನಮೂದಿಸಿರುವ ಖಾತೆ ವಿವರಗಳ ಪ್ರಕಾರ **ದಿನಾಂಕ: 23.02.2026 ರ ಸಂಜೆ 6.00 ಗಂಟೆಯೊಳಗೆ** ಠೇವಣಿ ಮಾಡಬೇಕು. (₹. ಲಕ್ಷಗಳಲ್ಲಿ)

ಲಾಟ್ ನಂ	ಸ್ಥಿರಾಸ್ತಿಗಳ ವಿವರ	ಮೀಸಲು ಬೆಲೆ	ಇಎಂಡಿ ಮೊತ್ತ	ಬಿಡ್‌ನಲ್ಲಿ ಹೆಚ್ಚುತ್ತಿರುವ ಮೌಲ್ಯ	ಆಸ್ತಿ ಪರಿಶೀಲನಾ ದಿನಾಂಕ ಮತ್ತು ಸ್ಥಳ
1	**ಶೀರ್ಷಿಕೆದಾರರು : ಶ್ರೀ. ಪಿ.ವಿಜಯ್‌ಕುಮಾರ್.** **ಸ್ಥಿರಾಸ್ತಿ :** ಎಲ್ಲಾ ಭಾಗ ಮತ್ತು ವಿಭಾಗಗಳನ್ನೊಳಗೊಂಡಿರುವ ಸ್ವತ್ತಿನ ಖಾಲಿ ನಿವೇಶನ ನಂ. 179, ಖಾತಾ ನಂ. 3164, ಅಸೆಸ್‌ಮೆಂಟ್ ನಂ. 631, ಈ ಆಸ್ತಿಯು ವಿಭೂತಿಪುರ ಗ್ರಾಮ, ಮಾರಿಯಮ್ಮ ದೇವಸ್ಥಾನದ ಹತ್ತಿರ, ಕೆ.ಆರ್.ಪುರಂ ಹೋಬಳಿ, ಬೆಂಗಳೂರು ಪೂರ್ವ ತಾಲ್ಲೂಕು, ಹಿಂದಿನ ಬೆಂಗಳೂರು ದಕ್ಷಿಣ ತಾಲ್ಲೂಕಿನಲ್ಲಿದ್ದು, ಪ್ರಸ್ತುತ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ, ಬೆಂಗಳೂರು ಇದರ ವ್ಯಾಪ್ತಿಯಲ್ಲಿದೆ. ವಿಸ್ತೀರ್ಣ ಪೂರ್ವದಿಂದ ಪಶ್ಚಿಮಕ್ಕೆ : 30 ಅಡಿ ಮತ್ತು ಉತ್ತರದಿಂದ ದಕ್ಷಿಣಕ್ಕೆ : 27 ಅಡಿ, ಒಟ್ಟು ವಿಸ್ತೀರ್ಣ 810 ಚದರ ಅಡಿ, ಜೊತೆಗೆ ಎಲ್ಲಾ ನಾಗರೀಕ ಹಕ್ಕು ಬಾಧ್ಯತೆಗಳನ್ನೊಳಗೊಂಡಿರುತ್ತದೆ ಮತ್ತು ಚಕ್ಕುಬಂದಿ: ಪೂರ್ವಕ್ಕೆ : ಶ್ರೀ.ಗಗನ್ ರವರ ಆಸ್ತಿ, ಪಶ್ಚಿಮಕ್ಕೆ : ಶ್ರೀ.ಧನರಾಜ್ ರವರ ಆಸ್ತಿ, ಉತ್ತರಕ್ಕೆ : ಶ್ರೀಮತಿ. ಪಚ್ಚಮ್ಮ ರವರ ಆಸ್ತಿ, ದಕ್ಷಿಣಕ್ಕೆ : ರಸ್ತೆ.	ರೂ. 36,00,000/–	ರೂ. 3,60,000/–	ರೂ. 2,00,000/–	16.02.2025 ಬೆಳಿಗ್ಗೆ 10.00 ರಿಂದ ಮಧ್ಯಾಹ್ನ 2.00ರವರೆಗೆ ಅಧಿಕೃತ ಅಧಿಕಾರಿಯವರ ಪೂರ್ವ ನಿರ್ಧಾರಿತದಂತೆ

ಎನ್ಕಂಬರೆನ್ಸ್ ಯಾವುದಾದರೂ ಇದ್ದಲ್ಲಿ : ಬ್ಯಾಂಕಿನ ಗಮನಕ್ಕೆ ಬಂದಿಲ್ಲ.
ಮಾರಾಟದ ವಿವರವಾದ ನಿಯಮಗಳು ಮತ್ತು ಷರತ್ತುಗಳಿಗಾಗಿ, 'ಇ–ಹರಾಜು'ಲಿಂಕ್ ಪ್ರೋವೈಡೆಡ್ ಕೆನರಾ ಬ್ಯಾಂಕ್‌ರವರ ವೆಬ್‌ಸೈಟ್: **(www.canarabank.com)** ನಲ್ಲಿ ಒದಗಿಸಲಾಗಿದೆ ಅಥವಾ **M/s PSB Alliance Private Limited (https://baanknet.com/)** ಪೋರ್ಟಲ್‌ನ ಇ–ವ್ಯಾಲೆಟ್ **ಮತ್ತು ಮುಖ್ಯ ಪ್ರಬಂಧಕರು, ಕೆನರಾ ಬ್ಯಾಂಕ್, ಎಆರ್‌ಎಂ–I ಶಾಖೆ, ಬೆಂಗಳೂರು** ಮೊಬೈಲ್ ಸಂಖ್ಯೆ: **9039609346 ಮತ್ತು 7022044933** ಯಾವುದೇ ಕೆಲಸದ ದಿನದಂದು ಕಛೇರಿ ಸಮಯದಲ್ಲಿ ಸಂಪರ್ಕಿಸಬಹುದು.

ದಿನಾಂಕ : 03.02.2026
ಸ್ಥಳ : ಬೆಂಗಳೂರು
ಸಹಿ/– ಅಧಿಕೃತ ಅಧಿಕಾರಿ,
ಕೆನರಾ ಬ್ಯಾಂಕ್

ಮಾನ್ಯ ಪ್ರಧಾನ ಸಿವಿಲ್ ನ್ಯಾಯಾಧೀಶರ ನ್ಯಾಯಾಲಯ ಮತ್ತು ಜೆ.ಎಂ.ಎಫ್.ಸಿ ಕನಕಪುರ
ಸಿ.ಮಿಸ್.ನಂ. 586/2025

ಅರ್ಜಿದಾರರು : ಶ್ರೀ ಬಸವರಾಜು ಬಿನ್ ಲೇಟ್ ಕೆಂಪೇಗೌಡ @ ಮೂಗಣ್ಣ @ ಕೆಂಪಯ್ಯ ವಯಸ್ಸು 62 ವರ್ಷ, ವಿಳಾಸ: ದೊಡ್ಡಮುದವಾಡಿ ಗ್ರಾಮ ಚಿಕ್ಕಮುದವಾಡಿ ಅಂಚೆ, ಹಾರೋಹಳ್ಳಿ ಹೋಬಳಿ, ಹಾರೋಹಳ್ಳಿ ತಾಲ್ಲೂಕು, ಬೆಂಗಳೂರು ದಕ್ಷಿಣ ಜಿಲ್ಲೆ ಮತ್ತು ಮತ್ತೊಬ್ಬರು.

ವಿರುದ್ಧ

ಪ್ರತಿ ಅರ್ಜಿದಾರರು : 1. ಜನನ ಮತ್ತು ಮರಣ ನೊಂದಣಿ ಅಧಿಕಾರಿಗಳು, ತಹಶೀಲ್ದಾರ್, ಹಾರೋಹಳ್ಳಿ ತಾಲ್ಲೂಕು, ಹಾರೋಹಳ್ಳಿ. ಬೆಂಗಳೂರು ದಕ್ಷಿಣ ಜಿಲ್ಲೆ 2. ಗ್ರಾಮ ಲೆಕ್ಕಾಧಿಕಾರಿಗಳು, ಹಾರೋಹಳ್ಳಿ ವೃತ್ತ, ಹಾರೋಹಳ್ಳಿ ಹೋಬಳಿ, ಹಾರೋಹಳ್ಳಿ ತಾಲ್ಲೂಕು, ಬೆಂಗಳೂರು ದಕ್ಷಿಣ ಜಿಲ್ಲೆ

ಪ್ರಕಟಣೆ

ಮೇಲ್ಕಾಣಿಸಿರುವ ಅರ್ಜಿದಾರರು ಈ ಮೂಲಕ ತಿಳಿಯಪಡಿಸುವುದೇನೆಂದರೆ, ಅರ್ಜಿದಾರರ ತಾಯಿಯವರಾದ ಶ್ರೀಮತಿ ಕೆಂಪಮ್ಮ ಕೋಂ ಲೇಟ್ ಕೆಂಪೇಗೌಡ @ ಮೂಗಣ್ಣ @ ಕೆಂಪಯ್ಯರವರು, ಬೆಂಗಳೂರು ದಕ್ಷಿಣ ಜಿಲ್ಲೆ, ಹಾರೋಹಳ್ಳಿ ತಾಲ್ಲೂಕು, ಹಾರೋಹಳ್ಳಿ ಹೋಬಳಿ, ದೊಡ್ಡಮುದವಾಡಿ ಗ್ರಾಮದಲ್ಲಿ ದಿನಾಂಕ 18.03.1992 ರಂದು ಮರಣ ಹೊಂದಿದ್ದು, ಇವರ ಮರಣ ಪ್ರಮಾಣ ಪತ್ರವನ್ನು ನೀಡುವಂತೆ ಎದುರುದಾರರಿಗೆ ನಿರ್ದೇಶನ ನೀಡುವಂತೆ ಕೋರಿ ಈ ಪ್ರಕರಣವನ್ನು ಸಲ್ಲಿಸಿದ್ದು, ಇವರ ಮರಣ ದಿನಾಂಕದ ಬಗ್ಗೆ ಯಾರದಾದರೂ ತಕರಾರು ಇದ್ದರೆ ಖುದ್ದಾಗಿ ಆಗಲಿ ಅಥವಾ ಅಧಿಕಾರ ಕೊಟ್ಟ ವಕೀಲರ ಮುಖಾಂತರವಾಗಲೀ ನ್ಯಾಯಾಲಯ ನಿಗಧಿಪಡಿಸಿದ ದಿನಾಂಕದಂದು ಅಂದರೆ, 13/03/2026 ರ ಬೆಳಿಗ್ಗೆ ಸರಿಯಾಗಿ 11=00 ಘಂಟೆಗೆ ನ್ಯಾಯಾಲಯದ ಮುಂದೆ ಹಾಜರಾಗಿ ತಕರಾರು ಸಲ್ಲಿಸತಕ್ಕದ್ದು, ತಪ್ಪಿದಲ್ಲಿ ಯಾರದ್ದೂ ತಕರಾರೂ ಇಲ್ಲವೆಂದು ಪರಿಗಣಿಸಿ ಉಲ್ಲೇಖಿತ ಪ್ರಕರಣವನ್ನು ಏಕಪಕ್ಷೀಯವಾಗಿ ಇತ್ಯರ್ಥಗೊಳಿಸಲಾಗುವುದು.

2026ರ ಫೆಬ್ರವರಿ 04ನೇ ತಾರೀಖು ಈ ದಿವಸ ನನ್ನ ಸಹಿ ಮತ್ತು ನ್ಯಾಯಾಲಯದ ಮೊಹರಿನೊಂದಿಗೆ ಹೊರಡಿಸಲಾಗಿದೆ.

ಮಾನ್ಯ ನ್ಯಾಯಾಲಯದ ಆದೇಶದ ಮೇರೆಗೆ
ಶಿರಸ್ತೇದಾರರು,
ಮಾನ್ಯ ಪ್ರಧಾನ ಸಿವಿಲ್ ನ್ಯಾಯಾಧೀಶರು
ಜೆ.ಎಂ.ಎಫ್.ಸಿ. ನ್ಯಾಯಾಲಯ, ಕನಕಪುರ
ಅರ್ಜಿದಾರರ ಪರ ವಕೀಲರು:
ಕೆ.ಎಸ್.ಸ್ವಾಮಿ, ವಕೀಲರು, ಕನಕಪುರ
ಸ್ಥಳ : ಕನಕಪುರ, ದಿನಾಂಕ: 03/02/2026

iVALUE
IVALUE INFOSOLUTIONS LIMITED

Registered and Corporate Office: No. 903/1/1, 19th Main Road, 4th Sector, H.S.R. Layout, Bangalore - 560102, Karnataka, India. **CIN:** L72200KA2008PLC045995 | **Website:** www.ivaluegroup.com | **Email:** info@ivalue.co.in

STANDALONE AND CONSOLIDATED FINANCIAL RESULTS FOR THE QUARTER AND NINE MONTHS ENDED ON DECEMBER 31, 2025

In compliance with Regulation 33 and 47 of the Securities and Exchange Board of India (Listing Obligations and Disclosure Requirements) Regulations, 2015 (**"Listing Regulations"**), the board of directors of iValue Infosolutions Limited (the **"Company"**) at their meeting held on February 04, 2026 considered, reviewed and approved the unaudited financial results for the quarter and nine months ended on December 31, 2025 (the **"Financial Results"**).

The said Financial Results, along with the limited review report thereon, submitted by the auditors have been filed with the stock exchanges and are available on the websites of the stock exchanges (i.e., www.bseindia.com and www.nseindia.com) and also on the website of the Company (www.ivaluegroup.com). The same can also be accessed by scanning the following Quick Response (QR) Code from compatible devices:

For and on behalf of the Board of Directors of
iValue Infosolutions Limited
Sd/-
Sunilkumar Pillai
Chairman & Managing Director
DIN: 02226978

Place: Bangalore
Date: February 04, 2026

Anthem® BioSciences
ANTHEM BIOSCIENCES LIMITED

CIN: L24233KA2006PLC039703
Regd Office: No.49, F1 & F2, Canara Bank Road, Bommasandra Industrial Area, Phase I, Bommasandra, Bengaluru - 560 099
Tel: +91 080 6672 4000 | **Email:** investors.abl@anthembio.com | **Website:** www.anthembio.com

EXTRACT OF THE UNAUDITED FINANCIAL RESULTS FOR THE QUARTER & PERIOD ENDED DECEMBER 31, 2025

(Amt in INR Mn)

Particulars	Consolidated Financial Results					
	Quarter ended	Quarter ended	Quarter ended	Year to Date	Year to Date	Year ended
	Dec 31, 2025	Sep 30, 2025	Dec 31, 2024	Dec 31, 2025	Dec 31, 2024	March 31, 2025
Total Income from operations	4,231.53	5,500.27	4,978.06	15,133.89	13,613.56	18,445.53
Net profit for the period (Attributable to owners of the company) (before tax, exceptional and/or extraordinary items)	1,558.44	2,296.03	1,610.48	5,716.94	4,785.56	6,568.68
Net profit for the period before tax (Attributable to owners of the company) (after exceptional and/or extraordinary items)	1,304.74	2,296.03	1,610.48	5,463.23	4,785.56	6,568.68
Net profit for the period after tax (after exceptional and/or extraordinary items)	928.17	1,734.28	1,243.31	4,020.34	3,686.37	4,512.60
Total comprehensive income for the period [comprising profit for the period (after tax) and Other Comprehensive Income (after tax)]	920.37	1,718.82	1,241.43	4,012.35	3,680.87	4,508.63
Equity share capital	1,123.22	1,123.22	1,118.15	1,123.22	1,118.15	1,118.15
Other Equity (excluding revaluation reserve) as at Dec 31, 2025						22,980.48
Earnings per share (nominal value of share Rs.2) (Not annualised)						
Basic (Rs):	1.65	3.09	2.22	7.17	6.59	8.07
Diluted (Rs):	1.64	3.06	2.21	7.09	6.56	8.04

(Amt in INR Mn)

Particulars	Standalone Financial Results					
	Quarter ended	Quarter ended	Quarter ended	Year to Date	Year to Date	Year ended
	Dec 31, 2025	Sep 30, 2025	Dec 31, 2024	Dec 31, 2025	Dec 31, 2024	March 31, 2025
Total Income from operations	4,165.75	5,522.26	4,982.62	15,068.12	13,616.65	18,406.49
Net profit for the period (Attributable to owners of the company) (before tax, exceptional and/or extraordinary items)	1,750.94	2,533.02	1,699.05	6,273.33	4,985.85	7,114.23
Net profit for the period before tax (Attributable to owners of the company) (after exceptional and/or extraordinary items)	1,501.10	2,533.02	1,699.05	6,023.49	4,985.85	7,114.23
Net profit for the period after tax (after exceptional and/or extraordinary items)	1,121.25	1,984.34	1,279.93	4,588.98	3,836.25	5,061.88
Total comprehensive income for the period [comprising profit for the period (after tax) and Other Comprehensive Income (after tax)]	1,113.92	1,969.83	1,278.19	4,582.17	3,830.74	5,057.91
Equity share capital	1,123.22	1,123.22	1,118.15	1,123.22	1,118.15	1,118.15
Other Equity (excluding revaluation reserve) as at Dec 31, 2025						23,613.97
Earnings per share (nominal value of share Rs.2) (Not annualised)						
Basic (Rs):	2.00	3.54	2.29	8.18	6.86	9.05
Diluted (Rs):	1.98	3.50	2.28	8.09	6.83	9.01

Notes:
1. The above results for the quarter and period ended December 31, 2025, of the Company have been reviewed and recommended by the Audit Committee and approved by the Board of Directors of the Company at their meeting held on February 05, 2026.
2. The full format of the quarter and half year ended financial results along with the limited review report of the Statutory Auditors thereon are available on https://www.anthembio.com/investors

For ANTHEM BIOSCIENCES LIMITED
Sd/-
Ajay Bhardwaj
Managing Director & CEO
(DIN 00333704)

Place: Bangalore
Date: February 6, 2026

ಕ್ಯಾನ್ಸರ್ ವಾಕಥಾನ್‌ಗೆ ಉತ್ತಮ ಸ್ಪಂದನೆ

ಬೆಂಗಳೂರು: ವಿಶ್ವ ಕ್ಯಾನ್ಸರ್ ದಿನದ ಅಂಗವಾಗಿ ಎಚ್‌ಸಿಜಿ ಕ್ಯಾನ್ಸರ್ ಸೆಂಟರ್ ವತಿಯಿಂದ ಕ್ಯಾನ್ಸರ್ ಜಾಗೃತಿಗಾಗಿ 3 ಕಿ.ಮೀ ವಾಕಥಾನ್‌ನಲ್ಲಿ ಕ್ರಿಕೆಟಿಗ ಕಲ್ಪನಾ ವೆಂಕಟಾಚಾರ್ ಭಾಗವಹಿಸಿದ್ದರು. ಕ್ಯಾನ್ಸರ್ ತಜ್ಞರು, ವೈದ್ಯರು, ನಾಗರಿಕರು ಸೇರಿ 300 ಕ್ಕೂ ಹೆಚ್ಚು ಜನ ಈ ಜಾಥಾದಲ್ಲಿ ಉತ್ಸಾಹದಿಂದ ಹೆಜ್ಜೆ ಹಾಕಿದರು. ಕ್ಯಾನ್ಸರ್ ತಡೆಗಟ್ಟುವ ಆರೋಗ್ಯ ಕ್ರಮಗಳು ಮತ್ತು ಸಮುದಾಯದೊಂದಿಗೆ ಬೆರೆಯುವ ಎಚ್‌ಸಿಜಿಯ ನಿರಂತರ ಬದ್ಧತೆಯನ್ನು ಈ ವಾಕಥಾನ್ ಪ್ರತಿಬಿಂಬಿಸಿತು.

CHANGE OF NAME
I **SATYANARAYAN** aged 53 years S/o Anant Rao R/at Flat No F-101, 1st Floor, Shivashree Garden, 4th Cross, 5th Stage, BEML Layout, Rajarajeshwari Nagar, Bangalore- 560098 has changed my Name to **SATYANARAYAN PATIL** vide affidavit dated 27/01/2026, Notarized before the Advocate Aravind Patil Bengaluru

ಮಾನ್ಯ ಗೌರವಾನ್ವಿತ 1ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರ ನ್ಯಾಯಾಲಯ ಕನಕಪುರ
ಸಿ.ಮಿಸ್ ನಂ. 18/2026

ಅರ್ಜಿದಾರರು : ಶ್ರೀ ಕೆಂಪಶೆಟ್ಟಿ ಬಿನ ಲೇಟ್ ಮಂಚಶೆಟ್ಟಿ ವಯಸ್ಸು 67 ವರ್ಷ, ವಾಸ: ಹಲಗೂರು ಹೋಬಳಿ, ಮಳವಳ್ಳಿ ತಾಲ್ಲೂಕು, ಮಂಡ್ಯ ಜಿಲ್ಲೆ. ಮತ್ತು ಇತರರು.

ವಿರುದ್ಧ

ಎದುರುದಾರರು :1) ಜನನ ಮತ್ತು ಮರಣ ನೊಂದಣಾಧಿಕಾರಿಗಳು, ತಹಶೀಲ್ದಾರ್, ಕನಕಪುರ. 2) ಗ್ರಾಮ ಲೆಕ್ಕಾಧಿಕಾರಿಗಳು, ದೊಡ್ಡಆಲಹಳ್ಳಿ ಸರ್ಕಲ್, ಕಸಬಾ ಹೋಬಳಿ, ಕನಕಪುರ ತಾಲ್ಲೂಕು.

ಪತ್ರಿಕಾ ಪ್ರಕಟಣೆ

ಮೇಲ್ಕಾಣಿಸಿರುವ ಅರ್ಜಿದಾರರು ಈ ಮೂಲಕ ತಿಳಿಯಪಡಿಸುವುದೇನೆಂದರೆ, 1 ರಿಂದ 7ನೇ ಅರ್ಜಿದಾರರ ಅಜ್ಜಿ ನಿಂಗಮ್ಮ ಕೋಂ ಲೇಟ್ ಮುಳ್ಳಶೆಟ್ಟಿ ರವರು ಬೆಂಗಳೂರು ದಕ್ಷಿಣ ಜಿಲ್ಲೆ, ಕನಕಪುರ ತಾಲ್ಲೂಕು, ಮುಳ್ಳಹಳ್ಳಿ ಗ್ರಾಮದಲ್ಲಿ ದಿನಾಂಕ: 06/02/1992 ರಂದು ಮರಣ ಹೊಂದಿದ್ದು, ಇವರ ಮರಣ ಪ್ರಮಾಣ ಪತ್ರವನ್ನು ನೀಡುವಂತೆ ಎದುರುದಾರರಿಗೆ ನಿರ್ದೇಶನ ನೀಡುವಂತೆ ಕೋರಿ ಈ ಪ್ರಕರಣವನ್ನು ಸಲ್ಲಿಸಿದ್ದು, ಇವರ ಮರಣ ದಿನಾಂಕದ ಬಗ್ಗೆ ಯಾರಾದರೂ ತಕರಾರು ಇದ್ದರೆ ಖುದ್ದಾಗಿ ಆಗಲಿ ಅಥವಾ ಅಧಿಕಾರ ಕೊಟ್ಟ ವಕೀಲರ ಮುಖಾಂತರವಾಗಲೀ ನ್ಯಾಯಾಲಯ ನಿಗಧಿಪಡಿಸಿದ ದಿನಾಂಕದಂದು ಅಂದರೆ 02/04/2026 ರ ಬೆಳಿಗ್ಗೆ ಸರಿಯಾಗಿ 11–00 ಘಂಟೆಗೆ ನ್ಯಾಯಾಲಯದ ಮುಂದೆ ಹಾಜರಾಗಿ ತಕರಾರು ಸಲ್ಲಿಸತಕ್ಕದ್ದು, ತಪ್ಪಿದಲ್ಲಿ ಯಾರದ್ದೂ ತಕರಾರು ಇಲ್ಲವೆಂದು ಪರಿಗಣಿಸಿ ಉಲ್ಲೇಖಿತ ಪ್ರಕರಣವನ್ನು ಮುಂದುವರೆಸಿ ಇತ್ಯರ್ಥ ಗೊಳಿಸಲಾಗುವುದು.

2026ರ ಫೆಬ್ರವರಿ 05ನೇ ತಾರೀಖು ಈ ದಿವಸ ನನ್ನ ಸಹಿ ಮತ್ತು ನ್ಯಾಯಾಲಯದ ಮೊಹರಿನೊಂದಿಗೆ ಹೊರಡಿಸಲಾಗಿದೆ.

ಮಾನ್ಯ ನ್ಯಾಯಾಲಯದ ಆದೇಶದ ಮೇರೆಗೆ
ಶಿರಸ್ತೇದಾರರು
ಮಾನ್ಯ ಪ್ರಧಾನ ಸಿವಿಲ್ ನ್ಯಾಯಾಧೀಶರು
ಮತ್ತು ಜೆ.ಎಂ.ಎಫ್.ಸಿ ನ್ಯಾಯಾಲಯ, ಕನಕಪುರ
ಅರ್ಜಿದಾರರ ಪರ ವಕೀಲರು
ಪಲ್ಲವಿ ಕೆ., ವಕೀಲರು, ಕನಕಪುರ.
ಕನಕಪುರ ಟೌನ್.

ಮಾನ್ಯ ಗೌರವಾನ್ವಿತ 1ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರ ನ್ಯಾಯಾಲಯ ಕನಕಪುರ
ಸಿ.ಮಿಸ್ ನಂ. 19/2026

ಅರ್ಜಿದಾರರು : ಶ್ರೀ ಕೆಂಪಶೆಟ್ಟಿ ಬಿನ ಲೇಟ್ ಮಂಚಶೆಟ್ಟಿ ವಯಸ್ಸು 67 ವರ್ಷ, ವಾಸ: ಹಲಗೂರು ಹೋಬಳಿ, ಮಳವಳ್ಳಿ ತಾಲ್ಲೂಕು ಮಂಡ್ಯ ಜಿಲ್ಲೆ ಮತ್ತು ಇತರರು.

ವಿರುದ್ಧ

ಎದುರುದಾರರು : 1) ಜನನ ಮತ್ತು ಮರಣ ನೊಂದಣಾಧಿಕಾರಿಗಳು, ತಹಶೀಲ್ದಾರ್, ಕನಕಪುರ 2) ಗ್ರಾಮ ಲೆಕ್ಕಾಧಿಕಾರಿಗಳು, ದೊಡ್ಡಆಲಹಳ್ಳಿ ಸರ್ಕಲ್ ಕಸಬಾ ಹೋಬಳಿ, ಕನಕಪುರ ತಾಲ್ಲೂಕು.

ಪತ್ರಿಕಾ ಪ್ರಕಟಣೆ

ಮೇಲ್ಕಾಣಿಸಿರುವ ಅರ್ಜಿದಾರರು ಈ ಮೂಲಕ ತಿಳಿಯಪಡಿಸುವುದೇನೆಂದರೆ, 1 ರಿಂದ 7ನೇ ಅರ್ಜಿದಾರರ ಅಜ್ಜ ಲೇಟ್ ಮುಳ್ಳಶೆಟ್ಟಿ ರವರು ಬೆಂಗಳೂರು ದಕ್ಷಿಣ ಜಿಲ್ಲೆ, ಕನಕಪುರ ತಾಲ್ಲೂಕು, ಮುಳ್ಳಹಳ್ಳಿ ಗ್ರಾಮದಲ್ಲಿ ದಿನಾಂಕ:26/08/1989 ರಂದು ಮರಣ ಹೊಂದಿದ್ದು, ಇವರ ಮರಣ ಪ್ರಮಾಣ ಪತ್ರವನ್ನು ನೀಡುವಂತೆ ಎದುರುದಾರರಿಗೆ ನಿರ್ದೇಶನ ನೀಡುವಂತೆ ಕೋರಿ ಈ ಪ್ರಕರಣವನ್ನು ಸಲ್ಲಿಸಿದ್ದು, ಇವರ ಮರಣ ದಿನಾಂಕದ ಬಗ್ಗೆ ಯಾರಾದರೂ ತಕರಾರು ಇದ್ದರೆ ಖುದ್ದಾಗಿ ಆಗಲಿ ಅಥವಾ ಅಧಿಕಾರ ಕೊಟ್ಟ ವಕೀಲರ ಮುಖಾಂತರವಾಗಲೀ ನ್ಯಾಯಾಲಯ ನಿಗಧಿಪಡಿಸಿದ ದಿನಾಂಕದಂದು ಅಂದರೆ 02/04/2026 ರ ಬೆಳಿಗ್ಗೆ ಸರಿಯಾಗಿ 11–00 ಘಂಟೆಗೆ ನ್ಯಾಯಾಲಯದ ಮುಂದೆ ಹಾಜರಾಗಿ ತಕರಾರು ಸಲ್ಲಿಸತಕ್ಕದ್ದು, ತಪ್ಪಿದಲ್ಲಿ ಯಾರದ್ದೂ ತಕರಾರು ಇಲ್ಲವೆಂದು ಪರಿಗಣಿಸಿ ಉಲ್ಲೇಖಿತ ಪ್ರಕರಣವನ್ನು ಮುಂದುವರೆಸಿ ಇತ್ಯರ್ಥ ಗೊಳಿಸಲಾಗುವುದು.

2026ರ ಫೆಬ್ರವರಿ 05ನೇ ತಾರೀಖು ಈ ದಿವಸ ನನ್ನ ಸಹಿ ಮತ್ತು ನ್ಯಾಯಾಲಯದ ಮೊಹರಿನೊಂದಿಗೆ ಹೊರಡಿಸಲಾಗಿದೆ.

ಮಾನ್ಯ ನ್ಯಾಯಾಲಯದ ಆದೇಶದ ಮೇರೆಗೆ
ಶಿರಸ್ತೇದಾರರು
ಮಾನ್ಯ ಪ್ರಧಾನ ಸಿವಿಲ್ ನ್ಯಾಯಾಧೀಶರು
ಮತ್ತು ಜೆ.ಎಂ.ಎಫ್.ಸಿ ನ್ಯಾಯಾಲಯ, ಕನಕಪುರ
ಅರ್ಜಿದಾರರ ಪರ ವಕೀಲರು
ಪಲ್ಲವಿ ಕೆ., ವಕೀಲರು, ಕನಕಪುರ.
ಕನಕಪುರ ಟೌನ್.

ಮಾನ್ಯ ಗೌರವಾನ್ವಿತ 1ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರ ನ್ಯಾಯಾಲಯ ಕನಕಪುರ
ಸಿ.ಮಿಸ್ ನಂ. 20/2026

ಅರ್ಜಿದಾರರು : ಶ್ರೀ ಕೆಂಪಶೆಟ್ಟಿ ಬಿನ ಲೇಟ್ ಮಂಚಶೆಟ್ಟಿ ವಯಸ್ಸು 67 ವರ್ಷ, ವಾಸ: ಹಲಗೂರು ಹೋಬಳಿ, ಮಳವಳ್ಳಿ ತಾಲ್ಲೂಕು, ಮಂಡ್ಯ ಜಿಲ್ಲೆ ಮತ್ತು ಇತರರು.

ವಿರುದ್ಧ

ಎದುರುದಾರರು : 1) ಜನನ ಮತ್ತು ಮರಣ ನೊಂದಣಾಧಿಕಾರಿಗಳು, ತಹಶೀಲ್ದಾರ್, ಕನಕಪುರ 2) ಗ್ರಾಮ ಲೆಕ್ಕಾಧಿಕಾರಿಗಳು, ದೊಡ್ಡಆಲಹಳ್ಳಿ ಸರ್ಕಲ್ ಕಸಬಾ ಹೋಬಳಿ, ಕನಕಪುರ ತಾಲ್ಲೂಕು.

ಪತ್ರಿಕಾ ಪ್ರಕಟಣೆ

ಮೇಲ್ಕಾಣಿಸಿರುವ ಅರ್ಜಿದಾರರು ಈ ಮೂಲಕ ತಿಳಿಯಪಡಿಸುವುದೇನೆಂದರೆ, 1,2,3,6 & 7ನೇ ಅರ್ಜಿದಾರರ ತಂದೆ ಹಾಗೂ 5&6ನೇ ಅರ್ಜಿದಾರರ ಮಾವ ಮುಳ್ಳಶೆಟ್ಟಿ ರವರು ಬೆಂಗಳೂರು ದಕ್ಷಿಣ ಜಿಲ್ಲೆ, ಕನಕಪುರ ತಾಲ್ಲೂಕು, ಮುಳ್ಳಹಳ್ಳಿ ಗ್ರಾಮದಲ್ಲಿ ದಿನಾಂಕ: 18/07/1998 ರಂದು ಮರಣ ಹೊಂದಿದ್ದು, ಇವರ ಮರಣ ಪ್ರಮಾಣ ಪತ್ರವನ್ನು ನೀಡುವಂತೆ ಎದುರುದಾರರಿಗೆ ನಿರ್ದೇಶನ ನೀಡುವಂತೆ ಕೋರಿ ಈ ಪ್ರಕರಣವನ್ನು ಸಲ್ಲಿಸಿದ್ದು, ಇವರ ಮರಣ ದಿನಾಂಕದ ಬಗ್ಗೆ ಯಾರಾದರೂ ತಕರಾರು ಇದ್ದರೆ ಖುದ್ದಾಗಿ ಆಗಲಿ ಅಥವಾ ಅಧಿಕಾರ ಕೊಟ್ಟ ವಕೀಲರ ಮುಖಾಂತರವಾಗಲೀ ನ್ಯಾಯಾಲಯ ನಿಗಧಿಪಡಿಸಿದ ದಿನಾಂಕದಂದು ಅಂದರೆ 02/04/2026ರ ಬೆಳಿಗ್ಗೆ ಸರಿಯಾಗಿ 11–00 ಘಂಟೆಗೆ ನ್ಯಾಯಾಲಯದ ಮುಂದೆ ಹಾಜರಾಗಿ ತಕರಾರು ಸಲ್ಲಿಸತಕ್ಕದ್ದು, ತಪ್ಪಿದಲ್ಲಿ ಯಾರದ್ದೂ ತಕರಾರು ಇಲ್ಲವೆಂದು ಪರಿಗಣಿಸಿ ಉಲ್ಲೇಖಿತ ಪ್ರಕರಣವನ್ನು ಮುಂದುವರೆಸಿ ಇತ್ಯರ್ಥ ಗೊಳಿಸಲಾಗುವುದು.

2026ರ ಫೆಬ್ರವರಿ 05ನೇ ತಾರೀಖು ಈ ದಿವಸ ನನ್ನ ಸಹಿ ಮತ್ತು ನ್ಯಾಯಾಲಯದ ಮೊಹರಿನೊಂದಿಗೆ ಹೊರಡಿಸಲಾಗಿದೆ.

ಮಾನ್ಯ ನ್ಯಾಯಾಲಯದ ಆದೇಶದ ಮೇರೆಗೆ
ಶಿರಸ್ತೇದಾರರು
ಮಾನ್ಯ ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ ನ್ಯಾಯಾಲಯ, ಕನಕಪುರ
ಅರ್ಜಿದಾರರ ಪರ ವಕೀಲರು
ಪಲ್ಲವಿ.ಕೆ, ವಕೀಲರು, ಕನಕಪುರ.
ಕನಕಪುರ ಟೌನ್.

ಮಾನ್ಯ 1ನೇ ಅಪರ ಸಿವಿಲ್ ನ್ಯಾಯಾಧೀಶರ ನ್ಯಾಯಾಲಯ ಮತ್ತು ಜೆ.ಎಂ.ಎಫ್.ಸಿ ಕನಕಪುರ
ಸಿ.ಮಿಸ್.ನಂ. 539/2023

ಅರ್ಜಿದಾರರು : ಶ್ರೀಮತಿ ತಿಬ್ಬಮ್ಮ @ ದೇವಮ್ಮ ಕೋಂ ಲೇಟ್ ನಂಜುಂಡೇಗೌಡ ಬಿನ ಲೇಟ್ ತಿರಪೇಗೌಡ, ವಯಸ್ಸು 75 ವರ್ಷ, ವಾಸ: ಹಂಚಗುಳಿ ಗ್ರಾಮ, ಹಂಚಗುಳಿ ಅಂಚೆ, ಕೋಡಿಹಳ್ಳಿ ಹೋಬಳಿ, ಕನಕಪುರ ಹೋಬಳಿ, ಹಾರೋಹಳ್ಳಿ ತಾಲ್ಲೂಕು, ಬೆಂಗಳೂರು ದಕ್ಷಿಣ ಜಿಲ್ಲೆ ಮತ್ತು ಮತ್ತೊಬ್ಬರು.

ವಿರುದ್ಧ

ಪ್ರತಿ ಅರ್ಜಿದಾರರು: 1. ಜನನ ಮತ್ತು ಮರಣ ನೊಂದಣಿ ಅಧಿಕಾರಿಗಳು, ತಹಶೀಲ್ದಾರ್ ಕನಕಪುರ ತಾಲ್ಲೂಕು, ಕನಕಪುರ ಬೆಂಗಳೂರು ದಕ್ಷಿಣ ಜಿಲ್ಲೆ 2. ಗ್ರಾಮ ಲೆಕ್ಕಾಧಿಕಾರಿಗಳು, ಹಂಚಗುಳಿ ವೃತ್ತ, ಕೋಡಿಹಳ್ಳಿ ಹೋಬಳಿ, ಕನಕಪುರ ತಾಲ್ಲೂಕು, ಬೆಂಗಳೂರು ದಕ್ಷಿಣ ಜಿಲ್ಲೆ

ಪ್ರಕಟಣೆ

ಮೇಲ್ಕಾಣಿಸಿರುವ ಅರ್ಜಿದಾರರು ಈ ಮೂಲಕ ತಿಳಿಯಪಡಿಸುವುದೇನೆಂದರೆ, ಅರ್ಜಿದಾರರ ತಂದೆಯವರಾದ ಶ್ರೀ ತಿರಪೇಗೌಡ ಬಿನ್ ಲೇಟ್ ಲೇಟ್ ದೇಸಿಗೌಡ ರವರು, ಬೆಂಗಳೂರು ದಕ್ಷಿಣ ಜಿಲ್ಲೆ, ಕನಕಪುರ ತಾಲ್ಲೂಕು, ಕೋಡಿಹಳ್ಳಿ ಹೋಬಳಿ, ಹಂಚಗುಳಿ ಗ್ರಾಮದಲ್ಲಿ ದಿನಾಂಕ 20.05.2008 ರಂದು ಮರಣ ಹೊಂದಿದ್ದು, ಇವರ ಮರಣ ಪ್ರಮಾಣ ಪತ್ರವನ್ನು ನೀಡುವಂತೆ ಎದುರುದಾರರಿಗೆ ನಿರ್ದೇಶನ ನೀಡುವಂತೆ ಕೋರಿ ಈ ಪ್ರಕರಣವನ್ನು ಸಲ್ಲಿಸಿದ್ದು, ಇವರ ಮರಣ ದಿನಾಂಕದ ಬಗ್ಗೆ ಯಾರದಾದರೂ ತಕರಾರು ಇದ್ದರೆ ಖುದ್ದಾಗಿ ಆಗಲಿ ಅಥವಾ ಅಧಿಕಾರ ಕೊಟ್ಟ ವಕೀಲರ ಮುಖಾಂತರವಾಗಲೀ ನ್ಯಾಯಾಲಯ ನಿಗಧಿಪಡಿಸಿದ ದಿನಾಂಕದಂದು ಅಂದರೆ, 28–03–2026 ರ ಬೆಳಿಗ್ಗೆ ಸರಿಯಾಗಿ 11=00 ಘಂಟೆಗೆ ನ್ಯಾಯಾಲಯದ ಮುಂದೆ ಹಾಜರಾಗಿ ತಕರಾರು ಸಲ್ಲಿಸತಕ್ಕದ್ದು, ತಪ್ಪಿದಲ್ಲಿ ಯಾರದ್ದೂ ತಕರಾರೂ ಇಲ್ಲವೆಂದು ಪರಿಗಣಿಸಿ ಉಲ್ಲೇಖಿತ ಪ್ರಕರಣವನ್ನು ಏಕಪಕ್ಷೀಯವಾಗಿ ಇತ್ಯರ್ಥಗೊಳಿಸಲಾಗುವುದು.

2026ರ ಫೆಬ್ರವರಿ 05ನೇ ತಾರೀಖು ಈ ದಿವಸ ನನ್ನ ಸಹಿ ಮತ್ತು ನ್ಯಾಯಾಲಯದ ಮೊಹರಿನೊಂದಿಗೆ ಹೊರಡಿಸಲಾಗಿದೆ.

ಮಾನ್ಯ ನ್ಯಾಯಾಲಯದ ಆದೇಶದ ಮೇರೆಗೆ
ಶಿರಸ್ತೇದಾರರು,
ಮಾನ್ಯ 1ನೇ ಅಪರ ಸಿವಿಲ್ ನ್ಯಾಯಾಧೀಶರು
ಜೆ.ಎಂ.ಎಫ್.ಸಿ. ನ್ಯಾಯಾಲಯ, ಕನಕಪುರ
ಅರ್ಜಿದಾರರ ಪರ ವಕೀಲರು:
ಕೆ.ಎಸ್.ಸ್ವಾಮಿ, ವಕೀಲರು, ಕನಕಪುರ
ಸ್ಥಳ : ಕನಕಪುರ, ದಿನಾಂಕ: 03/02/2026

BEFORE THE DEPUTY DIRECTOR OF LAND RECORDS AND TECHNICAL ASSISSTANT TO THE DEPUTY COMMISSIONER, BENGALURU URBAN DISTRICT AT BENGALURU
APPEAL.No.188/2024
APPELLANTS :
SRI.VENKATARAMANAPPA AND OTHERS V/s
RESPONDENTS :
THE ASSISTANT DIRECTOR OF LAND RECORDS AND OTHERS
RESPONDENT NO.5:
5. Sri.K.Kenchappa,
S/o Karikenchappa, Major in age, R/at Naganayaknahalli Village, Uttarahalli Hobli, Bengaluru South Taulk.
NOTICE TO RESPONDENT NO.5
WHEREAS, the Petitioners being aggrieved by the order of the Assistant Director of Land Records, Bengaluru South Taluk, Bengaluru and the Taluk Surveyor, Bengaluru South Taluk as against the podi and dhurast conducted by the Respondent No.1 and 2 dated 30.08.2024 vide application No. 20020620572867 in respect of the land bearing Sy.No.13 of Naganayakanahalli Village, Uttarahalli Hobli, Bengaluru South Taluk, in person or by a pleader duly instructed and able to answer all material questions relating to the appeal or who shall be accompanied by some persons able to answers all such questions **on the 17.02.2026 at 3.00 PM** to answer.
Take Notice that, in default of your appearance on the day before mentioned the petition will be heard and determined in your absence.
Given under my hand and seal of the Court this 04.02.2026
By the Order of the Authority
DEPUTY COMMISSIONER, BENGALURU
Advocate for Petitioners
J.S. DINESH, Advocate,
'JSD LAW FIRM' No.17
76 th, 'A' Cross, 6th Block
Rajajinagar, Bengaluru-560 010.

IN THE COURT OF THE 2nd ADDITIONAL SENIOR CIVIL JUDGE BENGALURU RURAL DISRTICT AT BENGALURU
O.S. NO. 2185/2024.
BETWEEN :Sri, Manjunath, S/o Late, Muniyappa, Aged about 43 years, Residing at, No.252, Ambedkar Layout, Balagere Village, Varthur Hobli, Bangalore East Taluk, **...Plaintiff.**
AND : 1. Sri. Ramaiah S/o. Late. Muniyappa, Aged about 64 years, **10. Sri. Allu Kumara Swamy,** S/o. Allu Srinivasulu, Aged about 36 years, Residing at No. 1-65, Mannila, Anantapur, Andhara Pradesh -505721,
12. Sri. Devanand anna Reddy, S/o. A. Krishna Reddy, Aged about 45 years, Residing at Flat No. A-206, Eco-Life Apartment, Balagere Main Road, Balagere, Bengaluru -560087, **...Defendants.**
NOTICE TO THE DEFENDANT NO.10 AND 12.
Whereas the plaintiff has filed a bonafide suit for partition and separate possession against the defendants in respect of the suit schedule property is an agricultural land bearing Sy. No.300/4 (old Sy.No.300) measuring 0.6.02 guntas out of 18 guntas, situated at Amani Bellandur Khane Village, Varthur Hobli, Bangalore East Taluk, bounded as hereunder :
EAST BY : Land belongs to Ramachandraiah,
WEST BY : Land belongs to Bodimuniyappa,
NORTH BY : Land belonging to Sangappa & Narayanappa, **SOUTH BY :** Road.
Wherefore this notice to the defendant no.10 and 12 is published, directing you to appear before this Court on **6/3/2026 at 11.00 A.M.,** if you fail to appear before this Court on that day either in person or through your respective counsel, you will be placed ex-parte and case will be dealt with and disposed of in accordance with law.
Given under my hand and seal of this court on 2/2/2026.
By Order of the Court
Sd/- Chief Ministerial Officer
Senior Civil Judge Court
Bengaluru Rural District, Bengaluru
Advocate for Plaintiff:
Shankaramurthy. S.K, Advocate,
No.52, 4th Cross, Seethappa layout
Manorayanapalya, R.T. Nagar Post,
Bengaluru - 560032. Phone : 9945823842.

Tracxn
ಟ್ರಾಕ್ಸನ್ ಟೆಕ್ನಾಲಜೀಸ್ ಲಿಮಿಟೆಡ್
CIN: L72200KA2012PLC065294
ನೋಂ. ಕಚೇರಿ: ನಂ. ಎಲ್–248, 2ನೇ ಮಹಡಿ, 17ನೇ ಕ್ರಾಸ್, ಸೆಕ್ಟರ್ 6, ಹೆಚ್‌ಎಸ್‌ಆರ್ ಲೇಔಟ್
ಬೆಂಗಳೂರು, ಕರ್ನಾಟಕ, ಭಾರತ –560102
ದೂ: +91 90360 90116, ಇ–ಮೇಲ್: investor.relations@tracxn.com, ವೆಬ್‌ಸೈಟ್: www.tracxn.com

ಡಿಸೆಂಬರ್ 31, 2025ಕ್ಕೆ ಅಂತ್ಯಗೊಂಡ ತ್ರೈಮಾಸಿಕ ಮತ್ತು ಒಂಭತ್ತು ತಿಂಗಳ ಅಂತ್ಯಕ್ಕೆ ಕೊನೆಗೊಂಡ ಅಪರಿಶೋಧಿತ ಆರ್ಥಿಕ ಫಲಿತಾಂಶಗಳ ಹೇಳಿಕೆಗಳು

ಕಂಪನಿಯ ನಿರ್ದೇಶಕರ ಮಂಡಳಿಯು ಫೆಬ್ರವರಿ, 05, 2026 ರಂದು ನಡೆದ ತಮ್ಮ ಸಭೆಯಲ್ಲಿ ಡಿಸೆಂಬರ್ 31, 2025ಕ್ಕೆ ಅಂತ್ಯಗೊಂಡ ತ್ರೈಮಾಸಿಕ ಮತ್ತು ಒಂಭತ್ತು ತಿಂಗಳ ಅಂತ್ಯಕ್ಕೆ ಕೊನೆಗೊಂಡ ಅಪರಿಶೋಧಿತ ಆರ್ಥಿಕ ಫಲಿತಾಂಶಗಳನ್ನು ("ಹಣಕಾಸು ಫಲಿತಾಂಶಗಳು") ಅನುಮೋದಿಸಿದೆ.
ಸಂಪೂರ್ಣ ಹಣಕಾಸು ಫಲಿತಾಂಶಗಳು ಜೊತೆಗೆ ಸೀಮಿತ ಪರಿಶೀಲನಾ ವರದಿಯು ಸ್ಟಾಕ್ ಎಕ್ಸ್‌ಚೇಂಜ್ ವೆಬ್‌ಸೈಟ್‌ಗಳಾದ www.bseindia.com / www.nseindia.com ರಲ್ಲಿ ಹಾಗೂ ಕಂಪನಿಯ ವೆಬ್‌ಸೈಟ್ https://w.tracxn.com/investor-relations/quarterly-results ನಲ್ಲಿ ಮತ್ತು ಇಲ್ಲಿ ನೀಡಿರುವ ಕ್ಯುಆರ್ ಕೋಡ್ ಸ್ಕ್ಯಾನ್ ಮಾಡುವ ಮೂಲಕ ನೋಡಬಹುದು.

ಟ್ರಾಕ್ಸನ್ ಟೆಕ್ನಾಲಜೀಸ್ ಲಿಮಿಟೆಡ್
ಸಹಿ/–
ನೇಹಾ ಸಿಂಗ್
ವ್ಯವಸ್ಥಾಪಕ ನಿರ್ದೇಶಕರು ಮತ್ತು ಅಧ್ಯಕ್ಷರು
(ಡಿಐಎನ್ : 05331824)

ಸ್ಥಳ: ಬೆಂಗಳೂರು
ದಿನಾಂಕ: ಫೆಬ್ರವರಿ 05, 2026

ಟಿಪ್ಪಣಿ : ಮೇಲಿನ ಹೇಳಿಕೆಗಳು ನಿಯಂತ್ರಣ 33 ನ್ನು ಓದಿಕೊಂಡಂತೆ ನಿಯಂತ್ರಣ 47 (1) ರ ಸೆಬಿ (ಲಿಸ್ಟಿಂಗ್ ಅಬ್ಲಿಗೇಷನ್ಸ್ ಮತ್ತು ಡಿಸ್‌ಕ್ಲೋಸರ್ ರಿಕ್ವಯರ್‌ಮೆಂಟ್ಸ್) ನಿಯಂತ್ರಣ, 2015 ರಂತೆ ಸೂಚನೆ.

ಸಂಗಮೇಶ್ ಬಾದವಾಡಗಿಗೆ ಅಭಿನಂದನಾ ಸಮಾರಂಭ

ಬೆಂಗಳೂರು: ಸಂಗಮೇಶ್ ಬಾದವಾಡಗಿಯವರ ಅಭಿನಂದನಾ ಸಮಾರಂಭ ಮತ್ತು ಸಂಗಮ ಅಭಿನಂದನಾ ಗ್ರಂಥ ಲೋಕಾರ್ಪಣೆ ಕಾರ್ಯಕ್ರಮ ಫೆ.7 ರಂದು ಮಧ್ಯಾಹ್ನ 2.30 ಕ್ಕೆ ನಗರದ ಜಗದ್ಗುರು ರೇಣುಕಾಚಾರ್ಯ ವಿದ್ಯಾಸಂಸ್ಥೆ ಸಭಾಂಗಣದಲ್ಲಿ ಆಯೋಜಿಸಲಾಗಿದೆ ಎಂದು ಶರಣ ಸಾಹಿತ್ಯ ಪರಿಷತ್‌ನ ಅಧ್ಯಕ್ಷ ಡಾ.ಸಿ.ಸೋಮಶೇಖರ್ ತಿಳಿಸಿದರು. ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಈ ವೇಳೆ ಕೊಪ್ಪಳದ ಗವಿಸಿದ್ದೇಶ್ವರ ಮಠದ ಗವಿಸಿದ್ದೇಶ್ವರ ಸ್ವಾಮೀಜಿ, ಬಳಗನೂರಿನ ಚನ್ನವೀರಮಠದ ಶಿವಶಾಂತವೀರ ಸ್ವಾಮೀಜಿ, ಮಾಜಿ ಮುಖ್ಯಮಂತ್ರಿ ಜಗದೀಶ್ ಶೆಟ್ಟರ್, ಸಚಿವರಾದ ಈಶ್ವರ್ ಖಂಡ್ರೆ, ರಾಮಲಿಂಗಾರೆಡ್ಡಿ, ಶರಣಬಸಪ್ಪ ದರ್ಶನಾಪುರ, ಶಿವರಾಜ್ ತಂಗಡಗಿ, ವೀರಶೈವ ಲಿಂಗಾಯತ ಮಹಾಸಭಾದ ಅಧ್ಯಕ್ಷ ಡಾ.ಶಂಕರ್ ಬಿದರಿ, ಶಾಸಕ ರಾಘವೇಂದ್ರ ಹಿಟ್ನಾಳ, ಸಾಹಿತಿಗಳಾದ ಡಾ. ಗೊ.ರು.ಚ, ಡಾ. ಹಂಪನಾ ಸೇರಿದಂತೆ ಇನ್ನಿತರರು ಉಪಸ್ಥಿತರಿರಲಿದ್ದಾರೆ ಎಂದರು.

ಗೋವಿಂದರಾಜನಗರ ವಾರ್ಡ್ 104ರ ವ್ಯಾಪ್ತಿಯ ಮಾಗಡಿ ಮುಖ್ಯ ರಸ್ತೆಗಳ ವೈಟ್ ಟ್ಯಾಪಿಂಗ್ ಕಾಮಗಾರಿ ಮುಗಿದ ಹಿನ್ನೆಲೆ ಸ್ಥಳೀಯ ಶಾಸಕ ಪ್ರಿಯಕೃಷ್ಣ ಅವರು ಉದ್ಘಾಟಿಸಿದರು. ಈ ವೇಳೆ ಬಿಬಿಎಂಪಿ ಮಾಜಿ ಸದಸ್ಯರಾದ ಡಿ.ಉಮಾಶಂಕರ್, ಮಾಜಿ ಉಪಮೇಯರ್ ಪುಟ್ಟರಾಜು ಹಾಗೂ ಹಿರಿಯ ಅಧಿಕಾರಿಗಳು, ನಾಗರಿಕರು ಇದ್ದರು.

ಅಪಘಾತವೆಂದು ಬಿಂಬಿಸಿ ಹೆಂಡತಿ ಡ್ರಾಮ
ಪ್ರಿಯತಮನಿಗಾಗಿ ಪತಿಗೆ ಚಟ್ಟ ಕಟ್ಟಿದ್ದ ಪತ್ನಿಯ ಸೆರೆ

ಬೆಂಗಳೂರು: ಪ್ರಿಯಕರನಿಗಾಗಿ ಹೆಂಡತಿಯೇ ಗಂಡನನ್ನು ಹತ್ಯೆ ಮಾಡಿ ಅಪಘಾತವೆಂದು ಬಿಂಬಿಸಿ ನಾಟಕವಾಡಿದ್ದ ಪ್ರಕರಣವನ್ನು ಸೂಲಿಬೆಲೆ ಪೊಲೀಸರು ಬಯಲಿಗೆಳೆದಿದ್ದಾರೆ.

ಹೊಸಕೋಟೆ ತಾಲೂಕಿನ ಸಿದ್ದೇನಹಳ್ಳಿ ಗ್ರಾಮದಲ್ಲಿ ಜನವರಿ 24ರಂದು ನಡೆದ ಕೊಲೆ ರಹಸ್ಯ ಕೊನೆಗೂ ಬಯಲಾಗಿದ್ದು, ಮಹಿಳೆ ಪುಷ್ಪಾ ಮತ್ತು ಆಕೆಯ ಪ್ರಿಯಕರ ದೇವರಾಜ್‌ನನ್ನು ಪೊಲೀಸರು ಬಂಧಿಸಿದ್ದಾರೆ. ಪ್ರಿಯತಮ ದೇವರಾಜ್‌ಗಾಗಿ ಪುಷ್ಪಾ ತನ್ನ ಪತಿ ಅಶೋಕ್ (40) ಅನ್ನು ಸಂಚು ರೂಪಿಸಿ ಕೊಲೆ ಮಾಡಿದ್ದಳು. ಇದೀಗ ಆಘಾತಕಾರಿ ರಹಸ್ಯ ಬಯಲಾಗಿದ್ದು, ಗ್ರಾಮಸ್ಥರನ್ನು ಬೆಚ್ಚಿಬೀಳುವಂತೆ ಮಾಡಿದೆ. ಜ. 24ರಂದು ಅಶೋಕ್ ಮೃತದೇಹ ಗ್ರಾಮದ ಸಮೀಪದ ರಸ್ತೆಯ ತಿರುವಿನಲ್ಲಿ ಪತ್ತೆಯಾಗಿತ್ತು. ಮೊದಲಿಗೆ ಇದೊಂದು ಅಪಘಾತವೆಂದು ಹೇಳಲಾಗಿತ್ತು. ಆದರೆ ಘಟನೆ ನಡೆದ ರೀತಿಯ ಬಗ್ಗೆ ಅನುಮಾನ ವ್ಯಕ್ತಪಡಿಸಿದ ಗ್ರಾಮಸ್ಥರು ಪೊಲೀಸರಿಗೆ ಮಾಹಿತಿ ನೀಡಿದ್ದರು. ಬಳಿಕ ಸೂಲಿಬೆಲೆ ಪೊಲೀಸರು ತನಿಖೆ ನಡೆಸಿದಾಗ ಇದು ಪೂರ್ವಯೋಜಿತ ಕೊಲೆ ಎಂಬುದು ಬಹಿರಂಗವಾಗಿದೆ.

ಪ್ರಿಯಕರನ ಜತೆಗೂಡಿ ಗಂಡನನ್ನೇ ಹತ್ಯೆಗೈದಿದ್ದ ಪುಷ್ಪಾ:

ಮೃತನ ಪತ್ನಿ ಪುಷ್ಪಾ ತನ್ನ ಪ್ರಿಯಕರ ದೇವರಾಜ್ ಹಾಗೂ ಸಹಚರರಾದ ಮುನಿಂದ್ರ, ಮತ್ತು ಸಿದ್ದಪ್ಪ ಅವರ ಜತೆ ಸೇರಿ ಸಂಚು ರೂಪಿಸಿದ್ದಳು. ಎಣ್ಣೆ ಪಾರ್ಟಿ ಮಾಡುವ ನೆಪದಲ್ಲಿ ಅಶೋಕ್‌ರನ್ನು ಕರೆದುಕೊಂಡು ಹೋಗಿ, ಕೆರೆಯ ಬಳಿ ಕಬ್ಬಿಣದ ರಾಡ್ನಿಂದ ಹೊಡೆದು ಹತ್ಯೆ ಮಾಡಲಾಗಿದೆ. ಕೊಲೆ ಬಳಿಕ ಶವವನ್ನು ರಸ್ತೆಯ ತಿರುವಿನಲ್ಲಿ ಬಿಸಾಡಿ ಅಪಘಾತದಂತೆ ಬಿಂಬಿಸಲು ಯತ್ನಿಸಿದ್ದರು. ಪತಿಯ ಸಾವಿನ ನಂತರ ಪತ್ನಿ ಮತ್ತು ಪ್ರಿಯಕರ ಹೈಡ್ರಾಮಾ ನಡೆಸಿ ಅನುಮಾನ ತಪ್ಪಿಸಲು ಪ್ರಯತ್ನಿಸಿದ್ದರು ಎನ್ನಲಾಗಿದೆ. ಆದರೆ ಸ್ಥಳೀಯರ ಶಂಕೆ ಮೇರೆಗೆ ಪೊಲೀಸರು ತನಿಖೆ ತೀವ್ರಗೊಳಿಸಿ ಆರೋಪಿಗಳನ್ನು ಬಂಧಿಸುವಲ್ಲಿ ಯಶಸ್ವಿಯಾಗಿದ್ದಾರೆ. ಸೂಲಿಬೆಲೆ ಪೊಲೀಸರು ಪ್ರಕರಣ ದಾಖಲಿಸಿಕೊಂಡು ಪುಷ್ಪಾ ಸೇರಿದಂತೆ ನಾಲ್ವರನ್ನು ಬಂಧಿಸಿದ್ದಾರೆ.

ಹಂಸಲೇಖಗೆ ಚಿತ್ರರಂಗ ಜೀವಮಾನ ಸಾಧನೆ ಪ್ರಶಸ್ತಿ
ಬೆಂಗಳೂರು ಫಿಲ್ಮ್‌ಫೆಸ್ಟ್‌ನಲ್ಲಿ ಇಂದು ಪ್ರದಾನ

ಬೆಂಗಳೂರು: ಹಿರಿಯ ಗೀತೆ ರಚನೆಕಾರ ಹಾಗೂ ಸಂಗೀತ ನಿರ್ದೇಶಕ ಡಾ.ಹಂಸಲೇಖ ಚಿತ್ರರಂಗಕ್ಕೆ ನೀಡಿರುವ ಕೊಡುಗೆಗಳನ್ನು ಪರಿಗಣಿಸಿ 17ನೇ ಬೆಂಗಳೂರು ಅಂತಾರಾಷ್ಟ್ರೀಯ ಚಲನಚಿತ್ರೋತ್ಸವದ ಜೀವಮಾನ ಸಾಧನೆ ಪ್ರಶಸ್ತಿಗೆ ಆಯ್ಕೆ ಮಾಡಲಾಗಿದೆ.

ಈ ಸಂಬಂಧ ಆದೇಶ ಹೊರಡಿಸಿರುವ ವಾರ್ತಾ ಇಲಾಖೆ, ಜ.13 ರಂದು ಹೊರಡಿಸಿದ್ದ ಆದೇಶದಂತೆ ರಚಿಸಲಾಗಿದ್ದ ಆಯ್ಕೆ ಸಮಿತಿಯು ಫೆ.4ರಂದು ಸಭೆ ಸೇರಿ ಚಿತ್ರರಂಗಕ್ಕೆ ಹಂಸಲೇಖ ಅವರು ನೀಡಿರುವ ಅಪ್ರತಿಮ ಕೊಡುಗೆಯನ್ನು ಪರಿಗಣಿಸಿ, ಸಮಿತಿಯು ಅವಿರೋಧವಾಗಿ ಶಿಫಾರಸು ಮಾಡಿದ ಮೂವರು ಗಣ್ಯರ ಪಟ್ಟಿಯಲ್ಲಿ ಡಾ.ಹಂಸಲೇಖ ಹೆಸರನ್ನು ಅಂತಿಮಗೊಳಿಸಿದೆ ಎಂದು ಆದೇಶದಲ್ಲಿ ಹೇಳಲಾಗಿದೆ.

ಈ ಬಗ್ಗೆ ಮಾತನಾಡಿರುವ ವಾರ್ತಾ ಇಲಾಖೆ ಆಯುಕ್ತ ಹೇಮಂತ್ ನಿಂಬಾಳ್ಕರ್, ಬಹುಮುಖ ಪ್ರತಿಭೆಯುಳ್ಳ ಹಂಸಲೇಖ ಅವರು ಕೇವಲ ಸಂಗೀತ ನಿರ್ದೇಶನ ಮಾತ್ರವಲ್ಲದೆ, ಗೀತ ರಚನೆ, ಚಿತ್ರಕಥೆ, ಸಂಭಾಷಣೆ ಹಾಗೂ ನಿರ್ದೇಶನದಲ್ಲೂ ಅವರು ತಮ್ಮ ಮುದ್ರೆ ಒತ್ತಿದ್ದಾರೆ. 80 ಮತ್ತು 90ರ ದಶಕದಲ್ಲಿ ಕನ್ನಡ ಚಿತ್ರರಂಗಕ್ಕೆ ಹೊಸ ಆಯಾಮ ನೀಡಿದ ಅವರು, ಜಾನಪದ ಸೊಗಡು ಮತ್ತು ಪಾಶ್ಚಾತ್ಯ ಸಂಗೀತದ ಸಮ್ಮಿಲನದ ಮೂಲಕ ಕ್ರಾಂತಿ ಮಾಡಿದವರು. ಈ ಪ್ರತಿಷ್ಠಿತ ಪ್ರಶಸ್ತಿಯನ್ನು ಫೆ.6ರಂದು ನಡೆಯಲಿರುವ ಅಂತಾರಾಷ್ಟ್ರೀಯ ಚಲನಚಿತ್ರೋತ್ಸವದ ಸಮಾರೋಪ ಸಮಾರಂಭದಲ್ಲಿ ಪ್ರದಾನ ಮಾಡಲಾಗುವುದು ಎಂದು ತಿಳಿಸಿದ್ದಾರೆ.

ಇಟಲಿ, ಜಪಾನ್ ರಾಯಭಾರಿ ಕಚೇರಿಗಳಿಗೆ ಬೆದರಿಕೆ ಸಂದೇಶ

ಬೆಂಗಳೂರು: ನಗರದಲ್ಲಿರುವ ಇಟಲಿ ಹಾಗೂ ಜಪಾನ್ ದೇಶಗಳ ರಾಯಭಾರಿ ಕಚೇರಿಗಳಿಗೆ ಅಪಚಿತರಿಂದ ಬೆದರಿಕೆ ಸಂದೇಶ ಬಂದ ಹಿನ್ನೆಲೆಯಲ್ಲಿ ವಿಧಾನಸೌಧ ಹಾಗೂ ಹಲಸೂರು ಪೊಲೀಸ್ ಠಾಣೆಗಳಲ್ಲಿ ಪ್ರತ್ಯೇಕ ಪ್ರಕರಣಗಳು ದಾಖಲಾಗಿವೆ.

ರಿಚ್ಮಂಡ್ ರಸ್ತೆಯಲ್ಲಿರುವ ಇಟಲಿ ರಾಯಭಾರಿ ಕಚೇ ರಿಯ ಕಾನೂನು ವಿಭಾಗದ ಇ–ಮೇಲ್ ಐಡಿಗೆ ರಮೇಶ್ ಎಂಬ ಹೆಸರಿನ ವ್ಯಕ್ತಿ ಹುಸಿ ಬಾಂಬ್ ಸಂದೇಶ ಕಳುಹಿಸಿದ್ದ. ಜ.30ರ ಬೆಳಗಿಜಾವ 5.25ಕ್ಕೆ ಕಳುಹಿಸಿದ್ದ ಹುಸಿ ಬಾಂಬ್ ಸಂದೇಶದಲ್ಲಿ ಮಧ್ಯಾಹ್ನ 1 ಗಂಟೆಗೆ ಐದು ಆರ್‌ಡಿಎಕ್ಸ್ ಬಾಂಬ್ ಸ್ಫೋಟಗೊಳ್ಳಲಿದೆ ಎಂದು ನಮೂದಿಸಿದ್ದ.

ಈ ಬಗ್ಗೆ ಅಧಿಕಾರಿಗಳು ತಪಾಸಣೆ ನಡೆಸಿದಾಗ ಹುಸಿ ಬಾಂಬ್ ಸಂದೇಶ ಎಂದು ತಿಳಿದುಬಂದಿತ್ತು. ಕಚೇರಿಯ ಭದ್ರತಾ ವಿಭಾಗದ ಅಧಿಕಾರಿ ನೀಡಿದ ದೂರಿನ ಮೇರೆಗೆ ಪ್ರಕರಣ ದಾಖಲಿಸಲಾಗಿದೆ ಎಂದು ಪೊಲೀಸರು ತಿಳಿಸಿದ್ದಾರೆ. ಇಟಲಿ ರಾಯಭಾರಿ ಕಚೇರಿಗೆ ಹುಸಿ ಬಾಂಬ್ ಸಂದೇಶದ ಬೆನ್ನಲ್ಲೇ ಕಬ್ಬನ್ ರಸ್ತೆಯಲ್ಲಿರುವ ಜಪಾನ್ ರಾಯಭಾರಿ ಕಚೇರಿಯ ದೂರವಾಣಿ ಸಂಖ್ಯೆಗೆ ಕೊಲೆ ಮಾಡುವುದಾಗಿ ಬೆದರಿಕೆ ಕರೆ ಬಂದಿದೆ. ಜ.30ರ ಬೆಳಗ್ಗೆ ವಿಘ್ನೇಶ್ ಹೆಸರಿನ ವ್ಯಕ್ತಿ ಎರಡು ಬಾರಿ ಕರೆ ಮಾಡಿದ್ದಾನೆ. ಕೆಲವರು ಯಾರೋ ನಿಮ್ಮನ್ನು ಹತ್ಯೆ ಮಾಡಲಿದ್ದಾರೆ. ಈ ಕುರಿತು ಜಾಗರೂಕವಾಗಿರುವಂತೆ ಕರೆಯಲ್ಲಿ ತಿಳಿಸಿದ್ದಾನೆ.

ವಿಶ್ವವಾಣಿ
ವಿಶ್ವಾಸವೇ ವಿಶ್ವ

WOMEN'S PREMIER LEAGUE **ಸ್ಮೃತಿ ಸಾಹಸಕ್ಕೆ ಒಲಿದ ಜಯ**

ಆರ್‌ಸಿಬಿಗೆ ಡಬಲ್ ಕಪ್

ವಡೋದರಾದಲ್ಲಿ ಗುರುವಾರ ನಡೆದ ಮಹಿಳಾ ಪ್ರೀಮಿಯರ್ ಲೀಗ್ ಕ್ರಿಕೆಟ್‌ನ ಫೈನಲ್ ಪಂದ್ಯದಲ್ಲಿ ಡೆಲ್ಲಿ ಕ್ಯಾಪಿಟಲ್ಸ್ ನೀಡಿದ 204 ರನ್‌ಗಳ ಗುರಿ ಬೆಂಬತ್ತಿದ ಆರ್‌ಸಿಬಿ ತಂಡ ನಾಯಕಿ ಸ್ಮೃತಿ (87), ಜಾರ್ಜಿಯಾ ವಾಲ್ (71) ಅವರ ಭರ್ಜರಿ ಆಟದ ನೆರವಿನಿಂದ 2ನೇ ಬಾರಿ ಕಪ್ ಗೆದ್ದುಕೊಂಡಿದೆ.

ರಾಜ್ಯಸಭೆಯಲ್ಲಿ ಪ್ರಧಾನಿ ಭಾಷಣ: ಕಾಂಗ್ರೆಸ್ ವಿರುದ್ಧ ವಾಗ್ದಾಳಿ

ಭಾರತವೇ ಭವಿಷ್ಯ: ಮೋದಿ

ದೆಹಲಿ: ಭಾರತ ಇಂದು ವಿಶ್ವದ ಸಮಸ್ಯೆಗಳಿಗೆ ಸ್ಪಂದಿಸುವ ದೇಶವಾಗಿದೆ. ಹಲವು ಅಭಿವೃದ್ಧಿ ಹೊಂದಿದ ದೇಶಗಳ ಜನಸಂಖ್ಯೆ ವೃದ್ಧಾಪ್ಯ ಹಂತವನ್ನು ತಲುಪಿದೆ. ಆದರೆ ಭಾರತ ಯುವ ಜನಸಂಖ್ಯೆಯ ಬಲದಿಂದ ಯಶಸ್ಸಿನತ್ತ ಸಾಗುತ್ತಿದೆ. ಪ್ರತಿಭಾನ್ವಿತ ಯುವ ಸಮುದಾಯದ ನೆರವಿನಿಂದ ಭಾರತ ಇಂದು ವಿಶ್ವದ ಪ್ರಮುಖ ಆರ್ಥಿಕತೆಗಳಲ್ಲಿ ಒಂದಾಗಿದೆ. ದೇಶ ಎಲ್ಲಾ ಕ್ಷೇತ್ರಗಳಲ್ಲಿ ಮುನ್ನುಗ್ಗುತ್ತಿದೆ ಎಂದು ಪ್ರಧಾನಿ ನರೇಂದ್ರ ಮೋದಿ ತಿಳಿಸಿದರು.

ಪ್ರತಿಪಕ್ಷಗಳ ತೀವ್ರ ಗದ್ದಲ ಹಾಗೂ ಕೋಲಾಹದ ನಡುವೆ ರಾಜ್ಯಸಭೆಯಲ್ಲಿ ಬುಧವಾರ ರಾಷ್ಟ್ರಪತಿಗಳ ಭಾಷಣದ ಮೇಲಿನ ವಂದನಾ ನಿರ್ಣಯದ ಚರ್ಚೆಗೆ ಉತ್ತರಿಸಿದ ಮೋದಿ, ನಾವು ಭವಿಷ್ಯಕ್ಕೆ ಸಿದ್ಧವಾಗಿರುವ ನೀತಿಗಳ ಮೇಲೆ ಬಲವಾದ ಒತ್ತು ನೀಡಿದ್ದೇವೆ. ಇಂದು ದೇಶವನ್ನು ನೀತಿ ಮತ್ತು ಕಾರ್ಯತಂತ್ರದ ಆಧಾರದ ಮೇಲೆ ಆಳಲಾಗುತ್ತಿದೆ. ಭಾರತದ ಮೇಲಿನ ಜಾಗತಿಕ ನಂಬಿಕೆ ಹೆಚ್ಚುತ್ತಿದೆ ಎಂದರು. ಇಡೀ ಜಗತ್ತು ಇಂದು ಅಸ್ಥಿರತೆಯನ್ನು ಅನುಭವಿಸುತ್ತಿದ್ದು, ಈ ಸಮಸ್ಯೆಯನ್ನು ನಿಭಾಯಿಸಲು ಹಲವು ದೇಶಗಳು ಪರದಾಡುತ್ತಿವೆ. ಎರಡನೇ ಮಹಾಯುದ್ಧದ ನಂತರ ಹೊಸ ಜಾಗತಿಕ ವ್ಯವಸ್ಥೆ ರೂಪುಗೊಂಡಿದ್ದು, ಜಗತ್ತು ಯುದ್ಧದ ಬಿಕ್ಕಟ್ಟುಗಳಲ್ಲಿ ಸಿಲುಕಿ ಹೆಣಗಾಡುತ್ತಿದೆ. ಆದರೆ ಭಾರತ ಹಲವು ದೇಶಗಳಿಗೆ ಆಶಾಕಿರಣವಾಗಿದೆ. ಎಲ್ಲ ಅಡೆತಡೆಗಳ ನಡುವೆ ದೇಶ ಅತ್ಯಂತ ವೇಗವಾಗಿ ಬೆಳವಣಿಗೆ ಕಾಣುತ್ತಿದೆ ಎಂದ ಮೋದಿ ಹಿಂದಿನ ಕಾಂಗ್ರೆಸ್ ಸರಕಾರದ ದುರಾಡಳಿತದಿಂದ ದೇಶ ಇಷ್ಟು ವರ್ಷ ಹಿಂದುಳಿಯುವಂತಾಯಿತು ಎಂದು ದೂರಿದರು.

ಪ್ರತಿಪಕ್ಷಗಳಿಂದ ಸಭಾತ್ಯಾಗ

ಪ್ರಧಾನಿ ಮೋದಿ ಭಾಷಣ ಆರಂಭವಾಗುತ್ತಿದ್ದಂತೆ ಪ್ರತಿಪಕ್ಷ ಸದಸ್ಯರು ತೀವ್ರ ಗದ್ದಲ ಆರಂಭಿಸಿದರು. ಸರ್ವಾಧಿಕಾರಿ ಧೋರಣೆ ನಡೆಯುವುದಿಲ್ಲ ಎಂದು ಘೋಷಣೆ ಕೂಗಿ, ಸಭಾತ್ಯಾಗ ಮಾಡಿದರು. ವಿಪಕ್ಷ ಸದಸ್ಯರ ಅನುಪಸ್ಥಿತಿಯಲ್ಲಿಯೇ ಪ್ರಧಾನಿ ಭಾಷಣ ಮಾಡಿದರು. ಇದಕ್ಕೂ ಮುನ್ನ ಸಭಾಪತಿ ಪೀಠದ ಬಳಿ ನಿಂತು ಪ್ರತಿಭಟನೆ ನಡೆಸುತ್ತಿದ್ದ ವಿಪಕ್ಷ ನಾಯಕ ಮಲ್ಲಿಕಾರ್ಜುನ ಖರ್ಗೆ ಅವರಿಗೆ ಕುಳಿತುಕೊಂಡೇ ಪ್ರತಿಭಟನೆ ನಡೆಸುವಂತೆ ಮೋದಿ ಮನವಿ ಮಾಡಿದರು.

- ಲೋಕಸಭೆ ಬದಲು ರಾಜ್ಯಸಭೆಯಲ್ಲಿ ಪ್ರಧಾನಿ ಉತ್ತರ
- ಪ್ರತಿಪಕ್ಷ ಸದಸ್ಯರ ಪ್ರತಿಭಟನೆ ನಡುವೆಯೇ ಭಾಷಣ
- ಕಾಂಗ್ರೆಸ್ ಸರಕಾರದ ಆಡಳಿತದ ವಿರುದ್ಧ ವಾಗ್ದಾಳಿ
- ಆರ್ಥಿಕ ಸುಧಾರಣೆ, ಜಿಡಿಪಿ ಪ್ರಗತಿಯ ಉಲ್ಲೇಖ

ದೇಶಕ್ಕೆ ಸ್ವಾತಂತ್ರ್ಯ ಸಿಕ್ಕಿದಾಗ ಆರ್ಥಿಕತೆಯಲ್ಲಿ ಭಾರತ 6ನೇ ಸ್ಥಾನದಲ್ಲಿತ್ತು. ಇವರೆಲ್ಲಾ ಸೇರಿ 12ನೇ ಸ್ಥಾನಕ್ಕೆ ಇಳಿಸಿಬಿಟ್ಟರು. ಆದರೆ ನಾವು ಅಧಿಕಾರಕ್ಕೆ ಬಂದ ಬಳಿಕ 3ನೇ ಸ್ಥಾನಕ್ಕೆ ಬಂದಿದ್ದೇವೆ. ಕಳೆದ ಕೆಲವು ದಿನಗಳಲ್ಲಿ, ನಾವು ವಿಶ್ವದ 9 ದೊಡ್ಡ ಮತ್ತು ಪ್ರಮುಖ ದೇಶಗಳೊಂದಿಗೆ ವ್ಯಾಪಾರ ಒಪ್ಪಂದಗಳಿಗೆ ಸಹಿ ಹಾಕಿದ್ದೇವೆ. 27 ದೇಶಗಳ ಐರೋಪ್ಯ ಒಕ್ಕೂಟದೊಂದಿಗೆ ಮಾಡಿಕೊಂಡಿರುವ ಒಪ್ಪಂದವು ಎಲ್ಲ ಒಪ್ಪಂದಗಳ ಮಹಾ ತಾಯಿ. ಆರ್ಥಿಕ ನೀತಿಗಳಿಂದಲೇ ದೇಶ ನಡೆಯುತ್ತದೆ. ಇದರಿಂದಲೇ ಅಮೆರಿಕದಂತಹ ದೇಶಗಳೊಂದಿಗೆ ಭಾರತ ಒಪ್ಪಂದ ಮಾಡಿಕೊಂಡಿದೆ ಎಂದರು. → 4

ವೈಲ್ಡ್‌ಲೈಫ್ ಟೂರಿಸಂ ವನ್ಯಜೀವಿ ಸಂರಕ್ಷಣೆಗೆ ಪೂರಕ: ತಜ್ಞರ ಮಾತು

ಸಫಾರಿ ಬಳಸಿ ಅರಣ್ಯ ಉಳಿಸಿ

ರಂಜಿತ್ ಎಚ್. ಅಶ್ವತ್ಥ ಬೆಂಗಳೂರು

ಹುಲಿ ದಾಳಿಯ ನೆಪದಲ್ಲಿ ಸಫಾರಿ ನಿರ್ಬಂಧಿಸಿರುವ ಅರಣ್ಯ ಇಲಾಖೆಯ ತೀರ್ಮಾನಕ್ಕೆ ತೀವ್ರ ಅಸಮಾಧಾನ ವ್ಯಕ್ತವಾಗುತ್ತಿರುವ ಬೆನ್ನಲ್ಲೇ ಸಫಾರಿಯನ್ನು ಬಳಸಿಕೊಂಡೇ ಅರಣ್ಯವನ್ನು ಹೆಚ್ಚಿಸಬಹುದು ಎನ್ನುವ ಆಯಾಮದಲ್ಲಿ ನಮ್ಮ ಸರಕಾರಗಳು ಆಲೋಚನೆ ಮಾಡಬೇಕಿದೆ ಎನ್ನುವ ಮಾತುಗಳು ಕೇಳಿಬರುತ್ತಿದೆ.

ವನ್ಯಜೀವಿ ತಜ್ಞರ ಪ್ರಕಾರ, ಮಾನವ-ಹುಲಿ ಸಂಘರ್ಷಕ್ಕೆ ಸಫಾರಿ ಸ್ಥಗಿತವೇ ಪರಿಹಾರವಲ್ಲ. ಈ ಸಂಘರ್ಷ ಕೇವಲ ಬಂಡೀಪುರ ಹಾಗೂ ನಾಗರಹೊಳೆಗೆ ಸೀಮಿತವಾಗಿಲ್ಲ. ಥಡೋಬ, ಕಾರ್ಬೆಟ್ ಸೇರಿದಂತೆ ಹುಲಿಗಳ ಸಂಖ್ಯೆ ಹೆಚ್ಚಿರುವ ಕಡೆ ಈ ರೀತಿಯ ದಾಳಿಗಳು ನಡೆದಿವೆ. ಕರ್ನಾಟಕಕ್ಕೆ ಹೋಲಿಸಿದರೆ, ದೇಶದ ಇತರೆ ಭಾಗದಲ್ಲಿ ಇಲ್ಲಿಗಿಂತ ಹೆಚ್ಚು ಪ್ರಮಾಣದಲ್ಲಿ ದಾಳಿಗಳಾಗುತ್ತಿವೆ. ಆದರೆ ಅಲ್ಲೆಲ್ಲಿಯೂ ಸ್ಥಗಿತವಾಗದ ಸಫಾರಿ, ಬಂಡೀಪುರ ಹಾಗೂ ನಾಗರಹೊಳೆಯಲ್ಲಿ ಮಾತ್ರ ಏಕಾಗಿದೆ? ಸಂಘರ್ಷ ತಡೆಗೆ ಅರಣ್ಯ ಇಲಾಖೆ ಅಧಿಕಾರಿಗಳು ವೈಜ್ಞಾನಿಕ ಪರಿಹಾರ ಕಂಡುಕೊಳ್ಳಬೇಕಿದೆಯೇ ಹೊರತು, ಸಫಾರಿ ಸ್ಥಗಿತಗೊಳಿಸುವುದು ಪರಿಹಾರವಲ್ಲ. ವಾಸ್ತವವನ್ನು ಅರಿಯದೇ ಕೇವಲ ಅಧಿಕಾರಿಗಳ ಮಾತು ಕೇಳಿ ಅರಣ್ಯ ಸಚಿವರು ತೆಗೆದುಕೊಳ್ಳುವ ತೀರ್ಮಾನಗಳಿಂದ ಅಭಯಾರಣ್ಯ ಸುತ್ತಮುತ್ತಲಿನ ಪ್ರವಾಸೋದ್ಯಮಕ್ಕೆ ತೀವ್ರ ಹೊಡೆತ ಬೀಳುತ್ತದೆ ಎನ್ನುವುದು ವಾಸ್ತವ. → 4

ವನ್ಯಜೀವಿ ಟೂರಿಸಂ ಆದ್ಯತೆಯಾಗಲಿ

ಕರ್ನಾಟಕದಲ್ಲಿ ದೇವಾಲಯ ಟೂರಿಸಂ, ಆಧ್ಯಾತ್ಮ ಟೂರಿಸಂ ಸೇರಿದಂತೆ ವಿವಿಧ ರೀತಿಯ ಸರ್ಕಿಟ್‌ಗಳ ಮೂಲಕ ಪ್ರವಾಸೋದ್ಯಮ ವೃದ್ಧಿಗೆ ಕ್ರಮ ವಹಿಸಲಾಗುತ್ತದೆ. ಆದರೆ ವೈಲ್ಡ್‌ಲೈಫ್ ಟೂರಿಸಂ ವಿಷಯದಲ್ಲಿ ಹೆಚ್ಚು ಆಸಕ್ತಿ ನೀಡುತ್ತಿಲ್ಲ. ಮುಂದಿನ ದಿನದಲ್ಲಿ ಇತರೆ ಪ್ರವಾಸೋದ್ಯಮಕ್ಕೆ ಬಜೆಟ್‌ನಲ್ಲಿ ಹಣ ವ್ಯಯಿಸುವಂತೆ ವನ್ಯಜೀವಿ ಟೂರಿಸಂಗೆ ಒತ್ತು ನೀಡುವುದಕ್ಕೂ ಹೆಚ್ಚುವರಿ ಅನುದಾನಗಳನ್ನು ಮೀಸಲಿಡಲಿ. ಅರಣ್ಯ ಇಲಾಖೆಯವರು ಅವೈಜ್ಞಾನಿಕ ಯೋಜನೆಗಳನ್ನು ಕೈಗೆತ್ತಿ ಕೊಳ್ಳುವ ಬದಲು ಪ್ರವಾಸೋದ್ಯಮದ ಮೂಲಕ ಸ್ಥಳೀಯರಿಗೆ ಹೆಚ್ಚಿನ ಉದ್ಯೋಗ ಅವಕಾಶ ದೊರೆಯುವಂತೆ, ಹೆಚ್ಚುವರಿ ಲಾಭವಾಗುವಂತಹ ಯೋಜನೆಗಳನ್ನು ಹಾಕಿಕೊಂಡರೆ ಕಾಡು ಪ್ರಾಣಿಗಳಿಗೆ ಹಾಗೂ ಜನರಿಗೆ ಅನುಕೂಲವಾಗಲಿದೆ ಎನ್ನುವ ಸಲಹೆಗಳನ್ನು ತಜ್ಞರು ನೀಡಿದ್ದಾರೆ.

ಸೊಂಪಾದ ಪುಟಗಳು

ಜಗತ್ತಿನಲ್ಲಿ ಮನುಷ್ಯರಿಗಿಂತ ವಸ್ತುಗಳೇ ಹೆಚ್ಚು ಓಡಾಡುತ್ತವೆ!
ಶಿಶಿರಕಾಲ
ಶಿಶಿರ್ ಹೆಗಡೆ 6

ಕಾಡು ಕಡಿದು ಅಭಿವೃದ್ಧಿಯೇ? ಖಂಡಿತಾ ಕೂಡದು!
ಶಶಾಂಕಣ
ಶಶಿಧರ ಹಾಲಾಡಿ 7

ದಾರಿದೀಪೋಕ್ತಿ

ಕೆಲವರು ಸೋತಾಗ ಅಧೀರರಾಗುತ್ತಾರೆ, ಆತ್ಮವಿಶ್ವಾಸ ಕಳೆದುಕೊಳ್ಳುತ್ತಾರೆ. ಇನ್ನು ಕೆಲವರು ಸೋತಾಗ ಅದರಿಂದ ಮೈಕೊಡವಿ ಎದ್ದುಕೊಂಡು ಗೆಲ್ಲಲೇಬೇಕು ಎಂಬ ಪ್ರತಿಜ್ಞೆ ಸ್ವೀಕರಿಸುತ್ತಾರೆ. ಸೋಲು ಸ್ಫೂರ್ತಿಯ ಸಂಕೇತವೂ ಆಗಬಲ್ಲುದು.

ವಕ್ರತುಂಡೋಕ್ತಿ

ಕೆಲವರು ಅದ್ಭುತವಾದ ಸೇವಿಂಗ್ ಪ್ಲಾನ್ ಹೊಂದಿರುತ್ತಾರೆ. ಅಂಥವರು ತಿಂಗಳ ಕೊನೆಯಲ್ಲಿ ಪ್ಲಾನ್ ಮಾತ್ರ ಉಳಿಸಿಕೊಂಡಿರುತ್ತಾರೆ.

ಮೆಟ್ರೋ: 9ರಿಂದ ಟಿಕೆಟ್ ದರ ಹೆಚ್ಚಳ

ಬೆಂಗಳೂರು: ನಮ್ಮ ಮೆಟ್ರೋ ಟಿಕೆಟ್ ದರವನ್ನು ಫೆ.9ರಿಂದ ಜಾರಿಗೆ ಬರುವಂತೆ ಶೇ.5ರಷ್ಟು ಹೆಚ್ಚಿಸಲಾಗಿದೆ ಎಂದು ಮೆಟ್ರೋ ನಿಗಮ ಅಧಿಕೃತವಾಗಿ ಪ್ರಕಟಿಸಿದೆ. ಮೆಟ್ರೋ ಟಿಕೆಟ್ ದರವನ್ನು ಶೇ.5ರಷ್ಟು ಏರಿಕೆ ಮಾಡಲು ರಾಜ್ಯ ಸರಕಾರ ಅನುಮೋದನೆ ನೀಡಿದೆ.

ಟ್ರಂಪ್ ಹೇಳಿಕೆಗೆ ನಕಾರ

ಹೊಸದಿಲ್ಲಿ: ಅಮೆರಿಕದೊಂದಿಗಿನ ವಾಣಿಜ್ಯ ಒಪ್ಪಂದದ ಬಳಿಕ ಭಾರತ ರಷ್ಯಾದಿಂದ ಕಚ್ಚಾತೈಲ ಖರೀದಿಯನ್ನು ನಿಲ್ಲಿಸಲಿದೆ ಹಾಗೂ ವೆನಿಜುವೆಲಾದಿಂದ ತೈಲ ಖರೀದಿಸಲಿದೆ ಎಂಬ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಹೇಳಿಕೆಯನ್ನು ಭಾರತ ನಿರಾಕರಿಸಿದ್ದು ದೇಶದ ಹಿತದೃಷ್ಟಿಯಿಂದ ಇಂಧನ ಭದ್ರತೆ ನಮ್ಮ ಆದ್ಯತೆಯಾಗಿದೆ ಎಂದು ಸ್ಪಷ್ಟಪಡಿಸಿದೆ. ಭಾರತದ ಎಲ್ಲಾ ನಿರ್ಧಾರಗಳನ್ನು ಮಾರುಕಟ್ಟೆ ಪರಿಸ್ಥಿತಿಗಳಿಗೆ ಅನುಗುಣವಾಗಿ ತೆಗೆದುಕೊಳ್ಳಲಾಗಿದೆ. ವೆನಿಜುವೆಲಾದ ತೈಲ ಖರೀದಿ ಸಾಧ್ಯತೆಗಳನ್ನು ಅನ್ವೇಷಿಸಲು ಭಾರತ ಮುಕ್ತವಾಗಿದೆ ಎಂದು ವಿದೇಶಾಂಗ ಸಚಿವಾಲಯದ ವಕ್ತಾರ ರಣಧೀರ್ ಜೈಸ್ವಾಲ್ ತಿಳಿಸಿದ್ದಾರೆ.

ಶಾಸಕ ರೇವಣ್ಣಗೆ ಸಂಕಷ್ಟ

ಬೆಂಗಳೂರು: ಅತ್ಯಾಚಾರಕ್ಕೆ ಒಳಗಾದ ಸಂತ್ರಸ್ತೆಯ ಅಪಹರಣ ಪ್ರಕರಣದಲ್ಲಿ ಜೆಡಿಎಸ್ ಶಾಸಕ ಎಚ್.ಡಿ. ರೇವಣ್ಣ ವಿರುದ್ಧ ಆರೋಪ ನಿಗದಿಗೆ ಹೈಕೋರ್ಟ್ ಅನುಮತಿ ನೀಡಿದೆ. ಆರೋಪ ನಿಗದಿ ಮುಂದೂಡುವಂತೆ ಈ ಹಿಂದೆ ವಿಚಾರಣಾಧೀನ ನ್ಯಾಯಾಲಯಕ್ಕೆ ನೀಡಿದ್ದ ಮಧ್ಯಂತರ ಆದೇಶವನ್ನು ಹೈಕೋರ್ಟ್ ಗುರುವಾರ ತೆರವುಗೊಳಿಸಿದೆ. ಇದರಿಂದ ಜೆಡಿಎಸ್ ನಾಯಕನಿಗೆ ತೀವ್ರ ಹಿನ್ನಡೆಯಾಗಿದೆ. ಮೈಸೂರು ಜಿಲ್ಲೆಯ ಕೆ.ಆರ್. ಪೇಟೆ ಠಾಣೆಯಲ್ಲಿ ರೇವಣ್ಣ ವಿರುದ್ಧ ಸಂತ್ರಸ್ತೆಯ ಪುತ್ರ ದೂರು ದಾಖಲಿಸಿದ್ದರು. ಬಳಿಕ ಸಕ್ಷಮ ನ್ಯಾಯಾಲಯಕ್ಕೆ ಆರೋಪ ಪಟ್ಟಿ ಸಲ್ಲಿಕೆಯಾಗಿತ್ತು.

ಗಣಿ ಸ್ಫೋಟ: 16 ಸಾವು

ಶಿಲ್ಲಾಂಗ್: ಮೇಘಾಲಯದ ಪೂರ್ವ ಜೈಂಟಿಯಾ ಹಿಲ್ಸ್ ಜಿಲ್ಲೆಯ ಅಕ್ರಮ ಕಲ್ಲಿದ್ದಲು ಗಣಿಯಲ್ಲಿ ಗುರುವಾರ ಭಾರೀ ಸ್ಫೋಟ ಸಂಭವಿಸಿದ್ದು, ಕನಿಷ್ಠ 16 ಕಾರ್ಮಿಕರು ಸಾವನ್ನಪ್ಪಿದ್ದಾರೆ ಮತ್ತು ಹಲವಾರು ಜನ ಸಿಕ್ಕಿಬಿದ್ದಿದ್ದಾರೆ. ಗುರುವಾರ ಬೆಳಗ್ಗೆ ಥಾಂಗ್ಸ್ಕ ಪ್ರದೇಶದಲ್ಲಿ ಈ ಘಟನೆ ಸಂಭವಿಸಿದೆ. ಇಲ್ಲಿಯವರೆಗೆ 16 ಶವಗಳನ್ನು ವಶಪಡಿಸಿಕೊಂಡಿದ್ದೇವೆ. ಸ್ಫೋಟದ ಸಮಯದಲ್ಲಿ ಗಣಿಯಲ್ಲಿದ್ದ ಕಾರ್ಮಿಕರ ನಿಖರ ಸಂಖ್ಯೆ ಇನ್ನೂ ಖಚಿತಪಡಿಸಲಾಗಿಲ್ಲ. ಹೀಗಾಗಿ ಹೆಚ್ಚಿನ ಜನ ಸಿಕ್ಕಿಬಿದ್ದಿರುವ ಶಂಕೆ ಇದೆ. ಸಂತ್ರಸ್ತರಿಗೆ ಪ್ರಧಾನಿ ವಿಪತ್ತು ಪರಿಹಾರ ನಿಧಿಯಿಂದ 2 ಲಕ್ಷ ರು. ನೆರವು ಪ್ರಕಟಿಸಲಾಗಿದೆ.

ಜಾಲತಾಣಕ್ಕೆ ಕಡಿವಾಣ

ಬೆಂಗಳೂರು: ಸಾಮಾಜಿಕ ಜಾಲತಾಣಗಳ ಮೇಲೆ ಕಣ್ಣಿಡಲು ರಾಜ್ಯ ಸರಕಾರ ನಿರ್ಧರಿಸಿದ್ದು, ಕೃತಕ ಬುದ್ಧಿಮತ್ತೆ(ಎಐ) ಚಾಲಿತ ಸೋಷಿಯಲ್ ಮೀಡಿಯಾ ಅನಾಲಿಟಿಕ್ಸ್ ಸಲ್ಯೂಷನ್ ತಂತ್ರಾಂಶವನ್ನು 67.20 ಕೋಟಿಗಳ ಅಂದಾಜು ಮೊತ್ತದಲ್ಲಿ ಅಳವಡಿಸಲು ಸಚಿವ ಸಂಪುಟ ಸಭೆ ಗುರುವಾರ ಅನುಮೋದನೆ ನೀಡಿದೆ. ಮುಖ್ಯಮಂತ್ರಿ ಸಿದ್ದರಾಮಯ್ಯ ನೇತೃತ್ವದಲ್ಲಿ ನಡೆದ ಸಚಿವ ಸಂಪುಟ ಸಭೆಯಲ್ಲಿ ಸಾಮಾಜಿಕ ಜಾಲತಾಣವನ್ನು ತಪ್ಪು ದಾರಿಗೆ ಬಳಸುವ ಪ್ರಯತ್ನಕ್ಕೆ ಬ್ರೇಕ್ ಹಾಕಲು ಸರಕಾರ ನಿರ್ಧರಿಸಿದೆ. ಸುಳ್ಳು ಸುದ್ದಿ ಹರಡುವುದಕ್ಕೆ ಕಡಿವಾಣ ಹಾಕಲು ಎಐ ತಂತ್ರಾಂಶ ಬಳಸಲು ನಿರ್ಧರಿಸಲಾಗಿದೆ.

ಶ್ರೀ ಸಿದ್ದರಾಮಯ್ಯ
ಸನ್ಮಾನ್ಯ ಮುಖ್ಯಮಂತ್ರಿಗಳು

ಶ್ರೀ ಡಿ. ಕೆ. ಶಿವಕುಮಾರ್
ಮಾನ್ಯ ಉಪ ಮುಖ್ಯಮಂತ್ರಿಗಳು

ಅಂತರರಾಷ್ಟ್ರೀಯ ವಾಣಿಜ್ಯ ಮೇಳ -2026
ಉತ್ಪಾದನೋತ್ತರ ಕೃಷಿ, ರೈತರ ಸಬಲೀಕರಣ, ಹಾಗೂ
ರಾಜ್ಯ ಮಟ್ಟದ ಕೃಷಿ ಪಂಡಿತ ಪ್ರಶಸ್ತಿ / ಕೃಷಿ ಪ್ರಶಸ್ತಿ ಪ್ರದಾನ ಸಮಾರಂಭ
ಫೆಬ್ರವರಿ 6 ರಿಂದ 8
ತ್ರಿಪುರವಾಸಿನಿ, ಅರಮನೆ ಮೈದಾನ, ಬೆಂಗಳೂರು
ಉದ್ಘಾಟನೆ: 6 ಫೆಬ್ರವರಿ, 2026 | ಸಮಯ: ಬೆಳಿಗ್ಗೆ 11:00 ಗಂಟೆಗೆ

ಅಂತರರಾಷ್ಟ್ರೀಯ ವಾಣಿಜ್ಯ ಮೇಳ-2026 ಮುಖ್ಯಾಂಶಗಳು
• ವಸ್ತು ಪ್ರದರ್ಶನ
• ಕೃಷಿ ಪರಿಸರ
• ಮೌಲ್ಯವರ್ಧನೆ
• ಬ್ರ್ಯಾಂಡಿಂಗ್, ಮಾರುಕಟ್ಟೆ ಮತ್ತು ಸಾಲ ಸೇವೆಗಳು
• ಆಹಾರ ಮಳಿಗೆಗಳು
• ಗ್ರಾಹಕ ಸಂಪರ್ಕ
• ಸಾಂಸ್ಕೃತಿಕ ಕಾರ್ಯಕ್ರಮಗಳು


ಸನ್ಮಾನ್ಯ ಮುಖ್ಯಮಂತ್ರಿಗಳು, ಮಾನ್ಯ ಉಪ ಮುಖ್ಯಮಂತ್ರಿಗಳು ಹಾಗು ಮಾನ್ಯ ಕೃಷಿ ಸಚಿವರಾದ ಶ್ರೀ ಎನ್. ಚಲುವರಾಯಸ್ವಾಮಿಯವರ ಉಪಸ್ಥಿತಿಯಲ್ಲಿ ಕಾರ್ಯಕ್ರಮ ಉದ್ಘಾಟಿಸುತ್ತಿರುವುದು

ಉದ್ಘಾಟನೆ
ಶ್ರೀ ಸಿದ್ದರಾಮಯ್ಯ
ಸನ್ಮಾನ್ಯ ಮುಖ್ಯಮಂತ್ರಿಗಳು, ಕರ್ನಾಟಕ ಸರ್ಕಾರ

ಘನ ಉಪಸ್ಥಿತಿ
ಶ್ರೀ ಡಿ. ಕೆ. ಶಿವಕುಮಾರ್
ಮಾನ್ಯ ಉಪ ಮುಖ್ಯಮಂತ್ರಿಗಳು, ಕರ್ನಾಟಕ ಸರ್ಕಾರ
ಸುಶ್ರೀ ಶೋಭಾ ಕರಂದ್ಲಾಜೆ
ಮಾನ್ಯ ಸೂಕ್ಷ್ಮ, ಸಣ್ಣ ಮತ್ತು ಮಧ್ಯಮ ಉದ್ಯಮಗಳು ಹಾಗೂ ಕಾರ್ಮಿಕ ಮತ್ತು ಉದ್ಯೋಗದ ರಾಜ್ಯ ಸಚಿವರು, ಭಾರತ ಸರ್ಕಾರ

ಅಧ್ಯಕ್ಷತೆ
ಶ್ರೀ ಎನ್. ಚಲುವರಾಯಸ್ವಾಮಿ
ಮಾನ್ಯ ಕೃಷಿ ಸಚಿವರು, ಕರ್ನಾಟಕ ಸರ್ಕಾರ ಹಾಗೂ ಅಧ್ಯಕ್ಷರು ಉಸ್ತುವಾರಿ ಸಮಿತಿ ಅಂತರರಾಷ್ಟ್ರೀಯ ವಾಣಿಜ್ಯ ಮೇಳ - 2026

ಪ್ರವೇಶ ಉಚಿತ

ಮುಖ್ಯ ಅತಿಥಿಗಳು
ಶ್ರೀ ರಾಮಲಿಂಗಾರೆಡ್ಡಿ
ಮಾನ್ಯ ಸಾರಿಗೆ ಮತ್ತು ಮುಜರಾಯಿ ಸಚಿವರು, ಕರ್ನಾಟಕ ಸರ್ಕಾರ
ಶ್ರೀ ಕೃಷ್ಣ ಬೈರೇಗೌಡ
ಮಾನ್ಯ ಕಂದಾಯ ಸಚಿವರು, ಕರ್ನಾಟಕ ಸರ್ಕಾರ
ಶ್ರೀ ಶಿವಾನಂದ ಪಾಟೀಲ
ಮಾನ್ಯ ಜವಳಿ, ಕಬ್ಬು ಅಭಿವೃದ್ಧಿ ಮತ್ತು ಸಕ್ಕರೆ ಮತ್ತು ಕೃಷಿ ಮಾರುಕಟ್ಟೆ ಸಚಿವರು, ಕರ್ನಾಟಕ ಸರ್ಕಾರ
ಶ್ರೀ ಎಸ್. ಎಸ್. ಮಲ್ಲಿಕಾರ್ಜುನ್
ಮಾನ್ಯ ಗಣಿ, ಭೂ ವಿಜ್ಞಾನ ಮತ್ತು ತೋಟಗಾರಿಕೆ ಸಚಿವರು, ಕರ್ನಾಟಕ ಸರ್ಕಾರ
ಶ್ರೀ ಕೆ ವೆಂಕಟೇಶ್
ಮಾನ್ಯ ಪಶು ಸಂಗೋಪನೆ ಮತ್ತು ರೇಷ್ಮೆ ಸಚಿವರು, ಕರ್ನಾಟಕ ಸರ್ಕಾರ
ಶ್ರೀ ಆರ್. ಅಶೋಕ್
ಮಾನ್ಯ ವಿರೋಧ ಪಕ್ಷದ ನಾಯಕರು, ಕರ್ನಾಟಕ ವಿಧಾನ ಸಭೆ
ಶ್ರೀ ಛಲವಾದಿ ಟಿ.ನಾರಾಯಣಸ್ವಾಮಿ
ಮಾನ್ಯ ವಿರೋಧ ಪಕ್ಷದ ನಾಯಕರು, ಕರ್ನಾಟಕ ವಿಧಾನ ಪರಿಷತ್ತು
ಡಾ. ಅಶ್ವತ್ಥನಾರಾಯಣ ಸಿ.ಎನ್.
ಮಾನ್ಯ ಶಾಸಕರು, ಮಲ್ಲೇಶ್ವರಂ ವಿಧಾನಸಭಾ ಕ್ಷೇತ್ರ

ರೈತ ಬಾಂಧವರೇ, ನಿಮ್ಮ ಜಮೀನಿನ ಬೆಳೆ ವಿವರಗಳನ್ನು ನೀವೇ "ರೈತರ ಬೆಳೆ ಸಮೀಕ್ಷೆ ಮೊಬೈಲ್ ಆಪ್" ನಲ್ಲಿ ದಾಖಲಿಸಿ ಅಪ್‌ಲೋಡ್ ಮಾಡಲು ಸದವಕಾಶ.

ಬೆಳೆ ಸಮೀಕ್ಷೆ
ಮಾಹಿತಿ ಅಪ್‌ಲೋಡ್ ಮಾಡಲು ಸ್ಥಳೀಯ ಖಾಸಗಿ ನಿವಾಸಿಗಳ / ಇಲಾಖಾ ಅಧಿಕಾರಿಗಳ ಸಹಾಯ ಪಡೆಯಬಹುದು.

ಬೆಳೆ ಸಮೀಕ್ಷೆ ಮಾಹಿತಿ ವೀಕ್ಷಿಸಲು ಹಾಗೂ ಯಾವುದೇ ವ್ಯತ್ಯಾಸಗಳಿದ್ದಲ್ಲಿ "ಬೆಳೆ ದರ್ಶಕ್ ಆಪ್" ನಲ್ಲಿ ಆಕ್ಷೇಪಣೆಗಳನ್ನು ಸಲ್ಲಿಸಿ ಇತ್ಯರ್ಥಪಡಿಸಿಕೊಳ್ಳಬಹುದಾಗಿದೆ.

ಹೆಚ್ಚಿನ ಮಾಹಿತಿಗಾಗಿ "ರೈತ ಕರೆ ಕೇಂದ್ರ - 18004253553" ಗೆ ಕರೆ ಮಾಡಬಹುದಾಗಿದೆ.
ಕರ್ನಾಟಕ ರಾಜ್ಯ ಕೃಷಿ ಇಲಾಖೆ, ಶೇಷಾದ್ರಿ ರಸ್ತೆ, ಬೆಂಗಳೂರು - 560001.

VISHWAVANI TV SPECIAL
ಯುಟ್ಯೂಬ್ ಚಾನೆಲ್ ಸಬ್‌ಸ್ಕ್ರೈಬ್ ಆಗಿ

ಸಫಾರಿ ಬಳಸಿ ಅರಣ್ಯ ಉಳಿಸಿ

← ಮೊದಲಪುಟದಿಂದ

ಹಾಗೇ ನೋಡಿದರೆ, ಅರಣ್ಯ ಸಂರಕ್ಷಣೆ, ಹುಲಿ-ಆನೆಗಳನ್ನು ಉಳಿಸಿ 'ಬೆಳೆಸುವ' ಬಗ್ಗೆ ನಗರದಲ್ಲಿ ಕುಳಿತು, ಸಾಮಾಜಿಕ ಜಾಲತಾಣದಲ್ಲಿ ಮಾಡುವ ಪೋಸ್ಟ್‌ಗಳಿಗೂ, ಅರಣ್ಯದ ಆಚೀಚೆ ರೈತರು, ಕಾಡಂಚಿನಲ್ಲಿ ಜೀವನ ಸಾಗಿಸುತ್ತಿರುವ ಜನರ ಭಾವನೆಗಳಿಗೂ ಭಾರಿ ವ್ಯತ್ಯಾಸವಿದೆ. ಅರಣ್ಯದಂಚಿನಲ್ಲಿರುವ ಸಮಸ್ಯೆಗಳನ್ನು ಮೀರಿ, ಅರಣ್ಯ, ಪ್ರಾಣಿಗಳ ಮೇಲೆ ಸ್ಥಳೀಯರಿಗೆ ಕಾಳಜಿ ಮೂಡಬೇಕೆಂದರೆ ಅಲ್ಲಿ ಪ್ರವಾಸೋದ್ಯಮ ಹೆಚ್ಚಾಗಿ, ಅಲ್ಲಿರುವವರಿಗೆ ಉದ್ಯೋಗ ಹಾಗೂ ಆರ್ಥಿಕ ಭದ್ರತೆ ಒದಗಿಸಬೇಕು. ಆಗ ಮಾತ್ರ ವನ್ಯಜೀವಿ ಸಂರಕ್ಷಣೆ ಎನ್ನುವುದು ಲಾಭದಾಯಕ ಉದ್ಯಮವಾಗುತ್ತದೆ. ವನ್ಯಜೀವಿ ಸಂರಕ್ಷಣೆಯಿಂದ ಲಾಭವಾಗುವ ಕ್ಷೇತ್ರವಿದ್ದರೆ ಅದು ಪ್ರವಾಸೋದ್ಯಮ ಮಾತ್ರ. ಆದ್ದರಿಂದ ಪ್ರವಾಸೋದ್ಯಮವನ್ನೇ ಬಳಸಿಕೊಂಡು ವನ್ಯಜೀವಿ ಸಂರಕ್ಷಣೆಯನ್ನು ವೈಜ್ಞಾನಿಕವಾಗಿ ಮಾಡಬೇಕಿದೆ ಎನ್ನುವುದು ವನ್ಯಜೀವಿ ಸಂರಕ್ಷಕರ ಅಭಿಪ್ರಾಯವಾಗಿದೆ.

ಸ್ಥಳೀಯರನ್ನು ವಿಶ್ವಾಸಕ್ಕೆ ಪಡೆಯಬೇಕಿದೆ: ಹಾಗೇ ನೋಡಿದರೆ, ಆರ್ಥಿಕ ದೃಷ್ಟಿಯಿಂದ ಹುಲಿಗಳು ಯಾರಿಗೂ ಬೇಡವಾಗಿದೆ. ನಗರದಲ್ಲಿ ಕೂತಿರುವವರು ಹುಲಿಯನ್ನು ಸಂರಕ್ಷಿಸಬೇಕು ಎಂದು ಹೇಳಬಹುದು. ಆದರೆ ಕಾಡಂಚಿನಲ್ಲಿರುವ ಗ್ರಾಮಸ್ಥರಿಗೆ ಕಾಡು ಪ್ರಾಣಿಗಳು ಬೇಕಾಗಿಲ್ಲ. ಆದರೆ ರೈತರಿಗೆ ಕೃಷಿಗಿಂತ ವನ್ಯಜೀವಿ ಪ್ರವಾಸೋದ್ಯಮದಲ್ಲಿ ಹೆಚ್ಚಿನ ಲಾಭವಾಗುತ್ತದೆ ಎನ್ನುವುದಾದರೆ, ಖಂಡಿತವಾಗಿಯೂ ವನ್ಯಸಂರಕ್ಷಣೆಗೆ ಹೆಚ್ಚು ಆದ್ಯತೆ ನೀಡುತ್ತಾರೆ. ಆದ್ದರಿಂದ ಸ್ಥಳೀಯರನ್ನು ವಿಶ್ವಾಸಕ್ಕೆ ಪಡೆದು ಅಭಯಾರಣ್ಯಗಳ ಪಕ್ಕದ ಜಮೀನುಗಳಲ್ಲಿ ವೈಲ್ಡ್ ಲೈಫ್ ಟೂರಿಸಂಗೆ ಪೂರಕವಾಗಿ ಖಾಸಗಿ ಅರಣ್ಯಗಳನ್ನು ರೈತರ ಸಹಕಾರದೊಂದಿಗೆ ಬೆಳೆಸಿ, ಇದರ ಲಾಭವನ್ನು ರೈತರಿಗೆ ಸಿಗುವಂತೆ ಮಾಡಬೇಕಿದೆ.

ಆಫ್ರಿಕಾದಂತಹ ದೇಶಗಳಲ್ಲಿ ಈ ಮಾದರಿಯ ಕ್ರಮ ಯಶಸ್ವಿಯಾಗಿದೆ. ಭಾರತದಲ್ಲಿಯೂ ಇದು ಸಾಧ್ಯವೇ ಎನ್ನುವುದನ್ನು ನೋಡಬೇಕಿದೆ ಎಂದು ತಜ್ಞರು ಹೇಳುತ್ತಿದ್ದಾರೆ.

ಕಾಡು ಹಾಗೂ ಕಾಡು ಪ್ರಾಣಿಗಳ ಸಂರಕ್ಷಣೆ ಕೇವಲ ಕಾನೂನು ಅಥವಾ ಕಾವಲು ವ್ಯವಸ್ಥೆಯಿಂದ ಸಾಧ್ಯವಿಲ್ಲ. ಸ್ಥಳೀಯರನ್ನು ವಿಶ್ವಾಸಕ್ಕೆ ತೆಗೆದುಕೊಂಡು ಯೋಜನೆಗಳನ್ನು ಕೈಗೆತ್ತಿಕೊಂಡಾಗ ಮಾತ್ರ ಮಾನವ-ಕಾಡುಪ್ರಾಣಿಗಳ ಸಂಘರ್ಷವನ್ನು ನಿಯಂತ್ರಿಸಬಹುದು. ಆದರೆ ಸ್ಥಳೀಯರು ಅವರ ಜಮೀನುಗಳ ಮೇಲೆ ದಾಳಿ, ದನ-ಕರುಗಳ ಮೇಲೆ ದಾಳಿ ಮಾಡಿದಾಗ ಸಹಜವಾಗಿಯೇ ವಿರೋಧ ವ್ಯಕ್ತಪಡಿಸುತ್ತಾರೆ. ಆದ್ದರಿಂದ ಈ ವಿರೋಧ ತಗ್ಗಿಸುವ ನಿಟ್ಟಿನಲ್ಲಿ ಹಾಗೂ ಸ್ಥಳೀಯರಿಗೆ ಆರ್ಥಿಕವಾಗಿ ಸಹಾಯವಾಗುವ ರೀತಿಯ ಕ್ರಮಗಳನ್ನು(ವ್ಯವಸ್ಥೆಯನ್ನು) ಸರಕಾರಗಳು ಆಲೋಚಿಸಬೇಕು. ಇದಕ್ಕಾಗಿ ವನ್ಯಜೀವಿ ಪ್ರವಾಸೋದ್ಯಮಕ್ಕೆ ಹೆಚ್ಚಿನ ಒತ್ತು ನೀಡುವ ಜತೆಜತೆಗೆ ಸ್ಥಳೀಯರಿಗೂ ಆರ್ಥಿಕವಾಗಿ ಲಾಭವಾಗುವಂತೆ ಮಾಡಿದರೆ ಆಗ ಸಹಜವಾಗಿಯೇ, ಜನರು ಅರಣ್ಯ ಹಾಗೂ ಕಾಡು ಪ್ರಾಣಿಗಳ ವಿಷಯದಲ್ಲಿ ವಿಶೇಷ ಆಸಕ್ತಿ ತೋರಿಸುತ್ತಾರೆ.

ಶಾಸಕ ಸತೀಶ್ ಸೈಲ್‌ಗೆ ಜಾಮೀನು

ಬೆಂಗಳೂರು: ಅಕ್ರಮ ಹಣ ವರ್ಗಾವಣೆ ಸಂಬಂಧ ಜಾರಿ ನಿರ್ದೇಶನಾಲಯ ದಾಖಲಿಸಿದ್ದ ಪ್ರಕರಣ ಸಂಬಂಧ ಕಾಂಗ್ರೆಸ್ ಶಾಸಕ ಸತೀಶ್ ಸೈಲ್‌ಗೆ ಹೈಕೋರ್ಟ್ ವೈದ್ಯಕೀಯ ಜಾಮೀನು ಮಂಜೂರು ಮಾಡಿದೆ. ಲಿವರ್ ಕಸಿ ಮಾಡಿಸಬೇಕಿರುವುದರಿಂದ ಜಾಮೀನು ನೀಡಲಾಗುತ್ತಿದೆ ಎಂದು ಹೈಕೋರ್ಟ್ ತಿಳಿಸಿದೆ. ಲಿವರ್ ಕಸಿ ಕುರಿತು 2 ವಾರಕ್ಕೊಮ್ಮೆ ವರದಿ ಸಲ್ಲಿಸಬೇಕು. ಎಂಟು ವಾರಗಳಿಗೊಮ್ಮೆ ಆರೋಗ್ಯದ ಸ್ಥಿತಿಗತಿ ಬಗ್ಗೆ ವೈದ್ಯಕೀಯ ವರದಿಯನ್ನು ನ್ಯಾಯಾಲಯಕ್ಕೆ ಸಲ್ಲಿಸಬೇಕು ಕೋರ್ಟ್ ನಿರ್ದೇಶನ ನೀಡಿದೆ.

ಭಾರತವೇ ಭವಿಷ್ಯ: ಮೋದಿ

← ಮೊದಲಪುಟದಿಂದ

ಕಾಂಗ್ರೆಸ್ ಆಳ್ವಿಕೆಯಲ್ಲಿ ಯಾವುದೇ ವ್ಯಾಪಾರ ಒಪ್ಪಂದಗಳನ್ನು ಮಾಡಿಕೊಂಡಿರಲಿಲ್ಲ. ಕೆಂಪುಕೋಟೆಯಲ್ಲಿ ಕಾಂಗ್ರೆಸ್ ಪ್ರಧಾನಿಗಳ ಭಾಷಣಗಳಲ್ಲಿ ಅಭಿವೃದ್ಧಿ ಬಗೆಗಿನ ಮಾತುಗಳೇ ಇರಲಿಲ್ಲ. ನಮ್ಮ ಹೆಚ್ಚಿನ ಶಕ್ತಿ ಅವರ ತಪ್ಪುಗಳನ್ನು ಸರಿಪಡಿಸುವುದರಲ್ಲಿ ಮುಗಿಯುತ್ತಿದೆ. ನಮ್ಮ ಸರಕಾರ ಬ್ಯಾಂಕ್‌ಗಳಲ್ಲಿನ ನಿಷ್ಕ್ರಿಯ ಆಸ್ತಿಗಳನ್ನು ಶೇ.1ಕ್ಕಿಂತ ಕಡಿಮೆ ಮಾಡಿದೆ. ದೇಶದ ಜನರು ನಮ್ಮ ಬ್ಯಾಂಕ್‌ಗಳ ಮೇಲೆ ವಿಶ್ವಾಸ ಹೊಂದಿದ್ದಾರೆ. 21ನೇ ಶತಮಾನದ ಮೊದಲ ಕಾಲುಭಾಗ ಮುಗಿದು ಹೋಗಿದೆ. ಸ್ವಾತಂತ್ರ್ಯದ ಶತಮಾನೋತ್ಸವದಲ್ಲಿ ಮತ್ತೊಂದು ಕಾಲು ಭಾಗ ಬರಲಿದೆ. 21ನೇ ಶತಮಾನದ ಮತ್ತೊಂದು ಕಾಲು ಭಾಗ ಭಾರತದ ಅಭಿವೃದ್ಧಿಗೆ ಮೀಸಲು. ಭಾರತ ಸುಧಾರಣೆಯ ಎಕ್ಸ್‌ಪ್ರೆಸ್ ಮಾರ್ಗದಲ್ಲಿ ಸಾಗುತ್ತಿದೆ ಎಂದು ಎಂದು ಮೋದಿ ಬಣ್ಣಿಸಿದರು. ತಮ್ಮನ್ನು ತಾವು ರಾಜರು ಅಂತ ಪರಿಗಣಿಸಿಕೊಳ್ಳುವ ಕೆಲವರು ನಿನ್ನೆ ಆರ್ಥಿಕ ಅಸಮಾನತೆ ಬಗ್ಗೆ ಮಾತನಾಡುವುದನ್ನು ಗಮನಿಸಿದೆ. ನುಸುಳುಕೋರರ ಪರವಾಗಿ ವಕಾಲತ್ತು ವಹಿಸುವ ಇವರನ್ನು ಯುವಕರು ಹೇಗೆ ಕ್ಷಮಿಸಲು ಸಾಧ್ಯ? ನುಸುಳುಕೋರರು ಅವರ ಸ್ವಾತಂತ್ರ್ಯ, ಜೀವನೋಪಾಯದ ಹಕ್ಕನ್ನು ಕಸಿದು ಕೊಳ್ಳುತ್ತಿದ್ದಾರೆ. ಈ ಜನರು ಅಂತಹ ಜನರಿಗೆ ಗುರಾಣಿಯಾಗಿ ಕಾರ್ಯ ನಿರ್ವಹಿಸುತ್ತಿದ್ದಾರೆ ಎಂದು ಕಾಂಗ್ರೆಸ್ ಮತ್ತು ಟಿಎಂಸಿ ವಿರುದ್ಧ ಮೋದಿ ವಾಗ್ದಾಳಿ ನಡೆಸಿದರು.

ಮೋದಿ ಮೇಲೆ ದೈಹಿಕ ದಾಳಿಗೆ ಸಂಚು?

ಲೋಕಸಭೆಯಲ್ಲಿ ಬುಧವಾರ ನಿಗದಿಯಾಗಿದ್ದ ಮೋದಿ ಅವರ ಭಾಷಣ ರದ್ದುಗೊಳಿಸಿದ್ದನ್ನು ರಾಜ್ಯಸಭೆಯಲ್ಲಿ ಪ್ರತಿಪಕ್ಷ ಸದಸ್ಯರು ತೀವ್ರವಾಗಿ ತರಾಟೆಗೆ ತೆಗೆದುಕೊಂಡರು. ಇದರ ಬೆನ್ನಿಗೇ ಸ್ಪೀಕರ್ ಓಂ ಬಿರ್ಲಾ ಅವರು ಪ್ರಧಾನಿ ಮೇಲೆ ದೈಹಿಕ ದಾಳಿ ನಡೆಸಲು ಕಾಂಗ್ರೆಸ್ ಸಂಸದರು ಯೋಜನೆ ರೂಪಿಸಿದ್ದಾರೆ ಎಂಬ ಮಾಹಿತಿ ಬಂದ ಹಿನ್ನೆಲೆಯಲ್ಲಿ ಕಲಾಪವನ್ನು ಮುಂದೂಡಲಾಯಿತು ಎಂದು ಹೇಳಿರುವುದು ಸಂಚಲನ ಸೃಷ್ಟಿಸಿದೆ. ವಿಪಕ್ಷ ಸಂಸದರು ಅನಿರೀಕ್ಷಿತವಾದದ್ದನ್ನು ಮಾಡಬಹುದು ಎಂಬ ಮಾಹಿತಿ ಇತ್ತು. ಪ್ರಜಾಪ್ರಭುತ್ವದ ದೇವಾಲಯದಲ್ಲಿ ಅಹಿತಕರ ಘಟನೆಯನ್ನ ತಡೆಯಲು ಸದನವನ್ನು ಮುಂದೂಡಲಾಯಿತು. ಮೋದಿ ಭಾಷಣ ರದ್ದುಗೊಳಿಸಲೂ ಇದೇ ಕಾರಣ ಎಂದು ಸ್ಪೀಕರ್ ಹೇಳಿದ್ದಾರೆ. ಸ್ಪೀಕರ್ ಹೇಳಿಕೆಯನ್ನು ಕಾಂಗ್ರೆಸ್ ಸಂಸದೆ ಪ್ರಿಯಾಂಕಾ ಗಾಂಧಿ ವಾದ್ರಾ ತಳ್ಳಿಹಾಕಿದ್ದು ಇದು ಶುದ್ಧ ಸುಳ್ಳು .ವಿರೋಧ ಪಕ್ಷಗಳು ಎತ್ತಿರುವ ವಿಷಯಗಳಿಗೆ ಸರಿಯಾಗಿ ಉತ್ತರ ಕೊಡದೇ ಸರಕಾರ ದಾರಿ ತಪ್ಪಿಸುತ್ತಿದೆ ಎಂದು ಟೀಕಿಸಿದ್ದಾರೆ.

ಚಡಚಣ ಸಕ್ಕರೆ ಕಾರ್ಖಾನೆಯಲ್ಲಿ ಅಗ್ನಿ ಅವಘಡ

ವಿಜಯಪುರ: ಜಿಲ್ಲೆಯ ಚಡಚಣ ತಾಲೂಕಿನ ಹಾವಿನಾಳ ಗ್ರಾಮದ ಶ್ರೀ ದತ್ತ ಇಂಡಿಯಾ ಶುಗರ್ಸ್ ಕಾರ್ಖಾನೆಯಲ್ಲಿ ಆಕಸ್ಮಿಕ ಅಗ್ನಿ ಅವಘಡ ಸಂಭವಿಸಿರುವ ಘಟನೆ ಬುಧವಾರ ನಡೆದಿದೆ. ಕಾರ್ಖಾನೆಯಲ್ಲಿ ಶೇಖರಿಸಿಟ್ಟಿದ್ದ ಅಪಾರ ಪ್ರಮಾಣದ ಬಗ್ಯಾಸ್ (ಕಬ್ಬಿನ ಸಿಪ್ಪೆ)ಗೆ ಆಕಸ್ಮಿಕವಾಗಿ ಬೆಂಕಿ ತಗುಲಿದ್ದು, ಕ್ಷಣಾರ್ಧದಲ್ಲಿ ಬಾಯ್ಲರ್‌ಗೂ ಆವರಿಸಿದೆ. ಆದರೆ, ಎರಡು ದಿನಗಳ ಹಿಂದೆಯಷ್ಟೇ ಕಬ್ಬು ನುರಿಸಲು ಸಾಗಿಸುವ ಬೆಲ್ಟ್ ತುಂಡಾಗಿದ್ದರಿಂದ ಕಾರ್ಖಾನೆಯ ಎಲ್ಲ ಕೆಲಸ ಕಾರ್ಯಗಳನ್ನು ಸ್ಥಗಿತಗೊಳಿಸಲಾಗಿತ್ತು. ಆದ್ದರಿಂದ ಕಾರ್ಖಾನೆಯಲ್ಲಿ ಹೆಚ್ಚು ಕಾರ್ಮಿಕರಿಲ್ಲದ್ದರಿಂದ ಅದೃಷ್ಟವಶಾತ್ ಘಟನೆಯಲ್ಲಿ ಯಾವುದೇ ಪ್ರಾಣ ಹಾನಿ ಸಂಭವಿಸಿಲ್ಲ.

ಕೈಗಾರಿಕೋದ್ಯಮಿ ಭರತ್ ಖಿಮ್ಜಿ ನಿಧನ

ಬೆಂಗಳೂರು: ಕೈಗಾರಿಕೋದ್ಯಮಿ, ಬಿಡಿಕೆ ಗ್ರೂಪ್ ಹಾಗೂ ಬಿಡಿಕೆ ಸ್ಪೋರ್ಟ್ಸ್ ಫೌಂಡೇಶನ್‌ನ ಸ್ಥಾಪಕ ಭರತ್ ಖಿಮ್ಜಿ ಅವರು ಗುರುವಾರ ನಿಧನರಾದರು. ಕೈಗಾರಿಕಾ ಕ್ಷೇತ್ರದಲ್ಲಿ ಅವರು ಸಾಧಿಸಿದ ಅಪಾರ ಸಾಧನೆಯ ಗೌರವವಾಗಿ 2009ರಲ್ಲಿ ಕರ್ನಾಟಕ ವಾಣಿಜ್ಯ ಮತ್ತು ಕೈಗಾರಿಕಾ ಸಂಸ್ಥೆಯಿಂದ ವಾಣಿಜ್ಯ ರತ್ನ ಪ್ರಶಸ್ತಿ ನೀಡಿ ಗೌರವಿಸಲಾಗಿತ್ತು. ಹುಬ್ಬಳ್ಳಿಯನ್ನು ಭಾರತದ ಗೋಡೆಗಳ ರಾಜಧಾನಿ ಎಂಬ ಹೆಗ್ಗಳಿಕೆಗೆ ತಂದು ನಿಲ್ಲಿಸಿದ ಮಹತ್ತರ ಕೀರ್ತಿ ಅವರದು. ಅನೇಕ ಕೈಗಾರಿಕಾ ಘಟಕಗಳನ್ನು ಸ್ಥಾಪಿಸುವ ಮೂಲಕ ಅವರು ಯುವ ಉದ್ಯಮಿಗಳಿಗೆ ಪ್ರೇರಣೆಯ ದೀಪವಾಗಿದ್ದರು. ಉದ್ಯಮ ಕ್ಷೇತ್ರದ ಜತೆಗೆ ಸಾಮಾಜಿಕ ಹಾಗೂ ಆರೋಗ್ಯ ಸೇವೆಗಳಲ್ಲಿಯೂ ಅವರು ಅಸಾಧಾರಣ ಕೊಡುಗೆ ನೀಡಿದ್ದರು. ಗುಜರಾತ್‌ನ ಕಚ್ಚಿ ದಾಸ ಓಸ್ವಾಲ್ ಸಮುದಾಯದ ಅಧ್ಯಕ್ಷರಾಗಿ ಸುಮಾರು ಐದು ದಶಕಗಳ ಕಾಲ ಸೇವೆ ಸಲ್ಲಿಸಿ, ಸಮುದಾಯದ ಅಭಿವೃದ್ಧಿಗೆ ಅಮೂಲ್ಯ ಮಾರ್ಗದರ್ಶನ ನೀಡಿದವರು. ಭಗವಂತನು ಅಗಲಿದ ಆತ್ಮಕ್ಕೆ ಚಿರಶಾಂತಿ ಕರುಣಿಸಲಿ ಹಾಗೂ ಅವರ ಅಗಲಿಕೆಯ ದುಃಖವನ್ನು ಭರಿಸುವ ಶಕ್ತಿಯನ್ನು ಕುಟುಂಬದ ಸದಸ್ಯರಿಗೆ ಬಂಧುಮಿತ್ರರಿಗೆ ನೀಡಲಿ ಎಂದು ಶಾಸಕ ಆರ್.ವಿ.ದೇಶಪಾಂಡೆ ಅವರು ಸಂತಾಪ ಸೂಚಿಸಿದ್ದಾರೆ.

ಕರ್ನಾಟಕ ಸರ್ಕಾರ ಕರ್ನಾಟಕ ಅರಣ್ಯ ಇಲಾಖೆ

ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿಗಳ ಕಚೇರಿ, ಕಾರವಾರ ಉಪ-ವಿಭಾಗ, ಕಾರವಾರ

ಎಂಜಿ ರಸ್ತೆ, ಕಾಜುಬಾಗ, ಕಾರವಾರ-581301. (ಉ.ಕ.)
ದೂರವಾಣಿ: 08382-226365 ಇ-ಮೇಲ್: acfkwr@gmail.com
ನಂ. ಸಿ3/ಸಅಸಂ/ವಿವ-/ಇ-ಟೆಂಡರ್-5/2025-26 ಕಾರವಾರ ದಿನಾಂಕ: 30-01-2026

ಟೆಂಡರ್ ಪ್ರಕಟಣೆ

2025-26ನೇ ಸಾಲಿಗೆ National Disaster Management ಯೋಜನೆಯಡಿ Developing Ground-Based Detection System through Setting up of Watch Tower ಕಾಮಗಾರಿ ಕುರಿತು ಸಂಕ್ಷಿಪ್ತ ಇ-ಟೆಂಡರ ಕರೆಯಲಾಗಿರುತ್ತದೆ. ಟೆಂಡರ್ ಸ್ವೀಕರಿಸುವ ಕೊನೆಯ ದಿನಾಂಕ: 17-02-2026 ಆಗಿದ್ದು, ಹೆಚ್ಚಿನ ಮಾಹಿತಿಗಾಗಿ ಉಪ ಅರಣ್ಯ ಸಂರಕ್ಷಣಾಧಿಕಾರಿಗಳ ಕಚೇರಿ, ಕಾರವಾರ ವಿಭಾಗ, ಕಾರವಾರ ರವರನ್ನು ಕಚೇರಿ ವೇಳೆಯಲ್ಲಿ ಸಂಪರ್ಕಿಸುವದು (ದೂರವಾಣಿ ಸಂಖ್ಯೆ: 08382-226365)

DIPR/ADK/KSMCA/1049/25-26 Dt. 05.02.2026

ಹೆಚ್ಚುವರಿ ಪೊಲೀಸ್ ಮಹಾ ನಿರ್ದೇಶಕ ರವರ ಕಛೇರಿ ಸಂಪರ್ಕ, ಲಾಜಿಸ್ಟಿಕ್ಸ್ ಮತ್ತು ಆಧುನೀಕರಣ

ಪೊಲೀಸ್ ಅಧೀಕ್ಷಕರು-ವೈರ್‌ಲೆಸ್ ರವರ ಕಛೇರಿ, ನಂ.1, ಮಹಾತ್ಮಗಾಂಧಿ ರಸ್ತೆ, ಬೆಂಗಳೂರು-560001
ದೂರವಾಣಿ : +91-80-22942324, ಇ-ಮೇಲ್: spwireless@ksp.gov.in

ಸಂಕ್ಷಿಪ್ತ ಟೆಂಡರ್ ಪ್ರಕಟಣೆ (ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ)

ಟೆಂಡರ್ ಸಂಖ್ಯೆ : KSP/2025-26/IND0552 INDO552 ದಿನಾಂಕ: 03.02.2026

ಪೊಲೀಸ್ ಅಧೀಕ್ಷಕರು. ವೈರಲೆಸ್ ಬೆಂಗಳೂರುರವರಿಂದ, National Cyber Crime Helpline ಸಹಾಯವಾಣಿ-1930 ಬಲವರ್ಧಿಸುವ ನಿಮಿತ್ತ ಡೆಸ್ಕ್‌ಟಾಪ್ ಕಂಪ್ಯೂಟರ್, 75" LED TV with Movable stand and Video Conference setup with controller, Wired Headphoneಗಳನ್ನು ಇ-ಪ್ರಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ ಖರೀದಿಸುವ ಸಂಬಂಧ ಆನ್‌ಲೈನ್ ನಲ್ಲಿ ಟೆಂಡರ್ ಆಹ್ವಾನಿಸಲಾಗಿದೆ. ಟೆಂಡರ್‌ನ ಅಂದಾಜು ಮೌಲ್ಯ **ರೂ. 18.10 ಲಕ್ಷಗಳು**, ಟೆಂಡರ್ ಪೂರ್ವಭಾವಿ ಸಭೆಯ **ದಿನಾಂಕ: 09.02.2026 ಸಮಯ ಬೆಳಿಗ್ಗೆ 11.30 ಗಂಟೆ** ಹಾಗೂ ಟೆಂಡರ್ ಸಲ್ಲಿಸಲು ಕೊನೆಯ **ದಿನಾಂಕ: 18.02.2026, ಸಂಜೆ 5 ಗಂಟೆಗಳು.** ಇತರೆ ಮಾಹಿತಿಯನ್ನು https://eproc.karnataka.gov.in ರಲ್ಲಿ ಪಡೆಯಬಹುದು ಹಾಗು ಹೆಚ್ಚಿನ ವಿವರಗಳಿಗಾಗಿ ಮೇಲ್ಕಂಡ ಕಛೇರಿಯನ್ನು ಸಂಪರ್ಕಿಸಬಹುದಾಗಿದೆ.

ಸಹಿ/-
ಪೊಲೀಸ್ ಅಧೀಕ್ಷಕರು, ವೈರ್‌ಲೆಸ್,
ಬೆಂಗಳೂರು

ವಾಸಾಸಂಇ/ವಾ.ಪ್ರ./5464/ಎಸ್‌ಎಸ್‌ಸಿ/2025-26

ಪಂಡಿತಾಃ ಸಮದರ್ಶಿನಃ

ದೇಶೀಯ ವಿದ್ಯಾ ಶಾಲಾ ಸಮಿತಿ (ರಿ.), ಶಿವಮೊಗ್ಗ.

Estd : 1943

ಸರ್.ಎಂ.ವಿ ರಸ್ತೆ, ಬಸವೇಶ್ವರ ಸರ್ಕಲ್, ಶಿವಮೊಗ್ಗ-577201

ಅನುದಾನಿತ ದೈಹಿಕ ಶಿಕ್ಷಣ ಉಪನ್ಯಾಸಕರ ನೇಮಕಾತಿ

ಮಾನ್ಯ ನಿರ್ದೇಶಕರು ಶಾಲಾ ಶಿಕ್ಷಣ ಇಲಾಖೆ (ಪದವಿ ಪೂರ್ವ) ಮಲ್ಲೇಶ್ವರಂ, ಬೆಂಗಳೂರು ಇವರ ಕಛೇರಿ ಆದೇಶ ಸಂಖ್ಯೆ DDPUTT/EST1/ASP/3/2025-26/1750063 Date:11-12-2025ರ ಅನ್ವಯ ನಮ್ಮ ಸಂಸ್ಥೆಯ ಅಧೀನದಲ್ಲಿ ನಡೆಯುತ್ತಿರುವ ಡಿವಿಎಸ್ ಸ್ವತಂತ್ರ ಪದವಿ ಪೂರ್ವಕಾಲೇಜು, (TT0011) ಶಿವಮೊಗ್ಗ, ಇಲ್ಲಿ ವಯೋನಿವೃತ್ತಿಯಿಂದ ಖಾಲಿ ಇರುವ ದೈಹಿಕ ಶಿಕ್ಷಣ ಉಪನ್ಯಾಸಕರ ಅನುದಾನಿತ ಹುದ್ದೆ ಭರ್ತಿ ಮಾಡಿಕೊಳ್ಳಲು ಅರ್ಹ ಅಭ್ಯರ್ಥಿಗಳಿಂದ ಅರ್ಜಿಗಳನ್ನು ಆಹ್ವಾನಿಸಲಾಗಿದೆ.

ಕ್ರ.ಸಂ.	ಕಾಲೇಜಿನ ಹೆಸರು	ಹುದ್ದೆ	ವಿಷಯ	ಹುದ್ದೆಗಳ ಸಂಖ್ಯೆ	ವಿದ್ಯಾರ್ಹತೆ	ಮೀಸಲಾತಿ ಬಿಂದು
01	ಡಿವಿಎಸ್ ಸ್ವತಂತ್ರ ಪದವಿ ಪೂರ್ವ ಕಾಲೇಜು. (TT0011) ಶಿವಮೊಗ್ಗ	ದೈಹಿಕ ಶಿಕ್ಷಣ ಉಪನ್ಯಾಸಕರು	ದೈಹಿಕ ಶಿಕ್ಷಣ	01	ಎಂ.ಪಿ.ಇಡಿ ಕನಿಷ್ಠ 55% ಪಡೆದಿರಬೇಕು.	ಅನ್ವಯಿಸುವುದಿಲ್ಲ.

ಅರ್ಜಿ ಸಲ್ಲಿಸುವ ವಿಧಾನ :- ಅರ್ಹ ಅಭ್ಯರ್ಥಿಗಳು ಸಂಪೂರ್ಣ ಮಾಹಿತಿಯೊಂದಿಗೆ ಸ್ವಂತ ಕೈ ಬರಹದ ಅರ್ಜಿಯಲ್ಲಿ ತಮ್ಮ ಶೈಕ್ಷಣಿಕ ವಿದ್ಯಾರ್ಹತೆ, ಜನ್ಮ ದಾಖಲೆ ಮತ್ತು ಇತರೆ ಶೈಕ್ಷಣಿಕ ಚಟುವಟಿಕೆಗಳಿಗೆ ಸಂಬಂಧಿಸಿದ ಪ್ರಮಾಣ ಪತ್ರಗಳನ್ನು ಪತ್ರಾಂಕಿತ ಅಧಿಕಾರಿಗಳಿಂದ ದೃಢೀಕರಿಸಿ ನಕಲುಗಳೊಂದಿಗೆ ಅಭ್ಯರ್ಥಿಗಳು ರೂ1,000/- ಗಳ ರಾಷ್ಟ್ರೀಕೃತ ಬ್ಯಾಂಕ್ ಡಿಡಿಯೊಂದಿಗೆ, "ಕಾರ್ಯದರ್ಶಿಗಳು, ದೇಶೀಯ ವಿದ್ಯಾಶಾಲಾ ಸಮಿತಿ (ರಿ.), ಶಿವಮೊಗ್ಗ."ಇವರ ಹೆಸರಿನಲ್ಲಿ ಪಡೆದು ಅರ್ಜಿಯ ಜೊತೆ ಲಗತ್ತಿಸಿ ಪ್ರಕಟಣೆಯಾದ ದಿನಾಂಕದಿಂದ 21 ದಿನಗಳ ಒಳಗಾಗಿ ಎಂದರೆ ದಿನಾಂಕ:03/03/2026 ರಂದು ಸಂಜೆ 5:00 ಗಂಟೆ ಒಳಗಾಗಿ ಕಾರ್ಯದರ್ಶಿಗಳು, ದೇಶೀಯ ವಿದ್ಯಾ ಶಾಲಾ ಸಮಿತಿ (ರಿ.), ಶಿವಮೊಗ್ಗ, ಸರ್.ಎಂ.ವಿ ರಸ್ತೆ, ಶಿವಮೊಗ್ಗ-577201 ಇವರಿಗೆ ಸಲ್ಲಿಸಬೇಕು. ಅರ್ಜಿಯ ಪ್ರತಿಯನ್ನು ಮಾನ್ಯ ಉಪನಿರ್ದೇಶಕರು ಶಾಲಾ ಶಿಕ್ಷಣ ಇಲಾಖೆ (ಪದವಿ ಪೂರ್ವ) ಶಿವಮೊಗ್ಗ, ಇವರಿಗೆ, ನಿಗದಿತ ದಿನಾಂಕದೊಳಗೆ ಸಲ್ಲಿಸುವುದು. ನಿಗದಿತ ಅವಧಿಯೊಳಗೆ ಸಂಬಂಧಿಸಿದ ವಿಳಾಸಕ್ಕೆ ತಮ್ಮ ಅರ್ಜಿಗಳು ತಲುಪದಿದ್ದರೆ ಅಂತಹ ಅರ್ಜಿಗಳನ್ನು ಪರಿಗಣಿಸಲಾಗುವುದಿಲ್ಲ. ವಿದ್ಯಾರ್ಹತೆ, ವಯೋಮಿತಿ, ವೇತನ ಶ್ರೇಣಿ ಹಾಗೂ ಇತರೆ ನಿಯಮಗಳು ಸರ್ಕಾರದ ನಿಯಮಗಳಂತೆ ಇರುತ್ತದೆ.

ದಿನಾಂಕ: 06/02/2026
ಸ್ಥಳ: ಶಿವಮೊಗ್ಗ

ಸಹಿ/- ಕಾರ್ಯದರ್ಶಿ,
ದೇಶೀಯ ವಿದ್ಯಾಶಾಲಾ ಸಮಿತಿ (ರಿ.),ಶಿವಮೊಗ್ಗ.

ಕಾವೇರಿ ನೀರಾವರಿ ನಿಗಮ ನಿಯಮಿತ

(ಕರ್ನಾಟಕ ಸರ್ಕಾರದ ಉದ್ಯಮ)
ಕಾರ್ಯಪಾಲಕ ಇಂಜಿನಿಯರ್ ರವರ ಕಛೇರಿ, ಹಾರಂಗಿ ನಾಲಾ ವಿಭಾಗ,
ಸಾಲಿಗ್ರಾಮ,- 571604 ಮೈಸೂರು ಜಿಲ್ಲೆ,
Fax No: 08223 - 283434

ಸಂಖ್ಯೆ.:ಕಾಇಂ/ಹಾನಾವಿ/ಪಿ.ಬಿ./ಅಲ್ಪಾವದಿ ಟೆಂಡರ್ 12/2025-26/ 1699
ದಿನಾಂಕ: 28.01.2026

ಸಂಕ್ಷಿಪ್ತ ಅಲ್ಪಾವದಿ ಟೆಂಡರ್ ಪ್ರಕಟಣೆ ಸಂಖ್ಯೆ -12/2025-26
ದಿನಾಂಕ: 28.01.2026

(ಐಟಂವಾರು: ಇ-ಪ್ರೊಕ್ಯೂರ್‌ಮೆಂಟ್ ಪೋರ್ಟ್‌ಲ್ ಪದ್ಧತಿ ಮೂಲಕ ಮಾತ್ರ)

ವ್ಯವಸ್ಥಾಪಕ ನಿರ್ದೇಶಕರು, ಕಾವೇರಿ ನೀರಾವರಿ ನಿಗಮ ನಿಯಮಿತ, ಬೆಂಗಳೂರು ರವರ ಪರವಾಗಿ ಸೂಚಿತ ದರ್ಜೆ ಗುತ್ತಿಗೆದಾರರಿಂದ ಈ ಕೆಳಕಂಡ ಕಾಮಗಾರಿಗಳಿಗೆ ಇ-ಪ್ರೊಕ್ಯೂರ್‌ಮೆಂಟ್ ಪೋರ್ಟ್‌ಲ್ ಪದ್ಧತಿ ಮುಖಾಂತರ ಐಟಂವಾರು ದರದ ಇಂಡೆಂಟ್ ನಂ. (CNNL/2025-26/CN/WORK_INDENT 4257) ಕಾಮಗಾರಿಯ ರೂ.3.97 ಕೋಟಿ ಮೊತ್ತದ ಟೆಂಡರ್ ಅನ್ನು ಆಹ್ವಾನಿಸಲಾಗಿದೆ. ದಿ: 03.02.2026 ರಿಂದ ಟೆಂಡರ್ ದಸ್ತಾವೇಜುಗಳನ್ನು ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ ಡೌನ್ ಲೋಡ್ ಮಾಡಿಕೊಳ್ಳ ಬಹುದಾಗಿದ್ದು, ಪ್ರೀ ಬಿಡ್ ಮೀಟಿಂಗ್ ದಿ: 06.02.2026 ಪೂರ್ವಾಹ್ನ 11.30ಕ್ಕೆ, ಭರ್ತಿ ಮಾಡಿದ ಟೆಂಡರ್ ಅನ್ನು ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ ದಿ: 13.02.2026 ಅಪರಾಹ್ನ 4.00 ಗಂಟೆಯವರೆಗೆ ಸಲ್ಲಿಸಬಹು ದಾಗಿದೆ. ತಾಂತ್ರಿಕ ಬಿಡ್ಡನ್ನು ದಿ: 16.02.2026ರ ಅಪರಾಹ್ನ 4.30 ಗಂಟೆಗೆ ತೆರೆಯಲಾಗುವುದು. ಆರ್ಥಿಕ ಬಿಡ್ಡನ್ನು ತಾಂತ್ರಿಕ ಬಿಡ್ಡು ಅನುಮೋದನೆಯಾದ ನಂತರ ತೆರೆಯಲಾಗುವುದು. ಹೆಚ್ಚಿನ ವಿವರಗಳಿಗೆ ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ವೆಬ್ ಸೈಟ್ ವಿಳಾಸ: http://kppp.Karnataka.gov.in ರಲ್ಲಿ ಹಾಗೂ ಕಛೇರಿ ವೇಳೆಯಲ್ಲಿ ಕೆಳ ಸಹಿದಾರರನ್ನು ಸಂಪರ್ಕಿಸಿ ಪಡೆಯಬಹು ದಾಗಿರುತ್ತದೆ.

ಸಹಿ/- ಕಾರ್ಯಪಾಲಕ ಇಂಜಿನಿಯರ್, ಹಾರಂಗಿ ನಾಲಾ ವಿಭಾಗ, ಸಾಲಿಗ್ರಾಮ

DIPR/DDMYS/1602/KSMCA/907/2025-26

ನಗರಸಭೆ ಕಾರ್ಯಾಲಯ ನೆಲಮಂಗಲ

ನೆಲಮಂಗಲ, ಬೆಂಗಳೂರು ಗ್ರಾಮಾಂತರ ಜಿಲ್ಲೆ-562123
ದೂರವಾಣಿ ಸಂಖ್ಯೆ: 080-27722135
Email : ka.nelmangala.cmc@gmail.com

ಸಂಖ್ಯೆ: ನಸನೆ/ತಾಂತ್ರಿಕ(ವಿ)/ಟೆಂಡರ್/67/2025-26 ದಿನಾಂಕ : 05.02.2026

ಟೆಂಡರ್ ಪ್ರಕಟಣೆ
(ಕೆಪಿಪಿಪಿ ಪೋರ್ಟಲ್ ಮೂಲಕ ಮಾತ್ರ)

(ಸ್ಟ್ಯಾಂಡರ್ಡ್ ಡಾಕ್ಯೂಮೆಂಟ್ KW 1&2 ರ & KG ನಿಬಂಧನೆಗಳಂತೆ ಅರ್ಜಿ & ಆಹ್ವಾನಿಸಲಾಗಿದೆ)

ಪೌರಾಯುಕ್ತರು ನಗರಸಭೆ ನೆಲಮಂಗಲ ಬೆಂಗಳೂರು ಗ್ರಾಮಾಂತರ ಜಿಲ್ಲೆ ಇವರಿಂದ 2025-26ನೇ ಸಾಲಿನ ನಗರಸಭೆ ನಿಧಿಯಡಿ ಕುಡಿಯುವ ನೀರು ಸಮಸ್ಯೆ ಬಗೆಹರಿಸಲು ವಿವಿಧ ಪ್ರದೇಶಗಳಲ್ಲಿ ಕೊಳವೆ ಬಾವಿಗಳನ್ನು ಕೊರೆದು ಪಂಪು ಮೋಟಾರ್ ಅಳವಡಿಸಲು ಹಾಗೂ ರೀಡ್ರಿಲ್ ಕಾಮಗಾರಿಗಳನ್ನು ಕೈಗೊಳ್ಳಲು ಒಟ್ಟು ಮೊತ್ತ **ರೂ: 62.00 ಲಕ್ಷಗಳ** ಕಾಮಗಾರಿಗಳ ಐಟಂವಾರು ಇ-ಪ್ರೊಕ್ಯೂರ್‌ಮೆಂಟ್ ನ ಕೆ.ಪಿ.ಪಿ ಪೋರ್ಟಲ್‌ನ ದ್ವಿ ಲಕೋಟೆ ಪದ್ಧತಿಯಡಿ ಅರ್ಹ ದರ್ಜೆಯ ನೋಂದಾಯಿತ ಗುತ್ತಿಗೆದಾರರಿಂದ ಟೆಂಡರ್ ಕರೆಯಲಾಗಿದೆ.

ಕ್ರ.ಸಂ.	ಇಂಡೆಂಟ್ ಸಂಖ್ಯೆ	ಅಂದಾಜು ಮೊತ್ತ (ರೂ. ಲಕ್ಷಗಳಲ್ಲಿ)
01	DMA/2025-26/WS/WORK_INDENT54120	32.00
02	DMA/2025-26/WS/WORK_INDENT54123	30.00

ಇ-ಪ್ರೊಕ್ಯೂರ್‌ಮೆಂಟ್ ಮುಖಾಂತರ ಟೆಂಡರ್‌ಗಳನ್ನು ಸಲ್ಲಿಸಲು ಕೊನೆಯ ದಿನಾಂಕ ಮತ್ತು ತೆರೆಯುವ ದಿನಾಂಕ ಮುಂತಾದ ಹೆಚ್ಚಿನ ವಿವರಗಳಿಗಾಗಿ ವೆಬ್‌ಸೈಟ್: https://kppp.karnataka.gov.in ಹಾಗೂ ನಗರಸಭೆಯ ತಾಂತ್ರಿಕ ಶಾಖೆಯನ್ನು ಸಂಪರ್ಕಿಸಬಹುದು.

ಶ್ರೀ ಗಣೇಶ್ ಎನ್, ಮಾನ್ಯ ಅಧ್ಯಕ್ಷರು, ನಗರಸಭೆ, ನೆಲಮಂಗಲ
ಶ್ರೀ ಆನಂದ್ ಜಿ, ಮಾನ್ಯ ಉಪಾಧ್ಯಕ್ಷರು, ನಗರಸಭೆ, ನೆಲಮಂಗಲ
ಶ್ರೀ ಬಿ. ಪದ್ಮನಾಭ್, ಮಾನ್ಯ ಸ್ಥಾಯಿ ಸಮಿತಿ ಅಧ್ಯಕ್ಷರು, ನಗರಸಭೆ, ನೆಲಮಂಗಲ
ಶ್ರೀ ಗಂಗಾಧರ್ ಹೆಚ್, ಪೌರಾಯುಕ್ತರು, ನಗರಸಭೆ, ನೆಲಮಂಗಲ

ವಾ.ಸಾ.ಸಂ.ಇ/ವಾಪ್ರ/5456/ಶಿರಡಿ ಸಾಯಿ/2025-26

ಹೊಸಕೋಟೆ ಯೋಜನಾ ಪ್ರಾಧಿಕಾರ

ಮಿಷನ್ ಹಾಸ್ಪಿಟಲ್ ರಸ್ತೆ, 1ನೇ ಅಡ್ಡ ರಸ್ತೆ, ಶ್ರೀ ವೆಂಕಟಾದ್ರಿ ಬಡಾವಣೆ, ಹೊಸಕೋಟೆ-562114, ಬೆಂಗಳೂರು ಗ್ರಾಮಾಂತರ ಜಿಲ್ಲೆ.
ದೂರವಾಣಿ/ಫ್ಯಾಕ್ಸ್ : 080-2793 4470 / 2793 5412 ಇ-ಮೇಲ್: hosakote.pa@gmail.com URL : www.hosakote.tpa.gov.in

ಸಂಖ್ಯೆ: ಹೊಯೋಪ್ರಾ/ಭೂಉಬ/74/2025-26 ದಿನಾಂಕ: 05.02.2026

ಸಾರ್ವಜನಿಕ ಪ್ರಕಟಣೆ

ವಿಷಯ: ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ, 1961 ರ ಕಲಂ 14(ಎ) ರಡಿಯಲ್ಲಿ ಕೃಷಿ ಉದ್ದೇಶಕ್ಕಾಗಿ ಕಾಯ್ದಿರಿಸಲಾಗಿರುವ ಜಮೀನನ್ನು ವಸತಿ ಉದ್ದೇಶಕ್ಕೆ ಭೂ ಉಪಯೋಗ ಬದಲಾವಣೆ ಮಾಡಲು ಕೋರಿರುವ ಬಗ್ಗೆ.

* * *

ಶ್ರೀ ಕೆ. ಲಾಲ್‌ಚಂದ್ ಬಿನ್ ಕೆ. ರಮೇಶ್ ಇವರು ಹೊಸಕೋಟೆ ತಾಲ್ಲೂಕು, ಜಡಿಗೇನಹಳ್ಳಿ ಹೋಬಳಿ, ಬಿಸನಹಳ್ಳಿ ಗ್ರಾಮದ ಸ.ನಂ. 51/1 ರಲ್ಲಿನ 01 ಎಕರೆ ವಿಸ್ತೀರ್ಣದ ಜಮೀನನ್ನು **"ಕೃಷಿ ವಲಯದಿಂದ ವಸತಿ ಉದ್ದೇಶಕ್ಕೆ"** ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ, 1961 ರ ಕಲಂ 14 (ಎ) ರಡಿಯಲ್ಲಿ ಭೂ ಉಪಯೋಗ ಬದಲಾವಣೆ ಮಾಡಲು ಕೋರಿರುತ್ತಾರೆ.

ಅರ್ಜಿದಾರರ ಮನವಿಯನ್ನು ಪರಿಶೀಲಿಸಲಾಗಿ, ಪ್ರಶ್ನಿತ ಜಮೀನುಗಳ ಸುತ್ತಮುತ್ತಲಿನ ಪರಿಸರದಲ್ಲಿ ವಸತಿ ಬೆಳವಣಿಗೆಗಳು ಬಂದಿದ್ದು/ ಬರುತ್ತಿದ್ದು, "ಸದರಿ ಜಮೀನುಗಳಲ್ಲಿ ಎಲ್ಲಾ ಮೂಲಭೂತ ಸೌಕರ್ಯಗಳನ್ನು ಒಳಗೊಂಡ ಯೋಜನಾ ಬದ್ಧವಾದ ವಸತಿ ಬಡಾವಣೆಯನ್ನು ಅಭಿವೃದ್ಧಿ ಪಡಿಸಲು ಉದ್ದೇಶಿಸಿರುವುದರಿಂದ ಸಾರ್ವಜನಿಕರಿಗೆ ಕಡಿಮೆ ದರದಲ್ಲಿ ಉತ್ತಮವಾದ ಎಲ್ಲಾ ಮೂಲಭೂತ ಸೌಲಭ್ಯಗಳನ್ನು ಒಳಗೊಂಡ ವಸತಿ ನಿವೇಶನಗಳನ್ನು ಒದಗಿಸಿ ಕೊಡುವುದರ ಜೊತೆಗೆ ನಗರದ ಯೋಜನಾ ಬದ್ಧವಾದ ಬೆಳವಣಿಗೆಯಾಗುವುದು" ಎಂಬ ಸಾರ್ವಜನಿಕ ಹಿತಾಸಕ್ತಿಯನ್ನು ಒಳಗೊಂಡಿರುತ್ತೇವೆ ಎಂದು ಅರ್ಜಿದಾರರು ತಮ್ಮ ಪ್ರಮಾಣ ಪತ್ರದ ಮುಖಾಂತರ ತಿಳಿಸಿರುತ್ತಾರೆ.

ಹಾಗಾಗಿ, ಸದರಿ ಭೂ ಉಪಯೋಗ ಬದಲಾವಣೆಯ ಪ್ರಸ್ತಾವನೆಯನ್ನು ಪರಿಗಣಿಸುವ ಬಗ್ಗೆ ಅಕ್ಕಪಕ್ಕದ ಜಮೀನಿನ ಮಾಲೀಕರಿಗೆ/ ಇತರರಿಗೆ/ ಪರಿಸರಕ್ಕೆ ಉಂಟಾಗಬಹುದಾದಂತಹ ತೊಂದರೆಗಳು ಹಾಗೂ ಇತರೆ ಅಂಶಗಳಿಗೆ ಸಂಬಂಧಿಸಿದಂತೆ ಸಲಹೆ/ಸೂಚನೆ/ಆಕ್ಷೇಪಣೆಗಳು ಇದ್ದಲ್ಲಿ ಈ ಪ್ರಕಟಣೆ ನೀಡಿದ ದಿನಾಂಕದಿಂದ 15 ದಿನಗಳ ಒಳಗಾಗಿ ಲಿಖಿತ ರೂಪದಲ್ಲಿ **ಸದಸ್ಯ ಕಾರ್ಯದರ್ಶಿ, ಹೊಸಕೋಟೆ ಯೋಜನಾ ಪ್ರಾಧಿಕಾರ, ಮಿಷನ್ ಹಾಸ್ಪಿಟಲ್ ರಸ್ತೆ, 1ನೇ ಅಡ್ಡ ರಸ್ತೆ, ಶ್ರೀ ವೆಂಕಟಾದ್ರಿ ಬಡಾವಣೆ, ಹೊಸಕೋಟೆ-562114, ಬೆಂಗಳೂರು ಗ್ರಾಮಾಂತರ ಜಿಲ್ಲೆ** ರವರಿಗೆ ಖುದ್ದಾಗಿ ಅಥವಾ ಅಂಚೆ ಮೂಲಕ ಸಲ್ಲಿಸಲು ಕೋರಲಾಗಿದೆ. ಅವಧಿ ಮೀರಿದ ನಂತರ ಸ್ವೀಕರಿಸಲಾಗುವ ಸಲಹೆ/ಸೂಚನೆ/ಆಕ್ಷೇಪಣೆಗಳನ್ನು ಪರಿಗಣಿಸಲಾಗುವುದಿಲ್ಲ.

ಸಹಿ/-
ನಗರ ಮತ್ತು ಗ್ರಾಮಾಂತರ ಯೋಜನಾ ಜಂಟಿ ನಿರ್ದೇಶಕರು ಹಾಗೂ ಸದಸ್ಯ ಕಾರ್ಯದರ್ಶಿ, ಹೊಸಕೋಟೆ ಯೋಜನಾ ಪ್ರಾಧಿಕಾರ, ಹೊಸಕೋಟೆ.

ವಾ.ಸಾ.ಸಂ.ಇ/ವಾಪ್ರ/5475/ಆಕಾರ್/2025-26

ನೆಲಮಂಗಲ ಯೋಜನಾ ಪ್ರಾಧಿಕಾರ

2ನೇ ಮುಖ್ಯರಸ್ತೆ, ಸದಾಶಿವನಗರ, ನೆಲಮಂಗಲ - 562123.
ದೂರವಾಣಿ: 9663046622 ಇ-ಮೇಲ್: nelamangala.pa@gmail.com

ಸಂಖ್ಯೆ: ನೆಯೋಪ್ರಾ/CLU/110/2025-26 ದಿನಾಂಕ: 05-02-2026

ಸಾರ್ವಜನಿಕ ಪ್ರಕಟಣೆ

ಸರ್ಕಾರದ ಅಧಿಸೂಚನೆ ಸಂಖ್ಯೆ: ನಅಇ 134 ಬೆಂರುಪ್ರಾ 2006 ದಿನಾಂಕ: 13-02-2007 ರನ್ವಯ **ನೆಲಮಂಗಲ ತಾಲ್ಲೂಕು, ಕಸಬಾ ಹೋಬಳಿ, ಮೈಲನಹಳ್ಳಿ** ಗ್ರಾಮವು **"ನೆಲಮಂಗಲ ಸ್ಥಳೀಯ ಯೋಜನಾ ಪ್ರದೇಶದ"** ವ್ಯಾಪ್ತಿಗೆ ಒಳಪಟ್ಟಿದ್ದು, ನೆಲಮಂಗಲ ಸ್ಥಳೀಯ ಯೋಜನಾ ಪ್ರದೇಶಕ್ಕೆ ಸರ್ಕಾರದ ಆದೇಶ ಸಂಖ್ಯೆ: ನಅಇ 150 ಬಿಎಂಆರ್ 2013, ದಿನಾಂಕ: 01-06-2015 ರಲ್ಲಿ ಅನುಮೋದನೆಗೊಂಡಿರುವ ಮಹಾಯೋಜನೆಯಲ್ಲಿ ಈ ಕೆಳಕಂಡ ಜಮೀನನ್ನು **"ವ್ಯವಸಾಯ"** ವಲಯದಲ್ಲಿ ಕಾಯ್ದಿರಿಸಲಾಗಿರುತ್ತದೆ. ಈ ಹಿನ್ನೆಲೆಯಲ್ಲಿ **ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961 ರ ಕಲಂ 14(ಎ) ರ ಅಡಿಯಲ್ಲಿ "ವಸತಿ"** ಉದ್ದೇಶಕ್ಕೆ ಭೂ ಉಪಯೋಗ ಬದಲಾವಣೆ ಮಾಡಲು ಅರ್ಜಿದಾರರು ಕೋರಿರುವಂತೆ **"ವ್ಯವಸಾಯ"** ವಲಯದಿಂದ **"ವಸತಿ"** ಉದ್ದೇಶಕ್ಕೆ ಭೂ ಉಪಯೋಗ ಬದಲಾವಣೆ ಮಾಡುವ ಸಂಬಂಧ ಈ ಪ್ರಕಟಣೆ ಪ್ರಕಟವಾದ ದಿನಾಂಕದಿಂದ 15 ದಿವಸಗಳೊಳಗಾಗಿ ಆಕ್ಷೇಪಣೆಗಳನ್ನು ಲಿಖಿತವಾಗಿ **ಸದಸ್ಯ ಕಾರ್ಯದರ್ಶಿಗಳು, ನೆಲಮಂಗಲ ಯೋಜನಾ ಪ್ರಾಧಿಕಾರ, ನೆಲಮಂಗಲ** ಕಛೇರಿಗೆ ಸಲ್ಲಿಸಲು ತಿಳಿಸಲಾಗಿದೆ. ನಿಗಧಿತ ಅವಧಿಯ ನಂತರ ಬರುವ ಯಾವುದೇ ಆಕ್ಷೇಪಣೆಗಳನ್ನು ಪರಿಗಣಿಸಲಾಗುವುದಿಲ್ಲ.

ಕಂದಾಯ ದಾಖಲಾತಿಗಳಂತೆ ಮಾಲೀಕರ ಹೆಸರು	ತಾಲ್ಲೂಕು/ ಹೋಬಳಿ/ಗ್ರಾಮ	ಸ.ನಂ.	ವಿಸ್ತೀರ್ಣ (ಎ-ಗು)	ಅನುಮೋದಿತ ಮಹಾಯೋಜನೆಯಂತೆ ಭೂ ಉಪಯೋಗ	ಬದಲಾವಣೆ ಕೋರಿರುವ ಭೂ ಉಪಯೋಗ
ಶ್ರೀ ಪ್ರಶಾಂತ್ ಎಂ.ಎಸ್. ಬಿನ್ ಪಿ. ಶಿವಶಂಕರ್	ನೆಲಮಂಗಲ / ಕಸಬಾ / ಮೈಲನಹಳ್ಳಿ	32/1	5-15	ವ್ಯವಸಾಯ	ವಸತಿ
		32/2	1-27 ರ ಪೈಕಿ 00-12¾		

ಷರಾ:- ಪ್ರಶ್ನಿತ ಜಮೀನುಗಳ ಪರಿಸರದಲ್ಲಿ ವಸತಿ ಬೆಳವಣಿಗೆಗಳು ಬಂದಿದ್ದು, ಪ್ರಶ್ನಿತ ಜಮೀನಿನಲ್ಲಿ ವಸತಿ ವಿನ್ಯಾಸ ನಕ್ಷೆ ಅನುಮೋದನೆ ಪಡೆದು ಅಭಿವೃದ್ಧಿಪಡಿಸುವುದರಿಂದ ಕೂಲಿ ಕಾರ್ಮಿಕರಿಗೆ ಉದ್ಯೋಗವಕಾಶ ಸಿಗುತ್ತದೆ. ಹಾಗೂ ಯೋಜನಾ ಬದ್ಧ ಬೆಳವಣಿಗೆಯಾಗುವುದು ಎಂದು ತಿಳಿಸುತ್ತಾ ಸದರಿ ಪ್ರದೇಶವನ್ನು **"ವ್ಯವಸಾಯ"** ವಲಯದಿಂದ **"ವಸತಿ"** ಉದ್ದೇಶಕ್ಕೆ ಭೂ ಉಪಯೋಗ ಬದಲಾವಣೆ ಮಾಡಿಕೊಳ್ಳಲು ಇಚ್ಛಿಸಿರುವುದಾಗಿ ತಿಳಿಸಿರುತ್ತಾರೆ.

ಸಹಿ/- ಜಂಟಿ ನಿರ್ದೇಶಕರು
ನಗರ ಮತ್ತು ಗ್ರಾಮಾಂತರ ಯೋಜನೆ ಹಾಗೂ ಸದಸ್ಯ-ಕಾರ್ಯದರ್ಶಿ, ನೆಲಮಂಗಲ ಯೋಜನಾ ಪ್ರಾಧಿಕಾರ, ನೆಲಮಂಗಲ.

ವಾಸಾಸಂಇ/ವಾ.ಪ್ರ/5442/ಅಡ್ವರ್ಟೋರ್/2025-26

ಚಾಮುಂಡೇಶ್ವರಿ ವಿದ್ಯುತ್ ಸರಬರಾಜು ನಿಗಮ ನಿಯಮಿತ

(ಕರ್ನಾಟಕ ಸರ್ಕಾರದ ಸ್ವಾಮ್ಯಕ್ಕೆ ಒಳಪಟ್ಟಿದೆ)
ನಿಗಮ ಕಾರ್ಯಾಲಯ, ಚಾವಿಸನಿನಿ, ಮೈಸೂರು-570017, ದೂರವಾಣಿ ಸಂಖ್ಯೆ: 9448994710
ಇ-ಮೇಲ್ ಐಡಿ: gmit@cescmysore.org ವೆಬ್‌ಸೈಟ್: cescmysore.karnataka.gov.in

ಸಂಖ್ಯೆ: ಚಾವಿಸನಿನಿ/ಪ್ರವ್ಯ(ಐಟಿ&ಎಂಐಎಸ್)/ಉಪ್ರವ್ಯ(ಐಟಿ)/ಸಪ್ರವ್ಯ(ಐಟಿ-3)/2025-26/35467 ದಿನಾಂಕ: 04.02.2026

ಅಲ್ಪಾವಧಿ ಟೆಂಡರ್ ಪ್ರಕಟಣೆ (KPP ಪೋರ್ಟಲ್‌ನಲ್ಲಿ ಮಾತ್ರ)

ಚಾ.ವಿ.ಸ.ನಿ.ನಿಯು ಈ ಕೆಳಕಂಡ ಕಾಮಗಾರಿ/ ಸೇವೆಗಳನ್ನು ಕೈಗೊಳ್ಳಲು ಅಲ್ಪಾವಧಿ ಟೆಂಡರ್‌ನ್ನು ಆಹ್ವಾನಿಸಿದೆ.

Sl. No	Works details	Enquiry No/Date
1	ಚಾ.ವಿ.ಸ.ನಿ.ನಿ, ಯ ವಿವಿಧ ಕಛೇರಿ ಆವರಣದಲ್ಲಿ 60 ಕಿ.ವ್ಯಾ ಇವಿ ಚಾರ್ಜಿಂಗ್ ಸ್ಟೇಷನ್‌ಗಳ ಪೂರೈಕೆ, ಸ್ಥಾಪನೆ ಮತ್ತು ನಿರ್ವಹಣೆ.	CESC/IT&MIS/2025-26/09 Dtd:04-02-2026
2	ಚಾ.ವಿ.ಸ.ನಿ.ನಿ, ಮೈಸೂರಿನ ವಿವಿಧ ಕಛೇರಿಗಳಿಗೆ ಡೆಸ್ಕ್ ಟಾಪ್ ಕಂಪ್ಯೂಟರ್‌ಗಳು ಮತ್ತು ಯುಪಿಎಸ್‌ಗಳ ಪೂರೈಕೆ.	CESC/IT&MIS/2025-26/10 Dtd: 04-02-2026

ಸದರಿ ಟೆಂಡರ್‌ನ ವಿವರಗಳನ್ನು **KPP-ಪೋರ್ಟಲ್ https://kppp.karnataka.gov.in/** ನಲ್ಲಿ **ದಿನಾಂಕ:09.02.2026** ಅಥವಾ ನಂತರ ಪಡೆಯಬಹುದಾಗಿರುತ್ತದೆ. KPP-ಪೋರ್ಟಲ್ ಬಗ್ಗೆ ಮಾಹಿತಿಗಾಗಿ ಸಹಾಯವಾಣಿ **+91-8046010000/ 8068948777** ಗೆ ಅಥವಾ ಇ-ಮೇಲ್ ವಿಳಾಸ **support@eprochelpdesk.com** ಗೆ ಸಂಪರ್ಕಿಸಬಹುದಾಗಿದೆ.

ವಿದ್ಯುತ್ ಸಂಬಂಧಿಸಿದ ದೂರುಗಳಿಗೆ ಕರೆ ಮಾಡಿ: 1912

ವಾಸಾಸಂಇ/ಮೈಸೂರು/1614/ಎಸ್‌ಎಸ್‌ಸಿ/2025-26
ಸಹಿ/- ಪ್ರಧಾನ ವ್ಯವಸ್ಥಾಪಕರು (ಐಟಿ & ಎಂ.ಐ.ಎಸ್) ಚಾವಿಸನಿನಿ, ಮೈಸೂರು

NORICAN
Shaping Industry

ಡೀಸಾ ಇಂಡಿಯಾ ಲಿಮಿಟೆಡ್

ನೋಂದಾಯಿತ ಕಚೇರಿ: ವರ್ಲ್ಡ್ ಟ್ರೇಡ್ ಸೆಂಟರ್ (ಡಬ್ಲ್ಯೂಟಿಸಿ), 6ನೇ ಮಹಡಿ, ಯೂನಿಟ್ ಸಂ. ಎಸ್-604, ಬ್ರಿಗೇಡ್ ಗೇಟ್‌ವೇ ಕ್ಯಾಂಪಸ್, 26/1, ಡಾ. ರಾಜ್‌ಕುಮಾರ್ ರಸ್ತೆ, ಮಲ್ಲೇಶ್ವರಂ-ರಾಜಾಜಿನಗರ, ಬೆಂಗಳೂರು-560055. ಫೋನ್: +91 80 22496700, ಫ್ಯಾಕ್ಸ್ : +91 80 2249 6750. ಇ-ಮೇಲ್: bangalore@norican.com www.disa-india.com
CIN No: L85110KA1984PLC006116

ಡಿಸೆಂಬರ್ 31, 2025ಕ್ಕೆ ಅಂತ್ಯಗೊಂಡ ತ್ರೈಮಾಸಿಕ ಹಣಕಾಸು ಫಲಿತಾಂಶದ ಸಂಕ್ಷಿಪ್ತ ವರದಿ

(ರೂ. ಮಿಲಿಯನ್‌ಗಳಲ್ಲಿ)

ವಿವರಗಳು	ಸ್ವತಂತ್ರ: 31.12.2025ಕ್ಕೆ ಕೊನೆಗೊಂಡ 3 ತಿಂಗಳು (ಲೆಕ್ಕಪರಿಶೋಧನೆಗೊಳ್ಳದ)	ಸ್ವತಂತ್ರ: 31.12.2025 ವರ್ಷದಿಂದ ಇಲ್ಲಿಯವರೆಗೆ (ಲೆಕ್ಕಪರಿಶೋಧನೆಗೊಳ್ಳದ)	ಸ್ವತಂತ್ರ: ಹಿಂದಿನ ವರ್ಷಕ್ಕೆ ಅನುಗುಣವಾಗಿ 31.12.2024ಕ್ಕೆ ಕೊನೆಗೊಂಡ 3 ತಿಂಗಳು (ಲೆಕ್ಕಪರಿಶೋಧನೆಗೊಳ್ಳದ)	ಕ್ರೋಢೀಕರಿಸಿದ: 31.12.2025ಕ್ಕೆ ಕೊನೆಗೊಂಡ 3 ತಿಂಗಳು (ಲೆಕ್ಕಪರಿಶೋಧನೆಗೊಳ್ಳದ)	ಕ್ರೋಢೀಕರಿಸಿದ: 31.12.2025 ವರ್ಷದಿಂದ ಇಲ್ಲಿಯವರೆಗೆ (ಲೆಕ್ಕಪರಿಶೋಧನೆಗೊಳ್ಳದ)	ಕ್ರೋಢೀಕರಿಸಿದ: ಹಿಂದಿನ ವರ್ಷಕ್ಕೆ ಅನುಗುಣವಾಗಿ 31.12.2024ಕ್ಕೆ ಕೊನೆಗೊಂಡ 3 ತಿಂಗಳು (ಲೆಕ್ಕಪರಿಶೋಧನೆಗೊಳ್ಳದ)
ವಹಿವಾಟಿನಿಂದ ಬಂದ ಆದಾಯ	1,286.2	3,338.9	975.9	1,286.2	3,342.9	993.4
ಅವಧಿಯ ನಿವ್ವಳ ಲಾಭ (ನಷ್ಟ)(ತೆರಿಗೆ ಅಸಾಧಾರಣ ಮತ್ತು/ ಅಥವಾ ಅಸಾಮಾನ್ಯ ಅಂಶಗಳ ಮೊದಲು)	241.9	582.7	144.0	239.7	579.1	147.1
ಅವಧಿಯ ನಿವ್ವಳ ಲಾಭ (ನಷ್ಟ) (ತೆರಿಗೆಯ ಮೊದಲು, ಅಸಾಧಾರಣ ಮತ್ತು/ ಅಥವಾ ಅಸಾಮಾನ್ಯ ಅಂಶಗಳ ನಂತರ)	206.8	547.6	131.4	204.6	544.0	134.5
ಅವಧಿಯ ನಿವ್ವಳ ಲಾಭ (ನಷ್ಟ) (ತೆರಿಗೆ, ಅಸಾಧಾರಣ ಮತ್ತು ಅಸಾಮಾನ್ಯ ಅಂಶಗಳ ನಂತರ)	154.2	408.0	97.9	152.0	404.4	100.2
ಅವಧಿಯ ಒಟ್ಟಾರೆ ವ್ಯಾಪಕ ಆದಾಯ (ತೆರಿಗೆಯ ನಂತರದ ಲಾಭ (ನಷ್ಟ) ಮತ್ತು ತೆರಿಗೆಯ ನಂತರದ ವ್ಯಾಪಕ ಆದಾಯ)	156.9	407.7	101.9	154.7	404.1	104.0
ಈಕ್ವಿಟಿ ಷೇರು ಬಂಡವಾಳ	14.5	14.5	14.5	14.5	14.5	14.5
ಇತರ ಈಕ್ವಿಟಿ (ಮರು-ಮೌಲ್ಯಮಾಪನ ಮೀಸಲು ಹೊರತುಪಡಿಸಿ ಹಿಂದಿನ ವರ್ಷದ ಲೆಕ್ಕ ಆಯವ್ಯಯ ಪಟ್ಟಿ ಪ್ರಕಾರ)	—	—	—	—	—	—
ಒಂದು ಷೇರಿನ ಗಳಿಕೆ (ಮುಖಬೆಲೆ ರೂ. 10/- ಪ್ರತಿ) ಮೂಲ : ರೂ.	106.04	280.57	67.32	104.52	278.09	68.91
ನಿಸಾರಗೊಂಡದ್ದು: ರೂ.	106.04	280.57	67.32	104.52	278.09	68.91

ಟಿಪ್ಪಣಿ: ಮೇಲೆ ಹೇಳಿದ ವರದಿಯು 2015ರ ಸೆಬಿ ನಿಯಂತ್ರಣಗಳ (ಪಟ್ಟಿ ಮಾಡುವಿಕೆ ಮತ್ತು ಇತರೆ ಘೋಷಣೆಗಳ ಅವಶ್ಯಕತೆಗಳು) 33ನೇ ನಿಯಂತ್ರಣದಡಿ ಸ್ಟಾಕ್ ಎಕ್ಸ್‌ಚೇಂಜ್‌ಗೆ ಸಲ್ಲಿಸಿರುವ ತ್ರೈಮಾಸಿಕ/ ಒಂಬತ್ತು ತಿಂಗಳಿಗೆ ಲೆಕ್ಕಪರಿಶೋಧನೆಗೊಳ್ಳದ ಹಣಕಾಸಿನ ಫಲಿತಾಂಶಗಳ ವಿವರಗಳ ಸಂಕ್ಷಿಪ್ತ ವಿವರ. ಪೂರ್ಣ ವಿವರಗಳು ಸ್ಟಾಕ್ ಎಕ್ಸ್‌ಚೇಂಜ್ ಜಾಲತಾಣ www.bseindia.com ಮತ್ತು ಸಂಸ್ಥೆಯ ಜಾಲತಾಣ www.disa-india.com ನಲ್ಲಿ ಕೂಡ ಲಭ್ಯವಿದೆ.

ಸ್ಥಳ : ಬೆಂಗಳೂರು
ದಿನಾಂಕ : ಫೆಬ್ರವರಿ 6, 2026

ಡೀಸಾ ಇಂಡಿಯಾ ಲಿಮಿಟೆಡ್ ಪರವಾಗಿ
ಲೋಕೇಶ್ ಸಕ್ಸೇನ
ವ್ಯವಸ್ಥಾಪಕ ನಿರ್ದೇಶಕರು

ಲೋಕೋಪಯೋಗಿ ಇಲಾಖೆ, ತುಮಕೂರು,

ಕ್ರ.ಸಂ:ಕಾಇಂ:ಲೋಇವಿ:ತುಮ:ಕಿಇಂ-3: ಟೆಂಡರ್ 47:2025-26. ದಿನಾಂಕ: 04-01-2026

ಅಲ್ಪಾವಧಿ ಟೆಂಡರ್ ಪ್ರಕಟಣೆ ಸಂ. 47/2025-26 ದಿನಾಂಕ 04-01-2026

ಈ ಕಚೇರಿ ಟೆಂಡರ್ ಪ್ರಕಟಣೆ ಸಂಖ್ಯೆ: **47/2025-26** ದಿನಾಂಕ **04-02-2026** ರಂದು ತುಮಕೂರು ವಿಭಾಗದ ವ್ಯಾಪ್ತಿಯಲ್ಲಿ **ಲೆಕ್ಕ ಶೀರ್ಷಿಕೆ:-5054-04-337-0-01-154 ಜಿಲ್ಲಾ ರಸ್ತೆಗಳು ಸುಧಾರಣೆ ಅಡಿಯಲ್ಲಿ 03 ಕಾಮಗಾರಿಗಳಿಗೆ KPPP-Portal** ಮೂಲಕ ಟೆಂಡರ್ ಆಹ್ವಾನಿಸಲಾಗಿರುತ್ತದೆ. ಟೆಂಡರಿಗಿಟ್ಟ ಕನಿಷ್ಠ ಮೊತ್ತ **ರೂ. 72.60 ಲಕ್ಷಗಳು** ಹಾಗೂ ಟೆಂಡರ್‌ಗಿಟ್ಟ ಗರಿಷ್ಠ ಮೊತ್ತ **ರೂ. 80.62 ಲಕ್ಷಗಳು,** ಕನಿಷ್ಠ ಇ.ಎಂ.ಡಿ ಮೊತ್ತ **ರೂ. 1,45,205/-** ಹಾಗೂ ಗರಿಷ್ಠ ಇ.ಎಂ.ಡಿ ಮೊತ್ತ **ರೂ. 1,61,254/-** ಅರ್ಹ ಗುತ್ತಿಗೆದಾರರು 3ನೇ ದರ್ಜೆ ಮೇಲ್ಪಟ್ಟು, **ಕಾಲಾವಧಿ: 06 ತಿಂಗಳುಗಳು,** ಸಂಬಂಧಿಸಿದ ವಿಚಾರಣೆ ಮತ್ತು ಸ್ಪಷ್ಟಿಕರಣಗಳಿಗೆ ಕೊನೆ **ದಿನಾಂಕ ಮತ್ತು ವೇಳೆ: 11-02-2026 ರ 17-30 ಗಂಟೆಗೆ,** KPPP-Portal ಮೂಲಕ ಟೆಂಡರ್ ಅನ್ನು **ದಿನಾಂಕ 05-02-2026 ರಿಂದ 12-02-2026 ರ 16.00 ಗಂಟೆವರೆಗೆ** ಪಡೆಯಬಹುದಾಗಿದೆ. ಟೆಂಡರ್ ಅನ್ನು ಸ್ವೀಕರಿಸಲು ಕೊನೆಯ **ದಿನಾಂಕ ಮತ್ತು ವೇಳೆ: 12-02-2026 ರ 16-00 ಗಂಟೆವರೆಗೆ,** ತಾಂತ್ರಿಕ ಬಿಡ್ ಅನ್ನು ತೆರೆಯುವ **ದಿನಾಂಕ:-13-02-2026 ರ 16-30 ಗಂಟೆಗೆ** ಆರ್ಥಿಕ ಬಿಡ್ ಅನ್ನು ತೆರೆಯುವ **ದಿನಾಂಕ: 14-02-2026 ರ 11-30 ಗಂಟೆವರೆಗೆ** ಹಾಗೂ ಹೆಚ್ಚಿನ ವಿವರಗಳನ್ನು ಸದರಿ ಕಚೇರಿಯಿಂದ ಕಚೇರಿ ವೇಳೆಯಲ್ಲಿ ಪಡೆಯಬಹುದಾಗಿದೆ ಹಾಗೂ ವೆಬ್‌ಸೈಟ್ ಸಂ:**https://kppp.karnataka.gov.in** ರಲ್ಲಿ ಪಡೆಯಬಹುದಾಗಿದೆ.

ಸೂಚನೆ: ಆರ್ಥಿಕ ವಹಿವಾಟಿನ ಪತ್ರದಲ್ಲಿ ಯು.ಡಿ.ಐ ಸಂಖ್ಯೆಯನ್ನು ನಮೂದಿಸಿಲ್ಲದಿರುವ ಆರ್ಥಿಕ ವಹಿವಾಟನ್ನು ಪರಿಗಣಿಸುವುದಿಲ್ಲ. ಸದರಿ ಟೆಂಡರ್ ಪ್ರಕಟಣೆಯಲ್ಲಿ ಆಗುವಂತಹ ಮುಂದಿನ ಬದಲಾವಣೆಗಳನ್ನು ಕೆ.ಪಿ.ಪಿ.ಪಿ ಪೋರ್ಟಲ್‌ನಲ್ಲಿ ನೋಡಿಕೊಳ್ಳುವುದು

ಸಹಿ/- ಕಾರ್ಯಪಾಲಕ ಇಂಜಿನಿಯರ್
ಲೋಕೋಪಯೋಗಿ ಇಲಾಖೆ ಉಪವಿಭಾಗ
ತುಮಕೂರು.

DIPR/TUM/RO-247/25-26/Oysters

ದಿನ ವಿಶೇಷ

6 ಫೆಬ್ರವರಿ 2026 ಶುಕ್ರವಾರ

- » ಸೂರ್ಯೋದಯ : 06-46
- » ಸೂರ್ಯಾಸ್ತ : 06-23
- » ತಿಥಿ : ಪಂಚಮಿ
- » ನಕ್ಷತ್ರ : ಹಸ್ತ
- » ಸಂವತ್ಸರ : ವಿಶ್ವಾವಸು
- » ಆಯನ : ಉತ್ತರಾಯಣ
- » ಋತು : ಶಿಶಿರ
- » ಮಾಸ : ಮಾಘ
- » ಪಕ್ಷ : ಕೃಷ್ಣಪಕ್ಷ

ಸಮಾಚಾರ ಸಣ್ಣದಲ್ಲ

ಅಪಘಾತ: ಮೂವರು ಕಾರ್ಮಿಕರು ಸಾವು

ಗದಗ: ಕ್ರೂಸರ್ ಹಾಗೂ ಕ್ಯಾಂಟರ್ ನಡುವೆ ಸಂಭವಿಸಿದ ಅಪಘಾತದಲ್ಲಿ ಮೂವರು ರೈತ ಮಹಿಳೆಯರು ಸ್ಥಳದಲ್ಲೇ ಸಾವನ್ನಪ್ಪಿದ ಘಟನೆ ರೋಣ ತಾಲೂಕಿನ ಜಿಗಳೂರ ಕ್ರಾಸ್ ಬಳಿ ನಡೆದಿದೆ. ಮೃತರನ್ನು ಗಜೇಂದ್ರಗಡದ ಶಿವಾಜಿಪೇಟೆ ನಿವಾಸಿಗಳಾದ ಅನ್ನಪೂರ್ಣ (56), ಸಂಗೀತ ಹೊಸಮನಿ (48), ಮರಿಯಂಬೂ ಹುನಗುಂದ (55) ಎಂದು ಗುರುತಿಸಲಾಗಿದೆ. ಇವರು ರೋಣಕ್ಕೆ ಕಡಲೆ ಕೀಳಲು ಹೊರಟಿದ್ದರು. ಅಪಘಾತದಲ್ಲಿ ಗಾಯಗೊಂಡವರನ್ನು ಗದಗದ ಜಿಮ್ಸ್ ಆಸ್ಪತ್ರೆಗೆ ದಾಖಲಿಸಲಾಗಿದೆ. ಸಾವಿನ ಸಂಖ್ಯೆ ಏರಿಕೆಯಾಗುವ ಸಾಧ್ಯತೆ ಇದೆ. ಸ್ಥಳಕ್ಕೆ ರೋಣ ಪೊಲೀಸರು ಭೇಟಿ ನೀಡಿ ಪರಿಶೀಲನೆ ನಡೆಸಿದರು.

ಕಾಡಾನೆ ದಾಳಿಗೆ ಸಾವು

ಮೈಸೂರು: ಬಹಿರ್ದೆಸೆಗೆ ಹೋಗಿದ್ದ ವ್ಯಕ್ತಿ ಮೇಲೆ ಕಾಡಾನೆ ದಾಳಿ ಮಾಡಿದ್ದು, ವ್ಯಕ್ತಿ ಸ್ಥಳದಲ್ಲೇ ಸಾವಿಗೀಡಾದ ಘಟನೆ ಸರಗೂರು ತಾಲೂಕಿನ ಬಿ. ಮಟಕೆರೆಯ ಎಸ್.ಟಿ. ಕಾಲೋನಿಯಲ್ಲಿ ನಡೆದಿದೆ.

ಗ್ರಾಮದ ದೇವಸ್ಥಾನದಲ್ಲಿ ಕಾವಲುಗಾರ ನಾಗಿದ್ದ ಮಾದ ಎಂಬವರೇ ಆನೆ ದಾಳಿ ಗೊಳಗಾಗಿ ಮೃತಪಟ್ಟವರು. ಮಾದ, ಗುರುವಾರ ಬೆಳಗಿನ ಜಾವ ಬಹಿರ್ದೆಸೆಗೆಂದು ಬಯಲು ಪ್ರದೇಶಕ್ಕೆ ಹೋಗಿದ್ದಾಗ ಆನೆ ದಾಳಿ ನಡೆಸಿದೆ. ಈ ವೇಳೆ ಮಾದ ಚೀರಾಡಿದ್ದಾನೆ. ಈ ಸದ್ದು ಕೇಳಿ ಸ್ಥಳಕ್ಕಾಗಮಿಸಿ ಗ್ರಾಮಸ್ಥರು ಆನೆಯನ್ನು ಹಿಮ್ಮೆಟ್ಟಿಸಿದರಾದರೂ ಅಷ್ಟರಲ್ಲಿ ಮಾದ ಸ್ಥಳದಲ್ಲೇ ಮೃತಪಟ್ಟಿದ್ದರು. ಗ್ರಾಮದ ಸಮೀಪವೇ ರಾತ್ರಿ ಬೀಡು ಬಿಟ್ಟಿದ್ದ ಕಾಡಾನೆಯಿಂದ ಈ ಕೃತ್ಯ ನಡೆದಿದೆ. ಘಟನೆ ಕುರಿತು ಸರಗೂರು ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.



ಕಳೆದ ಒಂದು ವರ್ಷದಲ್ಲಿ 36,474 ಮೇಲ್ಮನವಿಗಳ ವಿಲೇವಾರಿ | ಮಾಹಿತಿ ನೀಡದ 241 ಅಧಿಕಾರಿಗಳಿಗೆ 45.29 ಲಕ್ಷ ರು. ದಂಡ ವಿಧಿಸಿದ ಆಯುಕ್ತರು

ಆರ್‌ಟಿಐ ದ್ವಿತೀಯ ಮೇಲ್ಮನವಿ ಅರ್ಜಿ ವಿಲೇವಾರಿಗೆ ಮಾಹಿತಿ ಆಯೋಗ ವೇಗ

ವಿಶ್ವವಾಣಿ ಸುದ್ದಿಮನೆ ಬೆಂಗಳೂರು

ಕರ್ನಾಟಕ ಮಾಹಿತಿ ಆಯೋಗ ಇಡೀ ದೇಶದಲ್ಲಿಯೇ ಅತ್ಯಂತ ವೇಗವಾಗಿ ದ್ವಿತೀಯ ಮೇಲ್ಮನವಿ ಅರ್ಜಿಗಳನ್ನು ವಿಲೇವಾರಿ ಮಾಡುತ್ತಿದ್ದು, ಕಳೆದ ಒಂದು ವರ್ಷದ ಅವಧಿಯಲ್ಲಿ ಮಾಹಿತಿ ನೀಡದ ಅಧಿಕಾರಿಗಳಿಗೆ ದಂಡ, ಶಿಸ್ತುಕ್ರಮಕ್ಕೆ ಶಿಫಾರಸುಗಳ ಜತೆಗೆ 36,474 ಮೇಲ್ಮನವಿಗಳನ್ನು ವಿಲೇವಾರಿ ಮಾಡಿದೆ.

ಕರ್ನಾಟಕ ಮಾಹಿತಿ ಆಯೋಗಕ್ಕೆ 2005ರ ಫೆ.4 ರಂದು 8 ಮಾಹಿತಿ ಆಯುಕ್ತರನ್ನು ನೇಮಕ ಮಾಡಿತ್ತು. ಡಿಸೆಂಬರ್‌ನಲ್ಲಿ ಮೂವರನ್ನು ಮಾಹಿತಿ ಆಯುಕ್ತರನ್ನಾಗಿ ನೇಮಕ ಮಾಡಲಾಗಿತ್ತು. 2023 ರಿಂದ 2025ರ ಫೆಬ್ರವರಿ ತನಕ ಕೇವಲ ಮೂವರು ಆಯುಕ್ತರು ಕಾರ್ಯ ನಿರ್ವಹಿಸುತ್ತಿದ್ದರು. ಆದ್ದರಿಂದ ಅರ್ಜಿಗಳ ವಿಲೇವಾರಿ ಕುಂಠಿತವಾಗಿತ್ತು. ಆದರೆ ಒಂದು ವರ್ಷದ ಅವಧಿಯಲ್ಲಿ ದ್ವಿತೀಯ ಮೇಲ್ಮನವಿ ಅರ್ಜಿಗಳ ವಿಲೇವಾರಿಗೆ ವೇಗ ಸಿಕ್ಕಿದೆ. ಫೆಬ್ರವರಿ 2025ರಲ್ಲಿ ಚಾರಣೆಗೆ ಬಾಕಿ ಇದ್ದ ಹಾಗೂ ಹೊಸದಾಗಿ ಸಲ್ಲಿಕೆಯಾದ ಅರ್ಜಿಗಳು ಸೇರಿ ವಿಚಾರಣೆಗೆ 69471 ಅರ್ಜಿಗಳು ಬಾಕಿ ಇದ್ದವು. ಒಂದು ವರ್ಷದ ಅವಧಿಯಲ್ಲಿ 36474 ಅರ್ಜಿಗಳನ್ನು ಆಯುಕ್ತರು ವಿಲೇವಾರಿ ಮಾಡಿದ್ದಾರೆ. ಮೇಲ್ಮನವಿದಾರರಿಗೆ ಸೂಕ್ತ ಮಾಹಿತಿ ಅಥವಾ ಹಿಂಬರಹವನ್ನು ಕೊಡಿಸುವಲ್ಲಿ ಯಶಸ್ವಿಯಾಗಿದ್ದಾರೆ. 32,997 ದ್ವಿತೀಯ ಮೇಲ್ಮನವಿ ಅರ್ಜಿಗಳು ಮಾತ್ರ ವಿಲೇವಾರಿಗೆ ಬಾಕಿ ಉಳಿದಿವೆ.

ಶಿಫಾರಸುಗಳು: ಸರಕಾರದ ಹಂತದಲ್ಲಿ ನಡೆಯುವ ನೇಮಕಾತಿಗಳು, ಅಧಿಕಾರಿ ಮತ್ತು ನೌಕರರ ಬಡ್ತಿಗೆ ಸಂಬಂಧಿಸಿದ ಪರೀಕ್ಷೆಗಳು ಹಾಗೂ ಶಾಲಾ ಮತ್ತು ಪದ ಪಠ್ಯ ಪುಸ್ತಕದಲ್ಲಿ ಮಾಹಿತಿ ಹಕ್ಕು ಸಹ ಒಂದು ವಿಷಯವನ್ನಾಗಿ ಪರಿಗಣಿಸುವಂತೆ ಆಯೋಗ ಸರಕಾರಕ್ಕೆ ಶಿಫಾರಸು ಮಾಡಿದೆ. ಅಲ್ಲದೇ ಜಿಲ್ಲಾ ಹಾಗೂ ತಾಲೂಕು ಮಟ್ಟದ ಕೆಡಿಪಿ ಸಭೆಗಳಲ್ಲಿಯೂ ಮಾತಿ ಹಕ್ಕು ಅರ್ಜಿಗಳ ವಿಲೇವಾರಿಯನ್ನು ಒಂದು ವಿಷಯವನ್ನಾಗಿ ಚರ್ಚೆ ಮಾಡುವಂತೆಯೂ ಸಲಹೆ ನೀಡಿದೆ.

ನಿಗದಿತ ಅವಧಿಯಲ್ಲಿ ಮಾಹಿತಿ ನೀಡದ ಹಾಗೂ ಆಯೋಗದ ವಿಚಾರಣೆಗೆ ಗೈರು ಹಾಜರಾಗುವ ಸಾರ್ವಜನಿಕ ಮಾಹಿತಿ ಅಧಿಕಾರಿಗಳಿಗೆ ದಂಡ ವಿಧಿಸಲಾಗುತ್ತಿದೆ. ಗರಿಷ್ಠ 25 ಸಾವಿರ ರು. ದಂಡ ವಿಧಿಸುವುದರೊಂದಿಗೆ ಅರ್ಜಿದಾರರಿಗೆ ಪರಿಹಾರ ಕೊಡಿಸುವುದಕ್ಕೂ ಕಾನೂನಿನಲ್ಲಿ ಅವಕಾಶದೆ. ಒಂದು ವರ್ಷದ ಅವಧಿಯಲ್ಲಿ 245 ಅಧಿಕಾರಿಗಳಿಗೆ 45.29 ಲಕ್ಷ ರು.ಗಳ ದಂಡ ವಿಧಿಸಲಾಗಿದೆ.

- ಕೆ.ರಾಮನ್, ರಾಜ್ಯ ಮುಖ್ಯ ಮಾಹಿತಿ ಆಯುಕ್ತ

ಪೀಠವಾರು ಅರ್ಜಿಗಳ ವಿಲೇವಾರಿ

ಪೀಠ	ಅರ್ಜಿಗಳು	ವಿಲೇವಾರಿ
ಪೀಠ 1	7267	4731
ಪೀಠ 2	5792	4310
ಪೀಠ 3	5034	1866
ಪೀಠ 4	6319	5193
ಪೀಠ 5	5206	3187
ಪೀಠ 6	5488	4136
ಪೀಠ 7	4881	3612
ಪೀಠ 8	987	113
ಪೀಠ 9	953	266
ಬೆಳಗಾವಿ ಪೀಠ	11367	812
ಕಲಬುರಗಿ ಪೀಠ	14232	8248

ಮಾಹಿತಿ ಹಕ್ಕು ಅಧಿನಿಯಮ ಕುರಿತ ತರಬೇತಿ ಕಾರ್ಯಾಗಾರ

ಅರ್ಜಿಗಳ ಶೀಘ್ರ ವಿಲೇವಾರಿಗೆ ಕಾರಣವಾಗಿದ್ದು ರಾಜ್ಯ ಮಾಹಿತಿ ಆಯುಕ್ತರು ಜಿಲ್ಲಾ ಮಟ್ಟದಲ್ಲಿ ಸಾರ್ವಜನಿಕ ಮಾಹಿತಿ ಅಧಿಕಾರಿಗಳು ಹಾಗೂ ಪ್ರಥಮ ಮೇಲ್ಮನವಿ ಪ್ರಾಧಿಕಾರಿಗಳಿಗೆ ನಡೆಸಿದ ಮಾಹಿತಿ ಹಕ್ಕು ಅಧಿನಿಯಮ ಕುರಿತ ತರಬೇತಿ ಕಾರ್ಯಾಗಾರ. ಇಂತಹ ಕಾರ್ಯಾಗಾರಗಳು ಇದುವರೆಗೆ 23 ಜಿಲ್ಲೆಗಳಲ್ಲಿ ನಡೆದಿವೆ. ಅದರಿಂದ ಮಾಹಿತಿ ನೀಡುವ ಹಾಗೂ ಮಾಹಿತಿ ಆಯೋಗದ ವಿಚಾರಣೆಗೆ ಹಾಜರಾಗುವ ಸಾರ್ವಜನಿಕ ಮಾಹಿತಿ ಅಧಿಕಾರಿಗಳ ಸಂಖ್ಯೆ ವೃದ್ಧಿಸಿದೆ. ಮಾಹಿತಿ ನೀಡುವ ಪ್ರಮಾಣ ಶೇ.85 ರಿಂದ 90 ರಷ್ಟು ಇದೆ. ಇಂತಹ ಕಾರ್ಯಾಗಾರಗಳನ್ನು ಆಯೋಗ ನಿರಂತರವಾಗಿ ನಡೆಸುವ ಉದ್ದೇಶವನ್ನು ಹೊಂದಿದೆ.

ಮತಗಳ ಮರುಎಣಿಕೆಯಲ್ಲಿ ಜಯ ಕರ್ನಾಟಕ ಹೈಕೋರ್ಟ್ ತೀರ್ಪು ರದ್ದು

ನಂಜೇಗೌಡಗೆ ಗೆಲುವು

ಬೆಂಗಳೂರು: 2023ರ ರಾಜ್ಯ ವಿಧಾನಸಭಾ ಚುನಾವಣೆಯಲ್ಲಿ ಮಾಲೂರು ಕ್ಷೇತ್ರದಿಂದ (ಕೋಲಾರ ಜಿಲ್ಲೆ) ಶಾಸಕರಾಗಿ ಕಾಂಗ್ರೆಸ್ ಸದಸ್ಯ ಕೆ.ವೈ.ನಂಜೇಗೌಡ ಅವರ ಆಯ್ಕೆಯನ್ನು ಸುಪ್ರೀಂ ಕೋರ್ಟ್ ಗುರುವಾರ ಎತ್ತಿಹಿಡಿದಿದೆ.

ಮತಗಳ ಮರುಎಣಿಕೆಯ ನಂತರವೂ, ನಂಜೇಗೌಡರು ತಮ್ಮ ಎದುರಾಳಿ ಬಿಜೆಪಿಯ ಕೆ.ಎಸ್.ಮಂಜುನಾಥ್ ಗೌಡ ಅವರಿಗಿಂತ 250 ಹೆಚ್ಚು ಮತ ಪಡೆದಿದ್ದಾರೆ ಎಂದು ಗಮನಿಸಿದ ಸುಪ್ರೀಂ ಕೋರ್ಟ್ ಮುಖ್ಯ ನ್ಯಾಯಮೂರ್ತಿ ಸೂರ್ಯಕಾಂತ್ ಮತ್ತು ನ್ಯಾಯಮೂರ್ತಿ ಜೋಯ್ಮಲ್ಯ ಬಾಗ್ಚಿ ಅವರ ಪೀಠವು ಅವರ ಆಯ್ಕೆಯನ್ನು ರದ್ದುಗೊಳಿಸಿದ ಕರ್ನಾಟಕ ಹೈಕೋರ್ಟ್ ತೀರ್ಪನ್ನು ರದ್ದುಗೊಳಿಸಿತು. ಇದರಿಂದಾಗಿ ಮಾಲೂರು ಕ್ಷೇತ್ರದ ಶಾಸಕರಾಗಿ ಕೆ.ವೈ.ನಂಜೇಗೌಡ ಮುಂದುವರಿಯುತ್ತಾರೆ. ಬಿಜೆಪಿಯ ಮಂಜುನಾಥ್ ಗೌಡಗೆ ಮರು ಮತ ಎಣಿಕೆಯಲ್ಲೂ ಹಿನ್ನಡೆಯಾಗಿದೆ.

ಗುರುವಾರ ಎರಡು ಕಡೆಯವರ ಸಮ್ಮುಖದಲ್ಲಿ ಮುಚ್ಚಿದ ಕವರ್ ಅನ್ನು ಮತ್ತೆ ತೆರೆದ ಸುಪ್ರೀಂಕೋರ್ಟ್ ಮರು ಎಣಿಕೆಯ ನಂತರವೂ ನಂಜೇಗೌಡರು ವಿಜೇತರು ಎಂದು ಗಮನಿಸಿತು. ಮರು ಮತ ಎಣಿಕೆಯಲ್ಲಿ ಕೆ.ವೈ.ನಂಜೇಗೌಡರು 50,957 ಮತಗಳನ್ನು ಮತ್ತು ಮಂಜುನಾಥ ಗೌಡ 50,707 ಮತಗಳನ್ನು ಪಡೆದಿರುವುದು ಕಂಡುಬಂದಿದೆ ಎಂದು ಸುಪ್ರೀಂ ಕೋರ್ಟ್ ಹೇಳಿದೆ.

ಹೈಕೋರ್ಟ್ ಹೊರಡಿಸಿದ ಮತಗಳ ಮರುಎಣಿಕೆಯ ನಿರ್ದೇಶನವನ್ನು ಪಾಲಿಸಿದ ನಂತರವೂ ಮಾಲೂರಿನ ಅಭ್ಯರ್ಥಿಯ ಆಯ್ಕೆಗೆ ಯಾವುದೇ ಪರಿಣಾಮ ಬೀರುವುದಿಲ್ಲ. ಪರಿಣಾಮವಾಗಿ, ಮೇಲ್ಮನವಿ ಸಲ್ಲಿಸುವವರ ಆಯ್ಕೆಯನ್ನು ರದ್ದುಗೊಳಿಸುವ ವಿವಾದಾತ್ಮಕ ನಿರ್ಧಾರವನ್ನು ರದ್ದುಗೊಳಿಸುವ ಮತ್ತು ಮೇಲ್ಮನವಿ ಸಲ್ಲಿಸುವವರ ಆಯ್ಕೆಯನ್ನು ಎತ್ತಿಹಿಡಿಯುವ ಮಟ್ಟಿಗೆ ನಾವು ಈ ಮೇಲ್ಮನವಿ ಅನುಮತಿಸುತ್ತೇವೆ ಎಂದು ನ್ಯಾಯಾಲಯ ಹೇಳಿತು. ಕಾಂಗ್ರೆಸ್ ಪಕ್ಷದ ಕೆ.ವೈ.ನಂಜೇಗೌಡ ಶಾಸಕರಾಗಿ ಆಯ್ಕೆಯಾಗಿದ್ದನ್ನು ಸುಪ್ರೀಂಕೋರ್ಟ್ ಎತ್ತಿ ಹಿಡಿದಿದೆ.

ಏನಿದು ಪ್ರಕರಣ?

- ಮಾಲೂರು ವಿಧಾನಸಭಾ ಚುನಾವಣೆ 2023
- ಚುನಾವಣೆಯಲ್ಲಿ ಕಾಂಗ್ರೆಸ್‌ನ ಕೆ.ವೈ.ನಂಜೇಗೌಡ ಗೆಲುವು
- ನಂಜೇಗೌಡ ಗೆಲುವು ಪ್ರಶ್ನಿಸಿ ಬಿಜೆಪಿ ಅಭ್ಯರ್ಥಿ ಸುಪ್ರೀಂ ಮೊರೆ
- ಬಿಜೆಪಿಯ ಕೆ.ಎಸ್.ಮಂಜುನಾಥ್ ಗೌಡಗೆ ಸುಪ್ರೀಂನಲ್ಲೂ ಹಿನ್ನಡೆ
- ಮರುಮತ ಎಣಿಕೆಯಲ್ಲಿ ಮಂಜುನಾಥ್ ಗೌಡಗೆ 250 ಮತ ಕಡಿಮೆ
- ಶಾಸಕರಾಗಿ ಮುಂದುವರಿಯಲಿರುವ ಕೆ.ವೈ.ನಂಜೇಗೌಡ
- ಕೆ.ವೈ.ನಂಜೇಗೌಡರಿಗೆ ಬಿದ್ದ ಮತಗಳು 50,957

ಹೈಕೋರ್ಟ್ ನಿರ್ದೇಶನ ಕೂಡ ರದ್ದು

ವಿಡಿಯೊ ರೆಕಾರ್ಡಿಂಗ್‌ಗಳನ್ನು ಒದಗಿಸದಿದ್ದಕ್ಕಾಗಿ ಜಿಲ್ಲಾ ಚುನಾವಣಾ ಅಧಿಕಾರಿಗೆ ಭಾರತ ಚುನಾವಣಾ ಆಯೋಗಕ್ಕೆ ಹೈಕೋರ್ಟ್ ನೀಡಿದ ನಿರ್ದೇಶನವನ್ನು ಸಹ ನ್ಯಾಯಾಲಯ ರದ್ದುಗೊಳಿಸಿದೆ. ಎಣಿಕೆ ಪ್ರಕ್ರಿಯೆಯ ವಿಡಿಯೊ ರೆಕಾರ್ಡಿಂಗ್ ಅಗತ್ಯವು ಕಡ್ಡಾಯವೇ ಅಥವಾ ಇಲ್ಲವೇ ಎಂಬುದರ ಕುರಿತು ಯಾವುದೇ ಅಭಿಪ್ರಾಯ ವ್ಯಕ್ತಪಡಿಸುತ್ತಿಲ್ಲ ಎಂದು ನ್ಯಾಯಾಲಯವು ಸ್ಪಷ್ಟಪಡಿಸಿದೆ.

ಅಬುದಾಬಿ ಲಕ್ಕಿ ಡ್ರಾನಲ್ಲಿ ಉಡುಪಿಯ ಯುವಕನಿಗೆ ₹49 ಕೋಟಿ ಬಹುಮಾನ

ಉಡುಪಿ: ಅಬುದಾಬಿಯ ಲಕ್ಕಿ ಡ್ರಾನಲ್ಲಿ ಉಡುಪಿಯ ಯುವಕನಿಗೆ 49 ಕೋಟಿ ರು. ಬಹುಮಾನ ಸಿಕ್ಕಿದೆ. ಉಡುಪಿಯ ಕಾಪು ತಾಲೂಕು ಕಟಪಾಡಿ ಮಟ್ಟು ಮೂಲದ ಶಾಂತನು ಶೆಟ್ಟಿಗಾರ್ ಬಹುಮಾನ ವಿಜೇತರಾಗಿದ್ದಾರೆ. ಯುವಕನಿಗೆ 20 ಮಿಲಿಯನ್ ದಿರಾಮ್ ಬಹುಮಾನ ಲಭಿಸಿದೆ. ಅಬುದಾಬಿಯಲ್ಲಿ ಬಿಗ್ ಟಿಕೆಟ್ ಲಕ್ಕಿ ಡ್ರಾ ನಡೆದಿತ್ತು. ಮುಖ್ಯ ಜಾಕ್ಪಾಟ್ ಜತೆಗೆ ಹಲವು ಹೆಚ್ಚುವರಿ ಬಹುಮಾನಗಳು ಇದ್ದ ಲಕ್ಕಿ ಡ್ರಾ ಇದಾಗಿತ್ತು. ನೇರ ಪ್ರಸಾರ ಡ್ರಾದಲ್ಲಿ ಬಹುಮಾನ ಘೋಷಣೆ ಮಾಡಲಾಯಿತು. ಓಮನ್‌ನಲ್ಲಿ ಚಿಲ್ಲರೆ ವ್ಯಾಪಾರ ಕ್ಷೇತ್ರದಲ್ಲಿ ಸೇಲ್ಸ್ ವಿಭಾಗದಲ್ಲಿ ಶಂತನು ದುಡಿಯುತ್ತಿದ್ದರು. ಸ್ನೇಹಿತನ ಜತೆ ಸೇರಿ ಟಿಕೆಟ್ ಖರೀದಿಸಿದ್ದರು. ಬಹುಮಾನವನ್ನು ಸ್ನೇಹಿತನ ಜತೆ ಹಂಚಿಕೊಳ್ಳುವುದಾಗಿ ನಿರ್ಧರಿಸಿದ್ದಾರೆ.

ಮನೆ ಜಪ್ತಿ ಬೆದರಿಕೆ: ರೈತ ಆತ್ಮಹತ್ಯೆ

ಹಾಸನ: ಮನೆ ಸೀಜ್ ಮಾಡುವುದಾಗಿ ಫೈನಾನ್ಸ್ ಸಿಬ್ಬಂದಿ ಬೆದರಿಕೆ ಹಾಕಿದ್ದಕ್ಕೆ ಮನನೊಂದು ರೈತ ನೊಬ್ಬ ವಿಷ ಸೇವಿಸಿ ಆತ್ಮಹತ್ಯೆಗೆ ಶರಣಾದ ಘಟನೆ ಶ್ರವಣಬೆಳಗೊಳ

ಬಳಿಯ ಕೊತ್ತನಘಟ್ಟ ಗ್ರಾಮದಲ್ಲಿ ನಡೆದಿದೆ. ವಿಷ ಸೇವಿಸಿ ಆತ್ಮಹತ್ಯೆಗೆ ಶರಣಾದ ರೈತ ನನ್ನು ಯೋಗೇಶ್ (50) ಎಂದು ಗುರುತಿಸಲಾಗಿದೆ. ಚನ್ನರಾಯಪಟ್ಟಣದ ಫೈನಾನ್ಸ್ ಒಂದರಲ್ಲಿ 7 ಲಕ್ಷ ರು. ಸಾಲ ಪಡೆದಿದ್ದರು. ಪ್ರತಿ ತಿಂಗಳು ಸರಿಯಾಗಿ ಕಂತು ಕಟ್ಟುತ್ತಿದ್ದ ಅವರು, ವೈಯಕ್ತಿಕ ಸಮಸ್ಯೆಯಿಂದ ಕಳೆದ 2 ತಿಂಗಳ ಕಂತನ್ನು ಬಾಕಿ ಉಳಿಸಿಕೊಂಡಿದ್ದರು. ಫೆ.4ರ ರಾತ್ರಿ ಯೋಗೇಶ್ ಅವರ ಮನೆಗೆ ಬಂದಿದ್ದ ಇಬ್ಬರು ಫೈನಾನ್ಸ್ ಸಿಬ್ಬಂದಿ ಮನೆ ಜಪ್ತಿ ಮಾಡುವುದಾಗಿ ಬೆದರಿಕೆ ಹಾಕಿದ್ದರು. ಇದರಿಂದ ಮಾರ್ಯಾದೆಗೆ ಹೆದರಿ ವಿಷ ಸೇವಿಸಿ ಆತ್ಮಹತ್ಯೆ ಮಾಡಿಕೊಂಡಿದ್ದಾರೆ. ಫೈನಾನ್ಸ್ ವಿರುದ್ಧ ಕುಟುಂಬಸ್ಥರು ಹಾಗೂ ಗ್ರಾಮಸ್ಥರು ಆಕ್ರೋಶ ಹೊರಹಾಕಿದ್ದಾರೆ. ಸ್ಥಳಕ್ಕೆ ಪೊಲೀಸರು ಭೇಟಿ ನೀಡಿ ಪರಿಶೀಲನೆ ನಡೆಸಿದ್ದಾರೆ.

ಬಜೆಟ್ ಸಭೆ ಆರಂಭಿಸಿದ ಸಿಎಂ

ಸಿಎಂ ಸಿದ್ದರಾಮಯ್ಯ ಅವರು ವಿವಿಧ ಇಲಾಖೆಗಳ ಸಚಿವ ಜತೆ ಬಜೆಟ್ ಪೂರ್ವಭಾವಿ ಸಭೆ ನಡೆಸಿದರು.

ಬೆಂಗಳೂರು: ತಮ್ಮ 17ನೇ ಬಜೆಟ್ ಮಂಡನೆಗೆ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ವಿವಿಧ ಇಲಾಖೆಗಳ ಜತೆ ಪೂರ್ವಭಾವಿ ಸಭೆ ಆರಂಭಿಸಿದ್ದಾರೆ. ಬಜೆಟ್ ಮಂಡನೆಯ ದಿನಾಂಕ ನಿಗದಿಯಾಗದಿದ್ದರೂ ಮೂಲಗಳ ಪ್ರಕಾರ ಮಾ.6ಕ್ಕೆ ಮುಖ್ಯಮಂತ್ರಿಗಳು ಬಜೆಟ್ ಮಂಡಿಸಲಿದ್ದಾರೆ. ಆದ್ದರಿಂದ

ಗುರುವಾರ ಅರಣ್ಯ-ಪರಿಸರ-ಜೀವಿ ಶಾಸ್ತ್ರ, ಕಾನೂನು-ನ್ಯಾಯ-ಮಾನವ ಹಕ್ಕುಗಳು-ಸಂಸದೀಯ ವ್ಯವಹಾರಗಳು-ಶಾಸನ ರಚನೆ-ಪ್ರವಾಸೋದ್ಯಮ, ತೋಟಗಾರಿಕೆ-ಗಣಿ-ಭೂ ವಿಜ್ಞಾನ, ಕಾರ್ಮಿಕ, ಒಳಾಡಳಿತ, ಕನ್ನಡ-ಸಂಸ್ಕೃತಿ-ಹಿಂದುಳಿದ ವರ್ಗಗಳು, ಉನ್ನತ ಶಿಕ್ಷಣ ಸೇರಿದಂತೆ ಹಲವು ಇಲಾಖೆಗಳ ಸಚಿವರು ಹಾಗೂ ಅಧಿಕಾರಿಗಳೊಂದಿಗೆ ಚರ್ಚೆ ನಡೆಸಿದ್ದಾರೆ. ಇಲಾಖೆಗಳಿಂದ 2026- 27ನೇ ಸಾಲಿಗೆ ಘೋಷಿಸಬೇಕಾದ ಹೊಸ ಯೋಜನೆಗಳ ಪ್ರಸ್ತಾವನೆಗಳನ್ನು ಸ್ವೀಕರಿಸಲಾಗಿದೆ. ಇದರೊಂದಿಗೆ ಹಿಂದಿನ ಬಜೆಟ್‌ನಲ್ಲಿ ಘೋಷಿಸಲಾದ ಅನುದಾನ, ಬಿಡುಗಡೆಯಾಗಿರುವುದು, ಮತ್ತು ವೆಚ್ಚವಾಗಿರುವ ಹಣದ ಬಗ್ಗೆ ಮುಖ್ಯಮಂತ್ರಿ ಮಾಹಿತಿ ಪಡೆದುಕೊಂಡಿದ್ದಾರೆ. ಕಾಂಗ್ರೆಸ್ ಪಕ್ಷದ ಚುನಾವಣಾ ಪ್ರಣಾಳಿಕೆಯಲ್ಲಿನ ಭರವಸೆಗಳು, ಬಜೆಟ್‌ನಲ್ಲಿ ಅವುಗಳ ಘೋಷಣೆ ಮತ್ತು ಅನುಷ್ಠಾನಕ್ಕೆ ಸಂಬಂಧಪಟ್ಟಂತೆ ಚರ್ಚಿಸಲಾಗಿದೆ. ಬಜೆಟಿನಲ್ಲಿ ಈ ಮೊದಲು ಘೋಷಿಸಲಾದ ಯೋಜನೆಗಳ ಕಾರ್ಯಾನುಷ್ಠಾನದ ಬಗ್ಗೆಯೂ ಚರ್ಚೆಯಾಗಿದೆ.

ಮಧುಗಿರಿ ತಹಸೀಲ್ದಾರ್ ಕಚೇರಿಗೆ ಮುಂದೆ ಆಕ್ರೋಶ

ಅಧಿಕಾರಿಗೆ ಲಂಚ ಕೊಡಲು ಮೂಲಂಗಿ ಬೆಳೆ ತಂದ ರೈತ

ತುಮಕೂರು: ತನ್ನ ಜಮೀನಿಗೆ ರಸ್ತೆ ಮಾಡಿಕೊಡುವಂತೆ ಲೋಕಾಯುಕ್ತರೇ ಸೂಚಿಸಿದ್ದರೂ ಕೂಡ ಕ್ಯಾರೇ ಎನ್ನದ ಕಂದಾಯ ಅಧಿಕಾರಿಗಳು ಲಂಚಕ್ಕಾಗಿ ಬೇಡಿಕೆ ಇಟ್ಟು ಅಲೆದಾಡಿಸಿದ್ದಕ್ಕೆ ಆಕ್ರೋಶಗೊಂಡ ರೈತರೊಬ್ಬರು ತಾನು ಬೆಳೆದ ಮೂಲಂಗಿಯನ್ನೇ ಲಂಚವಾಗಿ ನೀಡಲು ಮುಂದಾದ ಘಟನೆ ತುಮಕೂರಿನಲ್ಲಿ ನಡೆದಿದೆ.

ತುಮಕೂರು ಜಿಲ್ಲೆ ಮಧುಗುರಿ ತಾಲೂಕಿನ ದೊಡ್ಡರಿ ಜಕ್ಕೇನಹಳ್ಳಿ ಗ್ರಾಮದ ರೈತ ಪ್ರಸನ್ನ ಕುಮಾರ್ ಎಂಬವರು ತಾಲೂಕು ಕಚೇರಿ ಮುಂದೆ ಮೈಕ್ ಹಿಡಿದು ನನಗೆ ಅಧಿಕಾರಿಗಳಿಗೆ ಲಂಚ ನೀಡಲು ಹಣವಿಲ್ಲ. ನಾನು ಬೆಳೆದ ಮೂಲಂಗಿಯನ್ನೇ ಲಂಚವಾಗಿ ನೀಡುತ್ತೇನೆ ಬನ್ನಿ ಬನ್ನಿ ಎಂದು ಘೋಷಣೆ ಕೂಗಿದ್ದಾರೆ.

ಪ್ರಸನ್ನಕುಮಾರ್ ತನಗಿರುವ ಜಮೀನಿನಲ್ಲೇ ತರಕಾರಿ, ಇತರೆ ವ್ಯವಸಾಯೋತ್ಪನ್ನ ಬೆಳೆ ಬೆಳೆದು ಜೀವನ ನಡೆಸುತ್ತಿದ್ದಾರೆ. ಆದರೆ ಜಮೀನಿಗೆ ರಸ್ತೆ ಇಲ್ಲದ ಕಾರಣ ರಸ್ತೆಗಾಗಿ 2 ವರ್ಷದ ಹಿಂದೆ ತಾಲೂಕು ಆಡಳಿತಕ್ಕೆ ಮನವಿ ನೀಡಿದ್ದಾರೆ. ಅವರ ಮನವಿಗೆ ಕಿವಿಗೊಡದ ಅಧಿಕಾರಿಗಳ ನಡೆಗೆ ಬೇಸರ ವ್ಯಕ್ತಪಡಿಸಿ ಲೋಕಾಯುಕ್ತ ನ್ಯಾಯಾಲಯಕ್ಕೆ ಮೊರೆ ಹೋಗಿದ್ದರು. ರೈತನಿಗೆ ಒಂದು ತಿಂಗಳಲ್ಲಿ ರಸ್ತೆ ನಿರ್ಮಿಸಿಕೊಡಲು ಲೋಕಾಯುಕ್ತ ಸೂಚಿಸಿತ್ತು. ಎರಡು ತಿಂಗಳಾದರೂ ರಸ್ತೆ ನಿರ್ಮಾಣಕ್ಕಾಗಿ ಸ್ಥಳ ಮಹಜರು ಹಾಗೂ ಪರಿಶೀಲನೆಗೆ ಬರಲು ಕೆಲವು ಅಧಿಕಾರಿಗಳು ಹಣಕ್ಕೆ ಬೇಡಿಕೆ ಇಟ್ಟಿದ್ದು, ಹಣವಿಲ್ಲದ ರೈತ ಪ್ರಸನ್ನಕುಮಾರ್ ಅಧಿಕಾರಿಗಳ ಈ ನಡೆಗೆ ಬೇಸರ ವ್ಯಕ್ತಪಡಿಸಿ ತಹಸೀಲ್ದಾರ್ ಬಳಿ ಮನವಿ ಮಾಡಿದ್ದರು. ಅವರು ರಸ್ತೆ ಮಾಡಿಕೊಡಲು ಸೂಚಿಸಿದ್ದರು. ಆದರೆ ಇಲ್ಲಿಯವರೆಗೂ ಕಂದಾಯ ಅಧಿಕಾರಿಗಳಾಗಲಿ, ಗ್ರಾಮ ಲೆಕ್ಕಿಗರಾಗಲಿ ಬಂದಿಲ್ಲ. ಇದರಿಂದ ಬೇಸತ್ತ ರೈತ ಪ್ರಸನ್ನಕುಮಾರ್ ತಾನು ಬೆಳೆದ ಮೂಲಂಗಿಯನ್ನೇ ಲಂಚವಾಗಿ ಕೊಡಲು ಮುಂದಾಗಿದ್ದಾರೆ.

ಅತ್ಯಾಚಾರ ಸಂತ್ರಸ್ತೆಯ ಅಪಹರಿಸಿದ ಪ್ರಕರಣ

ರೇವಣ್ಣ ಆರೋಪ ನಿಗದಿಗೆ ಅನುಮತಿಸಿದ ಹೈಕೋರ್ಟ್

ಬೆಂಗಳೂರು: ಅತ್ಯಾಚಾರಕ್ಕೆ ಒಳಗಾದ ಸಂತ್ರಸ್ತೆಯನ್ನು ಅಪಹರಿಸಿದ ಪ್ರಕರಣದಲ್ಲಿ ಜೆಡಿಎಸ್ ಶಾಸಕ ಎಚ್.ಡಿ.ರೇವಣ್ಣ ವಿರುದ್ಧ ಆರೋಪ ನಿಗದಿ ಮುಂದೂಡುವಂತೆ

ವಿಚಾರಣಾಧೀನ ನ್ಯಾಯಾಲಯಕ್ಕೆ ನಿರ್ದೇಶಿಸಿದ್ದ ಮಧ್ಯಂತರ ಆದೇಶವನ್ನು ಹೈಕೋರ್ಟ್ ಗುರುವಾರ ತೆರವುಗೊಳಿಸಿದೆ. ಇದರಿಂದ ರೇವಣ್ಣಗೆ ತೀವ್ರ ಹಿನ್ನಡೆಯಾಗಿದ್ದು, ಆರೋಪ ನಿಗದಿ ಪ್ರಕ್ರಿಯೆ ಆರಂಭವಾಗಲಿದೆ.

ಮೈಸೂರು ಜಿಲ್ಲೆಯ ಕೆ.ಆರ್. ಪೇಟೆ ಠಾಣೆಯಲ್ಲಿ ಸಂತ್ರಸ್ತೆಯ ಪುತ್ರ ನೀಡಿದ ದೂರಿನ ಅನ್ವಯ ದಾಖಲಾಗಿರುವ ಪ್ರಕರಣದ ಸಂಬಂಧ ಸಕ್ಷಮ ನ್ಯಾಯಾಲಯಕ್ಕೆ ಸಲ್ಲಿಕೆಯಾಗಿರುವ ಆರೋಪ ಪಟ್ಟಿ ವಜಾಗೊಳಿಸುವಂತೆ ಕೋರಿ ಎಚ್.ಡಿ.ರೇವಣ್ಣ ಸಲ್ಲಿಸಿದ್ದ ಅರ್ಜಿಯ ವಿಚಾರಣೆಯನ್ನು ನ್ಯಾಯಮೂರ್ತಿ ಎಸ್.ಸುನೀಲ್ ದತ್ ಯಾದವ್ ಅವರ ಏಕಸದಸ್ಯ ಪೀಠ ನಡೆಸಿತು.

ವಿಚಾರಣಾಧೀನ ನ್ಯಾಯಾಲಯದಲ್ಲಿ ಹಾಜರಾಗಬೇಕಿರುವುದರಿಂದ ಅರ್ಜಿಯ ವಿಚಾರಣೆಯನ್ನು ಮುಂದೂಡಬೇಕು ಎಂದು ಕೋರಿ ರೇವಣ್ಣ ಪರ ವಕೀಲರು ಸಲ್ಲಿಸಿದ್ದ ಮೆಮೊ ನ್ಯಾಯಾಲಯವನ್ನು ಕೆರಳಿಸಿತು. ಅಲ್ಲದೇ, 29.1.2026ರಂದು ಆರೋಪ ನಿಗದಿ ಮುಂದೂಡುವಂತೆ ವಿಚಾರಣಾಧೀನ ನ್ಯಾಯಾಲಯಕ್ಕೆ ಮಾಡಿದ್ದ ಮಧ್ಯಂತರ ಆದೇಶವನ್ನು ವಿಸ್ತರಿಸಿದ್ದ ನ್ಯಾಯಾಲಯವು ಮುಂದಿನ ವಿಚಾರಣೆ ವೇಳೆಗೆ ಅಂದರೆ 5.2.2026ರಂದು ವಾದ ಮಂಡಿಸಬೇಕು ಎಂಬ ನಿರ್ದಿಷ್ಟ ಸ್ಪಷ್ಟನೆಯನ್ನೂ ನೀಡಿತ್ತು. ಇದನ್ನು ಮೀರಿ ಅರ್ಜಿದಾರರು ಮೆಮೊ ಸಲ್ಲಿಸಿದ್ದನ್ನು ತಿರಸ್ಕರಿಸಿ, ನ್ಯಾಯಾಲಯವು ಮಧ್ಯಂತರ ಆದೇಶ ತೆರವುಗೊಳಿಸಿ, ಆದೇಶಿಸಿತು.

30.1.2025 ರಂದು ವಿಚಾರಣಾಧೀನ ನ್ಯಾಯಾಲಯವು ಆರೋಪ ನಿಗದಿ ಮಾಡಬಾರದು ಎಂದು ಮಧ್ಯಂತರ ಆದೇಶ ಮಾಡಲಾಗಿದ್ದು, ಅದು 7.2.2025ರವರೆಗೆ ಚಾಲ್ತಿಯಲ್ಲಿತ್ತು. ಅಂದು ಅರ್ಜಿಯು ವಿಚಾರಣೆಗೆ ನಿಗದಿಯಾಗಿರಲಿಲ್ಲ. ಆಗಾಗಿ, ಮಧ್ಯಂತರ ಆದೇಶವು ವಿಸ್ತರಣೆಯಾಗಿರಲಿಲ್ಲ. ಆನಂತರ ಪ್ರಕರಣವು 29.1.2026 ರಂದು ವಿಚಾರಣೆಗೆ ಪಟ್ಟಿಯಾಗಿದೆ.

ಸಿದ್ದರಾಮಯ್ಯ ಸರಕಾರದ ಭ್ರಷ್ಟಾಚಾರದ ಮುಖವಾಡ ಅಧಿವೇಶನದಲ್ಲಿ ಕಳಚಿದೆ: ಆರ್.ಅಶೋಕ್

ಕಾಂಗ್ರೆಸಿನ ಬಣ್ಣ ಬಯಲು ಮಾಡುವಲ್ಲಿ ಯಶಸ್ವಿ

ವಿಶ್ವವಾಣಿ ಸುದ್ದಿಮನೆ ಬೆಂಗಳೂರು

ಸಿದ್ದರಾಮಯ್ಯ ನೇತೃತ್ವದ ಕಾಂಗ್ರೆಸ್ ಸರಕಾರದ ಭ್ರಷ್ಟಾಚಾರದ ಮುಖವಾಡವನ್ನು ಅಧಿವೇಶನದಲ್ಲಿ ಕಳಚಿ ಹಾಕುವಲ್ಲಿ ಯಶಸ್ವಿಯಾಗಿರುವುದಾಗಿ ವಿಧಾನಸಭೆ

ಪ್ರತಿಪಕ್ಷದ ನಾಯಕ ಆರ್.ಅಶೋಕ ಹೇಳಿದ್ದಾರೆ.

ಅಧಿಕಾರಕ್ಕೆ ಬಂದ ದಿನದಿಂದ ಹಗರಣಗಳ ಸುಳಿಯಲ್ಲೇ ಸರಕಾರ ಸಿಕ್ಕಿಕೊಂಡಿದೆ. ಅಬಕಾರಿ ಇಲಾಖೆಯಲ್ಲಿ ನಡೆದಿರುವ ಆರು ಸಾವಿರ ಕೋಟಿಗೂ ಅಧಿಕ ಮೊತ್ತದ ಭ್ರಷ್ಟಾಚಾರ ಲೂಟಿ ಹಗರಣಗಳ ಪಟ್ಟಿಗೆ ಹೊಸ ಸೇರ್ಪಡೆ ಎಂದು ಬಿಡುಗಡೆ ಮಾಡಿರುವ ಪತ್ರಿಕಾ ಹೇಳಿಕೆಯಲ್ಲಿ ಗುರುವಾರ ಆರೋಪಿಸಿದ್ದಾರೆ.

ಹೇಳಿಕೊಳ್ಳಲು ಯಾವುದೇ ಅಭಿವೃದ್ಧಿ ಕಾರ್ಯಕ್ರಮ ಮಾಡಿಲ್ಲ. ಜತೆಗೆ ಖಜಾನೆ ಖಾಲಿಯಾಗಿದೆ. ತಮ್ಮ ಪಾಲಿನ ಶೇಕಡಾ 40 ಹಣ ಭರಿಸುವ ಸ್ಥಿತಿಯಲ್ಲಿ ಇಲ್ಲ. ಹೀಗಾಗಿ ಒಲ್ಲದ ಗಂಡನಿಗೆ ಮೊಸರಲ್ಲಿ ಕಲ್ಲು ಎಂಬಂತೆ ಕೇಂದ್ರ ಸರಕಾರ ಜಾರಿಗೊಳಿಸಿರುವ ವಿಬಿ ಜಿ -ರಾಮ್ ಜಿ ಕಾಯ್ದೆ ವಿರುದ್ಧ ತಕರಾರು ತೆಗೆದಿದ್ದಾರೆ ಎಂದು ಟೀಕಿಸಿದರು. ಮನರೇಗಾ ಯೋಜನೆಯನ್ನು ತೋಚಿದಂತೆ ಬಳಕೆ ಮಾಡಿ ಕೋಟಿಗಟ್ಟಲೇ ಹಣ ಲೂಟಿ ಮಾಡುತ್ತಿದ್ದರು. ಹೊಸ ಕಾಯಿದೆ ಅದಕ್ಕೆಲ್ಲಾ ತೆರೆ ಎಳೆದಿದೆ. ಈಗ ಆಧುನಿಕತೆ ಸ್ಪರ್ಶದ ಜತೆ ಕಟ್ಟುನಿಟ್ಟಿನ ಹೊಸ ಕಾನೂನು ರೂಪಿಸಿದೆ. ಮಹಾತ್ಮಾ ಗಾಂಧಿ ಅವರ ಆಶಯದಂತೆ ಗ್ರಾಮ ಸ್ವರಾಜ್ಯದ ಪರಿಕಲ್ಪನೆಗಳೊಂದಿಗೆ ಯೋಜನೆಯನ್ನು ವಿನ್ಯಾಸಗೊಳಿಸಲಾಗಿದೆ. ಆದರೆ ತಮ್ಮ ಲೂಟಿಗೆ ಅವಕಾಶ ತಪ್ಪಿ ಹೋಯಿತು ಮತ್ತು ಶೇಕಡಾ 40 ರಷ್ಟು ಹಣ ಭರಿಸಬೇಕು ಎಂಬ ಸಂಕಟದಿಂದ ಇಲ್ಲಸಲ್ಲದ ಆರೋಪ ಮಾಡುತ್ತಿದ್ದಾರೆ ಎಂದು ದೂರಿದರು.

ಅಬಕಾರಿ ಇಲಾಖೆಯಲ್ಲಿ ನಡೆದಿರುವ ಆರು ಸಾವಿರ ಕೋಟಿಗೂ ಅಧಿಕ ಮೊತ್ತದ ಹಗರಣವನ್ನು ಅಧಿವೇಶನದಲ್ಲಿ ಎಳೆ ಎಳೆಯಾಗಿ ಬಿಡಿಸಿಡಲಾಗಿದೆ. ಸಚಿವ ತಿಮ್ಮಾಪುರ ರಾಜೀನಾಮೆ ಮತ್ತು ಹಾಲಿ ನ್ಯಾಯಾಧೀಶರಿಂದ ತನಿಖೆಗೆ ಆಗ್ರಹಿಸಿದ್ದೆವು. ಆದರೆ ಹೈಕಮಾಂಡ್ ಹಾಗೂ ಸಿಎಂ ಆದಿಯಾಗಿ ಎಲ್ಲರೂ ಸೇರಿಕೊಂಡು ಲೂಟಿ ಮಾಡಿರುವು ದರಿಂದ ಕಳಂಕಿತ ಸಚಿವರ ಬೆಂಬಲಕ್ಕೆ ಇಡೀ ಸಚಿವ ಸಂಪುಟವೇ ನಿಂತುಕೊಂಡಿತ್ತು. ಇದು ರಾಜ್ಯದ ಇತಿಹಾಸದಲ್ಲಿ ಹಿಂದೆ ಎಂದೆಂದೂ ನಡೆದಿರಲಿಲ್ಲ. ಇಲ್ಲಿ ಲೂಟಿ ಮಾಡಿದ ಹಣವನ್ನು ನೆರೆ ರಾಜ್ಯಗಳ ಚುನಾವಣೆಗಳಿಗೆ ಬಳಕೆ ಮಾಡುತ್ತಿರುವುದು ಸ್ಪಷ್ಟ ಎಂದರು.

ಅಸಂಸದೀಯ ನಡವಳಿಕೆ : ನಮ್ಮ ಪಕ್ಷದ ಶಾಸಕರು ಪ್ರತಿಭಟನೆ ನಡೆಸುತ್ತಿದ್ದಾಗ ಕಾಂಗ್ರೆಸ್ ಶಾಸಕ ಶಿವಲಿಂಗೇಗೌಡ ಅವರು, ಅಸಂಸದೀಯ ರೀತಿ ವರ್ತಿಸಿದ್ದಾರೆ. ಸದನದಲ್ಲೇ ಅದನ್ನು ಖಂಡಿಸಿದ್ದೇವೆ. ಸರಿದಾರಿಯಲ್ಲಿ ಕಲಾಪ ನಡೆಸಬೇಕಿದ್ದ ಸ್ಪೀಕರ್ ಅವರು, ಕಾಂಗ್ರೆಸ್ ಪಕ್ಷದ ಪರ ಕರ್ತವ್ಯ ನಿರ್ವಹಿಸಿದ್ದಾರೆ. ಶಿವಲಿಂಗೇಗೌಡ ವೈಯಕ್ತಿಕ ಆರೋಪ ಮಾಡುವಾಗ ನಗುತ್ತಾ ಕುಳಿತ್ತಿದ್ದರು ಎಂದು ಆರೋಪಿಸಿದರು.

ಜನತಾ ನ್ಯಾಯಾಲಯಕ್ಕೆ ಅಬಕಾರಿ ಹಗರಣ

ಅಬಕಾರಿ ಇಲಾಖೆಯಲ್ಲಿ ನಡೆದ ಭ್ರಷ್ಟಾಚಾರ ಆರೋಪಕ್ಕೆ ಒಂದು ಆಧಾರ ನೀಡಿದರೂ ರಾಜೀನಾಮೆ ನೀಡುವುದಾಗಿ ಸಚಿವ ತಿಮ್ಮಾಪುರ ಹೇಳಿದ್ದರು. ಒಂದಲ್ಲಾ, ಎರಡಲ್ಲಾ ಐದಕ್ಕೂ ಹೆಚ್ಚು ಸಾಕ್ಷ್ಯ ನೀಡಲಾಯಿತು. ಲಂಚ ಸ್ವೀಕಾರಕ್ಕೆ ಸಂಬಂಧಿಸಿದಂತೆ ಹಿರಿಯ ಅಧಿಕಾರಿಗಳು ಭಾಗಿಯಾಗಿರುವ ಮೂರು ಆಡಿಯೋ ಸಂಭಾಷಣೆ, ಎರಡು ಲೋಕಾಯುಕ್ತ ದೂರು, ರಾಜ್ಯಪಾಲರಿಗೆ ನೀಡಿದ್ದ ಒಂದು ದೂರು, ಲೋಕಾಯುಕ್ತರಿಗೆ ಸಿಕ್ಕಿಬಿದ್ದಿರುವ ನಿಂಗಪ್ಪ ಎಂಬಾತ ನೀಡಿದ್ದ ಸ್ವ ಇಚ್ಛಾ ಹೇಳಿಕೆಯಂತಹ ಗಂಭೀರ ಸಾಕ್ಷ್ಯ ನೀಡಿ ಮನವರಿಕೆ ಮಾಡಿಕೊಡಲಾಯಿತು. ಅಧಿವೇಶನದಲ್ಲಿ ಆರಂಭಿಸಿರುವ ಈ ಹೋರಾಟ ನಿಲ್ಲುವುದಿಲ್ಲ. ಪಕ್ಷದ ವತಿಯಿಂದ ರಾಜ್ಯವ್ಯಾಪಿ ಹೋರಾಟಕ್ಕೆ ಈಗಾಗಲೇ ಚರ್ಚೆ ನಡೆಸಲಾಗಿದೆ. ಅಂತಿಮವಾಗಿ ಜನತಾ ನ್ಯಾಯಾಲಯದ ಮುಂದೆ ಹಗರಣ ಕೊಂಡೊಯ್ಯಲಾಗುವುದು. ಕಾನೂನು ಹೋರಾಟ ನಡೆಸುವ ಬಗ್ಗೆಯೂ ಆಲೋಚನೆ ನಡೆಸಲಾಗಿದೆ ಎಂದು ವಿಪಕ್ಷ ನಾಯಕ ಆರ್.ಅಶೋಕ್ ಹೇಳಿದರು.

ಮನೆಯಲ್ಲಿನ ಖಾಸಗಿ ಕ್ಷಣದ ವಿಡಿಯೊ ರೆಕಾರ್ಡ್ ಮಾಡಿ 50 ಲಕ್ಷ ಹಣಕ್ಕೆ ಬೇಡಿಕೆ

ಮಹಿಳಾ ಅಧಿಕಾರಿಗೆ ಬ್ಲ್ಯಾಕ್‌ಮೇಲ್

ಬೆಳಗಾವಿ: ಮಹಿಳಾ ಅಧಿಕಾರಿಯೊಬ್ಬರ ಮನೆಯಲ್ಲಿ ಗುಪ್ತ ಕ್ಯಾಮೆರಾ ಅಳವಡಿಸಿ ಖಾಸಗಿ ಕ್ಷಣದ ವಿಡಿಯೊ ಸೆರೆಹಿಡಿದು ಪತ್ರಕರ್ತರ ಸೋಗಿನಲ್ಲಿ 50 ಲಕ್ಷ ರು.ಹಣಕ್ಕೆ ಬೇಡಿಕೆ ಇಟ್ಟು, ಹಣ ಕೊಡದಿದ್ದರೆ ಯೂಟ್ಯೂಬ್ ಸುದ್ದಿ ವಾಹಿನಿಯಲ್ಲಿ ಪ್ರಸಾರ ಮಾಡುತ್ತೇವೆ ಎಂದು ಬೆದರಿಕೆ ಹಾಕಿದ ಮೂವರನ್ನು ಬೆಳಗಾವಿ ನಗರ ಪೊಲೀಸರು ಬಂಧಿಸಿದ್ದಾರೆ.

ಗೋಕಾಕ್‌ನ ಜಲಾಲ್ ಗಲ್ಲಿಯ ಸಮೀರ್ ನಿಸಾರ್ ಅಹಮ್ಮದ್ ಶೇಖ್ (32), ಗೋಕಾಕ್ ತಾಲೂಕಿನ ಯೋಗಿಕೊಳ್ಳದ ಅಬ್ದುಲ್ ರಶೀದ್ ನಜೀರ್ ಅಹಮ್ಮದ್ ಮಕಾಂದಾರ್ (51) ಮತ್ತು ಗೋಕಾಕ್ ತಾಲೂಕಿನ ಘಟಪ್ರಭಾದ ಮೊಹಮ್ಮದ್ ದಿಲಾವರ್ ಬಾಳೇಕುಂದ್ರಿ (43) ಬಂಧಿತರು.

ಈ ಮೂವರು ಬೆಳಗಾವಿಯ ಮಹಿಳಾ ಅಧಿಕಾರಿಯೊಬ್ಬರ ಮನೆಗೆ ಯಾರಿಗೂ ಗೊತ್ತಾಗದಂತೆ ನುಗ್ಗಿ ಗುಪ್ತವಾಗಿ ಕ್ಯಾಮೆರಾ ಅಳವಡಿಸಿ ಮಹಿಳಾ ಅಧಿಕಾರಿಯ ಖಾಸಗಿ ಕ್ಷಣಗಳ ವಿಡಿಯೊ ಸೆರೆಹಿಡಿದಿಟ್ಟುಕೊಂಡಿದ್ದಾರೆ. ನಂತರ 1 ಕೋಟಿ ರು. ಹಣಕ್ಕೆ ಬೇಡಿಕೆ ಇಟ್ಟಿದ್ದು ಕೊಡದಿದ್ದರೆ ಸುದ್ದಿ ವಾಹಿನಿಗಳಲ್ಲಿ ಪ್ರಸಾರ ಮಾಡುವುದಾಗಿ ಬೆದರಿಕೆ ಹಾಕಿದ್ದಲ್ಲದೆ 50 ಲಕ್ಷ ರು. ಹಣ ನೀಡುವಂತೆ ಕಿರುಕುಳ ನೀಡಿದ್ದಾರೆ.

SAMEER NISARAHMAD SHEKH



MOHAMMEDDILAWAR NAJIRAHMAD BALEKUNDRI

ಪತ್ರಕರ್ತರ ಸೋಗಿನಲ್ಲಿ ಕೃತ್ಯ

ಮಹಿಳಾ ಅಧಿಕಾರಿಗೆ ಬ್ಲ್ಯಾಕ್ ಮೇಲ್ ಮಾಡಿದ್ದ ಆರೋಪದಲ್ಲಿ ಬಂಧಿಸಲಾಗಿರುವ ಮೂವರು ಆರೋಪಿಗಳು ಪತ್ರಕರ್ತರ ಸೋಗಿನಲ್ಲಿ ಈ ರೀತಿಯ ಕೃತ್ಯ ಎಸಗಿದ್ದರು ಎನ್ನಲಾಗಿದೆ. ಮಹಿಳೆಯ ಮನೆ ಕೆಲಸದವಳ ಸಹಾಯ ಪಡೆದು ಮಹಿಳಾ ಅಧಿಕಾರಿ ಮನೆಯ ಇತರ ಭಾಗದಲ್ಲಿ ಹಿಡನ್ ಕ್ಯಾಮೆರಾ ಅಳವಡಿಕೆ ಮಾಡಿದ್ದಾರೆ. ಅವರ ಖಾಸಗಿ ಕ್ಷಣಗಳನ್ನು ಸೆರೆ ಹಿಡಿದು ಹಣಕ್ಕೆ ಬೇಡಿಕೆ ಇಟ್ಟಿದ್ದಾರೆ. ಮಹಿಳಾ ಅಧಿಕಾರಿ ಪ್ರಕರಣ ದಾಖಲಿಸಲು ಮುಂದಾಗುತ್ತಿದ್ದಂತೆ ಆರೋಪಿಗಳು ಒತ್ತಡ ಹೇರುವ ಪ್ರಯತ್ನ ಮಾಡಿದ್ದಾರೆ. ಆದರೆ ಮಾಳಮಾರುತಿ ಠಾಣೆ ಪೊಲೀಸರ ಕಾರ್ಯಾಚರಣೆ ನಡೆಸಿ ಆರೋಪಿಗಳ ಹೆಡೆಮುರಿ ಕಟ್ಟಿದ್ದಾರೆ.

ಆರೋಪಿಗಳು ಆರು ಹಿಡನ್ ಕ್ಯಾಮೆರಾಗಳನ್ನು ಆನ್‌ಲೈನ್‌ನಲ್ಲಿ ಖರೀದಿಸಿ ಮನೆಯ ಲೈಟ್ ಬಲ್ಬ್ ಹೋಲ್ಡರ್‌ನಲ್ಲಿ ಕ್ಯಾಮೆರಾ ಅಳವಡಿಸಿದ್ದರು. ಇದನ್ನು ನಮ್ಮ ಪೊಲೀಸರು ಕಂಡುಹಿಡಿದಿದ್ದಾರೆ. ಸಾರ್ವಜನಿಕ ಸ್ಥಳಗಳಿಗೆ ಹೋದಾಗ ಈ ಬಗ್ಗೆ ಎಚ್ಚರವಹಿಸಬೇಕು. ಈ ರೀತಿ ಬ್ಲ್ಯಾಕ್ ಮೇಲ್ ಮಾಡಿದರೆ ತಕ್ಷಣ ಪೊಲೀಸರನ್ನು ಸಂಪರ್ಕಿಸಿ.

-ಭೂಷಣ್ ಬೋರಸೆ, ನಗರ ಪೊಲೀಸ್ ಆಯುಕ್ತ

ವಿಶ್ವವಾಣಿ

ಸಂಪಾದಕೀಯ

ಉಗ್ರರಿಗೆ ಇನ್ನು ಉಳಿಗಾಲವಿಲ್ಲ

ಪ್ರಸಕ್ತ ವರ್ಷದ ಮಾರ್ಚ್ ಅಂತ್ಯದ ಒಳಗೆ ದೇಶದೊಳಗಿನ ನಕ್ಸಲ್‌ವಾದಕ್ಕೆ ಮತ್ತು ನಕ್ಸಲ್‌ವಾದಿಗಳಿಗೆ ಒಂದು ಗತಿ ಕಾಣಿಸಲು ಸಂಕಲ್ಪಿಸಿರುವ ಕೇಂದ್ರ ಸರಕಾರ, ಉಗ್ರರ ನಿಗ್ರಹದ ವಿಷಯದಲ್ಲೂ ಈ ನಿಲುವನ್ನು ತಳೆದಿದೆ ಎಂಬುದನ್ನು ಬಿಡಿಸಿ ಹೇಳಬೇಕಿಲ್ಲ. ಕಾಶ್ಮೀರದ ಪಹಲ್ಗಾಮ್‌ನಲ್ಲಿ 'ಪಾಕಿಸ್ತಾನ-ಪ್ರಚೋದಿತ' ಉಗ್ರರು ನಡೆಸಿದ ಮಾರಣಹೋಮದ ನಂತರ ಹಾಗೂ ಅದಕ್ಕೆ ಪ್ರತಿಯಾಗಿ ಭಾರತವು ಕೈಗೊಂಡ 'ಆಪರೇಷನ್ ಸಿಂದೂರ' ಕಾರ್ಯಾಚರಣೆಯೆಡೆಗೆ ಶತ್ರುಗಳಿಂದ ಹೊಮ್ಮಿದ ಕೊಂಕುನುಡಿಯನ್ನು ಕೇಳಿಸಿಕೊಂಡ ತರುವಾಯ, ಸದರಿ ಉಗ್ರನಿಗ್ರಹ ಕಾರ್ಯಕ್ಕೆ ಮತ್ತಷ್ಟು ವೇಗದಕ್ಕಿದೆ. ಕೆಲವೇ ದಿನಗಳ ಹಿಂದೆ ಅತ್ಯುನ್ನತ ಪರ್ವತ ಪ್ರದೇಶದಲ್ಲಿ ಠಿಕಾಣಿ ಹೂಡಿದ್ದ ಉಗ್ರರ ನೆಲೆಯನ್ನು ಧ್ವಂಸ ಮಾಡಿದ ನಂತರ, ಮೊನ್ನೆ ಮತ್ತದೇ ಜಮ್ಮು-ಕಾಶ್ಮೀರದ ಉದಂಪುರ ಜಿಲ್ಲೆಯ ಅರಣ್ಯ ಪ್ರದೇಶದ ಗುಹೆಯೊಂದರಲ್ಲಿ ಬೀಡುಬಿಟ್ಟಿದ್ದ 'ಜೈಶ್-ಎ-ಮೊಹಮ್ಮದ್' ಉಗ್ರ ಸಂಘಟನೆಯ ಇಬ್ಬರು ಭಯೋತ್ಪಾದಕರನ್ನು ಭಾರತೀಯ ಸೇನಾಪಡೆಯು ಹೆಕ್ಕಿ ಹೊಡೆದುರುಳಿಸಿದೆ. ಇದರ ಹಿಂದಿರುವ ಸಂದೇಶವನ್ನು 'ಮಗ್ಗುಲುಮುಳ್ಳು' ಪಾಕಿಸ್ತಾನ ಇನ್ನಾದರೂ ಅರಿತು ಬುದ್ಧಿ ಕಲಿತರೆ ಒಳಿತು. ಜಗತ್ತಿಗೆ ಈಗ ಬೇಕಿರುವುದು ಶಾಂತಿಮಂತ್ರಜಪವೇ ಹೊರತು, ಬುಲೆಟ್ಟು-ಬಾಂಬುಗಳ ಹೇಷಾರವವಲ್ಲ. 'ವಸುಧೈವ ಕುಟುಂಬಕಂ' ಧ್ಯೇಯಕ್ಕೆ ಅಂಟಿಕೊಂಡಿರುವ ಭಾರತ ಈ ಆಶಯವನ್ನು ಜಗತ್ತಿನೆದುರು ಅನುಗಾಲವೂ ಪ್ರತಿಪಾದಿಸಿಕೊಂಡೇ ಬಂದಿದೆ; ಆದರೆ 'ಶಾಸ್ತ್ರ'ದ ಇಂಥ ಆಶಯಗಳಿಗೆ ಕೆಲವರು ಬೆಲೆಕೊಡದಿದ್ದಾಗ 'ಶಸ್ತ್ರ'ವನ್ನು ಕೈಗೆತ್ತಿಕೊಳ್ಳಲೇಬೇಕಾಗುತ್ತದೆ. ಭಾರತ ಈಗ ಮಾಡುತ್ತಿರುವುದು ಅದನ್ನೇ. ಆದರೆ ಪಾಠ ಕಲಿಯಬೇಕಾದವರು ಮಾತ್ರ ಮತ್ತದೇ ಸಂಚುಗಳಲ್ಲಿ ವ್ಯಸ್ತರಾಗಿದ್ದಾರೆ. ಇವರಿಗೆ ಬುದ್ಧಿ ಹೇಳೋರ್‍ಯಾರು?!

ಸೊಂಪಾದಕೀಯ

ಇದು ಪೂಜಾರಿ ಮಹಾತ್ಮೆ

ಇದು ಸುಮಾರು ಒಂದು ವರ್ಷ ಹಿಂದಿನ ಕಥೆ. ರಾಮಸ್ವಾಮಿ ಅಲಿಯಾಸ್ ಪದ್ಮನಾಭ ಅನ್ನೋ ಪ್ರೊಫೆಷನಲ್ ಕಳ್ಳನೊಬ್ಬ ಕೊನೆಗೂ ಪೊಲೀಸರ ಅತಿಥಿಯಾದ ಕಥೆಯಿದು. ಈತ ಬೆಂಗಳೂರಿನ ಚಿಕ್ಕಲಸಂದ್ರದಲ್ಲಿ ನೆಲೆಸಿದ್ದವ. ಸುತ್ತಮುತ್ತ ಸಾಕಷ್ಟು ಬಾರಿ ಕಳ್ಳತನ ಮಾಡಿ ಬಚಾವ್ ಆಗಿದ್ದ. ಈತ ಪ್ರತಿ ಬಾರಿ ಕದ್ದಮಾಲಿನ ಸಮೇತ ಸ್ವಂತ ಊರಿಗೆ ಹೋಗಿ ಅಲ್ಲಿನ ದೇವಸ್ಥಾನದಲ್ಲಿ ದೇವರ ಮುಂದೆ ಇಟ್ಟು ಪೂಜೆ ಮಾಡಿ, ಈತ ತಪ್ಪೊಪ್ಪಿಗೆ ಮಾಡಿಕೊಳ್ಳುತ್ತಿದ್ದನಂತೆ. ನಂತರ ಕದ್ದ ಹಣವನ್ನು ಇಟ್ಟುಕೊಂಡು, ಬಂಗಾರವನ್ನು ಕರಗಿಸಿ ಮಾರಾಟ ಮಾಡುತ್ತಿದ್ದನಂತೆ. ಆದರೆ, ಕದ್ದ ಬಂಗಾರ ಕರಗಿಸಿ ಮಾರುತ್ತಿದ್ದ, 1995ರಲ್ಲಿ ಕಳ್ಳತನವನ್ನು ಪ್ರೊಫೆಷನ್ ಮಾಡಿಕೊಂಡ ಈತ ಮೊದಲು ಅದೇ ದೇವಾಲಯದಲ್ಲಿ ಪೂಜಾರಿಯಾಗಿದ್ದ. ಈತ ನಂಬಿದ್ದ ದೇವರು ಸಾಕಷ್ಟು ದಿನ ಇವನ ಕೈಬಿಟ್ಟಿರಲಿಲ್ಲ. ಹಾಗಾಗಿ ಇವನ ಕೈಗೆ ಕೋಳ ಬಿದ್ದಿರಲಿಲ್ಲ. ಬೆಂಗಳೂರಿನಲ್ಲಿ ಅಲ್ಲದೆ ತಮಿಳುನಾಡಿನಲ್ಲೂ ಕಳ್ಳತನ ಮಾಡುತ್ತಿದ್ದ ಈತನ ಮೇಲೆ 25 ಕೇಸುಗಳಿದ್ದರೂ, ಪೊಲೀಸರ ಕೈಗೆ ಸಿಕ್ಕದೆ ಕೈಚಳಕ ಮುಂದುವರಿಸಿದ್ದ. ಆದರೆ ಬಹಳ ದಿನಗಳ ನಂತರ ಬೆಂಗಳೂರಿಗೆ ಬಂದಿದ್ದ ಈತ ಮತ್ತೆ ತನ್ನ ಆಟವಾಡಲು ಹೋಗಿ ಪೊಲೀಸರ ಅತಿಥಿಯಾದ. ಪಾಪ, 25 ವರ್ಷಗಳಿಂದ ಇವನನ್ನು ಕಾಪಾಡಿದ ದೇವರಿಗೂ ಇವನ ಸಹವಾಸ ಸಾಕಾಗಿದೆ ಅನ್ನಿಸಿರಬೇಕು. ಈತ ಸಿಕ್ಕಿಬಿದ್ದಿದ್ದು, ಅಮರನಾಥ ಯಾತ್ರೆಗೆ ಹೋದವರ ಮನೆಗೆ ಕನ್ನ ಹಾಕಿದಾಗ. ಇದನ್ನೆಲ್ಲಾ ಕೇಳಿದ ಮೇಲಾದ್ರೂ, ದೇವರಿದ್ದಾನೆ ಅಂತ ಖಂಡಿತವಾಗಿ ನಂಬಬಹುದು ಬಿಡಿ.

ಸಂಪಾದಕರ ಸದ್ಯಶೋಧನೆ

ಯಾರು ಈ ಸದಾನಂದನ್ ಮಾಸ್ಟರ್?

ಪ್ರಧಾನಿ ನರೇಂದ್ರ ಮೋದಿ ಅವರು ನಿನ್ನೆ ರಾಜ್ಯಸಭೆಯಲ್ಲಿ ರಾಷ್ಟ್ರಪತಿಯವರ ಭಾಷಣಕ್ಕೆ ವಂದನೆ ಸಲ್ಲಿಸುತ್ತಾ ಮಾತಾಡುವಾಗ, ಸದನದಲ್ಲಿದ್ದ ಸಿ.ಸದಾನಂದನ್ ಮಾಸ್ಟರ್ ಬಗ್ಗೆ ಪ್ರಸ್ತಾಪಿಸಿದಾಗ, ಇಡೀ ಸದನ ಅವರೆಡೆಗೆ ಕುತೂಹಲದಿಂದ ನೋಡಿತು. ಸದಸ್ಯರೊಬ್ಬರ ಬಗ್ಗೆ ಪ್ರಧಾನಿಯವರು ಪ್ರಸ್ತಾಪಿಸಿದ್ದು ವಿಶೇಷವಾಗಿತ್ತು. ಹಾಗಾದರೆ, ಸಿ.ಸದಾನಂದನ್ ಮಾಸ್ಟರ್ ಯಾರು? ಅವರು ಕೇರಳದ ಕಣ್ಣೂರು ಜಿಲ್ಲೆಯ ಮಟ್ಟನ್ನೂರು ಮೂಲದವರು. ವೃತ್ತಿಯಲ್ಲಿ ಅವರು ಒಬ್ಬ ಶಾಲಾ ಶಿಕ್ಷಕರು. ಸಮಾಜದ ಬಗ್ಗೆ ಅಪಾರ ಕಾಳಜಿ ಹೊಂದಿದ್ದ ಅವರು ಚಿಕ್ಕಂದಿನಿಂದಲೇ ರಾಷ್ಟ್ರೀಯ ವಿಚಾರಧಾರೆಗಳಿಂದ ಪ್ರೇರಿತರಾಗಿ ರಾಷ್ಟ್ರೀಯ ಸ್ವಯಂಸೇವಕ ಸಂಘದೊಂದಿಗೆ (RSS) ಗುರುತಿಸಿಕೊಂಡವರು. ಕಣ್ಣೂರಿನಂಥ ಕಮ್ಯುನಿಸ್ಟ್ ಪ್ರಾಬಲ್ಯವಿರುವ ಮತ್ತು ರಾಜಕೀಯವಾಗಿ ಸೂಕ್ಷ್ಮವಾಗಿರುವ ಪ್ರದೇಶದಲ್ಲಿ ಆರೆಸ್ಸೆಸ್ ಸಂಘಟನೆಯನ್ನು ಬಲಪಡಿಸುವಲ್ಲಿ ಅವರು ಪ್ರಮುಖ ಪಾತ್ರ ವಹಿಸಿದರು. ಕೇರಳದ ರಾಷ್ಟ್ರೀಯ ಶಿಕ್ಷಕರ ಸಂಘದ ಉಪಾಧ್ಯಕ್ಷರಾಗಿರುವ ಸದಾನಂದನ್ ಮಾಸ್ಟರ್, ಶಿಕ್ಷಕರ ಅಭ್ಯುದಯಕ್ಕಾಗಿ ಅಹರ್ನಿಶಿ ದುಡಿದವರು. 'ದೇಶೀಯ ಅಧ್ಯಾಪಕ ವಾರ್ತಾ' ಪತ್ರಿಕೆಯ ಸಂಪಾದಕರೂ ಅವರೇ. ಸದಾನಂದನ್ ಮಾಸ್ಟರ್ ಹೆಸರನ್ನು ಕೇಳಿದಾಗ ಕೇರಳದ ಜನರಿಗೆ ಮೊದಲು ನೆನಪಾಗುವುದು 32 ವರ್ಷಗಳ ಹಿಂದೆ (1994ರ ಜನವರಿ 25) ನಡೆದ ಆ ಅಮಾನುಷ ಘಟನೆ. ಅಂದು ಸಂಜೆ ಅವರು ಕೆಲಸ ಮುಗಿಸಿ ಮನೆಗೆ ಹಿಂದಿರುಗುತ್ತಿದ್ದಾಗ, ಕಮ್ಯುನಿಸ್ಟ್ ಪಕ್ಷದ (ಸಿಪಿಎಂ) ಕಾರ್ಯಕರ್ತರೆನ್ನಲಾದ ಗುಂಪೊಂದು ಅವರ ಮೇಲೆ ಭೀಕರ ದಾಳಿ ನಡೆಸಿತು. ಆ ದಾಳಿ ಕೇವಲ ಕೊಲ್ಲುವ ಉದ್ದೇಶವನ್ನಷ್ಟೇ ಹೊಂದಿರಲಿಲ್ಲ, ಬದಲಿಗೆ ಅವರನ್ನು ಜೀವಚ್ಛವವನ್ನಾಗಿ ಮಾಡುವ ಕ್ರೂರ ಉದ್ದೇಶವನ್ನು ಹೊಂದಿತ್ತು. ದುಷ್ಕರ್ಮಿಗಳು ಸದಾನಂದನ್ ಮಾಸ್ಟರ್ ಅವರ ಎರಡೂ ಕಾಲುಗಳನ್ನು ಮೊಣಕಾಲಿಗಿಂತ ಕೆಳಗೆ ಜಜ್ಜಿ ಹಾಕಿದ್ದರು. ಇಡೀ ಕೇರಳ ರಾಜ್ಯವನ್ನು ಬೆಚ್ಚಿಬೀಳಿಸಿದ ಈ ಘಟನೆಯು ಕಣ್ಣೂರಿನ ರಾಜಕೀಯ ಹಿಂಸಾಚಾರದ ಅತಿ ಕ್ರೂರ ಮುಖಗಳಲ್ಲಿ ಒಂದಾಗಿ ಇಂದಿಗೂ ಇತಿಹಾಸದಲ್ಲಿ ಉಳಿದಿದೆ. ತಮ್ಮ ಎರಡೂ ಕಾಲುಗಳನ್ನು ಕಳೆದುಕೊಂಡರೂ, ಸಾವಿನ ಅಂಚಿನಿಂದ ಮರಳಿದ ಸದಾನಂದನ್ ಅವರು ಎಂದೂ ಧೃತಿಗೆಡಲಿಲ್ಲ. ಹಾಗೆ ತಮ್ಮ ಸಿದ್ಧಾಂತದ ಮೇಲಿನ ನಂಬಿಕೆಯನ್ನು ಅವರು ಕೈಬಿಡಲಿಲ್ಲ. ಕಾಲುಗಳನ್ನು ಕಳೆದುಕೊಂಡ ನಂತರದ ಜೀವನ ಯಾರಿಗಾದರೂ ನರಕಸದೃಶವಾಗುವುದು ಸಹಜ. ಆದರೆ ಸದಾನಂದನ್ ಮಾಸ್ಟರ್ ಕೃತಕ ಕಾಲುಗಳನ್ನು ಅಳವಡಿಸಿಕೊಂಡರು. ಏಳುತ್ತಾ, ಬೀಳುತ್ತಾ ನಡೆಯುವ ಪುಟ್ಟ ಮಗುವಿನಂತೆ ನಡೆಯುವುದನ್ನು ಅಭ್ಯಾಸ ಮಾಡಲಾರಂಭಿಸಿದರು. ಅವರ ಜಾಗದಲ್ಲಿ ಬೇರೆ ಯಾರೇ ಇದ್ದಿದ್ದರೂ, ಭರವಸೆ ಕಳೆದುಕೊಂಡು, ಮನೆಯಲ್ಲಿ ಅಸಹಾಯಕರಾಗಿ ಬಿದ್ದಿರುತ್ತಿದ್ದರು. ಆದರೆ ಅವರು ಯಾರ ಸಹಾಯವಿಲ್ಲದೇ ನಡೆಯುವುದನ್ನು ಕಲಿತರು. ವೀಲ್ ಚೇರ್ ಅಥವಾ ಇತರರ ಸಹಾಯಕ್ಕೆ ಕಾಯದೇ ಮತ್ತೆ ಸಕ್ರಿಯರಾದರು. ಅಷ್ಟೇ ಅಲ್ಲ, ದಾಳಿಯ ನಂತರ ಅವರು ತಮ್ಮ ಶಿಕ್ಷಕ ವೃತ್ತಿಯನ್ನು ಮುಂದುವರಿಸಿದರು. ತಮ್ಮ ವಿದ್ಯಾರ್ಥಿಗಳಿಗೆ ಜ್ಞಾನದ ಜತೆಗೆ ಧೈರ್ಯದ ಪಾಠವನ್ನೂ ಕಲಿಸಿದರು. ಅವರ ಮೇಲೆ ನಡೆದ ಹಲ್ಲೆ ಅವರನ್ನು ದುರ್ಬಲಗೊಳಿಸುವ ಬದಲು ಇನ್ನಷ್ಟು ಗಟ್ಟಿಯಾಗಿಸಿತು. ಅವರು ಸಂಘ ಪರಿವಾರದ ವಿವಿಧ ಜವಾಬ್ದಾರಿಗಳನ್ನು ನಿರ್ವಹಿಸಲಾರಂಭಿಸಿದರು. ಸದಾನಂದನ್ ಮಾಸ್ಟರ್ ಅವರು ಸಂಘಟನೆಯಲ್ಲಿ ಮಾತ್ರವಲ್ಲದೇ, ಚುನಾವಣಾ ರಾಜಕೀಯದಲ್ಲೂ ಸಕ್ರಿಯರಾದರು. 2016ರ ವಿಧಾನಸಭಾ ಚುನಾವಣೆಯಲ್ಲಿ ಅವರು ಕೇರಳದ ಕಣ್ಣೂರು ಜಿಲ್ಲೆಯ ಕೂತುಪರಂಬ ಕ್ಷೇತ್ರದಿಂದ ಬಿಜೆಪಿ ಅಭ್ಯರ್ಥಿಯಾಗಿ ಸ್ಪರ್ಧಿಸಿದ್ದರು. ಈ ಚುನಾವಣೆಯು ರಾಷ್ಟ್ರಮಟ್ಟದಲ್ಲಿ ಗಮನ ಸೆಳೆದಿತ್ತು, ಏಕೆಂದರೆ ಅವರ ಎದುರಾಳಿಗಳು ದಾಳಿ ಮಾಡಿದವರೇ ಆಗಿದ್ದರು. ಅವರ ಚುನಾವಣಾ ಪ್ರಚಾರವು ಯಾವುದೇ ಸೇಡಿನ ಅಥವಾ ದ್ವೇಷದ ಭಾಷಣಗಳಿಂದ ಕೂಡಿರಲಿಲ್ಲ. ಬದಲಿಗೆ, 'ಕಣ್ಣೂರಿನಲ್ಲಿ ರಾಜಕೀಯ ಹಿಂಸಾಚಾರ ಕೊನೆಯಾಗಬೇಕು' ಎಂಬ ಶಾಂತಿ ಮಂತ್ರವನ್ನೇ ಅವರು ಜಪಿಸಿದರು. ಆದರೆ ಚುನಾವಣಾ ರಾಜಕಾರಣದಲ್ಲಿ ಅವರು ಸೋತು ಹೋದರು. ಹಾಗೆ 2021ರಲ್ಲಿ ನಡೆದ ವಿಧಾನಸಭಾ ಚುನಾವಣೆಯಲ್ಲೂ ಅವರು ಪರಾಭವ ಹೊಂದಿದರು. ನಂತರ 2025ರಲ್ಲಿ ಅವರನ್ನು ರಾಷ್ಟ್ರಪತಿಯವರು ರಾಜ್ಯಸಭಾ ಸದಸ್ಯರನ್ನಾಗಿ ನಾಮಕರಣ ಮಾಡಿದರು. ಸದಾನಂದನ್ ಕಾಲೇಜು ದಿನಗಳಲ್ಲಿ ಸಿಪಿಎಂ ಪಕ್ಷದ ಸಕ್ರಿಯ ಕಾರ್ಯಕರ್ತರಾಗಿದ್ದರು. ಅವರ ಮನೆಯಲ್ಲಿ ಎಲ್ಲರೂ ಕಮ್ಯುನಿಸ್ಟ್ ವಿಚಾರಧಾರೆಗಳಿಂದ ಪ್ರಭಾವಿತರಾದವರೇ. ನಂತರ ವೈಚಾರಿಕ ಭಿನ್ನಾಭಿಪ್ರಾಯದಿಂದ ಕಮ್ಯುನಿಸ್ಟ್ ಕ್ಯಾಂಪ್ ತೊರೆದು, ಅಖಿಲ ಭಾರತೀಯ ವಿದ್ಯಾರ್ಥಿ ಪರಿಷತ್ ಅನ್ನು ಸೇರಿದರು. ಕಣ್ಣೂರಿನ ಪ್ರಾಥಮಿಕ ಶಾಲೆಯಲ್ಲಿ ಶಿಕ್ಷಕರಾಗಿ ವೃತ್ತಿಜೀವನ ಆರಂಭಿಸಿದ ಅವರು, ಸರಳ ಮತ್ತು ಪ್ರಾಮಾಣಿಕ ವ್ಯಕ್ತಿತ್ವದಿಂದಲೇ ಜನಪ್ರಿಯರಾದರು. ತಮ್ಮ ಕಾಲುಗಳನ್ನು ಕತ್ತರಿಸಿದವರ ಮೇಲೆ ದ್ವೇಷ ಸಾಧಿಸುವ ಬದಲು, ಪ್ರಜಾಪ್ರಭುತ್ವದ ಹಾದಿಯಲ್ಲಿ ಬದಲಾವಣೆ ತರಲು ಅವರು ಶ್ರಮಿಸಿದರು. ಸದಾನಂದನ್ ಮಾಸ್ಟರ್ ಅವರು ಇಂದಿಗೂ ಕೇರಳದ ರಾಜಕೀಯ ವಲಯದಲ್ಲಿ ದೈತ್ಯಶಕ್ತಿಯಾಗಿ ಉಳಿದಿದ್ದಾರೆ. ಅವರು ಕೇವಲ ಒಂದು ಪಕ್ಷದ ನಾಯಕರಲ್ಲ, ಬದಲಿಗೆ ಹಿಂಸೆಯ ವಿರುದ್ಧದ ಅಹಿಂಸಾತ್ಮಕ ಪ್ರತಿರೋಧದ ಸಂಕೇತ.

ಜಗತ್ತಿನಲ್ಲಿ ಮನುಷ್ಯರಿಗಿಂತ ವಸ್ತುಗಳೇ ಹೆಚ್ಚು ಓಡಾಡುತ್ತವೆ!

ನಾವು ನಿತ್ಯ ಬಳಸುವ ಪ್ರತಿಯೊಂದು ಸಾಧಾರಣ ವಸ್ತುವಿನ ಹಿಂದೆಯೂ ಮನುಷ್ಯ ಇತಿಹಾಸವಿದೆ. ಟೂತ್ ಬ್ರಷ್‌ನ ಪ್ಲಾಸ್ಟಿಕ್‌ನ ಹಿಂದೆ ಕಾರ್ಖಾನೆ, ಪೆಟ್ರೋಲಿಯಂ ಉತ್ಖನನವಿದೆ. ಬಟ್ಟೆಯ ಹಿಂದೆ ಕಾರ್ಖಾನೆ, ಹೊಲಿಗೆಯಂತ್ರ, ಹತ್ತಿ ಗಿಡ, ಬೀಜ, ಮಾನ್ಸೂನ್, ಮಳೆ, ಕೃಷಿಕ, ಮಣ್ಣು, ಎರೆಹುಳು, ಮಣ್ಣಿನೊಳಗಿನ ಮೈಕ್ರೋ ಜೀವಿಗಳು ಎಲ್ಲವೂ ಇವೆ. ಹೀಗೆ ಒಂದೊಂದು ವಸ್ತುವಿನ ಹಿನ್ನೆಲೆ ನೋಡುತ್ತಾ ಹೋದರೂ ಒಂದೊಂದು ಪ್ರಪಂಚವೇ ನಮ್ಮೆದುರು ತೆರೆದುಕೊಳ್ಳುತ್ತದೆ.

ಶಿಶಿರಕಾಲ

ಶಿಶಿರ್ ಹೆಗಡೆ
shishirh@gmail.com

ನಿತ್ಯ ಊಟಕ್ಕೆ ಕೂತಾಗ ಬಟ್ಟಲಿಗೆ ಹಾಕಿಕೊಂಡ ಆಹಾರ, ಬಳಸಿದ ಪದಾರ್ಥಗಳು ಎಲ್ಲೆಲ್ಲಿಂದ ಬಂದಿವೆ ಎಂದು ಒಂದು ಕ್ಷಣ ಯೋಚಿಸುವುದು ನಾನು ಬಾಲ್ಯದಿಂದ ಪಾಲಿಸಿಕೊಂಡು ಬಂದ ಅಭ್ಯಾಸ. ಈ ಅಭ್ಯಾಸ ಶುರುವಾಗಿದ್ದು ಹೀಗೆ:

ನಮ್ಮ ಮನೆಯಿಂದ ನಾನು ಹೋಗುತ್ತಿದ್ದ ಶಾಲೆ ನಾಲ್ಕು ಕಿಲೋಮೀಟರ್ ದೂರ. ಶಾಲೆಯ ಹತ್ತಿರವೇ ಗಣೇಶ ಭಟ್ಟರ ಕಿರಾಣಿ ಅಂಗಡಿಯಿತ್ತು. ಹಾಗಾಗಿ ಶಾಲೆಯಿಂದ ಬರುವಾಗ ಚಿಕ್ಕಪುಟ್ಟ ದಿನಸಿ ಸಾಮಾನನ್ನು ಭಟ್ಟರ ಅಂಗಡಿಯಿಂದ ಅಮ್ಮನಿಗೆ ತಂದುಕೊಡುವ ಕೆಲಸವಿರುತ್ತಿತ್ತು. ಗಣೇಶ ಭಟ್ಟರಿಗೆ ಆಗಲೇ ಅರವತ್ತು ವರ್ಷ ದಾಟಿತ್ತು ಅನಿಸುತ್ತದೆ. ನಾನು ಅವರ ಅಂಗಡಿಗೆ ಹೋದರೆ ಒಂದೇ ಸಾಮಾನು ಬೇಕಿದ್ದರೂ ಅವರು ಅಷ್ಟು ಬೇಗ ಅದನ್ನು ಕೊಡುತ್ತಿರಲಿಲ್ಲ. ಪ್ರತಿ ಬಾರಿ ಹೋದಾಗಲೂ ಏನಾದರೂ ಒಂದು ವಿಷಯವನ್ನು ಚರ್ಚಿಸಿ, ಏನೋ ಒಂದಿಷ್ಟು ಪ್ರಶ್ನೆ ಕೇಳಿ, ಒಂದಿಷ್ಟು ಯೋಚಿಸುವಂತೆ ಮಾಡುತ್ತಿದ್ದರು. ಅಮ್ಮ ಕಳಿಸಿದ್ದಕ್ಕೆ ನಾನು ಅವರ ಅಂಗಡಿಗೆ ಹೋಗುತ್ತಿದ್ದೆನೋ ಅಥವಾ ಅವರಲ್ಲಿ ಮಾತನಾಡಲೆಂದೇ ಹೋಗುತ್ತಿದ್ದೆನೋ ಗೊತ್ತಿಲ್ಲ. ಪ್ರತಿ ಬಾರಿ ಅವರಲ್ಲಿ ಮಾತನಾಡಿದಾಗಲೂ ಯಾವುದೋ ಒಂದು ಹೊಸ ವಿಷಯದ ಮೇಲೆ ನನ್ನ ಕುತೂಹಲ ಹುಟ್ಟಿಕೊಳ್ಳುತ್ತಿತ್ತು.

ಇಂಗು ಮತ್ತು ಸಾಸಿವೆ ತರಲು ಗಣೇಶ ಭಟ್ಟರ ಅಂಗಡಿಗೆ ಅಮ್ಮ ಕಳುಹಿಸಿದ್ದಳು. ಗಣೇಶಭಟ್ಟರಿಗೆ ''ಇಂಗು, ಸಾಸಿವೆ ಕೊಡಿ'' ಎಂದದ್ದೇ ಅಮ್ಮನ ''ಒಗ್ಗರಣೆ ಡಬ್ಬಿಯಲ್ಲಿ ಎಷ್ಟು ಚಿಕ್ಕ ತಟ್ಟೆಗಳಿರುತ್ತವೆ ಹೇಳು ನೋಡೋಣ'' ಎಂದರು! ನನಗೆಲ್ಲಿ ನೆನಪಿರಬೇಕು- ಇಂಗು, ಸಾಸಿವೆ, ಜೀರಿಗೆ, ಮೆಣಸು ಹೀಗೆ ಒಂದೊಂದೇ ನೆನಪುಮಾಡಿ ಪಟ್ಟಿ ಮಾಡಿ ಹೇಳಿದೆ. ಗಣೇಶಭಟ್ಟರು ''ಇಂಗು ಎಲ್ಲಿಂದ ಬರುತ್ತದೆ ಗೊತ್ತೇ?'' ಎಂದು ಕೇಳಿದರು. ಅದು- ಅಫ್ಘಾನಿಸ್ತಾನದಿಂದ. ಜೀರಿಗೆ ಎಲ್ಲಿಂದ? ಗುಜರಾತಿನಿಂದ. ಮೆಣಸು ಎಲ್ಲಿಂದ? ಬ್ಯಾಡಗಿಯಿಂದ. ಸಾಸಿವೆ ಎಲ್ಲಿಂದ? ಪಂಜಾಬಿನಿಂದ. ಹೀಗೆ ಸುಮಾರು ಇಪ್ಪತ್ತೈದು ದಿನಸಿ ವಸ್ತುಗಳನ್ನು ಪಟ್ಟಿಮಾಡಿ ಅವು ಎಲ್ಲೆಲ್ಲಿಂದ ಬರುತ್ತವೆ ಎಂದು ಹೇಳಿದರು. ಇಪ್ಪತ್ತು ಊರು, ಹತ್ತು ರಾಜ್ಯ, ಮೂರು ದೇಶ ಇದ್ದವು!

ಅಂದಿನಿಂದ ನನಗೆ ಈ ಅಭ್ಯಾಸ ಶುರುವಾಯಿತು. ನಿತ್ಯ ಬಟ್ಟಲಿಗೆ ಬಡಿಸಿಕೊಂಡ ಅಥವಾ ಸೇವಿಸಲು ಮುಂದಾದ- ಆಹಾರ, ಪದಾರ್ಥಗಳು ಎಲ್ಲೆಲ್ಲಿಂದ ಬಂದಿರಬಹುದು ಎಂದು ಒಂದು ಕ್ಷಣ ಯೋಚಿಸುವ ಅಭ್ಯಾಸ. ಅದೊಂದು ವಿಚಿತ್ರ ಪ್ರಶ್ನೆ, ಬೇಕಾದರೆ ನೀವೂ ಒಮ್ಮೆ ಕೇಳಿಕೊಂಡು ನೋಡಿ. ಆ ಪ್ರಶ್ನೆಯೇ ಆಹಾರಕ್ಕೆ ಇನ್ನಷ್ಟು ರುಚಿ, ಮೆರಗನ್ನು, ವಿಚಿತ್ರ ಧನ್ಯತೆಯನ್ನು ತಂದುಕೊಡುತ್ತದೆ ಎನ್ನುವುದು ನನ್ನ ಅನುಭವ. ನಮ್ಮ ಇಡೀ ವ್ಯವಸ್ಥೆಯ ಶ್ರಮವು ಬಟ್ಟಲಿನ ಆಹಾರದಲ್ಲಿ ಎಲ್ಲರಿಗೂ ಕಾಣಿಸುತ್ತದೆ.

ಇತ್ತೀಚೆಗೆ ನಾನು ಮತ್ತು ಮಗಳು ಒಂದು ಚಿಕ್ಕ ಪ್ರಾಜೆಕ್ಟ್ ಮಾಡಿದೆವು. ಏನೆಂದರೆ ಆ ದಿನ ಡೈನಿಂಗ್ ಟೇಬಲ್ಲಿನ ಮೇಲಿರುವ ಆಹಾರ ವಸ್ತುಗಳು ಎಲ್ಲೆಲ್ಲಿಂದ ಬಂದಿವೆ ಎಂದು ಒಂದು ವಾರ ನಿತ್ಯ ಪಟ್ಟಿ ಮಾಡುವುದು. ಉಪ್ಪು ಕೆನಡಾದಿಂದ, ಮೆಣಸು ಬ್ಯಾಡಗಿ, ಗುಂಟೂರು, ಹಸಿಮೆಣಸು ಮೆಕ್ಸಿಕೋ, ಜೀರಿಗೆ ಪೂರ್ವ ಮೆಡಿಟೇರಿಯನ್ ಪ್ರದೇಶದಿಂದ, ಇಂಗು ಅಫ್ಘಾನಿಸ್ತಾನದಿಂದ, ದಾಲ್ಚಿನ್ನಿ ಶ್ರೀಲಂಕಾದಿಂದ, ಕೊತ್ತುಂಬರಿ ಬೀಜ ದಕ್ಷಿಣ ಯುರೋಪಿನಿಂದ, ಬೆಳ್ಳುಳ್ಳಿ ಚೀನಾದಿಂದ, ಅಕ್ಕಿ ರಾಣೆಬೆನ್ನೂರಿನಿಂದ, ಕಾಫಿ ಬೀನ್ಸ್ ಕೊಲಂಬಿಯಾದಿಂದ, ಹೀಗೆ. ಹಾಲು, ಚೀಸ್, ನೀರು ಇವಿಷ್ಟು ಬಿಟ್ಟು ನಾವು ನಿತ್ಯ ಸೇವಿಸುವ ಭಾರತೀಯ ಆಹಾರದ ಬಹುಪಾಲು ಪದಾರ್ಥಗಳು ಬೇರೆ ದೇಶದಿಂದ ಬಂದವೇ ಇದ್ದವು. ಎಲ್ಲದರ ಪಟ್ಟಿಮಾಡಿ ಮುಗಿಸುವಾಗ ಸುಮಾರು ಇಪ್ಪತ್ತಾರು ದೇಶದ ಹೆಸರು ನಮಗೆ ಸಿಕ್ಕಿದ್ದವು!

ಮೊನ್ನೆ ಅಮೆಜಾನ್‌ನಿಂದ ಸಾಮಾನ್ಯವೆನಿಸುವ ಚಿಕ್ಕದೊಂದು ಟೇಬಲ್ ಲ್ಯಾಂಪ್ ತರಿಸಿದ್ದೆ. ಅಮೆಜಾನ್‌ನಲ್ಲಿ ನಾವು ತರಿಸುವ ವಸ್ತು ಎಲ್ಲಿಯದ್ದು ಎಂದು ನೋಡಬಹುದಲ್ಲ. ಅದು ಚೀನಾದ ಅದ್ಯಾವುದೋ ಒಂದು ಹೆಸರು ಹೇಳಲು ಬಾರದ ನಗರದಿಂದ ಹೊರಟು, ಸ್ಯಾನ್‌ಫ್ರಾನ್ಸಿಸ್ಕೋ ತಲುಪಿ, ಅಲ್ಲಿಂದ ಶಿಕಾಗೋವಿನ ನಮ್ಮ ಮನೆಗೆ ಬಂದುಮುಟ್ಟಿತ್ತು. ಮೂರೇ ದಿನದಲ್ಲಿ ಅದು ಚಲಿಸಿದ್ದು ಸುಮಾರು 13 ಸಾವಿರ ಕಿಲೋಮೀಟರ್. ಇಷ್ಟಕ್ಕೇ ಆಶ್ಚರ್ಯಪಟ್ಟು ಸುಮ್ಮನಾಗುವುದೇಕೆ ಎಂದು ಆ ಲ್ಯಾಂಪಿನ ಪ್ರಾಡಕ್ಟ್ ಕೋಡ್ ಬಳಸಿ ಅದರ ಇನ್ನಷ್ಟು ವಿವರಗಳನ್ನು ಇಂಟರ್ನೆಟ್‌ನಲ್ಲಿ ನೋಡಬೇಕೆನ್ನಿಸಿತು. ಆ ಲ್ಯಾಂಪಿಗೆ ಬಳಸಿದ್ದ ವೈರ್ ಬಂದದ್ದು ಟರ್ಕಿಯಿಂದ. ಅದರ ವೈರಿಂಗ್ ನಡೆದದ್ದು ಮಲೇಷ್ಯಾದಲ್ಲಿ. ಅಲ್ಲಿಂದ ಆ ಕಚ್ಚಾವಸ್ತುಗಳು ಚೀನಾದಲ್ಲಿ ಅಸೆಂಬಲ್ ಆಗಿ ಕೊನೆಗೆ ಅಲ್ಲಿನ ವುಹಾನ್, ಅಲ್ಲಿಂದ ಶಾಂಘೈ, ಅಲ್ಲಿಂದ ಸ್ಯಾನ್ ಫ್ರಾನ್ಸಿಸ್ಕೋ, ಅಲ್ಲಿಂದ ಶಿಕಾಗೊ ಗೋದಾಮು, ಅಲ್ಲಿಂದ ನಮ್ಮ ಮನೆಯ ಟೇಬಲ್! ನಾನು ಹತ್ತು ಡಾಲರ್- ಸುಮಾರು 900 ರುಪಾಯಿ ಕೊಟ್ಟು ಖರೀದಿಸಿದ ಲೈಟ್ ಲ್ಯಾಂಪ್ ಅಷ್ಟು ಪ್ರಯಾಣ ಮಾಡಿ ಬಂದು ಕೆಲಸ ಮಾಡಿದ್ದು ನಾಲ್ಕೇ ದಿನ. ಹಾಳಾಯಿತು ಎಂದು ಅಮೆಜಾನ್‌ಗೆ ಮರಳಿಸಿದೆ. ಬಹುಶಃ ಅಮೆಜಾನ್ ಅವರು ಅದನ್ನು ಎಲ್ಲಿಯೋ ಕಸದ ಜತೆ ಪುಡಿಮಾಡಿ ಆ ಕಸವನ್ನು ಇನ್ನೆಲ್ಲಿಗೋ ಕಳುಹಿಸಿರಬಹುದು!

ನಾವೊಂದು ವಿಚಿತ್ರ ಕಾಲಘಟ್ಟದಲ್ಲಿದ್ದೇವೆ. ಈಗ ಮನುಷ್ಯರಿಗಿಂತ ವಸ್ತುಗಳೇ ಹೆಚ್ಚು ಪ್ರಯಾಣ ಮಾಡುತ್ತವೆ.

ಸಾಮಾನ್ಯವಾಗಿ ದೇಶದಿಂದ ದೇಶಕ್ಕೆ ರಫ್ತಾಗುವ ವಸ್ತುಗಳಲ್ಲಿ ಹೆಚ್ಚಿನವು ಸಮುದ್ರಮಾರ್ಗದಲ್ಲಿ, ಹಡಗಿನಲ್ಲಿ ದೊಡ್ಡ ದೊಡ್ಡ ಕಂಟೈನರ್ ಮೂಲಕ ಸಾಗಿಸಲ್ಪಡುತ್ತವೆ ಎನ್ನುವುದು ನಿಮಗೆ ಗೊತ್ತು. ಈ ಕಂಟೈನರ್‌ನ ಅಳತೆ 20 x 8 ಫೂಟ್, ಅಥವಾ 40 x 8 ಫೂಟ್. ಒಂದೊಂದರಲ್ಲಿ ಏನಿಲ್ಲವೆಂದರೂ ಐದಾರು ಮಧ್ಯಮವರ್ಗದವರ ಮನೆಯ ಸಾಮಾನು ಸರಂಜಾಮಗಳನ್ನು ಹಿಡಿಸಬಹುದು- ಅಷ್ಟು ದೊಡ್ಡವು. ಒಂದೊಂದು ಹಡಗು ಅಂಥ ಸುಮಾರು ನಾಲ್ಕರಿಂದ ಐದು ಸಾವಿರ ಕಂಟೈನರ್ ಅನ್ನು ನಿರಂತರ ಇಲ್ಲಿಂದ ಅಲ್ಲಿಗೆ ಅಲ್ಲಿಂದ ಇಲ್ಲಿಗೆ ಎಂದು ಸಾಗಿಸುತ್ತಿರುತ್ತವೆ. ಅಂಥ ಸುಮಾರು 6500 ಹಡಗುಗಳು ಸದ್ಯ ಚಲನೆಯಲ್ಲಿವೆ. ಒಟ್ಟಾರೆ ಯಾವುದೇ ಗಳಿಗೆಯಲ್ಲಿ ಸರಿಸುಮಾರು 3 ಕೋಟಿ ಕಂಟೈನರ್‌ಗಳು ಸಮುದ್ರದಲ್ಲಿ ಏನೋ ಒಂದು ವಸ್ತುವನ್ನು ಸಾಗಿಸುತ್ತಿರುತ್ತವೆ! ಈ ಕಂಟೈನರ್‌ನಲ್ಲಿ ಸಾಗಿಸುವ ವಸ್ತುಗಳ ಪ್ರಯಾಣ ಒಂದುಕಡೆಯಾದರೆ ಖುದ್ದು ಕಂಟೈನರ್ ಪ್ರಯಾಣದ್ದು ಬೇರೆಯದೇ ಕಥೆ. ಕಂಟೈನರ್‌ಗೆ ಪ್ರಯಾಣ ಮುಗಿಯಿತು ಎನ್ನುವುದೇ ಇಲ್ಲ. ಒಂದೋ ಹಡಗಿನಲ್ಲಿ- ಸಮುದ್ರದಲ್ಲಿ, ಇಲ್ಲವೇ ಯಾವುದೋ ಒಂದು ಬಂದರಿನಲ್ಲಿ, ಅಲ್ಲಿಂದ ಇನ್ಯಾವುದೋ ಹಡಗು, ಇನ್ನೆಲ್ಲಿಯೋ ಬಂದರು, ರೈಲು. ಪ್ರತಿ ಕಂಟೈನರ್ ವಾರ್ಷಿಕ ಸುಮಾರು 3 ಲಕ್ಷ ಕಿಲೋಮೀಟರ್ ಪ್ರಯಾಣಿಸುತ್ತದೆಯಂತೆ!!

ಈ ರೀತಿ ಅದೆಲ್ಲಿಯೋ ತಯಾರಾದ ವಸ್ತುಗಳು ಗ್ರಾಹಕರಿಗೆ ತಲುಪಿಸಿದ ಕೂಡಲೇ ಆ ವಸ್ತುಗಳ ಪ್ರಯಾಣ ಮುಗಿಯಿತು ಎಂದುಕೊಳ್ಳಬೇಡಿ. ಉದಾಹರಣೆಗೆ- ಅಮೆರಿಕಕ್ಕೆ ಆಮದಾಗುವ ಬಟ್ಟೆಗಳು ಹೆಚ್ಚಾಗಿ ತಯಾರಾಗುವುದು ಭಾರತ, ಬಾಂಗ್ಲಾದೇಶ, ಪಾಕಿಸ್ತಾನ ಅಥವಾ ವಿಯೆಟ್ನಾಂನಲ್ಲಿ. ಮಹಾರಾಷ್ಟ್ರದಲ್ಲಿ ಬೆಳೆದ ಹತ್ತಿ, ಬಾಂಗ್ಲಾದೇಶಕ್ಕೆ ರಫ್ತಾಗಿ, ಅಲ್ಲಿ ಹತ್ತಿಯಿಂದ ನೂಲಾಗಿ, ಅಲ್ಲಿಂದ ವಿಯೆಟ್ನಾಂನಲ್ಲಿ ಬಣ್ಣ ಹಚ್ಚಿಕೊಂಡು, ಕಾಂಬೋಡಿಯಾದಲ್ಲಿ ಹೊಲಿದು ಟಿ-ಶರ್ಟ್ ಅಥವಾ ಏನೋ ಒಂದು ಆಗಿ ಅಮೆರಿಕ, ಇಂಗ್ಲೆಂಡ್ ದೇಶಗಳ ಮಳಿಗೆಗಳಲ್ಲಿ ಮಾರಲ್ಪಡುತ್ತದೆ. ಪ್ರಯಾಣ ಅಷ್ಟಕ್ಕೇ ಮುಗಿಯುವುದಿಲ್ಲ. ಅಮೆರಿಕ, ಬ್ರಿಟನ್ ಇಲ್ಲೆಲ್ಲ ಕೊಳ್ಳುಬಾಕತನ ಜಾಸ್ತಿ- ಅಂತೆಯೇ ಎಸೆಯುವ ಸಂಸ್ಕೃತಿ. ಇಲ್ಲಿನ ಸಂಘ-ಸಂಸ್ಥೆಗಳು ಜನರು ಬಳಸಿದ ಬಟ್ಟೆಯನ್ನು ಸಂಗ್ರಹಿಸುತ್ತವೆ. ಈ ರೀತಿ ಬಳಸಿ ಹಾಳಾಗದೆ ಎಸೆಯುವ ಒಳ್ಳೆಯ ಬಟ್ಟೆಯ ಪ್ರಮಾಣ ಎಷ್ಟೆಂದರೆ ಅಮೆರಿಕಾದ ಬಡವರಿಗೆ ಹಂಚಿ ಯಥೇಚ್ಛ ಮಿಕ್ಕಿರುತ್ತದೆ. ಅದನ್ನು ನೈಜೀರಿಯಾ, ಘಾನಾ ಮೊದಲಾದ ದೇಶಗಳಿಗೆ ಕಳುಹಿಸಲಾಗುತ್ತದೆ. ಚೀನಾ ತಾನು ಬಳಸಿದ ಬಟ್ಟೆಯನ್ನು ಕೀನ್ಯಾ, ತಾಂಜೇನಿಯಾ ಕಳುಹಿಸಿಕೊಡುತ್ತದೆ. ಹೀಗೆ ರಾಶಿ ರಾಶಿ ಬಂದು ಬೀಳುವ ಬಟ್ಟೆಗಳನ್ನು ಆಯ್ದು ಅಲ್ಲಿ ಪುಡಿಗಾಸಿಗೆ ಮಾರಾಟಮಾಡಲಾಗುತ್ತದೆ. ಇನ್ನು ಮಿಕ್ಕಿದವನ್ನು ಅಲ್ಲಿ ಸುಟ್ಟುಹಾಕಲಾಗುತ್ತದೆ.

ಬಟ್ಟೆ ಮಾತ್ರವಲ್ಲ- ಈ ರೀತಿಯ ಖಂಡಾಂತರ, ದೇಶಾಂತರ ಸೆಕೆಂಡ್‌ಹ್ಯಾಂಡ್ ವ್ಯವಹಾರ ಬಹುಕೋಟಿ ಮೌಲ್ಯದ್ದು. ಜಪಾನ್ ದೇಶ ಬಳಸಿದ ಸೆಕೆಂಡ್ ಹ್ಯಾಂಡ್ ಕಾರನ್ನು ಕೀನ್ಯಾಗೆ, ಅಮೆರಿಕ, ಮೆಕ್ಸಿಕೋ, ಹೊಂಡುರಾಸ್, ನೈಜೀರಿಯಾಕ್ಕೆ, ದಕ್ಷಿಣ ಕೊರಿಯಾ ವಿಯೆಟ್ನಾಂ, ಜೋರ್ಡಾನ್ ದೇಶಗಳಿಗೆ ಕಳುಹಿಸಿಕೊಡುತ್ತದೆ. ಬಟ್ಟೆ, ಕಾರು, ಕೃಷಿ ಸಲಕರಣೆಗಳು, ಟ್ರಾಕ್ಟರ್, ಸ್ಕ್ರಾಪ್ ಲೋಹಗಳು, ಬಳಸಿದ ಮೊಬೈಲ್ ಹೀಗೆ ಸೆಕೆಂಡ್ ಹ್ಯಾಂಡ್ ವಸ್ತುಗಳು ಮತ್ತೆ 10-15 ಸಾವಿರ ಕಿಲೋಮೀಟರ್ ಪ್ರಯಾಣಿಸುತ್ತವೆ. ಇವುಗಳ ಜತೆಯಲ್ಲಿ e-waste ಇಲೆಕ್ಟ್ರಾನಿಕ್ ವಸ್ತುಗಳ ಅವಶೇಷಗಳನ್ನು, ಕಸದ ರಾಶಿಗಳನ್ನು ಹಡಗಿನಲ್ಲಿ ಘಾನಾ, ಸೊಮಾಲಿಯಾ ಮೊದಲಾದ ದೇಶಗಳಲ್ಲಿ - ಖಾಲಿ ಸೈಟಿನಲ್ಲಿ ಕಸ ಎಸೆದಂತೆ ಕೆಲವು ದೇಶಗಳು ಎಸೆಯುತ್ತವೆ! ಅಂಥ ಪರಿಸ್ಥಿತಿಯೂ ಇದೆ!

ಅದೆಲ್ಲ ಕಥೆ ಬಿಡಿ. ಒಟ್ಟಾರೆ, ನೀವು ಇಂದು ಯಾವ ದೇಶದಲ್ಲಿಯೇ ಇರಿ, ಯಾವ ಮೂಲೆಯಲ್ಲಿಯೇ ಇರಿ, ನಾವೆಲ್ಲರೂ ಒಂದು ಪರಮಾದ್ಭುತ ಸರಬರಾಜು ವ್ಯವಸ್ಥೆಯ ಭಾಗವಾಗಿದ್ದೇವೆ ಎನ್ನುವುದಂತೂ ಹೌದು. ಈ ಸಮಯದಲ್ಲಿ ನನಗೊಂದು ಮಾತು ನೆನಪಾಗುತ್ತದೆ. 'The ordinary is just the extraordinary seen through the lens of habit'. ಅಭ್ಯಾಸವಾಗುತ್ತಿದ್ದಂತೆ ನಮಗೆ ಅದೆಂಥದೇ ಅಸಾಧಾರಣ ವಿಷಯವೂ ಸಾಮಾನ್ಯವೆನಿಸುತ್ತದಂತೆ. ನಿತ್ಯ ಬೆಳಗೆದ್ದು ಬಳಸುವ ಹಲ್ಲುಜ್ಜುವ ಬ್ರಷ್, ಹಾಕಿರುವ ಬಟ್ಟೆ, ಪ್ಲೇಟಿನಲ್ಲಿರುವ ಅನ್ನ ಇವೆಲ್ಲವೂ ಅದೆಷ್ಟು ಸಾಧಾರಣ ವಸ್ತುಗಳಲ್ಲವೇ? ನಾವು ನಿತ್ಯ ಬಳಸುವ ಪ್ರತಿಯೊಂದು ಸಾಧಾರಣ ವಸ್ತುವಿನ ಹಿಂದೆಯೂ ಮನುಷ್ಯ ಇತಿಹಾಸವಿದೆ. ಟೂತ್ ಬ್ರಷ್‌ನ ಪ್ಲಾಸ್ಟಿಕ್‌ನ ಹಿಂದೆ ಕಾರ್ಖಾನೆ, ಪೆಟ್ರೋಲಿಯಂ ಉತ್ಖನನವಿದೆ. ಬಟ್ಟೆಯ ಹಿಂದೆ ಕಾರ್ಖಾನೆ, ಹೊಲಿಗೆಯಂತ್ರ, ಹತ್ತಿ ಗಿಡ, ಬೀಜ, ಮಾನ್ಸೂನ್, ಮಳೆ, ಕೃಷಿಕ, ಮಣ್ಣು, ಎರೆಹುಳು, ಮಣ್ಣಿನೊಳಗಿನ ಮೈಕ್ರೋ ಜೀವಿಗಳು ಎಲ್ಲವೂ ಇವೆ. ಹೀಗೆ ಒಂದೊಂದು ವಸ್ತುವಿನ ಹಿನ್ನೆಲೆ ನೋಡುತ್ತಾ ಹೋದರೂ ಒಂದೊಂದು ಪ್ರಪಂಚವೇ ನಮ್ಮೆದುರು ತೆರೆದುಕೊಳ್ಳುತ್ತದೆ.

ಇತ್ತೀಚೆಗೆ ಆಪಲ್ ಕಂಪನಿಯ ಕುರಿತಾದ ಕೆಲವು ರಿಸರ್ಚ್ ಪೇಪರ್‌ಗಳನ್ನು ನೋಡುತ್ತಿದ್ದೆ. ಅದರಲ್ಲಿ ಐಫೋನ್ ತಯಾರಿಕೆಯ ವಿವರವಿತ್ತು. ಆಪಲ್ ಅಮೆರಿಕದ ಕಂಪನಿ. ಫೋನಿನ ರಚನೆ, ಡಿಸೈನ್ ಇವೆಲ್ಲ ಕ್ಯಾಲಿಫೋರ್ನಿಯಾದಲ್ಲಿ. ಫೋನಿನ ಹೊರಮೈ ಗ್ಲಾಸ್ ತಯಾರಾಗುವುದು ಅಮೆರಿಕದ ಕೆಂಟಕಿಯಲ್ಲಿ, ಐಫೋನ್‌ನ ಪ್ರೊಸೆಸರ್ ತಯಾರಾಗುವುದು ತೈವಾನ್‌ನಲ್ಲಿ. ಅದರ ಸ್ಕ್ರೀನ್- OLED ಅನ್ನು ಒದಗಿಸುವುದು ದಕ್ಷಿಣ ಕೊರಿಯಾದ ಸ್ಯಾಮ್ಸಂಗ್ ಮತ್ತು ಎಲ್ ಜಿ ಕಂಪನಿ, ಕ್ಯಾಮರಾದ ಸೆನ್ಸರ್ ತಯಾರಿಸುವವರು ಸೋನಿ, ಅದರೊಳಗಿನ ಕೆಲವು ಸೂಕ್ಷ್ಮಗ್ರಾಹ್ಯ ವಸ್ತುಗಳು ತಯಾರಾಗುವುದು ಜರ್ಮನಿಯಲ್ಲಿ, ಅದಕ್ಕೆ ಬಳಸುವ ಖನಿಜಗಳು ಕಾಂಗೋ ಮೊದಲಾದ ಆಫ್ರಿಕಾ ದೇಶಗಳಿಂದ, ಚೀನಾದಲ್ಲಿ ಬ್ಯಾಟರಿ, ಜೋಡಣೆ, ಅಲ್ಲಿಂದ ಆಯಾ ದೇಶಕ್ಕೆ, ಗ್ರಾಹಕರಿಗೆ. ನೀವು ಯಾವುದೇ ಫೋನ್ ಬಳಸುತ್ತಿರಿ- ಅದರಲ್ಲಿ ಸರಿಸುಮಾರು 40ರಿಂದ 50 ದೇಶಗಳ ವಸ್ತುಗಳು ಇರುತ್ತವೆ.

ನೀವು ಪೇಟೆಯಲ್ಲಿ ಬದುಕುವವರಾದರೆ ಬಳಸುವ ನೀರು ನೂರಾರು ಕಿಲೋಮೀಟರ್ ಕ್ರಮಿಸಿ ಮನೆಯ ನಲ್ಲಿಗೆ ಬಂದುಮುಟ್ಟುತ್ತದೆ. ವಿದ್ಯುತ್ ಅಲ್ಲೆಲ್ಲೋ ತಯಾರಾಗುತ್ತದೆ, ವಿದ್ಯುತ್ತಿಗೆ ಕಲ್ಲಿದ್ದಲು ಬಳಸಿದ್ದರೆ ಸ್ವಿಚ್ ಹಾಕಿದಾಗ ಬೆಳಗುವ ಬಲ್ಬಿನ ಬೆಳಕಿನ ಇತಿಹಾಸ ಲಕ್ಷ ವರ್ಷದ ಹಿಂದೆ ಬೆಳೆದ ಅದ್ಯಾವುದೋ ಅಜ್ಞಾತ ಮರಕ್ಕೆ ಹೋಗಿ ಮುಟ್ಟುತ್ತದೆ.

ನಮ್ಮ ಸುತ್ತಮುತ್ತಲಿನ ವಸ್ತುಗಳ ಮೂಲದ ಬಗ್ಗೆ ಸ್ವಲ್ಪ ಯೋಚಿಸಿದರೆ ನಮ್ಮೆಲ್ಲರ ಬದುಕು ಅದೆಷ್ಟು ಅಸಾಧಾರಣ ಎನ್ನುವ ಅರಿವು ನಮಗಾಗುತ್ತದೆ. ಬದುಕು ಅದೆಷ್ಟು ವಿಶೇಷ ಎಂಬ ಅಂದಾಜಾಗುತ್ತದೆ. ಧನ್ಯತೆ ಬೆಳೆಯುತ್ತದೆ, ಬದುಕು ಹೆಚ್ಚು ರುಚಿಸುತ್ತದೆ.

ಇದು ಟ್ರಂಪ್ ಅಲ್ಲ, ಪ್ರಧಾನಿ ಮೋದಿಯವರ ಆರ್ಟ್ ಆಫ್ ಡೀಲ್!

ಅಮೆರಿಕ-ಭಾರತದ ನಡುವೆ ಐತಿಹಾಸಿಕ ವ್ಯಾಪಾರ ಒಪ್ಪಂದ ಘೋಷಣೆ ಆಗಿದೆ. ಇದಕ್ಕೆ ಪಾಕಿಸ್ತಾನದ ಪ್ರತಿಪಕ್ಷ ನಾಯಕರು ಪ್ರಶಂಸೆ ವ್ಯಕ್ತಪಡಿಸಿ, 'ಚೆನ್ನಾಗಿ ವ್ಯಾಪಾರ ಒಪ್ಪಂದ ಮಾಡಿಕೊಳ್ಳುವುದು ಹೇಗೆ ಎಂಬುದನ್ನು ಮೋದಿ ಸರಕಾರ ನೋಡಿ ಕಲಿಯಿರಿ' ಎಂದು ಪ್ರಧಾನಿ ಶೆಹಬಾಜ್ ಷರೀಫ್‌ರನ್ನು ಟೀಕಿಸಿದ್ದಾರೆ. ಆದರೆ ನಮ್ಮಲ್ಲಿ ಕೆಲ ಕಾಂಗ್ರೆಸ್ಸಿಗರು, 'ಮೋದಿ ಸರಕಾರ ಟ್ರಂಪ್ ಒತ್ತಡಕ್ಕೆ ಮಣಿದು ದೇಶದ ರೈತರ ಹಿತಾಸಕ್ತಿಗಳನ್ನು ಬಲಿ ಕೊಟ್ಟಿದೆ' ಎಂದು ಟೀಕಿಸಿದ್ದಾರೆ! ಹಾಗಾದರೆ ಯಾವುದು ಸರಿ?

ಮನಿ ಮೈಂಡೆಡ್

ಕೇಶವ ಪ್ರಸಾದ್ ಬಿ.
keshavaprasadb@gmail.com

ಡೊನಾಲ್ಡ್ ಟ್ರಂಪ್ ಹೆಸರಿನಲ್ಲೊಂದು ಪುಸ್ತಕ ಇದೆ. ಹೆಸರು 'ಆರ್ಟ್ ಆಫ್ ದಿ ಡೀಲ್'. ಅದರಲ್ಲಿ ತಮ್ಮನ್ನು ತಾವೇ 'ವ್ಯವಹಾರ ಚತುರ', 'ಡೀಲ್‌ಗಳ ದೇವರು' ಎಂದೆಲ್ಲ ಬಣ್ಣಿಸಿಕೊಂಡಿದ್ದಾರೆ ಟ್ರಂಪ್! ಆದರೆ ಅವರಿಗೆ ನಿಜಕ್ಕೂ ಡೀಲ್ ಮಾಡುವ ಕೌಶಲ ಗೊತ್ತಿಲ್ಲ ಎಂಬುದು ಇದೀಗ ಜಗಜ್ಜಾಹೀರಾಗಿದೆ. ಪ್ರಧಾನಿ ನರೇಂದ್ರ ಮೋದಿಯವರೇ ಈಗ 'ಬೆಸ್ಟ್ ಡೀಲ್ ಮಾಸ್ಟರ್' ಆಗಿ ಹೊರಹೊಮ್ಮಿದ್ದಾರೆ! ಯುರೋಪ್ ಒಕ್ಕೂಟದ ಜತೆಗೆ 'ಮದರ್ ಆಫ್ ಆಲ್ ಡೀಲ್ಸ್'! ಬೆನ್ನಲ್ಲೇ ಅಮೆರಿಕ ಜತೆಗೆ 'ಫಾದರ್ ಆಫ್ ಆಲ್ ಡೀಲ್ಸ್'! ಡಬಲ್ ಧಮಾಕಾ! ಈಗ ನೋಡಿ, ಬ್ರೆಜಿಲ್ ವಿರುದ್ಧ 50 ಪರ್ಸೆಂಟ್, ಚೀನಾ ವಿರುದ್ಧ 34 ಪರ್ಸೆಂಟ್, ದಕ್ಷಿಣ ಕೊರಿಯಾ ವಿರುದ್ಧ 30 ಪರ್ಸೆಂಟ್ ಸುಂಕವನ್ನು ಅಮೆರಿಕ ಹೇರಿದ್ದರೆ, ಭಾರತಕ್ಕೆ ಸುಂಕವು 50ರಿಂದ 18 ಪರ್ಸೆಂಟ್‌ಗೆ ಇಳಿಕೆಯಾಗಿದೆ. ಪಾಕಿಸ್ತಾನ, ಬಾಂಗ್ಲಾದೇಶ, ವಿಯೆಟ್ನಾಂ, ಇಂಡೋನೇಷ್ಯಾಕ್ಕಿಂತಲೂ ಇದು ಕಡಿಮೆ!

ಈಗ ಸ್ವಾರಸ್ಯಕರ ವಿವರಗಳು ಕೂಡ ಬೆಳಕಿಗೆ ಬರುತ್ತಿವೆ. ಬಹುಕಾಲದಿಂದ ನನೆಗುದಿಗೆ ಬಿದ್ದಿದ್ದ ಭಾರತ-ಅಮೆರಿಕ ಟ್ರೇಡ್ ಡೀಲ್ ಅನ್ನು ಕೊನೆಗೂ ದಡ ಮುಟ್ಟಿಸುವಲ್ಲಿ ಅಜಿತ್ ದೋವಲ್ ನಿರ್ಣಾಯಕ ಪಾತ್ರ ವಹಿಸಿರುವ ಸಂಗತಿಯೂ ಇದೀಗ ಬಯಲಾಗಿದೆ. 'ಬ್ಲೂಮ್ ಬರ್ಗ್' ವರದಿಯ ಪ್ರಕಾರ, ಅಜಿತ್ ದೋವಲ್ ಅವರು ಅಮೆರಿಕದ ವಿದೇಶಾಂಗ ಸಚಿವ ಮಾರ್ಕೊ ರುಬಿಯೊ ಅವರಿಗೆ ವಾಷಿಂಗ್ಟನ್‌ನಲ್ಲಿ ಕಳೆದ ವರ್ಷದ ಸೆಪ್ಟೆಂಬರ್‌ನಲ್ಲಿ ಭಾರತದ ಖಡಕ್ ಸಂದೇಶವನ್ನು ಕೊಟ್ಟಿದ್ದರು (ಹೀಗಿದ್ದರೂ, ಅಜಿತ್ ದೋವಲ್ ಮತ್ತು ಮಾರ್ಕ್ ರುಬಿಯೊ ಭೇಟಿಯನ್ನು ವಿದೇಶಾಂಗ ಇಲಾಖೆ ವಕ್ತಾರರು ನಿರಾಕರಿಸಿದ್ದಾರೆ). ಇದಾದ ನಂತರ ಒಪ್ಪಂದ ಅಂತಿಮವಾಗಲು ಹಾದಿ ಸುಗಮವಾಯಿತು! ದೋವಲ್ ಏನು ಹೇಳಿದ್ದರು? ''ಟ್ರಂಪ್ ಅವರು ಸುಂಕವನ್ನು ಹೆಚ್ಚಿಸಿದರೂ ನಾವು ಸಮ್ಮತಿಸುವುದಿಲ್ಲ. ಯಾವುದೇ ಬೆದರಿಕೆಗೂ ಮಣಿಯುವುದಿಲ್ಲ. ಯಾವುದೇ ಪಬ್ಲಿಕ್ ನಾನ್ಸೆನ್ಸ್‌ಗಳನ್ನೂ ಭಾರತ ಲೆಕ್ಕಿಸುವುದಿಲ್ಲ. ಈ ಅತಾರ್ಕಿಕವಾದ ಒಪ್ಪಂದವನ್ನು ಸ್ವೀಕರಿಸುವುದರ ಬದಲಿಗೆ ಟ್ರಂಪ್ ಅಧಿಕಾರಾವಧಿ ಮುಗಿಯುವ ತನಕ ಕಾಯಲು ಸಿದ್ಧವಾಗಿದ್ದೇವೆ'' ಎಂದು ಸ್ಪಷ್ಟವಾಗಿ ತಿಳಿಸಿದ್ದರು.

ಗಮನಿಸಿ, ಭಾರತವನ್ನು ತನ್ನ ಹಳಿಗೆ ತರಲು ಟ್ರಂಪ್ ಸರಕಾರವು ತಿಪ್ಪರಲಾಗ ಹಾಕಿತ್ತು! ಅದರ ಭಾಗವಾಗಿ ಭಾರತದಿಂದ ಅಮೆರಿಕಕ್ಕೆ ಆಮದಾಗುವ ಸರಕುಗಳ ಮೇಲೆ ಭಾರಿ ಸುಂಕಾಸ್ತ್ರವನ್ನು ಪ್ರಯೋಗಿಸಿತ್ತು. ಮೊದಲು 25 ಪರ್ಸೆಂಟ್ ಪ್ರತಿಸುಂಕವನ್ನು ಘೋಷಿಸಲಾಯಿತು. ಬಳಿಕ ಆಗಸ್ಟ್‌ನಲ್ಲಿ ರಷ್ಯಾದಿಂದ ಕಚ್ಚಾ ತೈಲ ಖರೀದಿಸುತ್ತಿರುವುದಕ್ಕಾಗಿ ಹೆಚ್ಚುವರಿ 25 ಪರ್ಸೆಂಟ್ ಸುಂಕವನ್ನು ಹೇರಲಾಯಿತು. ಒಟ್ಟು 50 ಪರ್ಸೆಂಟ್ ಸುಂಕ! ಟ್ರಂಪ್ ಅವರಂತೂ, ಗಾಯಕ್ಕೆ ಉಪ್ಪು ಸವರುವಂತೆ ಭಾರತವನ್ನು 'ಡೆಡ್ ಇಕಾನಮಿ' ಎಂದು ಜರಿದಿದ್ದರು. ಮೋದಿಯವರನ್ನು 'ಟಾರಿಫ್ ಕಿಂಗ್' ಎಂದು ವ್ಯಂಗ್ಯವಾಡಿದ್ದರು. ಭಾರತವು ರಷ್ಯಾದಿಂದ ತೈಲ ಖರೀದಿಸುವ ಮೂಲಕ ಉಕ್ರೇನ್ ವಿರುದ್ಧದ ರಷ್ಯಾ ಯುದ್ಧಕ್ಕೆ ಹಣದ ನೆರವು ನೀಡುತ್ತಿದೆ ಎಂದು ಬಾಯಿಗೆ ಬಂದಂತೆ ಲೂಸ್‌ಟಾಕ್ ಆಡಿದ್ದರು. ಆಗ ಇಡೀ ಜಗತ್ತಿನಲ್ಲಿಯೇ ಅತಿ ಹೆಚ್ಚು ಸುಂಕಾಸ್ತ್ರ ದಾಳಿಗೆ ಗುರಿಯಾದ ವಿರಳ ದೇಶಗಳ ಪಟ್ಟಿಯಲ್ಲಿ ಭಾರತ ಕೂಡ ಇತ್ತು. ನೆರೆಯ ಪಾಕಿಸ್ತಾನ, ಬಾಂಗ್ಲಾದೇಶಗಳ ಆಡಳಿತಗಾರರು ಸಂಭ್ರಮಿಸಿದ್ದರು. ಪಾಕಿಸ್ತಾನದ ಪ್ರಧಾನಿ ಮತ್ತು ಸೇನಾ ದಂಡನಾಯಕರು ಬಲೂಚಿಸ್ತಾನದ ಅಮೂಲ್ಯ ಖನಿಜಗಳ ಪೆಟ್ಟಿಗೆಯನ್ನೂ ಹೊತ್ತುಕೊಂಡು ಹೋಗಿ ಟ್ರಂಪ್ ಮನವೊಲಿಸಿದ್ದರು. ನೊಬೆಲ್ ಪ್ರಶಸ್ತಿಗೂ ಟ್ರಂಪ್ ಹೆಸರನ್ನು ಶಿಫಾರಸು ಮಾಡಿದ್ದರು. ಜರ್ಮನಿಯ ಪತ್ರಿಕೆಯೊಂದು, 'ಟ್ರಂಪ್ ನಾಲ್ಕು ಸಲ ಫೋನ್ ಕರೆ ಮಾಡಿದ್ದರೂ, ಮೋದಿಯವರು ಸ್ವೀಕರಿಸಿರಲಿಲ್ಲ' ಎಂದು ವರದಿ ಮಾಡಿತ್ತು.

ಈ ಎಲ್ಲ ಹೈಡ್ರಾಮಾ ನಡೆಯುತ್ತಿದ್ದಾಗಲೂ ಭಾರತ ತಾಳ್ಮೆಗೆಟ್ಟು ಪ್ರತಿಕ್ರಿಯಿಸಿರಲಿಲ್ಲ. ಆದರೆ ಪ್ರಧಾನಿ ನರೇಂದ್ರ ಮೋದಿಯವರು ರಷ್ಯಾ ಅಧ್ಯಕ್ಷ ವ್ಲಾದಿಮಿರ್ ಪುಟಿನ್ ಮತ್ತು ಚೀನಾ ಅಧ್ಯಕ್ಷ ಕ್ಸಿ ಜಿನ್‌ಪಿಂಗ್ ಅವರೊಂದಿಗೆ ಚೀನಾದಲ್ಲಿ ಹೈಪ್ರೊಫೈಲ್ ಮೀಟಿಂಗ್ ನಡೆಸಿದರು. ಇದರಿಂದ ಟ್ರಂಪ್ ಸರಕಾರ ಒಳಗೊಳಗೆ ಅಸಮಾಧಾನಪಟ್ಟಿತ್ತು. ಉಭಯ ದೇಶಗಳ ನಡುವಣ ರಾಜತಾಂತ್ರಿಕ ಸಂಬಂಧವು ವಿರಸದ ಹಾದಿಯಲ್ಲಿದ್ದ ಸೂಕ್ಷ್ಮ ಸಂದರ್ಭದಲ್ಲಿ ಅಜಿತ್ ದೋವಲ್ ಅಮೆರಿಕ ಭೇಟಿ ಕೈಗೊಂಡಿದ್ದರು. ವಾಷಿಂಗ್ಟನ್‌ನಲ್ಲಿ ಅಮೆರಿಕದ ವಿದೇಶಾಂಗ ಸಚಿವ ರುಬಿಯೊ ಅವರಿಗೆ, ''ಸರಿಯಾದ ಒಪ್ಪಂದ ಆಗದಿದ್ದ ಪಕ್ಷದಲ್ಲಿ ಟ್ರಂಪ್ ಅಧಿಕಾರಾವಧಿ ಮುಗಿಯುವ ತನಕ, ಅಂದರೆ 2029ರ ತನಕ ಕಾಯಲೂ ಭಾರತ ಸಿದ್ಧವಾಗಿದೆ'' ಎಂಬ ಕಠಿಣ ಸಂದೇಶವನ್ನು ಡಿಟರ್ಜೆಂಟ್ ಪೌಡರ್ ಹಾಕಿ ಬಟ್ಟೆ ತೊಳೆದಂತೆ ತಿಳಿಸಿದರು. ಇಷ್ಟು ಮಾತ್ರವಲ್ಲದೆ, ಟ್ರಂಪ್ ಮತ್ತು ಅವರ ಬಂಟರು ಸಾರ್ವಜನಿಕವಾಗಿ ಭಾರತದ ವಿರುದ್ಧ ಮನಬಂದಂತೆ ಟೀಕಿಸುವುದನ್ನು ಕೂಡ ನಿಲ್ಲಿಸಬೇಕು. ಆಗ ಮಾತ್ರ ದೀರ್ಘಾವಧಿಯ ರಾಜತಾಂತ್ರಿಕ ಸಂಬಂಧಗಳು ಗಟ್ಟಿಯಾಗಿ, ಸುಗಮವಾಗಿ ಮುಂದುವರಿಯಲಿವೆ ಎಂದು ದೋವಲ್ ಹೇಳಿದ್ದರು. ಇನ್ನೂ ನಾಲ್ಕು ವರ್ಷ ಕಾಯಲೂ ದೇಶ ಸಜ್ಜಾಗಿದೆ ಎಂಬ ಕಠಿಣ ಸಂದೇಶ ಟ್ರಂಪ್ ಸರಕಾರಕ್ಕೆ ಬಿಸಿ ಮುಟ್ಟಿಸಿತ್ತು. ಬಳಿಕ ಯುರೋಪ್ ಜತೆಗೆ ಚಾರಿತ್ರಿಕ ಮುಕ್ತ ವ್ಯಾಪಾರ ಒಪ್ಪಂದವೂ ಸುಸೂತ್ರವಾಗಿ ನಡೆಯಿತು. ಇಷ್ಟೆಲ್ಲ ಆದ ಬಳಿಕ ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಅವರು ಮೋದಿಯವರೊಡನೆ ಫೋನ್ ಮೂಲಕ ಮಾತನಾಡಿ, ಒಪ್ಪಂದದ ಬಗ್ಗೆ ಘೋಷಣೆ ಮಾಡಿದ್ದಾರೆ. ಸುಂಕವನ್ನು 50 ಪರ್ಸೆಂಟ್‌ನಿಂದ 18 ಪರ್ಸೆಂಟ್‌ಗೆ ಇಳಿಸಿದ್ದಾರೆ. ಈಗ ಚೀನಾ, ಇಂಡೋನೇಷ್ಯಾ, ಪಾಕಿಸ್ತಾನ, ಬಾಂಗ್ಲಾದೇಶಕ್ಕಿಂತಲೂ ಕಡಿಮೆ ಸುಂಕವು ಭಾರತದ ಪಾಲಿಗೆ ಇರುವುದು ಮೋದಿಯವರ ರಾಜತಾಂತ್ರಿಕ ನೀತಿಗೆ ಸಂದ ಗೆಲುವಾಗಿದೆ.

ಎಂಥಾ ವಿಚಿತ್ರ ನೋಡಿ! ಅಮೆರಿಕ ಮತ್ತು ಭಾರತದ ನಡುವೆ ಐತಿಹಾಸಿಕ ವ್ಯಾಪಾರ ಒಪ್ಪಂದ ಘೋಷಣೆ ಆಗಿದೆ. ಇದಕ್ಕೆ ಪಾಕಿಸ್ತಾನದಲ್ಲಿ ಅಲ್ಲಿನ ಪ್ರತಿಪಕ್ಷ ನಾಯಕರು ಪ್ರಶಂಸೆ ವ್ಯಕ್ತಪಡಿಸಿದ್ದಾರೆ. ಚೆನ್ನಾಗಿ ವ್ಯಾಪಾರ ಒಪ್ಪಂದ ಮಾಡಿಕೊಳ್ಳುವುದು ಹೇಗೆ ಎಂಬುದನ್ನು ಮೋದಿ ಸರಕಾರ ನೋಡಿ ಕಲಿಯಿರಿ ಎಂದು ಪ್ರಧಾನಿ ಶೆಹಬಾಜ್ ಷರೀಫ್ ಅವರನ್ನು ಟೀಕಿಸಿದ್ದಾರೆ. ಇತ್ತ ಭಾರತದಲ್ಲಿ ಪ್ರತಿಪಕ್ಷ ಕಾಂಗ್ರೆಸ್‌ನ ನಾಯಕರು, ''ಮೋದಿ ಸರಕಾರವು ಟ್ರಂಪ್ ಒತ್ತಡಕ್ಕೆ ಮಣಿದು ದೇಶದ ರೈತರ ಹಿತಾಸಕ್ತಿಗಳನ್ನು ಬಲಿ ಕೊಟ್ಟಿದೆ'' ಎಂದು ಟೀಕಿಸಿದ್ದಾರೆ! ಹಾಗಾದರೆ ಯಾವುದು ಸರಿ?

ಮೊದಲಿಗೆ ಪಾಕಿಸ್ತಾನದ ಪ್ರತಿಪಕ್ಷ ನಾಯಕರು, ಚಿಂತಕರು ಏನು ಹೇಳಿದರು ಎಂಬುದನ್ನು ನೋಡೋಣ. ಪಾಕಿಸ್ತಾನದ ವೃತ್ತಿಪರ ಕೌಶಲಾಭಿವೃದ್ಧಿ ಸಂಸ್ಥೆ ಎನ್‌ಎವಿಟಿಟಿಸಿಯ ಮಾಜಿ ಮುಖ್ಯಸ್ಥ ಜಾವೇದ್ ಹಸನ್ ಹೀಗೆನ್ನುತ್ತಾರೆ- ''ಭಾರತವು ಟ್ರಂಪ್‌ಗೆ ನೊಬೆಲ್ ಪ್ರಶಸ್ತಿ ಕೊಡಬೇಕು ಎಂದು ಶಿಫಾರಸು ಮಾಡಲಿಲ್ಲ, ಖನಿಜಗಳ ಉಡುಗೊರೆಯನ್ನೂ ನೀಡಲಿಲ್ಲ. ಆದರೂ ಪಾಕಿಸ್ತಾನಕ್ಕಿಂತ ಚೆನ್ನಾಗಿ ಡೀಲ್ ಮಾಡಿಕೊಂಡಿತು''. ಲಾಹೋರಿನ ಉದ್ಯಮಿ ಶಹ್ನಾಸೀಬ್ ಬಾಬರ್ ಭಟ್ಟಿ ಹೇಳುತ್ತಾರೆ- ''ಭಾರತವು ಜಗತ್ತಿಗೆ ಕೊಡಲು ಸಾಕಷ್ಟು ವಿಷಯಗಳನ್ನು, ಆಫರ್‌ಗಳನ್ನು ಹೊಂದಿದೆ. ಆದರೆ ಪಾಕಿಸ್ತಾನದ ಬಳಿ ಏನೂ ಇಲ್ಲ. ಅಮೆರಿಕ ಸಹಜವಾಗಿ ಭಾರತದ ಬಳಿಗೆ ಹೋಗಿದೆ''.

ಹೀಗೆ ಪಾಕಿಸ್ತಾನದ ನಾಯಕರೂ ಭಾರತದ ನಡೆಗಳನ್ನು ಪ್ರಶಂಸಿಸುತ್ತಿದ್ದರೆ, ಇತ್ತ ಕಾಂಗ್ರೆಸ್ ಸೇರಿದಂತೆ ಪ್ರತಿಪಕ್ಷ ನಾಯಕರು ಚಡಪಡಿಸುತ್ತಿದ್ದಾರೆ. ''ಮೋದಿ ಸರಕಾರ ಟ್ರಂಪ್ ಒತ್ತಡಕ್ಕೆ ಕಟ್ಟುಬಿದ್ದು ಅಮೆರಿಕದ ಕಚ್ಚಾ ತೈಲವನ್ನು ದುಬಾರಿ ದರದಲ್ಲಿ ಖರೀದಿಸುವ ಫಜೀತಿಗೆ ಸಿಲುಕಿದೆ. ಕೃಷಿ ಮಾರುಕಟ್ಟೆಗೂ ಅಮೆರಿಕನ್ ಕಂಪನಿಗಳಿಗೆ ಪ್ರವೇಶಕ್ಕೆ ಅನುಮತಿ ನೀಡಲಿದೆ'' ಎಂದು ಅವರು ಆರೋಪಿಸಿದ್ದಾರೆ.

''ಅಮೆರಿಕವು ತನ್ನ ರೈತರಿಗೆ ಭಾರಿ ಸಬ್ಸಿಡಿಗಳನ್ನು ಕೊಡುತ್ತಿದೆ. ಅದರ ಲಾಭವನ್ನು ಪಡೆದು ಅಲ್ಲಿನ ರೈತರು ದಂಡಿಯಾಗಿ ಉತ್ಪಾದಿಸುವ ಕೃಷಿ ಉತ್ಪನ್ನಗಳು ಭಾರತೀಯ ಮಾರುಕಟ್ಟೆಗೆ ಲಗ್ಗೆ ಇಟ್ಟರೆ ಇಲ್ಲಿನ ರೈತರ ಗತಿ ಏನಾಗಬೇಕು? ಅಗ್ಗದ ದರದ ರಷ್ಯಾ ತೈಲದ ಬದಲಿಗೆ ದುಬಾರಿ ಬೆಲೆಯ ಅಮೆರಿಕದ ಕಚ್ಚಾ ತೈಲ ಆಮದು ಮಾಡಿಕೊಳ್ಳಬೇಕೇ? ಈ ಹಿಂದೆ ಕೇವಲ 2-3 ಪರ್ಸೆಂಟ್ ಸುಂಕವನ್ನು ಅಮೆರಿಕ ವಿಧಿಸುತ್ತಿತ್ತು. ಆದರೆ ಈಗ 18 ಪರ್ಸೆಂಟ್ ಕೊಡುವಂತಾಗಿದೆ, ಇದು ಸರಕಾರದ ವೈಫಲ್ಯವಲ್ಲವೇ. ಭಾರತವು 500 ಶತಕೋಟಿ ಡಾಲರ್ ಮೌಲ್ಯದ ವಸ್ತುಗಳು ಮತ್ತು ಸೇವೆಗಳನ್ನು ಅಮೆರಿಕದಿಂದ ಆಮದು ಮಾಡಿಕೊಳ್ಳಲು ಒಪ್ಪಿದೆ ಎಂದು ಟ್ರಂಪ್ ಸರಕಾರ ಹೇಳುತ್ತಿದೆ. ಆದರೆ ಸದ್ಯಕ್ಕೆ ಭಾರತ ಕೇವಲ 45 ಶತಕೋಟಿ ಡಾಲರ್ ಮೌಲ್ಯದ ಆಮದು ಮಾಡುತ್ತಿದೆ. ಹಾಗಿದ್ದರೆ 500 ಶತಕೋಟಿ ಡಾಲರ್ ಆಮದು ಸಾಧ್ಯವೇ?'' ಎಂದು ಅವರು ಟೀಕಿಸಿದ್ದಾರೆ.

ನಿಜ, ಕೆಲವು ಪ್ರಶ್ನೆಗಳು ಸ್ವಾಭಾವಿಕ. ಆದರೆ ಕೇಂದ್ರ ವಿದೇಶಾಂಗ ಸಚಿವ ಡಾ. ಎಸ್.ಜೈಶಂಕರ್ ಅವರ ಹೇಳಿಕೆಯನ್ನು ಗಮನಿಸಿ. ''ಅಮೆರಿಕದ ಭೇಟಿ ಫಲಪ್ರದವಾಗಿದೆ. ಇದಕ್ಕಾಗಿ ವಿದೇಶಾಂಗ ಸಚಿವ ರುಬಿಯೊ ಅವರಿಗೆ ಧನ್ಯವಾದಗಳು. ಐತಿಹಾಸಿಕ ಭಾರತ-ಅಮೆರಿಕ ಟ್ರೇಡ್ ಡೀಲ್ ಅಂತಿಮ ಘಟ್ಟದಲ್ಲಿದೆ. ವಿವರಗಳನ್ನು ಶೀಘ್ರ ತಿಳಿಸಲಾಗುವುದು. ನಿರ್ಣಾಯಕವಾಗಿರುವ ಖನಿಜಗಳ ವಲಯದಲ್ಲಿ ಸಹಕಾರ ಮುಂದುವರಿಯಲಿದೆ. ವ್ಯೂಹಾತ್ಮಕ ವಿಚಾರಗಳ ಬಗ್ಗೆ ಚರ್ಚಿಸಲಾಗುವುದು. ರಕ್ಷಣೆ, ಇಂಧನ ವಲಯದಲ್ಲಿ ಒಪ್ಪಂದ ನಡೆಯಲಿದೆ'' ಎಂದು ಅವರು ತಿಳಿಸಿದ್ದಾರೆ. ಅಲ್ಲಿಗೆ ಸಮಗ್ರ ಒಪ್ಪಂದ ಇನ್ನೂ ಆಗಿಲ್ಲ. ಸದ್ಯಕ್ಕೆ ಭಾರತದ ಉತ್ಪನ್ನಗಳಿಗೆ 18 ಪರ್ಸೆಂಟ್ ಸುಂಕ ಎನ್ನುವುದು ಮಾತ್ರ ದೃಢಪಟ್ಟಿರುವುದು. ಆದ್ದರಿಂದ ಆತಂಕ ಅನವಶ್ಯಕ.

ಈಗಲೂ ಭಾರತಕ್ಕೆ ವಾಣಿಜ್ಯ ವ್ಯವಹಾರಗಳಲ್ಲಿ ಅಮೆರಿಕವು ನಿರ್ಣಾಯಕ ಪಾಲುದಾರ ರಾಷ್ಟ್ರವಾಗಿದೆ. ಭಾರತವು ತನ್ನ ರಫ್ತಿನಲ್ಲಿ ಐದನೇ ಒಂದರಷ್ಟನ್ನು ಅಮೆರಿಕಕ್ಕೆ ಮಾಡುತ್ತಿದೆ. ಮೊಬೈಲ್ ಫೋನ್ ಮತ್ತು ಇಲೆಕ್ಟ್ರಾನಿಕ್ ವಸ್ತುಗಳನ್ನು ರಫ್ತು ಮಾಡುತ್ತಿದೆ. ಇತ್ತೀಚಿನ ತಿಂಗಳುಗಳಲ್ಲಿ ಅಮೆರಿಕದ ಕಂಪನಿಗಳು ಭಾರತದಲ್ಲಿ ದೊಡ್ಡ ಮಟ್ಟದ ಹೂಡಿಕೆಗಳನ್ನು ಘೋಷಿಸಿವೆ. ಮುಖ್ಯವಾಗಿ ಕೃತಕ ಬುದ್ಧಿಮತ್ತೆ (ಎಐ) ಕ್ಷೇತ್ರದಲ್ಲಿ ಅಮೆಜಾನ್ ಮತ್ತು ಮೈಕ್ರೊಸಾಫ್ಟ್ ಕಂಪನಿಗಳು 52 ಶತಕೋಟಿ ಡಾಲರ್ ಹೂಡಿಕೆಯನ್ನು ಮಾಡುತ್ತಿವೆ. ಗೂಗಲ್ ತನ್ನ ಡೇಟಾ ಸೆಂಟರ್‌ಗಳಿಗೆ 15 ಶತಕೋಟಿ ಡಾಲರ್ ಹೂಡಿಕೆ ಮಾಡುತ್ತಿವೆ. ಅಮೆರಿಕದ ಹಣಕಾಸು ವಲಯಕ್ಕೂ ಭಾರತ ಅನಿವಾರ್ಯವಾಗಿದೆ. ಗೋಲ್ಡ್‌ಮನ್ ಸ್ಯಾಕ್ಸ್ ಗ್ರೂಪ್, ಅಮೆರಿಕ ಹೊರತುಪಡಿಸಿದರೆ ಭಾರತದಲ್ಲಿಯೇ, ಬೆಂಗಳೂರಿನಲ್ಲಿ ತನ್ನ ಅತಿ ದೊಡ್ಡ ಕಚೇರಿಯನ್ನು ಹೊಂದಿದೆ.

ಈ ಒಪ್ಪಂದದಿಂದ ಉಭಯ ದೇಶಗಳಿಗೂ ಲಾಭವಾಗಲಿದೆ. ಭಾರತದ ಉತ್ಪನ್ನಗಳಿಗೆ ಅಮೆರಿಕದಲ್ಲಿ 18 ಪರ್ಸೆಂಟ್ ಸುಂಕ ಇರುವುದರಿಂದ ಇತರ ದೇಶಗಳಿಗೆ ಹೋಲಿಸಿದರೆ ಅನುಕೂಲವಾಗಲಿದೆ. ಅಮೆರಿಕಕ್ಕೂ ಭಾರತಕ್ಕೆ ಕಚ್ಚಾ ತೈಲ, ಎಲ್‌ಎನ್‌ಜಿ, ವಿಮಾನ, ರಕ್ಷಣಾ ಉತ್ಪನ್ನಗಳನ್ನು ಮಾರಾಟ ಮಾಡಲು ಮಾರುಕಟ್ಟೆ ತೆರೆದುಕೊಳ್ಳಲಿದೆ.

ಭಟ್ಟರ್ ಸ್ಕಾಚ್

- **ಗಿಡ್ಡ ಗೋಪಾಲ, ಶ್ರೀರಂಗಪಟ್ಟಣ**
ಭಟ್ರೇ, ರಾಜಕೀಯದಲ್ಲಿ ವೈಯಕ್ತಿಕ ನಿಂದನೆ ವ್ಯಾಪ್ತಿ ಎಷ್ಟು?
– **ಕುಂಬಳಕಾಯಿ ಕಳ್ಳನಿಂದ ಹಿಡಿದು ಕೊಬ್ಬರಿಕಳ್ಳನತನಕ!**

- **ಸುದರ್ಶನ ಪಡುಬಿದ್ರೆ, ಪಡುಬಿದ್ರೆ**
ಭಟ್ರೇ, ಕಳ್ಳನೊಬ್ಬ ಪೊಲೀಸ್ ಸ್ಟೇಷನ್ ಮುಂದೆ ಯಾಕೆ ಓಡ್ತಾ ಇದ್ದ?
– **ಯಾಕೆಂದರೆ ಪೊಲೀಸರು 'ಚೋರ್ ಬಜಾರ್'ಗೆ ಹೋಗಿದ್ದಾರೆ ಅಂತ ಯಾರೋ ಅವನಿಗೆ ಸುಳ್ಳು ಹೇಳಿದ್ದರು!**

- **ರಾಜೇಶ ಶೆಣೈ, ಬ್ರಹ್ಮಾವರ**
ಭಟ್ರೇ, ಮನುಷ್ಯನಿಗೆ ಎಲ್ಲಿ ಹೋದರೆ ಅತಿ ಹೆಚ್ಚು ಶಾಂತಿ ಸಿಗುತ್ತದೆ?
– **ಮೊಬೈಲ್ ನೆಟ್‌ವರ್ಕ್ ಇಲ್ಲದ ಜಾಗಕ್ಕೆ ಹೋದಾಗ!**

- **ಎಂ.ಗಜಾನನ ಜೋಶಿ, ಹೊನ್ನಾವರ**
ಭಟ್ರೇ, ಮದುವೆಯಾದ ಮೇಲೆ ಗಂಡಸಿಗೆ 'ಬ್ಯಾಚುಲರ್ ಆಫ್ ಆರ್ಟ್ಸ್' ಪದವಿ ಹೋಗುತ್ತದಂತೆ?
– **ಹೂಂ... 'ಮಾಸ್ಟರ್ ಆಫ್ ಸೈಲೆನ್ಸ್' ಪದವಿ ಸಿಗುತ್ತದೆ!**

- **ಗಣೇಶ ಭಟ್, ಮೂಡಬಿದ್ರೆ**
ಭಟ್ರೇ, ಎಮ್ಮೆಗಳು ಕಪ್ಪಾಗಿರಲು ಕಾರಣವೇನು?
– **ಅವುಗಳಿಗೆ ಯಾರೂ 'ಫೇರ್ ಆ್ಯಂಡ್ ಲವ್ಲಿ' ಹಚ್ಚುವುದಿಲ್ಲವಲ್ಲ?!**

- **ರಾಮಣ್ಣ, ಉಡುಪಿ**
ಭಟ್ರೇ, ಹಳೆಯ ಕಾಲದಲ್ಲಿ ಜನ ಕಾಡಿಗೆ ಹೋಗಿ ತಪಸ್ಸು ಮಾಡುತ್ತಿದ್ದರು, ಈಗ?
– **ವೈ-ಫೈ ಸಿಗದಿದ್ದಾಗ ಮನೆಯಲ್ಲೇ ತಪಸ್ಸು ಮಾಡುತ್ತಾರೆ!**

- **ರಾಮಕುಮಾರ ಹೆಜ್ಜಾಲ, (ಇಮೇಲ್ ಮೂಲಕ)**
ಭಟ್ರೇ, ಪರೀಕ್ಷಾ ಹಾಲ್‌ನಲ್ಲಿ ಸ್ಟೂಡೆಂಟ್ಸ್ ಯಾಕೆ ಆಕಾಶದ ಕಡೆ ನೋಡ್ತಿರ್ತಾರೆ?
– **ಯಾಕೆಂದರೆ ಉತ್ತರಗಳು 'ದೇವರಿಗೇ ಪ್ರೀತಿ' ಅಂತ ಅವರಿಗೆ ಮೊದಲೇ ಗೊತ್ತಿರುತ್ತದೆ!**

- **ವೀಣಾ ಭಟ್, ಕುಂದಾಪುರ**
ಭಟ್ರೇ, ನಿಮ್ಮ ದೃಷ್ಟಿಯಲ್ಲಿ ಸ್ಕೂಲ್ ಅಂದ್ರೆ ಏನು?
– **ಅದು ಒಂಥರಾ ಜೈಲು... ಅಲ್ಲಿ ಮಕ್ಕಳು ಬೆಳಗ್ಗೆ ಹೋಗಿ ಸಾಯಂಕಾಲ 'ಜಾಮೀನಿನ' ಮೇಲೆ ಮನೆಗೆ ಬರ್ತಾರೆ!**

- **ಸಿಂಧು ಹೆಗಡೆ, ಶಿರಸಿ**
ಭಟ್ರೇ, ಬ್ರೇಕ್ ಫೇಲ್ ಆದ ಕಾರಿಗೂ, ಮುನಿಸಿಕೊಂಡ ಹೆಂಡತಿಗೂ ಏನು ಸಾಮ್ಯತೆ?
– **ಎರಡನ್ನೂ ನಿಲ್ಲಿಸಲು ನಿಮ್ಮ ಕೈಯಲ್ಲಿ ಸಾಧ್ಯವಿಲ್ಲ!**

- **ಶಂಕರ ಪಾಟೀಲ, ಹುಬ್ಬಳ್ಳಿ**
ಭಟ್ರೇ, ಮೊದಲೆಲ್ಲ ಮನುಷ್ಯ ಸುಳ್ಳು ಹೇಳುವಾಗ ಮುಖ ನೋಡಿ ಕಂಡುಹಿಡಿಯಬಹುದಿತ್ತು, ಈಗ
– **ವಾಟ್ಸಾಪ್ ಬಂದ ಮೇಲೆ 'ಟೈಪಿಂಗ್...' ಅಂತ ನೋಡಿ ಕಾಯಬೇಕಷ್ಟೇ!**

ಕಾಡು ಕಡಿದು ಅಭಿವೃದ್ಧಿಯೆ? ಖಂಡಿತಾ ಕೂಡದು!

ಶಶಾಂಕಣ

ಶಶಿಧರ ಹಾಲಾಡಿ

vveditoped@gmail.com

ನಾಗರಿಕ ಸೌಕರ್ಯಗಳಿಗಾಗಿ ಸದಾ ಹಪಹಪಿಸುತ್ತಿರುವ ಆಧುನಿಕ ಮನುಷ್ಯನಿಗೆ, ಮರುಭೂಮಿಯೊಂದನ್ನು ನಿರ್ಮಿಸಲು ಸಾಧ್ಯವಿದೆಯೆ? ಅದೂ ಕೇವಲ 50 ವರ್ಷಗಳಲ್ಲಿ? ಅಂಥದೊಂದು 'ಸಾಹಸ' (ದುರಂತ) ಕಳೆದ ಶತಮಾನದಲ್ಲಿ ನಡೆದಿದೆ. ಆ ಮರುಭೂಮಿಯನ್ನು ನಿರ್ಮಿಸಿ, ಸಾವಿರಾರು ಜನರ ಬದುಕನ್ನು ದುರ್ಭರಗೊಳಿಸಿಯಾಗಿದೆ. ಮನುಷ್ಯನು ತನ್ನ ಅಭಿವೃದ್ಧಿಪಥವನ್ನು ಅನುಸರಿಸುವ ಭರದಲ್ಲಿ, ಡರ್ಟಿ ಪಾತ್ (ಕೊಳಕು ದಾರಿ) ಅನ್ನು ಅನುಸರಿಸಿದರೆ, ವಿಶಾಲ ಮರುಭೂಮಿಯನ್ನು ನಿರ್ಮಿಸಬಹುದು ಎಂದು ಆ ದುರಂತ ತೋರಿಸಿಕೊಟ್ಟಿದೆ. ಆ ದುರಂತವು ಜಗದ್ವಿಖ್ಯಾತವೂ ಹೌದು; ಮನುಷ್ಯನೇ ನಿರ್ಮಿಸಿದ ಮರುಭೂಮಿಯ ಈ ಕೆಟ್ಟ ಉದಾಹರಣೆಯು ಸಾಕಷ್ಟು ಅಧ್ಯಯನಕ್ಕೂ ಒಳಗಾಗಿದೆ, ಕುಖ್ಯಾತವೂ ಆಗಿದೆ.. ಆದರೆ.. ಆದರೆ...

ಇಪ್ಪತ್ತನೆಯ ಶತಮಾನದಲ್ಲಿ ನಡೆದ ಈ ದುರಂತದಿಂದ ನಾವು ಪಾಠ ಕಲಿತಿದ್ದೇವೆಯೆ? ಇಲ್ಲ.. ಖಂಡಿತವಾಗಿಯೂ ಇಲ್ಲ. ಇದೇಕೆ ಈಗ ನೆನಪಾಯಿತು ಎಂದರೆ, ನಮ್ಮ ರಾಜ್ಯದಲ್ಲಿ ಜನರ ಬದುಕನ್ನು ದುರ್ಭರಗೊಳಿಸುವ ಹಲವು ಯೋಜನೆಗಳು ಈಗಾಗಲೇ ಚಾಲ್ತಿಯಲ್ಲಿದ್ದು, ಈಗ ಅಂಥ 'ಪಟ್ಟಿ'ಗೆ ಇನ್ನೊಂದು ಯೋಜನೆಯನ್ನು ಸೇರ್ಪಡೆ ಮಾಡಲು ಎಲ್ಲಾ ಸಿದ್ಧತೆಗಳೂ ನಡೆಯುತ್ತಿವೆ. ಆ ಯೋಜನೆಯೇ ವರದಾ-ಬೇಡ್ತಿ-ಅಘನಾಶಿನಿ ನದಿ ಜೋಡಣೆ ಯೋಜನೆ. ಈಗಾಗಲೇ ಪರಿಸರ ತಜ್ಞರು ಗುರುತಿಸಿರುವಂತೆ ಅಧಿಕಾರಶಾಹಿ-ರಾಜಕಾರಣಿ- ಕಂಟ್ರಾಕ್ಟರ್‌ಗಳು ಕೈಜೋಡಿಸಿ, ಹಣ ಗಳಿಸಲು ಪರಿಸರವನ್ನು ಎಷ್ಟು ಬೇಕಾದರೂ ಹಾಳುಗೆಡವಬಲ್ಲರು ಎಂಬ ಹೇಳಿಕೆಗೆ ಪೂರಕವೇನೋ ಎಂಬಂತೆ, ಈ ಹೊಸ 'ನದಿ ಜೋಡಣೆ'ಯನ್ನು ಜಾರಿಗೆ ತರಲು ಸಿದ್ಧತೆಗಳು ನಡೆಯುತ್ತಿವೆ, ವರದಿಗಳು ಸಿದ್ಧವಾಗುತ್ತಿವೆ.

ಇಷ್ಟನ್ನು ಓದುತ್ತಿರುವಂತೆಯೇ, ನಮ್ಮ ನಾಡಿನ ಕೆಲವು 'ಅಭಿವೃದ್ಧಿಪರ' ಜನರು ತಕ್ಷಣ ಕೇಳುವುದುಂಟು- ''ಎಲ್ಲಾ ಯೋಜನೆಗಳನ್ನೂ ಏಕೆ ವಿರೋಧಿಸಬೇಕು? ನಮ್ಮಲ್ಲಿನ ಎಲ್ಲರಿಗೂ ಸೌಲಭ್ಯಗಳು ಬೇಡವೆ? ನಾಗರಿಕ ಸೌಲಭ್ಯ ಬೇಕೆಂದರೆ ಕೆಲವು ತ್ಯಾಗ ಮಾಡಲೇಬೇಕು! ಬೆಂಗಳೂರಿಗೆ ಕುಡಿಯುವ ನೀರನ್ನು ತರಬೇಕೆಂದರೆ, ವಿಶಾಲ ರಸ್ತೆ ಬೇಕೆಂದರೆ 'ಪರಿಸರನಾಶ' ಎಂದು ನೋಡುತ್ತಾ ಕುಳಿತರೆ ಆಗುವುದಿಲ್ಲ!'' ಅಂತ. ನಿಜ, ಬೆಳೆಯುತ್ತಿರುವ ನಗರಗಳಿಗೆ, ಪಟ್ಟಣಗಳಿಗೆ ನೀರು ಬೇಕು, ಅಲ್ಲಿ ವಾಸಿಸುವ ಜನರಿಗೆ 'ಕುಡಿಯುವ' ನೀರು ಬೇಕು. ಅದನ್ನು ಒದಗಿಸುವುದು ಸರಕಾರದ ಕರ್ತವ್ಯವೂ ಹೌದು. ಆದರೆ, ಅದೇ ಸಮಯದಲ್ಲಿ, ಜನರ ಭವಿಷ್ಯದ ಹಿತಾಸಕ್ತಿಯನ್ನು ಕಾಪಾಡುವುದು ಸಹ ಸರಕಾರದ ಕರ್ತವ್ಯ ಎಂಬುದನ್ನು ಈ 'ಕೆಲವರು' ಮರೆಯುತ್ತಾರೆ!

ಈಗ, ಅಂದರೆ ಇಪ್ಪತ್ತೊಂದನೆಯ ಶತಮಾನದ ಮೂರನೆಯ ದಶಕದಲ್ಲಿ ವಾಸಿಸುತ್ತಿರುವ ಪ್ರಜ್ಞಾವಂತ ಜನರೆಲ್ಲರೂ ಒಂದು ವಿಚಾರವನ್ನು ಗಮನಿಸಬೇಕು, ಇದುವರೆಗೂ ಗಮನಿಸದೇ ಇದ್ದಲ್ಲಿ ಗುರುತಿಸಬೇಕು: ಅದೇನೆಂದರೆ, 'ಅಭಿವೃದ್ಧಿ ಸಾಧಿಸಲು ಪರಿಸರವನ್ನು ನಾಶಪಡಿಸುವ ಕಾಲ ಮುಗಿದು ಹೋಯಿತು. ಕಾಡು, ಹುಲ್ಲುಗಾವಲು, ಪರ್ವತಗಳನ್ನು ನಾಶಪಡಿಸಿ ಅಭಿವೃದ್ಧಿ ಕಾಮಗಾರಿ ನಡೆಸುವ ಕಾಲ ಇದಲ್ಲ. ನಾವು ಅಷ್ಟು ಸಿರಿವಂತರಲ್ಲ. ಇನ್ನೇನಿದ್ದರೂ, ಜವಾಬ್ದಾರಿಯುತ ಅಭಿವೃದ್ಧಿ ಕೆಲಸಗಳನ್ನು ಕೈಗೊಳ್ಳಬೇಕು'. ಕಳೆದ ಶತಮಾನದಲ್ಲಿ, ಡ್ಯಾಮ್, ರಸ್ತೆಗಳ ನಿರ್ಮಾಣಕ್ಕೆ, ಇತರ ಉದ್ದೇಶಗಳಿಗೆ ಕಾಡನ್ನು ಕಡಿದುಹಾಕುವುದು ತೀರಾ ಸಾಮಾನ್ಯ ಸಂಗತಿ ಎನಿಸಿತ್ತು (ಉದಾ: ಶರಾವತಿ ಜಲವಿದ್ಯುತ್ ಯೋಜನೆ). ಬಹುಶಃ, ಆಗ ನಮ್ಮ ದೇಶ ತುಸು ಹಿಂದುಳಿದಿತ್ತು ಮತ್ತು ಅಂಥ ಸಂದರ್ಭದಲ್ಲಿ ಪರಿಸರ ರಕ್ಷಣೆಯು ಕಡಿಮೆ ಆದ್ಯತೆಯ ವಿಷಯವಾಗಿತ್ತು ಎಂದು ತಿಳಿದು, ಪರಿಸರ ನಾಶ ಮಾಡಿ ಅಭಿವೃದ್ಧಿ ಕೆಲಸ ಕೈಗೊಂಡರು. ಅದು ಅಂದಿನ ಅಗತ್ಯ ಎಂದು ಹೇಳಲೂಬಹುದು.

ಆದರೆ, ಈಗ ಕಾಲ ಬದಲಾಗಿದೆ. ನಮ್ಮಲ್ಲಿ ಉಳಿದುಕೊಂಡಿರುವ ಪರಿಸರವು ಬಹಳ ಸೂಕ್ಷ್ಮವಾಗಿದೆ, ಅಮೂಲ್ಯವಾಗಿದೆ. ಇಂದು ಅಭಿವೃದ್ಧಿಗಾಗಿ, ಬೆಂಗಳೂರಿನಂಥ ನಗರಕ್ಕೆ ನೀರು ತರಲು, ರಸ್ತೆ ಅಥವಾ ಮೆಟ್ರೋ ಮಾರ್ಗ ನಿರ್ಮಿಸಲು ಪರಿಸರವನ್ನು ನಾಶಪಡಿಸುವ ಮತ್ತು ಮರಗಳನ್ನು ಕಡಿಯುವಷ್ಟು ಶ್ರೀಮಂತರಾಗಿ ನಾವು ಉಳಿದಿಲ್ಲ. ಈಗ ಉಳಿದಿರುವ ಪರಿಸರವನ್ನು ಪೂರ್ತಿಯಾಗಿ ರಕ್ಷಿಸಿಕೊಂಡು, ಅಭಿವೃದ್ಧಿಯನ್ನು ಸಾಧಿಸುವುದು ಇಂದಿನ ಆದ್ಯತೆಯಾಗಬೇಕು. ಇದನ್ನು ರಾಜಕಾರಣಿಗಳು, ಜನಸಾಮಾನ್ಯರು, ಪ್ರಾಜ್ಞರು ಗುರುತಿಸುವ ಅಗತ್ಯವಿದೆ.

ಈ ಬರಹದ ಆರಂಭದಲ್ಲಿ, ಮನುಷ್ಯನೇ ನಿರ್ಮಿಸಿದ ಮರುಭೂಮಿಯ ಕುರಿತು ಪ್ರಸ್ತಾಪಿಸಿದೆ. ಅದೇ, ಅರಾಲ್ (ಅರಾಲ್‌ಕುಮ್) ಮರುಭೂಮಿ. ಆ ಪ್ರದೇಶದಲ್ಲಿ ಅರಾಲ್ ನದಿ, ಅದೇ ಹೆಸರಿನ ಸರೋವರ ಇತ್ತು. ಆಧುನಿಕ ಮನುಷ್ಯನು ತನ್ನ ಜಲದಾಹಕ್ಕಾಗಿ ಕೈಗೊಂಡ ಅಭಿವೃದ್ಧಿ ಕಾಮಗಾರಿಯಿಂದಾಗಿ, ಈಗ ಅಲ್ಲಿ ಅದೇ ಹೆಸರಿನ ಮರುಭೂಮಿ ಇದೆ! ಇದು ರಷ್ಯಾ ಮತ್ತು ಅದರ ಸರಹದ್ದಿನ ದೇಶಗಳಲ್ಲಿ ಹರಡಿದೆ.

ಅಲ್ಲಿನವರು 'ಅಭಿವೃದ್ಧಿ'ಯ ಹೆಸರಿನಲ್ಲಿ ನಿರ್ಮಿಸಿದ ಮರುಭೂಮಿಯ ಉದಾಹರಣೆಯು ನಮ್ಮ ರಾಜ್ಯದವರಿಗೆ ಇಂದು ತುರ್ತು ಪಾಠ ಎನಿಸಬೇಕು. 1960ರ ದಶಕದ ತನಕ ರಷ್ಯಾದಲ್ಲಿ 'ಅರಾಲ್ ಸಮುದ್ರ' ಎಂಬ ವಿಶಾಲವಾದ ಸರೋವರವಿತ್ತು. ಸಿಹಿನೀರಿನಿಂದ ತುಂಬಿದ್ದ, ಲಕ್ಷಾಂತರ ಜನರಿಗೆ, ಜೀವಿಗಳಿಗೆ ಆಶ್ರಯ ನೀಡಿದ್ದ, ಎರಡು ಪ್ರಮುಖ ಬಂದರುಗಳನ್ನೂ ಹೊಂದಿದ್ದ ಜಲರಾಶಿಯಾಗಿತ್ತು ಈ 'ಸಮುದ್ರ'. ಆ ಸರೋವರದಲ್ಲಿ ದೊಡ್ಡ ದೊಡ್ಡ ಹಡಗುಗಳು ಸರಕು ಸಾಗಾಣಿಕೆಯನ್ನು ಮಾಡುತ್ತಿದ್ದವು. ಅದೀಗ ಬರಡುಭೂಮಿ, ಮರುಭೂಮಿಯಾಗಿ ಪರಿವರ್ತನೆಗೊಂಡಿದೆ! ಆ ವಿಶಾಲ ಸರೋವರ ಇದ್ದ ಜಾಗವನ್ನು ಇಂದು ಅರಾಕುಮ್ ಮರುಭೂಮಿ ಎಂದು ಕರೆಯುತ್ತಿದ್ದಾರೆ! ಜಗತ್ತಿನ ಅತಿ ದೊಡ್ಡ ಪ್ರಾಕೃತಿಕ ದುರಂತಗಳಲ್ಲಿ (ಮಾನವ ನಿರ್ಮಿತ) ಇದು ಒಂದು ಎಂಬ ಕುಖ್ಯಾತಿ ಗಳಿಸಿದೆ.

1960ರಲ್ಲಿ ಅರಾಲ್ ಸಮುದ್ರವು ಸುಮಾರು 435 ಕಿ.ಮೀ. ಉದ್ದವಿತ್ತು, 290 ಕಿ.ಮೀ. ಅಗಲವಿತ್ತು. ರಷ್ಯಾದ ಕಜಕಿಸ್ತಾನ ಮತ್ತು ಉಜ್‌ಬೆಕಿಸ್ತಾನ ಪ್ರಾಂತ್ಯಗಳ ನಡುವೆ ಸುಮಾರು 68,000 ಚದರ ಕಿ.ಮೀ. ವಿಸ್ತಾರಕ್ಕೆ ವ್ಯಾಪಿಸಿಕೊಂಡಿತ್ತು. 1970ರ ದಶಕದಲ್ಲಿ ಅದು ಜಗತ್ತಿನ ನಾಲ್ಕನೆಯ ಅತಿ ದೊಡ್ಡ ಸರೋವರ! ಎರಡು ನದಿಗಳು ಅರಾಲ್ ಸರೋವರಕ್ಕೆ ನೀರುಣಿಸುತ್ತಿದ್ದವು. ಆ ಸರೋವರದ ಸುತ್ತಲೂ ಹಳ್ಳಿಗಳಿದ್ದವು, ಊರುಗಳಿದ್ದವು, ಬಂದರುಗಳಿದ್ದವು, ಪುರಾತನ ಕಾಲದ ಒಂದು ಸಂಸ್ಕೃತಿ ಇತ್ತು. ಸರೋವರವನ್ನು ಆಶ್ರಯಿಸಿ ವಿವಿಧ ಪ್ರಾಣಿ-ಪಕ್ಷಿಗಳಿದ್ದವು, 22 ಪ್ರಭೇದದ ಮೀನುಗಳಿದ್ದವು. ಅವುಗಳಲ್ಲಿ ನಾಲ್ಕು ಪ್ರಭೇದದ ಮೀನುಗಳು, ಕೇವಲ ಅರಾಲ್ ಸರೋವರದಲ್ಲಿ ಮಾತ್ರ ಕಾಣಸಿಗುತ್ತಿದ್ದವು.

ಆ ವಿಶಾಲ ಸರೋವರವಿದ್ದ ಜಾಗದಲ್ಲಿ ಇಂದು ವಿಶಾಲ ಮರುಭೂಮಿ ಇದೆ. ಹಿಂದೆ ಇದ್ದ ನದಿ ಮತ್ತು ಸರೋವರದ ಅವಶೇಷ ಎನ್ನಬಹುದಾದ ಜಾಗಗಳು ಈಗ ಇವೆ. ಆ ಸರೋವರಕ್ಕೆ ವಿಶಿಷ್ಟ ಎನಿಸಿದ್ದ ನಾಲ್ಕು ಪ್ರಭೇದದ ಮೀನುಗಳು ಈ ಭೂಮಿಯಿಂದಲೇ ಕಣ್ಮರೆಯಾಗಿವೆ.

ಈ ಮಾನವ ನಿರ್ಮಿತ ಪ್ರಾಕೃತಿಕ ದುರಂತಕ್ಕೆ ಮುಖ್ಯ ಕಾರಣವೆಂದರೆ ಅಭಿವೃದ್ಧಿಯ ಹೆಸರಿನಲ್ಲಿ ಕೈಗೊಂಡ ವಿವೇಚನಾರಹಿತ ನೀರಾವರಿ ಯೋಜನೆಗಳು! ಹಿಂದೆ ಅಲ್ಲಿದ್ದ ಸೋವಿಯತ್ ಸರಕಾರವು ಅಲ್ಲಿದ್ದ ಎರಡು ನದಿಗಳಿಗೆ ಸಾಲು ಸಾಲು ಅಣೆಕಟ್ಟುಗಳನ್ನು ಕಟ್ಟಿಸಿತು. 30ಕ್ಕೂ ಹೆಚ್ಚು ಅಣೆಕಟ್ಟುಗಳನ್ನು, ಒಡ್ಡುಗಳನ್ನು ಕಟ್ಟಲಾಯಿತು. ಅಲ್ಲಿನ ನದಿಯನ್ನು 'ನದಿ ತಿರುವು' ಯೋಜನೆಗೆ ಯಶಸ್ವಿಯಾಗಿ ಒಳಪಡಿಸಲಾಯಿತು. ಅದರ ನೀರನ್ನು ಬಳಸಿ ಹತ್ತಿ ಬೆಳೆದರು. ಅಂದು 'ಬಿಳಿ ಚಿನ್ನ' ಎಂದು ಕರೆಯಲ್ಪಟ್ಟ ಹತ್ತಿಯನ್ನು ಬೆಳೆದು, ರಫ್ತು ಮಾಡಿ, ಅಭಿವೃದ್ಧಿ ಸಾಧಿಸುವ ಯೋಜನೆಗೆ ಜಾರಿಗೆ ಬಂತು. ಇದಕ್ಕಾಗಿ ಅಂದು ರಷ್ಯಾದ ಭಾಗವಾಗಿದ್ದ ಕಜಕಿಸ್ತಾನ ಮತ್ತು ಉಜ್‌ಬೆಕಿಸ್ತಾನದ ವಿಶಾಲ ಬಯಲುಗಳ ಉಪಯೋಗವಾಯಿತು. ಕಣ್ಣು ಹಾಯಿಸಿದಷ್ಟು ದೂರದವರೆಗೆ ಹತ್ತಿ ಹೊಲಗಳು ತಲೆಯೆತ್ತಿದವು. 1988ರಲ್ಲಿ ಉಜ್‌ಬೆಕಿಸ್ತಾನ್ ಜಗತ್ತಿನಲ್ಲೇ ಅತಿ ಹೆಚ್ಚು ಹತ್ತಿ ರಫ್ತು ಮಾಡುವ ಪ್ರಾಂತ್ಯ ಎಂಬ ಹೆಸರು ಗಳಿಸಿತು.

ಆಘಾತಕಾರಿ ವಿಚಾರವೆಂದರೆ, ಅರಾಲ್ ಸಮುದ್ರಕ್ಕೆ ನೀರನ್ನು ಒದಗಿಸುತ್ತಿದ್ದ ಆ ಎರಡು ನದಿಗಳ ನೀರನ್ನು ಈ ರೀತಿ ಹತ್ತಿ ಬೆಳೆಯಲು ಉಪಯೋಗಿಸಿದರೆ, ಅರಾಲ್ ಸಮುದ್ರವು ಕ್ರಮೇಣ ಒಣಗಿಹೋಗುತ್ತದೆ ಎಂಬ ವಿಚಾರವು ಅಲ್ಲಿನ ಸರಕಾರದ ಇಲಾಖೆಗಳಿಗೆ, ಅಧಿಕಾರಿಗಳಿಗೆ, ಎಂಜಿನಿಯರುಗಳಿಗೆ ಗೊತ್ತಿತ್ತು. ಇದರಿಂದಾಗಿ ಅರಾಲ್ ಸಮುದ್ರ ಬರಡಾಗುತ್ತದೆ ಎಂಬ ವಿಚಾರವನ್ನು ಸರಕಾರದ ಇಲಾಖೆಗಳು ಚರ್ಚಿಸಿಯೂ ಇದ್ದವು! ಆದರೆ, ಅರಾಲ್ ಸಮುದ್ರದ ಉಳಿವಿಗಿಂತಲೂ, ಹಣದ ಬೆಳೆ ಎನಿಸಿದ ಹತ್ತಿ ತರುತ್ತಿದ್ದ ಆದಾಯಕ್ಕೆ ಹೆಚ್ಚಿನ ಮಹತ್ವ ನೀಡಲಾಯಿತು.

1960ರಲ್ಲಿ ವಿಶಾಲ ಸರೋವರ, ಆದರೆ 1990ರ ಸಮಯಕ್ಕೆ ಅರಾಲ್ ಸರೋವರದ ಶೇ.40ರಷ್ಟು ಭಾಗ ಒಣಗಿಹೋಗಿತ್ತು. ಅಲ್ಲಿದ್ದ ಬಂದರುಗಳಲ್ಲಿ ನಿಂತಿದ್ದ ಮಧ್ಯಮ ಗಾತ್ರದ ಹಡಗುಗಳು, ಅಲ್ಲೇ ಮರಳಿನ ಮೇಲೆ ಬಂಧಿಯಾದವು. ಜತೆಗೆ, ಪ್ರತಿವರ್ಷ ನೀರಿನ ಮಟ್ಟ ಒಂದೇ ಸಮನೆ ಕಡಿಮೆಯಾಗುತ್ತಲೇ ಹೋಗುತ್ತಿತ್ತು! 2010ರ ವೇಳೆಗೆ ಅರಾಲ್ ಸಮುದ್ರವು ಶೇ.90ರಷ್ಟು ಒಣಗಿಹೋಗಿತ್ತು. ಸರೋವರವು ಇಬ್ಭಾಗವಾಗಿ, ಉತ್ತರ ಅರಾಲ್ ಮತ್ತು ದಕ್ಷಿಣ ಅರಾಲ್ ಎಂಬ ಎರಡು ಪುಟ್ಟ ಸರೋವರಗಳು ರೂಪುಗೊಂಡವು! ಜಗತ್ತಿನ ನಾಲ್ಕನೆಯ ಅತಿದೊಡ್ಡ ಸರೋವರ ಎಂಬ ಖ್ಯಾತಿಯು, ಮರುಭೂಮಿಯಲ್ಲಿ ಹುದುಗಿ ಹೋಯಿತು. ಆ ಸರೋವರದ ಸುತ್ತಲೂ ಇದ್ದ ಹಳ್ಳಿಗಳ ಜನರು ಕಂಗೆಟ್ಟರು, ಹಾರುವ ಧೂಳಿನಿಂದಾಗಿ ಶ್ವಾಸಕೋಶ ಕಾಯಿಲೆಗಳಿಗೆ ಒಳಗಾದರು.

2000ರ ನಂತರ ಈ ಸರೋವರವನ್ನು ಪುನರುಜ್ಜೀವನಗೊಳಿಸುವ ಕುರಿತು ಸ್ವಲ್ಪ ಕೆಲಸ ನಡೆಯಿತು. ಕಜಕಿಸ್ತಾನ ಮತ್ತು ಉಜ್‌ಬೆಕಿಸ್ತಾನ ಮತ್ತು ಸುತ್ತಲಿನ ಇತರ ಮೂರು ದೇಶಗಳು ಸೂಕ್ತ ಕ್ರಮ ಕೈಗೊಂಡು, ಅರಾಲ್ ಸಮುದ್ರಕ್ಕೆ ಮತ್ತೆ ಜೀವ ತುಂಬಬೇಕು ಎಂಬ ಒತ್ತಡಕ್ಕೆ ಸಿಲುಕಿ, ಒಪ್ಪಂದಕ್ಕೆ ಬಂದವು. 2000ರಲ್ಲಿ ಯುನೆಸ್ಕೋ, 2004ರಲ್ಲಿ ವಿಶ್ವಬ್ಯಾಂಕ್ ಈ ಜಲಮೂಲವನ್ನು ಪುನರುಜ್ಜೀವನಗೊಳಿಸಲು ಕಾರ್ಯಸೂಚಿಗಳನ್ನು ಹಾಕಿಕೊಂಡು, ಸ್ವಲ್ಪ ಕೆಲಸವೂ ನಡೆದಿದೆ. ಆದರೆ ಈಗಲೂ ವಿಶಾಲ ಪ್ರದೇಶದಲ್ಲಿ ಹತ್ತಿ ಬೆಳೆದು ರಫ್ತು ಮಾಡುತ್ತಿರುವ ಉಜ್‌ಬೆಕಿಸ್ತಾನವು ಇದರಲ್ಲಿ ಹೆಚ್ಚು ಆಸಕ್ತಿ ತೋರಿಸುತ್ತಿಲ್ಲ.

ಆ ವಿಶಾಲ ಮರುಭೂಮಿ ಸೃಷ್ಟಿಸಿದ ಮಾನವನ ದುಸ್ಸಾಹಸವನ್ನು ನಮ್ಮ ರಾಜ್ಯದವರು ನೆನಪಿಸಿಕೊಳ್ಳುವ ಕಾಲ ಇದಾಗಿದೆ. ''ವ್ಯರ್ಥವಾಗಿ ಪಶ್ಚಿಮದತ್ತ ಹರಿದುಹೋಗಿ, ಸಮುದ್ರ ಸೇರುತ್ತಿರುವ ನೀರನ್ನು ಪೂರ್ವಕ್ಕೆ ತಿರುಗಿಸಿ, ದೂರದ ಬೆಂಗಳೂರು, ತುಮಕೂರು, ಕೋಲಾರ ಮತ್ತು ಇತರ ಪ್ರದೇಶಗಳಿಗೆ ನೀರನ್ನು ಒದಗಿಸುವುದು''- ಇಂಥ ಅರ್ಥ ಬರುವ ಹೇಳಿಕೆಯನ್ನು ನಮ್ಮ ರಾಜ್ಯದಲ್ಲಿ ಹಲವರು ಆಗಾಗ ಹೇಳುತ್ತಿರುತ್ತಾರೆ. ಅವರಲ್ಲಿ ಕೆಲವು ಅಭಿಯಂತರರೂ ಸೇರಿದ್ದಾರೆ, ರಾಜಕೀಯದವರೂ ಇದ್ದಾರೆ. ಈ ಹೇಳಿಕೆಯು ಅದೆಷ್ಟು ಬಾಲಿಶ, ಅಪ್ರಬುದ್ಧ, ಸ್ವಾರ್ಥಲಾಲಸೆಯಿಂದ ಕೂಡಿದೆ ಎಂಬುದನ್ನು, ಮುಂದಿನ ದಶಕದಲ್ಲಿ ನಮ್ಮ ಜನರೇ ಗುರುತಿಸುತ್ತಾರೆ. ಏಕೆಂದರೆ, 'ವ್ಯರ್ಥವಾಗಿ ಹರಿದು ಸಮುದ್ರ ಸೇರುವ ನೀರು' ಎಂಬ ಪರಿಕಲ್ಪನೆಯೇ ಸರಿಯಿಲ್ಲ ಎಂದು ಹಲವು ಪರಿಸರ ತಜ್ಞರು ಆಧಾರಸಹಿತ ಹೇಳಿದ್ದಾರೆ. ಜತೆಗೆ, ಪಶ್ಚಿಮದತ್ತ ಹರಿಯುವ ನದಿಗಳನ್ನು ಆಶ್ರಯಿಸಿದ ಊರುಗಳಿಗೆ ಮುಂದೆ ನೀರು ದೊರಕದೇ ಇರುವ ಅಪಾಯವೂ ಈ ಯೋಜನೆಯಿಂದ ಇದೆ.

ಜತೆಗೆ, ಇಂಥ ಯೋಜನೆಗಳಿಂದ ಅರಣ್ಯ ನಾಶವಾದಾಗ, ಅದು ಆ ಅರಣ್ಯ ಇದ್ದ ಪ್ರದೇಶದ ಅವನತಿ ಮಾತ್ರವಲ್ಲ, ಆ ಅರಣ್ಯದ ಸುತ್ತಲೂ ಸುಮಾರು 50ರಿಂದ 100 ಕಿ.ಮೀ. ದೂರದ ಕೃಷಿಭೂಮಿಯ ಅವನತಿಯೂ ಹೌದು. ಉದಾಹರಣೆಗೆ, ಶಿರಸಿ, ಯಲ್ಲಾಪುರದ ಕಾಡುಗಳಿಂದಾಗಿ, ಇಂದು ದೂರದ ಹಾವೇರಿ, ಧಾರವಾಡದ ಕೃಷಿಕರಿಗೆ ಅಗತ್ಯವಿರುವ ಮಳೆಯಾಗುತ್ತದೆ! ಆ ಕಾಡು ನಾಶವಾದರೆ, ದೂರದೂರಿನ ಕೃಷಿಕರೂ ಅಪಾರ ಸಂಕಟ ಅನುಭವಿಸಲೇಬೇಕಾದೀತು. ಆದ್ದರಿಂದ, 'ಪಶ್ಚಿಮದತ್ತ ಹರಿಯುವ ನೀರು ವ್ಯರ್ಥ, ಪಶ್ಚಿಮ ಘಟ್ಟಗಳ ಕಾಡಿನ ಸ್ವಲ್ಪ ಭಾಗ ನಾಶ ಮಾಡಿ, ಕಾಮಗಾರಿ ಕೈಗೊಂಡರೆ ಹೆಚ್ಚಿನ ನಷ್ಟವಾಗುವುದಿಲ್ಲ' ಎಂಬರ್ಥ ಬರುವ ಸಮಜಾಯಿಷಿಗಳು, ಈ ಇಪ್ಪತ್ತೊಂದನೆಯ ಶತಮಾನದಲ್ಲಿ ಅರ್ಥವಿಲ್ಲದ ಸಮಜಾಯಿಷಿ ಎಂದೇ ಹೇಳಬೇಕಾಗುತ್ತದೆ.

ಈಗಾಗಲೇ, ದಟ್ಟ ಅರಣ್ಯವಿರುವ ಪ್ರದೇಶದಲ್ಲಿ ಎತ್ತಿನ ಹೊಳೆ ಯೋಜನೆಯನ್ನು ಕೈಗೊಂಡು, ಸಾಕಷ್ಟು ಕಾಡನ್ನು ನಾಶಪಡಿಸಲಾಗಿದೆ. ಬೇಡ್ತಿ-ವರದಾ ನದಿ ಜೋಡಣೆಯ ಹೆಸರಿನಲ್ಲಿ ಇನ್ನಷ್ಟು ಕಾಡನ್ನು ನಾಶಪಡಿಸಿದರೆ, ಮುಂದಿನ ದಶಕಗಳಲ್ಲಿ ನಮ್ಮ ರಾಜ್ಯದಲ್ಲಿ ಇನ್ನಷ್ಟು ಬಿಕ್ಕಟ್ಟು ಎದುರಾದೀತು. ಇದರ ಜತೆಯಲ್ಲೇ, ಬೇರೆ ಬೇರೆ ಪ್ರದೇಶಗಳಲ್ಲಿ ವಿವಿಧ ಉದ್ದೇಶಗಳಿಗಾಗಿ ಕಾಡು ಪ್ರದೇಶಗಳನ್ನು, ಹುಲ್ಲುಗಾವಲುಗಳನ್ನು, ಬೆಟ್ಟ ಪ್ರದೇಶಗಳನ್ನು ನಿರಂತರವಾಗಿ ನಾಶಪಡಿಸಲಾಗುತ್ತಿದೆ. ಇದು ಸಲ್ಲದು. ನಮ್ಮ ರಾಜ್ಯದ ಅಭಿವೃದ್ಧಿಗಾಗಿ, ಪರಿಸರವನ್ನು ನಾಶಪಡಿಸುವ ಕಾಲ ಹೊರಟುಹೋಯಿತು. ಈಗ ಏನೇ ಅಭಿವೃದ್ಧಿ ನಡೆಸಬೇಕಾದರೂ, ಇರುವ ಪರಿಸರವನ್ನು ರಕ್ಷಿಸಿಕೊಂಡೇ ಯೋಜನೆಗಳನ್ನು ತಯಾರಿಸಬೇಕು. ಇದರಿಂದ, ಯೋಜನೆಗಳನ್ನು ಅನುಷ್ಠಾನಗೊಳಿಸಲು, ಹೆಚ್ಚು ಹಣ ಬೇಕಾದೀತು, ನಿಜ; ಆದರೆ, ಪರಿಸರವನ್ನು ನಾಶಪಡಿಸಿ, ಕಾಮಗಾರಿಗಳನ್ನು ಕೈಗೊಳ್ಳುವ ಕಾಲ ಇದಲ್ಲ, ಇಂಥ ಪ್ರಮುಖ ವಿಚಾರವನ್ನು ನಮ್ಮ ಪ್ರಭುತ್ವ ಮತ್ತು ಪ್ರಾಜ್ಞರು ಅರಿತುಕೊಳ್ಳಬೇಕಾದ ತುರ್ತು ಅಗತ್ಯ ಇಂದಿನದಾಗಿದೆ.

ಓದುಗರ ಓಣಿ

ಓದುಗರನ್ನು ಬಿಟ್ಟು ಇಲ್ಲಿ ಯಾರಿಗೂ ಪ್ರವೇಶವಿಲ್ಲ

ನಿಜವ ನುಡಿದಿಹೆ..

ವಿಶಿಷ್ಟ ಭಾರತ ಕುರಿತ ವಿಶಿಷ್ಟ ಪುಸ್ತಕವೊಂದರ ಬಗ್ಗೆ ವಿಶ್ವೇಶ್ವರ ಭಟ್ಟರು ಬರೆದಿರುವ 'ನೂರೆಂಟು ವಿಶ್ವ' ಅಂಕಣಬರಹವು (ಫೆ.5), ಆ ಅಂಕಣದ ಓದುಗರು ಪುಸ್ತಕವನ್ನು ಎಲ್ಲಿದ್ದರೂ ಹುಡುಕಿ ತಂದು ಓದುವಂಥ ಕುತೂಹಲ ಹುಟ್ಟಿಸುವಂತಿದೆ. ಆ ಪುಸ್ತಕವನ್ನು ಈಗಾಗಲೇ ಓದಿರುವ ನಾನು ಭಟ್ಟರ ಪ್ರತಿ ವಾಕ್ಯವನ್ನೂ ಅನುಮೋದಿಸುತ್ತೇನೆ. ಅದರಲ್ಲಿಯ ಒಂದು ಮಾಹಿತಿಯ ಸುತ್ತ ನನ್ನ ಈ ಪತ್ರದ ಚಿತ್ತ.

ಭಾರತದಲ್ಲಿ ಶೇ.87ರಷ್ಟು ಪುರುಷರು ಮತ್ತು ಶೇ.75ರಷ್ಟು ಮಹಿಳೆಯರು ಮಾಂಸಾಹಾರಿಗಳು ಎಂದು ಆ ಪುಸ್ತಕದಲ್ಲಿರುವ ಮಾಹಿತಿಯೊಂದನ್ನು ಭಟ್ಟರು ಪ್ರಸ್ತಾಪಿಸಿದ್ದಾರಷ್ಟೆ. ಸಸ್ಯಾಹಾರ ಸೇವನೆಯ ಪರವಾಗಿ, ಮಾಂಸಾಹಾರ ಸೇವನೆಯ ವಿರುದ್ಧವಾಗಿ ಮಾತನಾಡುವವರ ಸಂಖ್ಯೆ ಮತ್ತು ದನಿ ಕೆಲವು ವರ್ಷಗಳಿಂದೀಚೆಗೆ ದೊಡ್ಡದಾಗುತ್ತ ಸಾಗಿದೆ. ಇಂಥ ಸಂದರ್ಭದಲ್ಲಿ ಹೀಗೊಂದು ಯೋಚನೆ ಮಾಡೋಣ: ದೇಶದಲ್ಲಿ ಎಲ್ಲರೂ ಸಸ್ಯಾಹಾರವನ್ನು ಮಾತ್ರ ಸೇವಿಸತೊಡಗಿದರೆ ಆಗ ಎಲ್ಲರಿಗೂ ಸಾಕಾಗುವಷ್ಟು ಸಸ್ಯಾಹಾರ ದೊರಕಲು ಸಾಧ್ಯವೇ? ಅದಕ್ಕಾಗಿ ಬೇಕಾಗುವ ಹೆಚ್ಚುವರಿ ಕೃಷಿ ಭೂಮಿ, ಸಾಮಗ್ರಿಗಳು, ಕೃಷಿಕರು ದೇಶದಲ್ಲಿ ಲಭ್ಯವೇ? ಇಲ್ಲ ತಾನೆ? ಲಭ್ಯವಾಗಲು ಅದೆಷ್ಟು ದಶಕಗಳ ಕಾಲಾವಧಿ ಬೇಕಾಗಬಹುದು? ಅಲ್ಲಿಗೂ, ಎಲ್ಲ ಲಭ್ಯವಾದರೂ, ಆಗ ಪ್ರಾಣಿ-ಪಕ್ಷಿಗಳ ಸಂಖ್ಯೆಯ ಬೃಹತ್ ಏರಿಳಿತಗಳಿಂದಾಗಿ, ಮಾನವನೂ ಸೇರಿದಂತೆ ವಿವಿಧ ಜೀವಿಗಳ ಸಹಜೀವನದಲ್ಲಿ ಅಸಮತೋಲನ ಉಂಟಾಗುವುದಲ್ಲವೇ? ಜತೆಗೆ, ಇತರ ನಾನಾ ಸಮಸ್ಯೆಗಳೂ ಅಪಸವ್ಯಗಳೂ ಉದ್ಭವಿಸುತ್ತವೆ ತಾನೆ? ಇದೆಲ್ಲ ಸರಿಹೋಗಲು ಅದೆಷ್ಟು ತಲೆಮಾರುಗಳು ಬೇಕಾಗಬಹುದು? ಇಷ್ಟಕ್ಕೂ, ಎಲ್ಲ ಸರಿಹೋಗುತ್ತದೆ ಎಂದು ಏನು ಖಾತ್ರಿ?

ಮಾಂಸಾಹಾರಿಗಳನ್ನು ನಿಕೃಷ್ಟವಾಗಿ ಕಾಣುವ ಸಸ್ಯಾಹಾರಿಗಳು ನಮ್ಮಲ್ಲಿ ದೊಡ್ಡ ಸಂಖ್ಯೆಯಲ್ಲಿದ್ದಾರೆ. ಅವರು ಈ ಎಲ್ಲ ಪ್ರಶ್ನೆಗಳ ಬಗೆಗೂ ಯೋಚನೆ ಮಾಡಬೇಕು. ಅಪ್ಪಟ ಸಸ್ಯಾಹಾರಿಯಾಗಿದ್ದುಕೊಂಡು ನಾನು ಈ ಪ್ರತಿಪಾದನೆ ಮಾಡುತ್ತಿದ್ದೇನೆ! ದಿಟ ನುಡಿಯುವಲ್ಲಿ ದಿಟ್ಟತನ ತೋರಲು ಏನಡ್ಡಿ?

– ಎಚ್. ಆನಂದರಾಮ ಶಾಸ್ತ್ರೀ, ಬೆಂಗಳೂರು

ನಿರ್ಲಕ್ಷ್ಯ ವಿಷಾದನೀಯ

ಆನ್‌ಲೈನ್/ದೃಶ್ಯಮಾಧ್ಯಮಗಳ ಬಳಕೆ ಹೆಚ್ಚಾಗುತ್ತಾ ಹೋದಂತೆ ಪುಸ್ತಕಗಳ ಓದು ಮೂಲೆಗುಂಪಾಗಿದೆ. ಪತ್ರಿಕೆ ಓದುವುದೂ ದುಸ್ತರ. ಪುಸ್ತಕದ ಓದಿನ ರಸಾಸ್ವಾದನೆ ಡಿಜಿಟಲ್ ಮಾಧ್ಯಮದಲ್ಲಿ ದಕ್ಕುವುದಿಲ್ಲ ಎಂದಿರುವ ಸಂಪಾದಕೀಯ (ಫೆ.3) ಸಮಯೋಚಿತವಾಗಿದೆ. ಗ್ರಂಥಾಲಯಗಳು ಜ್ಞಾನ ಮಂದಿರಗಳು, ಅವು ಸದಾ ಬೆಳಗುತ್ತಿರಬೇಕು. ಈ ದೀಪ ಉಜ್ವಲವಾಗಿ ಬೆಳಗುತ್ತಿರಲು ಹೊಸದಾಗಿ ಪ್ರಕಟವಾಗುತ್ತಿರುವ ಪುಸ್ತಕಗಳ ಸೇರ್ಪಡೆ ಅಗತ್ಯ. ಆದರೆ ಸರಕಾರ ಮಾತ್ರ ಇದನ್ನು ಸಂಪೂರ್ಣವಾಗಿ ನಿರ್ಲಕ್ಷಿಸಿರುವುದು ಅತ್ಯಂತ ವಿಷಾದಕರ. ಸರಕಾರವು ಏಕಗವಾಕ್ಷಿ ಯೋಜನೆಯನ್ನೇನೋ ರೂಪಿಸಿದ್ದರೂ 2021ರಲ್ಲಿ ಪ್ರಕಟವಾದ ಕೃತಿಗಳ ಆಯ್ಕೆಯಾಗಿ ವರ್ಷವಾಗುತ್ತಾ ಬಂದರೂ ಇನ್ನೂ ಖರೀದಿಸಿಲ್ಲ. 2022ರ ಕೃತಿಗಳ ಅಯ್ಕೆ ಪಟ್ಟಿ ಸಿದ್ಧವಾಗಿದ್ದರೂ ಹಣ ಬಿಡುಗಡೆಯಾಗಿಲ್ಲ. ಕೊಳ್ಳಲು ಅನುದಾನ ಇಲ್ಲದ್ದರಿಂದ ಆಯ್ಕೆಯನ್ನು ತಡೆಹಿಡಿಯಲಾಗಿದೆ. ಎಷ್ಟೋ ಕಾಮಗಾರಿಗಳಿಗೆ ಹಲವು ಕೋಟಿ ರುಪಾಯಿ ಅನುದಾನವನ್ನು ತಕ್ಷಣ ಬಿಡುಗಡೆ ಮಾಡುವ ಸರಕಾರವು ಪುಸ್ತಕ ಸಂಸ್ಕೃತಿ ವಿಷಯದಲ್ಲಿ ಈ ನಿರ್ಲಕ್ಷ್ಯವನ್ನು ತೋರುವುದೇಕೋ ತಿಳಿಯದು. ಪುಸ್ತಕ ಕೊಳ್ಳುವಲ್ಲಿ ಒಂದು ಪೈಸೆಯೂ ದುರುಪಯೋಗವಾಗದೆ ಅದರ ಲಾಭವು ಲಕ್ಷಾಂತರ ಓದುಗರಿಗೆ ಲಭಿಸುತ್ತದೆ. ಅದೂ ಅಲ್ಲದೆ ಈ ಹಣವನ್ನು ಸರಕಾರವೂ ತೆರಿಗೆಯಲ್ಲಿ ಗ್ರಂಥಾಲಯಕ್ಕಾಗಿಯೇ ಸಂಗ್ರಹಿಸಿರುತ್ತದೆ. ಹೀಗಿರಬೇಕಾದರೆ ಅದಕ್ಕಾಗಿ ಇರುವ ಹಣ ಬಿಡುಗಡೆ ಮಾಡಲು ಏಕೆ ಸಾಧ್ಯವಾಗುತ್ತಿಲ್ಲ? ಪುಸ್ತಕ ಇಲ್ಲದೆ ಇದ್ದರೂ ಯಾರೂ ಕೇಳುವುದಿಲ್ಲ ಎಂದು ನಿರ್ಲಕ್ಷ್ಯವೇ? ಶಾಸಕರಾದವರೂ ಇದರಲ್ಲಿ ಕಿಂಚಿತ್ತೂ ಆಸಕ್ತಿ ವಹಿಸದಿರುವುದು ಏಕೋ!

– ಸತ್ಯಬೋಧ, ಬೆಂಗಳೂರು

ಮೌನ ಮುರಿಯಬೇಕಾದ ಸಾಮಾಜಿಕ ಸವಾಲುಗಳು

ಕ್ಷಮಯಾಧರಿತ್ರಿ

ಮಾಯಾ ಬಾಲಚಂದ್ರ

vveditoped@gmail.com

ಹೆಣ್ಣು ಕೆಲಸ ಮಾಡದ ಯಾವ ಕ್ಷೇತ್ರವೂ ಈಗ ಉಳಿದಿಲ್ಲ. ಒಂದು ರಾಷ್ಟ್ರದ ಅಭಿವೃದ್ಧಿಯ ಮಟ್ಟವನ್ನು ತಿಳಿಯಬೇಕಾದರೆ ಅಲ್ಲಿನ ಮಹಿಳೆಯರ ಸ್ಥಿತಿಗತಿಗಳೇ ಅದಕ್ಕೆ ಮಾಪಕ. ಇದರ ಅರಿವು ಎಲ್ಲರಿಗೂ ಇದೆ. ಮಹಿಳೆ ಕೆಲಸ ಮಾಡುವ ಜಾಗಗಳಲ್ಲಿ ಆಕೆಗೆ ಅನುಕೂಲಕರ ಸ್ಥಿತಿಗಳೇ ಇರುತ್ತವೆಯೇ? ಎನ್ನುವುದು ಪ್ರಶ್ನೆ. ಎಷ್ಟೋ ಸಂದರ್ಭಗಳಲ್ಲಿ ಪುರುಷರಿಗೂ ಅನಾನುಕೂಲವಾಗಿರುವುದಿಲ್ಲವೇ? ಎನ್ನುವುದು ಇನ್ನು ಕೆಲವರ ಪ್ರಶ್ನೆ. ಸ್ತ್ರೀ-ಪುರುಷರಿಬ್ಬರೂ ಸಮಾನವಾಗಿ ಎದುರಿಸುವ ಸಮಸ್ಯೆಗಳು ಬಹಳ ಇವೆ. ಅವುಗಳಲ್ಲದೆ, ಸ್ತ್ರೀ ಮಾತ್ರ, ತಾನು ಸ್ತ್ರೀ ಆಗಿರುವ ಕಾರಣಕ್ಕಾಗಿಯೇ ಎದುರಿಸುವ ಸಂಕಷ್ಟಗಳು 'ಮುಕ್ತ ರಹಸ್ಯ'ವಾಗೇ ಉಳಿದಿವೆ. ಮಹಿಳೆ ಕೆಲಸ ಮಾಡುವ ಜಾಗದಲ್ಲಿ ಆಕೆಯ ಇಷ್ಟಕ್ಕೆ ವಿರುದ್ಧವಾಗಿ ಸಹೋದ್ಯೋಗಿಗಳು, ಮೇಲಧಿಕಾರಿಗಳು ದೈಹಿಕವಾಗಿ, ಮಾನಸಿಕವಾಗಿ ಆಕೆಗೆ ನೀಡುವ ಕಿರುಕುಳವು ಕೇವಲ ವೈಯಕ್ತಿಕ ಅಪರಾಧ ಅನಿಸದೆ, ಸಮಾಜದ ಮೌಲ್ಯವನ್ನೇ ಪ್ರಶ್ನಿಸುವಂತೆ ಮಾಡುತ್ತದೆ. ಮಹಿಳೆಯ ಒಪ್ಪಿಗೆ ಇಲ್ಲದೆ ನಡೆಯುವ ಯಾವುದೇ ಲೈಂಗಿಕ ವರ್ತನೆಯನ್ನು 'ದೌರ್ಜನ್ಯ' ಎಂದೇ ಪರಿಗಣಿಸಬಹುದು. ಅಶ್ಲೀಲ ಮಾತು, ಅಸಭ್ಯ ನೋಟ, ಅನುಚಿತ ಸ್ಪರ್ಶ ಇವೆಲ್ಲವೂ ನೇರವಾಗಿ ಕಾಣುವ physical abuse. ಕೆಲವೊಮ್ಮೆ ಇವು ವಿಪರೀತವಾಗಿ, ಅತ್ಯಾಚಾರದವರೆಗೂ ಹೋಗಿಬಿಡಬಹುದು. ಮಾನಸಿಕ ಕಿರುಕುಳವಂತೂ ಮನೆ, ಕಚೇರಿ, ಸಾರ್ವಜನಿಕ ಸ್ಥಳಗಳಲ್ಲಿ ಪರೋಕ್ಷವಾಗಿ ಮಹಿಳೆಯರನ್ನು ಹೈರಾಣಾಗಿಸುತ್ತಿದೆ. ಈಗಂತೂ ಡಿಜಿಟಲ್ ಯುಗದಿಂದಾಗಿ ನೀಚತನಕ್ಕೆ ಸುಲಭ ದಾರಿ ತೆರೆದುಕೊಂಡು ಬಿಟ್ಟಿದೆ. ಸೈಬರ್ ಲೈಂಗಿಕ ದೌರ್ಜನ್ಯ ಇಂದಿನ ಹೊಸ ಸವಾಲು. ಇವೆಲ್ಲ ಮಹಿಳೆಯನ್ನು ಆತಂಕಕ್ಕೆ ದೂಡುತ್ತಲೇ ಇವೆ. ಹೆಣ್ಣು ಮೂಲತಃ ಸೂಕ್ಷ್ಮ ಮನಸ್ಸಿನವಳು. ಎದುರಿನವರ ಭಾಷೆ, ಆಂಗಿಕ ವರ್ತನೆ ಎಲ್ಲದರಲ್ಲೂ ಇರಬಹುದಾದ ಸಹಜತೆ, ಕೃತ್ರಿಮತೆಗಳನ್ನು ಸರಿಯಾಗಿ ಗುರುತಿಸುವ ಚತುರತೆಯನ್ನು ಆಕೆ ಬೆಳೆಸಿಕೊಳ್ಳಲೇಬೇಕು.

ಇಷ್ಟೇ ಸವಾಲೇ?

ಸವಾಲಿನ ಸರಣಿ ಇಷ್ಟಕ್ಕೆ ನಿಲ್ಲುವುದಿಲ್ಲ. ಅನೇಕ ಸಂದರ್ಭ ಗಳಲ್ಲಿ, ಕಚೇರಿ, ಶಾಲಾ-ಕಾಲೇಜುಗಳು, ಸಂಘ-ಸಂಸ್ಥೆಗಳು, ಮನೆಗಳು ಎಲ್ಲಿಯೇ ಆದರೂ, ಮಹಿಳೆಯ ಯೋಗದಾನವು ಶೇ. 80ಕ್ಕೂ ಹೆಚ್ಚು ಇದ್ದರೂ, ಆಕೆಗೆ ಅಲ್ಲಿ ಸಿಗುವ ಪ್ರಾಮುಖ್ಯ ಶೇ. 20ಕ್ಕಿಂತಲೂ ಕಡಿಮೆ. ತನ್ನನ್ನು ತಾನು ಸಾಬೀತುಪಡಿಸಿ ಕೊಳ್ಳುವ ನಿಟ್ಟಿನಲ್ಲಿ ಶತಾಯಗತಾಯ ಶ್ರಮಿಸುವ ಆಕೆಯನ್ನು, ಒಟ್ಟಾರೆಯಾಗಿ ಎರಡನೆಯ ದರ್ಜೆಯವಳನ್ನಾಗಿಯೇ ತೀರ್ಮಾನಿಸಿಬಿಡುತ್ತಾರೆ. ಎಷ್ಟೋ ಬಾರಿ ಇದಕ್ಕೆ ಮಹಿಳೆಯರದೇ ಒತ್ತಾಸೆಯು ಸಿಕ್ಕಿಬಿಡುವುದು ವಿಪರ್ಯಾಸ.

ಏಕೆ ಹೀಗೆ?

ಇದಕ್ಕೆಲ್ಲ ದೈಹಿಕ ಆಕರ್ಷಣೆಯೇ ಕಾರಣವೇ? ಎಂದರೆ, ಸಂಶೋಧನೆಗಳು ನೀಡುವ ಉತ್ತರ, 'ಅಲ್ಲ'. ಶೇ.10ಕ್ಕೂ ಕಡಿಮೆ ಅಥವಾ ಶೂನ್ಯಕ್ಕೆ ಹತ್ತಿರದ ಸಂದರ್ಭಗಳಲ್ಲಿ, ದೈಹಿಕ ಆಕರ್ಷಣೆಯಿಂದ ಲೈಂಗಿಕ ದೌರ್ಜನ್ಯಗಳು ನಡೆಯುತ್ತವೆ. ಅದು ಕೂಡ ಸ್ವತಂತ್ರ ಕಾರಣವಲ್ಲ. ಮೊದಲೇ ಮನಸ್ಸಿನಲ್ಲಿ ನೆಲೆ ನಿಂತ ಪೂರ್ವಗ್ರಹಗಳಿಗೆ ಪೂರಕವಾಗಿ ಮಾತ್ರ ಈ ಅಂಶ ಸೇರಿಕೊಳ್ಳುತ್ತದೆ. ಇಲ್ಲೆಲ್ಲ ದೌರ್ಜನ್ಯ ಎಸಗುವವರ ಮನೋವಿಕೃತಿ, ಸಾಮಾಜಿಕ ವೈಫಲ್ಯಗಳೇ ಮುಖ್ಯ ಕಾರಣಗಳಾಗುತ್ತವೆ. ಮಾನವನ ವಿಕಾಸ ಪಥದಲ್ಲಿ, ಪ್ರಾರಂಭದಲ್ಲಿ ಸ್ತ್ರೀ-ಪುರುಷರ ನಡುವೆ ಪೈಪೋಟಿ ಇರಲಿಲ್ಲ. ಪ್ರಕೃತಿಯ ವಿಭಿನ್ನ ಸೃಷ್ಟಿಯನ್ನು ಸಹಜವಾಗಿಯೇ ಸ್ವೀಕರಿಸಿದ್ದ ಮಾನವನಿಗೆ, ಅಧಿಕಾರ ಚಲಾಯಿಸುವ ಆಲೋಚನೆಯೇ ಇರಲಿಲ್ಲ. ತನಗಿಂತ ಬಲಿಷ್ಠ ಪ್ರಾಣಿಗಳಿಂದ ತನ್ನನ್ನು ರಕ್ಷಿಸಿಕೊಂಡು ಮನುಕುಲವನ್ನು ಉಳಿಸುವ ಕಡೆಗೆ ಆತನ ಗಮನವಿತ್ತು. ಆಹಾರಕ್ಕಾಗಿ, ಉಳಿವಿಗಾಗಿ, ಪುರುಷ ಬೇಟೆಯಾಡುವುದು ಅನಿವಾರ್ಯವಾಗಿದ್ದ ಸಂದರ್ಭವದು. ಮನುಷ್ಯ ತನಗಿಂತ ದೊಡ್ಡ ಗಾತ್ರದ ಪ್ರಾಣಿಗಳನ್ನು ಗೆಲ್ಲಲು, ತನ್ನ ಚಿಕ್ಕ ಗಾತ್ರದ ದೇಹ ಸಾಲದು ಎಂದು ತಿಳಿದ ನಂತರ, ತನ್ನ ಬುದ್ಧಿಶಕ್ತಿಯನ್ನೇ ಹಿಗ್ಗಿಸಿಕೊಳ್ಳುತ್ತಾ ಸಾಗಿದ. ತನಗಿಂತ ಎಷ್ಟೋ ಪಟ್ಟು ದೊಡ್ಡ ಪ್ರಾಣಿಗಳನ್ನು ಪಳಗಿಸಬಹುದಾದ ಬುದ್ಧಿಮತ್ತೆಯನ್ನು ಪಡೆದ ನಂತರ, ಆ ಪ್ರಾಣಿಗಳನ್ನೆಲ್ಲ ತನ್ನ ನಿಯಂತ್ರಣದಲ್ಲಿಡಲು, ಅಧಿಕಾರ ಚಲಾಯಿಸುವ ಗುಣ ಬೆಳೆಸಿಕೊಂಡ. ಸೃಷ್ಟಿಯ ಬೇರೆಲ್ಲಾ ಜೀವಿಗಳ ಮೇಲೆ ಪ್ರಭುತ್ವ ಸಾಧಿಸಿದ ನಂತರ, ಈಗಾಗಲೇ ಬಲಿತ ಆತನ ಸ್ವಭಾವ ಸುಮ್ಮನಾಗಲಿಲ್ಲ. ಈಗ ಉಳಿದಿರುವುದು ತನ್ನೊಡನೆ ಬಾಳುತ್ತಿರುವ ಜನರು. ಇಲ್ಲಿಯೂ ಸ್ಪರ್ಧಾತ್ಮಕ ಮನೋಭಾವ ಬೆಳೆಸಿಕೊಂಡುಬಿಟ್ಟ. ಪ್ರಾರಂಭದಲ್ಲಿ ಉಳಿವಿಗಾಗಿ ಬೇಕಿದ್ದ ಸ್ಪರ್ಧಾಬುದ್ಧಿ,



ಅನುವಂಶೀಯವಾಗಿ ಹರಿದು ಬರಲಾರಂಬಿಸಿತು. ಎಲ್ಲವೂ ತನ್ನ ನಿಯಂತ್ರಣದಲ್ಲಿರಬೇಕು ಎನ್ನುವ ಭಾವವೃಕ್ಷ ಹೆಮ್ಮರವಾಯಿತು. ತಾನು ಅಧಿಕಾರ ನಡೆಸಲೇ ಇರುವವ ಎನ್ನುವ ಅಹಂ ಕೂಡ ನೆಲೆಯೂರಿತು. ಇದೇ ಸಮಯದಲ್ಲಿ ಹೆಣ್ಣು, ಸಂತಾನ ಪೋಷಣೆಯ ಕಡೆಗೆ ಗಮನ ನೀಡುತ್ತಾ, ತನ್ನ ಸಾಮರ್ಥ್ಯವನ್ನು ಆ ದಾರಿಯಲ್ಲಿ ಬೆಳೆಸಿಕೊಂಡಳು. ರಕ್ಷಣೆಗೆ ನಿಲ್ಲುತ್ತಿದ್ದ ಪುರುಷನಿಗೆ ಬೆಂಬಲವಾಗಿ ನಿಲ್ಲುವುದು ಹೆಣ್ಣಿಗೆ ರೂಢಿಯಾಯಿತು. ಆಕೆ ಸ್ಪರ್ಧೆಗೆ ಇಳಿಯುವ ಮನಸ್ಥಿತಿಯನ್ನು ತಾಳಲೇ ಇಲ್ಲ. ಹೊಂದಾಣಿಕೆ, ಸಹನೆ, ತಾಳ್ಮೆಗಳನ್ನೇ ಮೈಗೂಡಿಸಿಕೊಂಡಳಾಕೆ. ಅದೇ ವಂಶವಾಹಿ ಮುಂದಿನ ಪೀಳಿಗೆಗಳಿಗೂ ವರ್ಗಾವಣೆಯಾಯಿತು. ಆಕ್ರಮಣಕಾರಿ ಮನೋಭಾವ ಆಕೆಯ ಹತ್ತಿರಕ್ಕೂ ಸುಳಿಯಲಿಲ್ಲ. ಮತ್ತೊಂದೆಡೆ, ಆಕೆಯ ಇಂಥ ಸೌಮ್ಯ ಸ್ವಭಾವದ ಮೇಲೆ ಅಧಿಕಾರ ಚಲಾಯಿಸುವುದು ತನ್ನ ಹಕ್ಕು ಎಂದು ಪುರುಷ ತಿಳಿದ.

ಸಾವಿರಾರು ವರ್ಷಗಳಿಂದ ಈ ಹೇರಿಕೆಯನ್ನು ಸಹಿಸಿದ ಹೆಣ್ಣು, ತಾನು ಈ ಶೋಷಣೆಯಿಂದ ಹೊರಬರಲು ಬೇಕಾದ ದಾರಿ ಕಂಡುಕೊಳ್ಳಲು ತೊಡಗಿದ್ದಾಳೆ, ಸ್ಪರ್ಧೆಗೆ ನಿಂತಿದ್ದಾಳೆ. ಪುರುಷನಿಗೆ ಸಮಾನವಾಗಿ ದುಡಿಯುತ್ತಿದ್ದಾಳೆ, ಅಧಿಕಾರ ಚಲಾಯಿಸಲು ಕಲಿತಿದ್ದಾಳೆ. ಆರ್ಥಿಕವಾಗಿ, ಸಾಮಾಜಿಕವಾಗಿ ಸ್ವತಂತ್ರಳಾಗಿದ್ದಾಳೆ. ಒಟ್ಟಾರೆಯಾಗಿ, ಎಲ್ಲಾ ಆಯಾಮಗಳಲ್ಲೂ ಹೆಣ್ಣು ಸದೃಢಳಾಗಿದ್ದಾಳೆ. ಯುದ್ಧ-ಆಕ್ರಮಣಗಳು ಕೇವಲ ಪುರುಷರ ಹಕ್ಕು ಎಂದು ಭಾವಿಸಿದವರ ಮೇಲೆ ಯುದ್ಧ ಮಾಡುವಷ್ಟು ಶಕ್ತಿಶಾಲಿಯಾಗಿದ್ದಾಳೆ. ಆಕ್ರಮಣಕಾರರನ್ನು ಹಿಮ್ಮೆಟ್ಟಿಸುವಷ್ಟು ಗಟ್ಟಿಯಾಗಿದ್ದಾಳೆ. ಇವೆಲ್ಲವೂ ಎಲ್ಲೋ ಒಂದು ಕಡೆ, ಕೆಲವು ಪುರುಷರಿಗೆ, ಮಾನವನ ವಿಕಾಸದ ಪ್ರಾರಂಭದ ಹಂತದಲ್ಲಿ ಗಳಿಸಿ, ಬೆಳೆಸಿಕೊಂಡುಬಂದ ಅಹಂಗೆ ಏಟು ಕೊಡುತ್ತಿದೆ. ಇದರಿಂದ ಕೋಪ, ಅಸಹನೆ ಮತ್ತು ಪ್ರತೀಕಾರ ಭಾವ ತಾಳುವ ಪುರುಷ, ಮಹಿಳೆಯನ್ನು ಮಣಿಸಲು ಬಳಸುವ ಅಸ್ತ್ರ 'ಲೈಂಗಿಕ ಶೋಷಣೆ'. ಹೆಣ್ಣಿಗೆ ತನ್ನ ದೇಹದ ಬಗ್ಗೆ ಬಹಳ ಗೌರವ. ತನ್ನ ಪ್ರಾಣಕ್ಕಿಂತ ಹೆಚ್ಚು ಶರೀರದ ಘನತೆಗೆ ಪ್ರಾಧಾನ್ಯ ನೀಡುತ್ತಾಳಾಕೆ. ಅದಕ್ಕಾಗಿಯೇ ಪುರುಷ ಆಕೆಯ ಪ್ರಾಣ ತೆಗೆದು ಪ್ರತೀಕಾರ ತೀರಿಸಿಕೊಳ್ಳಲು ಬಯಸುವುದಿಲ್ಲ. ಸ್ವತಃ ಆಕೆ ಗೌರವ ನೀಡುವ ಆಕೆಯ ಶರೀರಕ್ಕೆ ಧಕ್ಕೆ ತಂದರೆ, ಆಕೆಯ ಘನತೆಗೆ ಚ್ಯುತಿ ತಂದಂತೆ ಎನ್ನುವ ಮನಸ್ಥಿತಿ ಕೆಲವರದ್ದು. ಮೊದಲಿನಿಂದ ರಕ್ಷಣಾ ಕಾರ್ಯದಲ್ಲಿ ತೊಡಗಿದ್ದ ಪುರುಷನ ದೈಹಿಕ ದಾರ್ಢ್ಯತೆ ಮಹಿಳೆಗಿಂತ ಹೆಚ್ಚಾಗಿರುವುದರಿಂದ ಇದು ಪುರುಷನಿಗೆ ಸುಲಭವೂ ಹೌದು. ಹಾಗಾಗಿಯೇ ಆತ, ಆಕೆಯ body abuseಗೆ ಇಳಿಯುತ್ತಾನೆ. ತನ್ನ ದೇಹ ಪವಿತ್ರ ಎಂದು ನಂಬಿರುವ ಆಕೆಯನ್ನು, profane ಎಂದು ಬಿಂಬಿಸಲು ತೊಡಗುತ್ತಾನೆ. ಬೇರೆ ಬೇರೆ ನಾಗರಿಕತೆ, ಸಂಸ್ಕೃತಿಗಳಲ್ಲಿ ಬೇರೆ ಬೇರೆ ರೀತಿಯಾಗಿ ಈ ಮನಸ್ಥಿತಿ ಬೆಳೆಯುತ್ತಾ ಬಂದಿದೆ. ಭಾರತೀಯ ಪರಂಪರೆಯಲ್ಲಿ ''ಯಾ ದೇವೀ ಸರ್ವಭೂತೇಷು ಮಾತೃರೂಪೇಣ ಸಂಸ್ಥಿತಾ'' ಅಂತಲೇ 'ದುರ್ಗಾಸಪ್ತಶತಿ'ಯಲ್ಲಿ ಹೇಳಲಾಗಿದೆ. ಎಲ್ಲ ಚರಾಚರಗಳಲ್ಲೂ ಇರುವ ಸ್ತ್ರೀ-ಪುರುಷ ತತ್ವಗಳಲ್ಲಿ, 'ಸ್ತ್ರೀ' ತತ್ವವನ್ನು ತಾಯಿಯೆಂದೇ ಗುರುತಿಸಿದ್ದಾರೆ. ಇದನ್ನು ಧಿಕ್ಕರಿಸುವ ರಾವಣ, ದುಶ್ಶಾಸನರ ಸಂತತಿ ಮುಂದುವರಿಯುತ್ತಲೇ ಇದೆ.

ಇದರೊಂದಿಗೆ ಇನ್ನೂ ಕೆಲವು ಮನೋವೈಜ್ಞಾನಿಕ ಅಂಶಗಳು, ಮಹಿಳಾ ಶೋಷಣೆಯ ಮನಸ್ಥಿತಿಗೆ ನೀರೆಯುವ ಸಾಧ್ಯತೆಯಿದೆ. ಹೆಣ್ಣೆಂದರೆ ತನ್ನ ಅನುಕೂಲಕ್ಕೆ ಸೃಷ್ಟಿಯಾದ ವಸ್ತು ಎನ್ನುವ ಅಮಾನವೀಯ ಮನಸ್ಥಿತಿ, ತನ್ನ ಅಧೀನದಲ್ಲಿ ಇರಬೇಕೆನ್ನುವ ವಿಕೃತ ಮನಸ್ಥಿತಿಗಳು ಸಹ ಶೋಷಿಸುವಂತೆ ಪ್ರೇರೇಪಿಸುತ್ತವೆ. ಪುರುಷರ ವೈಯಕ್ತಿಕ ವೈಫಲ್ಯ, ಪಡೆದ ತಿರಸ್ಕಾರ, ಅವಮಾನ ಎಲ್ಲವೂ ಅವರನ್ನು, ಮಹಿಳೆಯರ ಮೇಲೆ ಹಿಂಸೆ ಹೊರಹಾಕಿಬಿಡುವ ಮಟ್ಟಕ್ಕೆ ಇಳಿಸಿಬಿಡುತ್ತವೆ. Empathy deficit (ಬೇರೆಯವರ ನೋವನ್ನು ಅರ್ಥಮಾಡಿಕೊಳ್ಳುವ ಸಾಮರ್ಥ್ಯ ಹೀನತೆ ಅಥವಾ 'ಪರಾನುಭೂತಿ ಶಕ್ತಿಯ ಕೊರತೆ'), ತನ್ನ ಅಪರಾಧವನ್ನು ಸಹ ತಪ್ಪು ಎಂದು ಕಾಣದಂತೆ ಮಾಡಿಬಿಡುತ್ತದೆ. ಕಾನೂನು ಅಷ್ಟೇನು ಬಿಗಿಯಾಗಿಲ್ಲ ಅನ್ನೋ ಕಾರಣಕ್ಕೆ, ತಪ್ಪಿಸಿಕೊಳ್ಳುವುದು ಸುಲಭ ಎಂದು ಪುರುಷನು ಅಪರಾಧ ಮಾಡಲು ಮುಂದಾಗುವ ಸಾಧ್ಯತೆ ಹೆಚ್ಚು. ಮೊದಲಿನಿಂದಲೂ ಈ ಮನಸ್ಥಿತಿಯನ್ನು ಎಲ್ಲ ಪುರುಷರೂ ಬೆಳೆಸಿಕೊಂಡು ಬರಲಿಲ್ಲ. ಸಭ್ಯ, ಮಾನವೀಯ ಗುಣಗಳನ್ನು ಹೊಂದಿರುವ ಪುರುಷರ ಸಂಖ್ಯೆ ಇಂಥವರಿಗಿಂತಲೂ ಹೆಚ್ಚಿದೆ. ರಾವಣನಿದ್ದಾಗಲೇ ರಾಮನಿದ್ದ. ದುಶ್ಶಾಸನನಿದ್ದಾಗಲೇ ಕೃಷ್ಣನಿದ್ದ. ಮಹಿಳೆಯ ಘನತೆಗೆ ಬೆಂಬಲವಾಗಿ ನಿಲ್ಲುವ ಸಹೃದಯರು ಇಂದಿಗೂ ಬಹಳ ಇದ್ದಾರೆ. ಅಂಥವರು ಸಮಾಜಕ್ಕೆ ಆದರ್ಶವಾಗಬೇಕಿದೆ.

★ ಏನೆಲ್ಲಾ ಮಾಡಬಹುದು?

ಮೇಲಿನ ಯಾವ ಕಾರಣಗಳೂ ಮಹಿಳೆಯರ ಮೇಲಿನ ದೌರ್ಜನ್ಯಕ್ಕೆ ಸಮರ್ಥನೆ ಆಗುವುದಿಲ್ಲ. ಅವು ಸಮಸ್ಯೆಯ ಬೇರು, ಬೆಳವಣಿಗೆಗಳ ಹುಡುಕಾಟ ಅಷ್ಟೇ. ಲಿಂಗಾಧಾರಿತ ದೌರ್ಜನ್ಯದ ವಿರುದ್ಧ ಮೌನವೇ ಅತಿ ದೊಡ್ಡ ಅಪರಾಧ. ಇದು ಕೇವಲ ಮಹಿಳೆಯರ ಸಮಸ್ಯೆಯಲ್ಲ, ಇಡೀ ಸಮಾಜದ್ದು. ಇದಕ್ಕಾಗಿ ಮನೆ ಮತ್ತು ಶಾಲೆಗಳಲ್ಲಿ ವಿಶೇಷ ಕಾಳಜಿ ವಹಿಸಲೇಬೇಕು. ಸ್ತ್ರೀ-ಪುರುಷರು ಸಮಾನರು, ಎಲ್ಲರೂ ಮನುಷ್ಯರು, ಎಲ್ಲರೂ ಆತ್ಮ ಸ್ವರೂಪರು ಎನ್ನುವ ಭಾರತೀಯ ಚಿಂತನೆಯನ್ನು ಮಕ್ಕಳ ಮನಸ್ಸಿನಲ್ಲಿ ಮರುಸ್ಥಾಪಿಸಬೇಕು. ಒಂದೂವರೆ ಶತಮಾನದ ಹಿಂದೆ, ಯುರೋಪ್‌ನಲ್ಲಿ ಸಂಪ್ರದಾಯವಾದಿಗಳು ನಡೆಸಿದ ಚರ್ಚಾಸಭೆಯೊಂದರಲ್ಲಿ 'ಮಹಿಳೆಯನ್ನು ಮನುಷ್ಯಳು ಎಂದು ಪರಿಗಣಿಸಬಹುದೇ? ಆಕೆಯೊಳಗೂ ಆತ್ಮವಿದೆಯೇ?' ಎನ್ನುವ ವಿಷಯವನ್ನು ಚರ್ಚಿಸಲಾಗಿತ್ತು. ಅಂಥ ಮಾನಸಿಕತೆಯ ಮೂಲದ ಜೀವನಶೈಲಿಯನ್ನು ಅನುಕರಿಸುತ್ತಿರುವವರಿಗೆ, ಭಾರತೀಯ ಚಿಂತನೆಯಲ್ಲಿರುವ ಸ್ತ್ರೀ ಶಕ್ತಿಯನ್ನು ಪರಿಚಯಿಸಬೇಕಿದೆ.

ಉದ್ಯೋಗದಲ್ಲಿ ಬಡ್ತಿ, ವೇತನ ಹೆಚ್ಚಳ ಆಗಬೇಕಾದ ಸಂದರ್ಭದಲ್ಲಿ, ಮಹಿಳೆಯೆದುರು ಮೇಲಧಿಕಾರಿಗಳಿಂದ 'ವಿಲಕ್ಷಣವಾದ' ಮತ್ತು 'ವಿಕೃತ ಸ್ವರೂಪದ' ಪರೋಕ್ಷ ಇಂಗಿತ ವ್ಯಕ್ತವಾದರೆ, ಆಗ ಮಹಿಳೆ ದೃಢಸಂಕಲ್ಪ ತಾಳಬೇಕು. 'ನನ್ನ ಉದ್ಧಾರ ನನ್ನಿಂದ ಮಾತ್ರ' ಅನ್ನುವ ಆತ್ಮಸ್ಥೈರ್ಯವನ್ನು ಬೆಳೆಸಿಕೊಳ್ಳಬೇಕು. ಬಡ್ತಿ, ವೇತನ ಹೆಚ್ಚಳ ಅಥವಾ ಇನ್ಯಾವುದೇ ಉನ್ನತೀಕರಣಕ್ಕಾಗಿ ತನ್ನ ಅಂತಃಸತ್ವವನ್ನು ಹೆಚ್ಚಿಸಿಕೊಳ್ಳುತ್ತಾ ಹೋಗಬೇಕೇ ಹೊರತು, ಅದಕ್ಕಾಗಿ ಅನ್ಯರ ಅಡಿಯಾಳಾಗಬಾರದು ಅನ್ನುವ ಗಟ್ಟಿ ನಿರ್ಧಾರಕ್ಕೆ ಬದ್ಧರಾಗಬೇಕು. ಇದರಿಂದಾಗಿ ಆಕೆ ಕೆಲಸ ಮಾಡುವ ಪರಿಸರವು ಆರೋಗ್ಯಕರವಾಗಿ, ಆಕೆಯ ಕ್ಷಮತೆಯು ಹೆಚ್ಚುತ್ತಾ ಹೋಗುತ್ತದೆ.

ಮಹಿಳೆಯರು ತಮಗಾಗುತ್ತಿರುವ ಸಮಸ್ಯೆಯನ್ನು ಮುಚ್ಚುಮರೆ ಇಲ್ಲದೆ ಹೇಳಿಕೊಳ್ಳಬೇಕಾದರೆ, ಅಂಥ ಸಾಮಾಜಿಕ ಪರಿಸರದ ನಿರ್ಮಾಣವಾಗಬೇಕು. 'Victim blaming' ಎಂಬುದು ಅಪರಾಧಕ್ಕಿಂತಲೂ ಅಪಾಯಕಾರಿ ಮನಸ್ಥಿತಿ. ಒಂದು ನಿರ್ದಿಷ್ಟ ಸ್ಥಳದಲ್ಲಿ ಲೈಂಗಿಕ ದೌರ್ಜನ್ಯವು ಒಮ್ಮೆ ನಡೆದರೆ, ಬಾಧಿತೆಯ ಮೇಲೆ, ಅಪರಾಧಿಯ ಕ್ರಿಯೆಗೆ ಸಮಾನವಾಗಿ ಸಮಾಜದಲ್ಲಿ ಇನ್ನೊಂದು ರೀತಿಯ ಹಿಂಸೆ ಪ್ರಾರಂಭವಾಗಿಬಿಡುತ್ತದೆ. ಅಪರಾಧಿಯಿಂದಾದ ತಪ್ಪಿನ ಹೊಣೆಯನ್ನು ಶೋಷಿತೆಯ ಮೇಲೆಯೇ ಹೇರಲಾಗುತ್ತದೆ. ಇದು ಅಪರಾಧವನ್ನು ಪರೋಕ್ಷವಾಗಿ ಸಮರ್ಥಿಸುವ ಅಪಾಯಕಾರಿ ಧೋರಣೆ. ಸಮಾಜದ ಇಂಥ ಕೀಳು ಆಲೋಚನೆಯೇ, ಬಾಧಿತೆಯನ್ನು ಖಿನ್ನತೆಯೆಡೆಗೋ, ಆತ್ಮಹತ್ಯೆಯೆಡೆಗೋ ಎಳೆದೊಯ್ದುಬಿಡುತ್ತದೆ. Victim blaming ಅನ್ನು ನಿಲ್ಲಿಸಲು ಕೇವಲ ಕಾನೂನು ಸಾಕಾಗದು, ಜತೆಗೆ ಸಮಾಜದ ಚಿಂತನಾ ಸಾಮರ್ಥ್ಯವೂ ವಿಶಾಲವಾಗಬೇಕು. ದೌರ್ಜನ್ಯಕ್ಕೊಳಗಾದ ಮಹಿಳೆಯ ಜತೆಗೆ ಇಡೀ ಸಮಾಜ ನಿಲ್ಲುವಂತಾದರೆ, ಅಪರಾಧಗಳ ಸಂಖ್ಯೆ ಕ್ರಮೇಣ ಕಡಿಮೆಯಾಗುವ ಸಾಧ್ಯತೆ ಇದೆ. 'ನಾನು ಮಾಡಹೊರಟ ಲೈಂಗಿಕ ಶೋಷಣೆಯಿಂದ ಈ ಹೆಣ್ಣಿನ ಆತ್ಮಸ್ಥೈರ್ಯ ಕುಂದುವುದಿಲ್ಲ, ಇಡೀ ಸಮಾಜವೇ ಆಕೆಯನ್ನು ಬೆಂಬಲಿಸುತ್ತದೆ' ಎನ್ನುವುದು ಕೆಲ ಪುರುಷ-ಪುಂಗವರಿಗೆ ಮನವರಿಕೆಯಾದರೆ, ಈ ದುಷ್ಕೃತ್ಯಕ್ಕೆ ಅವರು ಇಳಿಯಲಾರರು.

ಎಲ್ಲವನ್ನೂ ಸರಿಯಾದ ಟ್ರ್ಯಾಕ್‌ಗೆ ತರಲು, ಮೊದಲು ಕಠಿಣವಾದ ಕಾನೂನು ಪಾಲನೆ ಆಗಲೇಬೇಕು. ಕಾನೂನುಕ್ರಮ ಪರಿಣಾಮಕಾರಿಯಾಗಿ ಜರುಗಬೇಕಾದರೆ, ತ್ವರಿತ ನ್ಯಾಯ ಒದಗಿಸುವ ಕೆಲಸವನ್ನು ನ್ಯಾಯಾಂಗ ವ್ಯವಸ್ಥೆಯು ಮಾಡಬೇಕು. ಪೊಲೀಸ್ ವ್ಯವಸ್ಥೆಯು ಸಂವೇದನಾಶೀಲವಾಗಿ ವರ್ತಿಸಿ, ದೂರು ನೀಡುವ ಮಹಿಳೆಯರಲ್ಲಿ ಸುರಕ್ಷಿತ ಭಾವವನ್ನು ಮೂಡಿಸುವಂತಾಗಬೇಕು. ಶಿಕ್ಷೆ ತಪ್ಪಿಸಿಕೊಳ್ಳುವ ಅಪರಾಧಿಯು, ಸಮಾಜ, ಕಾನೂನು, ರಕ್ಷಣಾ ವ್ಯವಸ್ಥೆ, ನ್ಯಾಯಾಂಗ ವ್ಯವಸ್ಥೆ ಎಲ್ಲವುಗಳ ಬಗ್ಗೆ ಬಾಧಿತೆಯು ನಂಬಿಕೆ-ವಿಶ್ವಾಸಗಳನ್ನು ಕಳೆದುಕೊಳ್ಳುವಂತೆ ಮಾಡಿಬಿಡಬಹುದು.

ಹತ್ತು ಅಥವಾ ಅದಕ್ಕಿಂತ ಹೆಚ್ಚು ಕೆಲಸಗಾರರಿರುವ ಸಂಸ್ಥೆ, ಕಚೇರಿ, ಶಾಲಾ-ಕಾಲೇಜುಗಳ ಒಳಗೆ, ಈ ದೌರ್ಜನ್ಯ ತಡೆಯಲೆಂದೇ ಒಂದು ಕಮಿಟಿಯನ್ನು ಸ್ಥಾಪಿಸಿಕೊಳ್ಳುವುದನ್ನು ಇತ್ತೀಚೆಗೆ ಕಡ್ಡಾಯ ಮಾಡಲಾಗಿದೆ. ಇದರ ಸಂಪೂರ್ಣ ಅರಿವು ಹೆಣ್ಣು ಮಕ್ಕಳಲ್ಲಿ ಇರಲೇಬೇಕು. ಮಹಿಳೆಯರು ಅದನ್ನು ಬಳಸಿಕೊಳ್ಳಲು ಪ್ರಾರಂಭಿಸಿದ ನಂತರ, ದೈಹಿಕ ದೌರ್ಜನ್ಯಗಳು ಸ್ವಲ್ಪಮಟ್ಟಿಗೆ ಕಡಿಮೆಯಾದ ಉದಾಹರಣೆಗಳಿವೆ. ನಮ್ಮ ವ್ಯವಸ್ಥೆಯಲ್ಲಿ ಜಾರಿಯಲ್ಲಿರುವ ಮಹಿಳಾ ಪರವಾದ ಕಾಯಿದೆಗಳ ಬಗ್ಗೆ ಮಹಿಳೆಯರಿಗೆ ಸಂಪೂರ್ಣ ಜಾಗೃತಿ ಇದ್ದಾಗ ಮಾತ್ರವೇ ಅದರ ಸದ್ಬಳಕೆ ಸಾಧ್ಯ. ಕಾನೂನು, ಸಂಸ್ಕೃತಿ ಮತ್ತು ಸಮಾಜ ಈ ಮೂರು ಅಂಶಗಳೂ ಒಂದೇ ದಿಕ್ಕಿನಲ್ಲಿ ಸಾಗಿ, 'ಲೈಂಗಿಕ ದೌರ್ಜನ್ಯ'ದಂಥ ಸಮಸ್ಯೆಗೆ ಪರಿಹಾರವನ್ನು ಕಂಡುಕೊಳ್ಳಬೇಕಿದೆ. ಕಾನೂನು ಪಾಲನೆಯೊಂದಿಗೆ, ಸಂವೇದನಾಶೀಲ ಸಂಸ್ಕೃತಿಯೂ ರೂಢಿಯಾದರೆ ಇಂಥ ದೌರ್ಜನ್ಯವನ್ನು/ಅಪರಾಧವನ್ನು ಮೂಲದಿಂದಲೇ ಕಿತ್ತೆಸೆಯಬಲ್ಲದು.

(ಲೇಖಕಿ ಕೋಲಾರ ಜಿಲ್ಲಾ ನ್ಯಾಯಾಲಯದ ಕಾನೂನು ಅರಿವು ಜಾಗೃತಿ ಸಂಸ್ಥೆಯ ಸಂಪನ್ಮೂಲ ವ್ಯಕ್ತಿ)

ಅಚ್ಚುಕಟ್ಟು ಪ್ರದೇಶ
RNI: KARKAN/2016/67914
VISHVAVANI, Printed & Published by: VISHWESHWAR BHAT, On behalf of Vishwakshara Media Private Ltd., No.1687, Nisarga Serenity, Complex Road, Near Raghavendra Swamy Temple, BEML Layout, 5th Stage, Rajarajeshwarinagar, Bangalore.560098. PH: 6362393988/6362393942
Printed MNS Printers PVT.Ltd,345/4,Bhatrahalli,Near KR Puram RTO, Old Madras Road,Bengalore 560049
Editor-in Chief : Vishweshwar Bhat. ಪ್ರಧಾನ ಸಂಪಾದಕ: ವಿಶ್ವೇಶ್ವರ ಭಟ್
CopyRight: Vishwakshara Media Private Ltd. All rights reserved. Reproduction in any manner electronic or otherwise, in whole or in part, without prior written permission is prohibited.
ನಮ್ಮ ಆವೃತ್ತಿಗಳು: ಬೆಂಗಳೂರು, ಹುಬ್ಬಳ್ಳಿ ಮಂಗಳೂರು, ಬೆಳಗಾವಿ ಕಲಬುರಗಿ, ದಾವಣಗೆರೆ
Vol:11, Issue: 23

ಸಮಾಚಾರ ಸಣ್ಣದಲ್ಲ

ಒಡಿಶಾ: ಹಳಿ ತಪ್ಪಿದ ಚೆನ್ನೈ ಸೆಂಟ್ರಲ್ ರೈಲು

ಜಾಜ್‌ಪುರ: ಭುವನೇಶ್ವರದಿಂದ ಕೋಲ್ಕತ್ತಾಗೆ ತೆರಳುತ್ತಿದ್ದ ಚೆನ್ನೈ ಸೆಂಟ್ರಲ್ ಎಕ್ಸ್‌ಪ್ರೆಸ್ ರೈಲು ಬುಧವಾರ ಬೆಳಗ್ಗೆ ಒಡಿಶಾ ರಾಜ್ಯದ ಜಾಜ್‌ಪುರ ಜಿಲ್ಲೆಯ ಜಖಾಪುರ ರೈಲು ನಿಲ್ದಾಣ ಬಳಿ ಹಳಿ ತಪ್ಪಿದೆ. ಆದರೆ, ಪ್ರಯಾಣಿಕರಿಗೆ ಯಾವುದೇ ಹಾನಿಯಾಗಿಲ್ಲ. ಮೂರು ಬೋಗಿಗಳು ಹಳಿ ತಪ್ಪಿ ಕೆಳಕ್ಕುರುಳಿ ಜಖಂಗೊಂಡಿವೆ. ಭದ್ರಕ್‌ನಿಂದ ರೈಲ್ವೆಯ ರಕ್ಷಣಾ ತಂಡವನ್ನು ಕಳುಹಿಸಿಕೊಡಲಾಗಿದೆ. ಹಾನಿಗೊಳಗಾಗಿದ್ದ ರೈಲು ಹಳಿಗಳನ್ನು ತ್ವರಿತ ಗತಿಯಲ್ಲಿ ಮರುಸ್ಥಾಪನೆ ಮಾಡಿಸಿ ಈ ಮಾರ್ಗದಲ್ಲಿ ಆದಷ್ಟು ಬೇಗ ರೈಲು ಸೇವೆ ಪುನಾರಂಭಿಸಲು ಎಂಜಿನಿಯರಿಂಗ್ ತಂಡಗಳನ್ನು ನಿಯೋಜಿಸಲಾಗಿದೆ. ರೈಲು ಹಳಿ ತಪ್ಪಲು ನಿಖರ ಕಾರಣ ತಿಳಿದುಬಂದಿಲ್ಲ. ವಿವರ ತನಿಖೆ ನಡೆಸಲಾಗುತ್ತದೆ ಎಂದು ಘಟನೆ ಸ್ಥಳದಲ್ಲಿ ಮೇಲ್ವಿಚಾರಣೆ ನಡೆಸಿರುವ ಅಧಿಕಾರಿಗಳು ಸುದ್ದಿಸಂಸ್ಥೆಗೆ ತಿಳಿಸಿದ್ದಾರೆ.

5 ತೇಜಸ್ ಎಲ್‌ಸಿಎ ವಾಯುಪಡೆಗೆ ಸಿದ್ಧ

ದೆಹಲಿ: ಭಾರತ ಸರಕಾರದ ಹೆಮ್ಮೆಯ ಉದ್ಯಮವಾದ 'ಹಿಂದೂಸ್ತಾನ್ ಏರೊನಾಟಿಕ್ಸ್ ಲಿ.'(ಎಚ್‌ಎಎಲ್) ಹೊಸದಾಗಿ 5 ತೇಜಸ್ ಲಘು ಯುದ್ಧ ವಿಮಾನಗಳನ್ನು(ಎಲ್‌ಸಿಎ) ಸಿದ್ಧಪಡಿಸಿದ್ದು, ಸದ್ಯದಲ್ಲೇ ಭಾರತೀಯ ವಾಯುಪಡೆ (ಐಎಎಫ್)ಗೆ ಹಸ್ತಾಂತರಿಸಲಿದೆ.

ಸಿಂಗಲ್ ಎಂಜಿನ್‌ನ 'ತೇಜಸ್ ಎಂಕೆ-1ಎ' ಮಾದರಿಯ ಒಟ್ಟು 83 ಯುದ್ಧ ವಿಮಾ ನಗಳನ್ನು ಖರೀದಿಸುವುದಾಗಿ ಐಎಎಫ್ 2021ರ ಫೆಬ್ರವರಿಯಲ್ಲೇ ಒಪ್ಪಂದ ಮಾಡಿಕೊಂಡಿದೆ. ಸದ್ಯ 5 ಜೆಟ್ ವಿಮಾನಗಳು ಪೂರ್ಣ ಸಿದ್ಧವಾಗಿವೆ. ಅವ ಲ್ಲದೇ, 9 ವಿಮಾನಗಳ ರಚನೆಯೂ ಸಿದ್ಧವಾಗಿದ್ದು, ಎಂಜಿನ್ ಅಳವಡಿಕೆ ಬಾಕಿ ಇದೆ. ಅಮೆರಿಕದ ಜನರಲ್ ಎಲೆಕ್ಟ್ರಿಕಲ್ಸ್(ಜಿಇ) ಕಂಪನಿಯಿಂದ ಎಂಜಿ ನ್ ಬಂದ ನಂತರ ಜೋಡಿಸಿ ಆ ವಿಮಾನಗಳನ್ನೂ ಐಎಎಫ್‌ಗೆ ಹಸ್ತಾಂತರಿಸಲಾಗುವುದು ಎಂದು ಬೆಂಗಳೂರಿನಲ್ಲಿ ಪ್ರಧಾನ ಘಟಕ ಹೊಂದಿರುವ ಎಚ್‌ಎಎಲ್ ಕಂಪನಿ ತಿಳಿಸಿದೆ.

ಯುಜಿಸಿ ನೆಟ್-25 ಫಲಿತಾಂಶ ಪ್ರಕಟ

ದೆಹಲಿ: ರಾಷ್ಟ್ರೀಯ ಪರೀಕ್ಷಾ ಸಂಸ್ಥೆ(ಎನ್‌ಟಿಎ) ವರ್ಷಂಪ್ರತಿ ನಡೆಸುವ 'ವಿಶ್ವವಿದ್ಯಾಲಯ ಅನುದಾನ ಆಯೋಗ(ಯುಜಿಸಿ) ನ್ಯಾಷನಲ್ ಎಂಟ್ರೆನ್ಸ್ ಟೆಸ್ಟ್(ಎನ್‌ಇಟಿ)' ಅರ್ಥಾತ್ 'ಯುಜಿಸಿ ನೆಟ್-2025 ಡಿಸೆಂಬರ್' ಪರೀಕ್ಷೆಯ ಫಲಿತಾಂಶ ಬುಧವಾರ ಪ್ರಕಟವಾಗಿದೆ. ಪರೀಕ್ಷಾರ್ಥಿಗಳು ಕೀ ಉತ್ತರಗಳು, ಫಲಿತಾಂಶ, ಕಟ್ ಆಫ್ ಮಾರ್ಕ್ಸ್, ಮುಂದಿನ ಪ್ರಕ್ರಿಯೆಗಳ ಬಗ್ಗೆ ತಿಳಿಯಲು ugcnet.nta.nic.in ವೆಬ್‌ತಾಣವನ್ನು ಪರಿಶೀಲಿಸಬಹುದಾಗಿದೆ. ಯುಜಿಸಿ ನೆಟ್-2025 ಪರೀಕ್ಷೆಯನ್ನು 2025ರ ಡಿಸೆಂಬರ್ ಮತ್ತು 2026ರ ಫೆಬ್ರವರಿ ನಡುವಿನ ಅವಧಿಯಲ್ಲಿ 85 ವಿಷಯಗಳಿಗಾಗಿ ಆನ್‌ಲೈನ್ ಮೂಲಕ ನಡೆಸಲಾಗಿತ್ತು. ಸಂಭಾವ್ಯ ಕೀ ಉತ್ತರಗಳನ್ನು ಜ.14ರಂದು ಪ್ರಕಟಿಸಲಾಗಿತ್ತು.

ಬಿಹಾರಕ್ಕೆ ಹೊಸದಾಗಿ ಚುನಾವಣೆ ನಡೆಯಲಿ

ದೆಹಲಿ: 2025ರಲ್ಲಿ ನಡೆದ ಬಿಹಾರ ವಿಧಾನಸಭಾ ಚುನಾವಣೆಯ ಇಡೀ ಪ್ರಕ್ರಿಯೆನ್ನೇ ಪ್ರಶ್ನಿಸಿ ಸುಪ್ರೀಂ ಕೋರ್ಟ್‌ಗೆ ಅರ್ಜಿ ಸಲ್ಲಿಸಿರುವ ಜನ್ ಸುರಾಜ್ ಪಕ್ಷದ ಸಂಸ್ಥಾಪಕ, ಮಾಜಿ ಚುನಾವಣಾ ತಂತ್ರಜ್ಞ ಪ್ರಶಾಂತ್ ಕಿಶೋರ್, ರಾಜ್ಯದಲ್ಲಿ ಹೊಸದಾಗಿ ಚುನಾವಣೆ ನಡೆಸಲು ಚುನಾವಣಾ ಆಯೋಗಕ್ಕೆ ನಿರ್ದೇಶನ ನೀಡಬೇಕೆಂದು ಕೋರಿದ್ದಾರೆ.

ಈ ಅರ್ಜಿ ಶುಕ್ರವಾರ ಸುಪ್ರೀಂ ಕೋರ್ಟ್ ಮುಖ್ಯ ನ್ಯಾಯಮೂರ್ತಿ ಸೂರ್ಯಕಾಂತ್ ಮತ್ತು ನ್ಯಾ.ಜೋಯ್‌ಮಲ್ಯ ಬಾಗ್ಚಿ ಅವರ ಪೀಠದೆದುರು ವಿಚಾರಣೆಗೆ ಬರುವ ಸಾಧ್ಯತೆಯಿದೆ. ಬಿಹಾರದ ಒಟ್ಟು 243 ಕ್ಷೇತ್ರಗಳಲ್ಲಿ ಬಿಜೆಪಿ-ಜೆಡಿಯು ನೇತೃತ್ವದ 'ಎನ್‌ಡಿಎ' ಮೈತ್ರಿಕೂಟ 202 ಸ್ಥಾನಗಳನ್ನು ಗೆದ್ದು ಮತ್ತೊಮ್ಮೆ ಅಧಿಕಾರಕ್ಕೇರಿದೆ. ಕಾಂಗ್ರೆಸ್‌ನ ಆರು ಶಾಸಕರು ಸೇರಿದಂತೆ 'ಇಂಡಿಯ' ಒಕ್ಕೂಟ ಕೇವಲ 35 ಸ್ಥಾನಗಳನ್ನು ಗಳಿಸಲಷ್ಟೇ ಶಕ್ಯವಾಗಿದೆ. ಜನ್ ಸುರಾಜ್ ಪಕ್ಷ ಖಾತೆ ತೆರೆಯಲೂ ವಿಫಲವಾಗಿದೆ. ಪಕ್ಷ ಕಣಕ್ಕಿಳಿಸಿದ್ದವರಲ್ಲಿ ಹೆಚ್ಚಿನ ಅಭ್ಯರ್ಥಿಗಳು ಠೇವಣಿಯನ್ನೇ ಕಳೆದುಕೊಂಡಿದ್ದಾರೆ.

ಜಿ ರಾಮ್ ಜಿ ವಿರುದ್ಧ ಕೇರಳದಲ್ಲಿ ನಿರ್ಣಯ

ತಿರುವನಂತಪುರ: ಕೇಂದ್ರ ಸರಕಾರ ಭಾರೀ ಮಹತ್ವಾಕಾಂಕ್ಷೆಯಿಂದ ಹೊಸದಾಗಿ ಜಾರಿಗೆ ತರಲು ಮುಂದಾಗಿರುವ 'ವಿಬಿ ಜಿ ರಾಮ್ ಜಿ' ಕಾಯಿದೆಯನ್ನು ಈಗ ಕೇರಳ ರಾಜ್ಯ ವಿಧಾನಸಭೆಯೂ ವಿರೋಧಿಸಿದೆ. ದಶಕದಿಂದಲೂ ಜಾರಿಯಲ್ಲಿದ್ದ 'ಎಂ-ನರೇಗಾ' ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯನ್ನೇ ಮರಳಿ ಜಾರಿಗೊಳಿಸುವಂತೆ ಆಗ್ರಹಿಸಿ ಸಚಿವ ಎಂ.ಬಿ.ರಾಜೇಶ್ ನಿರ್ಣಯ ಮಂಡಿಸಿದರು.

ಅದನ್ನು ಕೇರಳ ವಿಧಾನಸಭೆ ಗುರುವಾರ ಅಂಗೀಕರಿಸಿತು. ಈ ಸಂದರ್ಭ ಕಾಂಗ್ರೆಸ್ ನೇತೃತ್ವದ ಪ್ರತಿಪಕ್ಷ ಒಕ್ಕೂಟವಾದ 'ಯುಡಿಎಫ್' ಶಬರಿಮಲೆ ಚಿನ್ನ ಕಳವು ಪ್ರಕರಣ ವಿಚಾರವಾಗಿ ಪ್ರತಿಭಟನೆ ನಡೆಸುತ್ತಿತ್ತು. ಈ ಮೊದಲು ಕಾಂಗ್ರೆಸ್ ಸರಕಾರವಿರುವ ಕರ್ನಾಟಕ, ತೆಲಂಗಾಣ, ಡಿಎಂಕೆ ಆಡಳಿತದ ತಮಿಳುನಾಡು ವಿಧಾನಸಭೆಗಳಲ್ಲಿಯೂ ಇದೇ ಬಗೆಯ ನಿರ್ಣಯ ಅಂಗೀಕರಿಸಲಾಗಿದೆ.

ವ್ಯಾಪಾರ ಒಪ್ಪಂದದ ಮೊದಲ ಹಂತದ ಜಂಟಿ ಹೇಳಿಕೆ ಸಿದ್ಧ | ನಂತರದಲ್ಲಿ ಶ್ವೇತಭವನದಿಂದ ಸುಂಕ ಶೇ.18ಕ್ಕೆ ಕಡಿತ ಪ್ರಕಟ | ಮಾರ್ಚ್ ಮಧ್ಯಂತರದಲ್ಲಿ ಒಪ್ಪಂದದ ಕಾನೂನು ಪ್ರಕ್ರಿಯೆ: ಕೇಂದ್ರ ವಾಣಿಜ್ಯ ಸಚಿವ ಪಿಯೂಷ್

ಭಾರತ-ಅಮೆರಿಕ ಜಂಟಿ ಹೇಳಿಕೆ 5 ದಿನಕ್ಕೆ ಸಹಿ

ದೆಹಲಿ: ಭಾರತ ಮತ್ತು ಅಮೆರಿಕ ನಡುವಿನ ಮಹತ್ವದ 'ವ್ಯಾಪಾರ ಒಪ್ಪಂದ'ದ ಮೊದಲ ಜಂಟಿ ಹೇಳಿಕೆ ಈಗಾಗಲೇ ಸಿದ್ಧವಿದ್ದು, ಶೀಘ್ರದಲ್ಲಿಯೇ ಅಂತಿಮಗೊಳ್ಳಲಿದೆ. ಒಪ್ಪಂದದ ಮೊದಲ ಹಂತದ ಈ ಜಂಟಿ ಹೇಳಿಕೆಗೆ 4-5 ದಿನಗಳಲ್ಲಿ ಎರಡೂ ದೇಶಗಳ ಪ್ರಮುಖರು ಸಹಿ ಹಾಕುವ ನಿರೀಕ್ಷೆಯಿದೆ ಎಂದು ವಾಣಿಜ್ಯ ಮತ್ತು ಕೈಗಾರಿಕಾ ಸಚಿವ ಪಿಯೂಷ್ ಗೋಯಲ್ ಹೇಳಿದ್ದಾರೆ.

ವ್ಯಾಪಾರ ಒಪ್ಪಂದದ ಜಂಟಿ ಹೇಳಿಕೆಗೆ ಎರಡೂ ದೇಶಗಳ ಪ್ರಮುಖರು ಸಹಿ ಹಾಕಿದ ನಂತರ, ಭಾರತದ ಮೇಲಿನ ಸುಂಕವನ್ನು ಶೇ. 50ರಿಂದ ಶೇ.18ಕ್ಕೆ ತಗ್ಗಿಸುವ ಕುರಿತು ಕಾರ್ಯಕಾರಿ ಆದೇಶವನ್ನು ಅಮೆರಿಕ ಸರಕಾರ ಹೊರಡಿಸಲಿದೆ ಎಂದು ಗುರುವಾರ ತಿಳಿಸಿದ್ದಾರೆ.

ದೆಹಲಿಯಲ್ಲಿ ಗುರುವಾರ ಗಲ್ಫ್ ಕೋ ಆಪರೇಷನ್ ಕೌನ್ಸಿಲ್ ಜತೆಗಿನ 'ಮುಕ್ತ ವ್ಯಾಪಾರ ಒಪ್ಪಂದ' ಪತ್ರಕ್ಕೆ ಸಹಿ ಹಾಕಿದ ಬಳಿಕ ಸುದ್ದಿಗೋಷ್ಠಿ ಯಲ್ಲಿ ಮಾತನಾಡಿದ ಸಚಿವ ಪಿಯೂಶ್ ಗೋಯಲ್, ಮುಂಬರುವ ದಿನಗಳಲ್ಲಿ ಅಮೆ ರಿಕ- ಭಾರತ ನಡುವಿನ ವ್ಯಾಪಾರ ಒಪ್ಪಂದದಲ್ಲಿನ ಅಂಶಗಳ ಕುರಿತು ಹೆಚ್ಚು ಸ್ಪಷ್ಟತೆ ಸಿಗಲಿದೆ ಎಂದು ಹೇಳಿದ್ದಾರೆ. ಅಮೆರಿಕ-ಭಾರತ ಒಪ್ಪಂದದ ಮೊದಲ ಕಂತಿನ ಕಾನೂನು ಒಪ್ಪಂದಕ್ಕೆ ಮಾರ್ಚ್ 3ನೇ ವಾರ ಅಥವಾ ಅದಕ್ಕೂ ಮುನ್ನ ಉಭಯ ದೇಶಗಳ ಪ್ರಮುಖರು ಸಹಿ ಹಾಕುವ ನಿರೀಕ್ಷೆಯಿದೆ ಎಂದು ಪಿಯೂಷ್ ಗೋಯಲ್ ಸುದ್ದಿಗಾರರ ಪ್ರಶ್ನೆಯೊಂದಕ್ಕೆ ಉತ್ತರಿಸಿದರು.

ಮಾರ್ಕ್ ಜತೆ ಸಕಾರಾತ್ಮಕ ಮಾತುಕತೆ

ವಾಷಿಂಗ್ಟನ್: ವಿದೇಶಾಂಗ ವ್ಯವಹಾರಗಳ ಸಚಿವ ಎಸ್. ಜೈಶಂಕರ್ ಅವರು ಅಮೆರಿಕ ಪ್ರವಾಸ ಗುರುವಾರ ಮುಕ್ತಾಯವಾಗಿದೆ. ಅಮೆರಿಕದ ವಿದೇಶಾಂಗ ಸಚಿವ ಮಾರ್ಕ್ ರುಬಿಯೊ ಅವರ ಜತೆಗಿನ ಸುದೀರ್ಘ ಮಾತುಕತೆ, ದ್ವಿಪಕ್ಷೀಯ ಚರ್ಚೆ ಬಹಳ ಸಕಾರಾತ್ಮವಾಗಿತ್ತು, ಪರಿಣಾಮಕಾರಿಯಾಗಿತ್ತು ಎಂದು ಜೈಶಂಕರ್ 'ಎಕ್ಸ್' ಸಂದೇಶದಲ್ಲಿ ಬರೆದಿದ್ದಾರೆ. ಇಬ್ಬರೂ ಪ್ರಮುಖರು, ಅಪರೂಪದ ಭೂ ಖನಿಜಗಳು, ವ್ಯಾಪಾರ ಒಪ್ಪಂದದ ಸ್ವರೂಪಗಳು, ಉಭಯ ದೇಶಗಳ ಸಂಬಂಧವನ್ನು ಮತ್ತಷ್ಟು ಉನ್ನತ ಸ್ಥರಕ್ಕೆ ಕೊಂಡೊಯ್ಯಬೇಕಾದ ಅಗತ್ಯಗಳ ಕುರಿತು ಚರ್ಚೆ ನಡೆಸಿದ್ದಾರೆ ಎಂದು ತಿಳಿದುಬಂದಿದೆ.

ಹೂಡಿಕೆಗೆ ಬದ್ಧತೆ ಅಂಶ ಒಪ್ಪಂದಲ್ಲಿಲ್ಲ

ಭಾರತವು ಅಮೆರಿಕದಲ್ಲಿ ಸಿದ್ಧವಾ ಗುವ ಯುದ್ಧ ವಿಮಾನಗಳು ಮತ್ತು ಯುದ್ಧ ವಿಮಾನಗಳ ಎಂಜಿನ್‌ಗಳ ಖರೀದಿಗೆಂದೇ 10 ಸಾವಿರ ಕೋಟಿ ಡಾಲರ್‌ಗಳಷ್ಟು ದೊಡ್ಡ ಮೊತ್ತ ವನ್ನು ವೆಚ್ಚ ಮಾಡಲಿದೆ. ಆದರೆ, ಈಗ ಮಾಡಿಕೊಳ್ಳಲಿರುವ ವ್ಯಾಪಾರ ಒಪ್ಪಂದದಲ್ಲಿ ಯಾವುದೇ ಹೂಡಿಕೆ ಬದ್ಧತೆ ಇಲ್ಲ ಎಂದು ಕೇಂದ್ರ ವಾಣಿಜ್ಯ ಸಚಿವ ಪಿ ಯೂಶ್ ಗೋಯಲ್ ಸುದ್ದಿಗಾರರ ಪ್ರಶ್ನೆಗೆ ಸ್ಪಷ್ಟಪಡಿಸಿದರು.

ಕಾನೂನು ಒಪ್ಪಂದವಾಗಿ ಪರಿವರ್ತನೆ: ಕಾರ್ಯದರ್ಶಿ

ಅಮೆರಿಕ-ಭಾರತದ ವ್ಯಾಪಾರ ಒಪ್ಪಂದ ಮೊದಲ ಹಂತದ ಜಂಟಿ ಹೇಳಿಕೆಯ ಪ್ರಕಟಣೆ ನಂತರ ಎರಡೂ ದೇಶಗಳ ನಡುವೆ ಸಮಗ್ರ ಕಾನೂನು ಒಪ್ಪಂದ ಏರ್ಪಡಲಿದೆ. ಹೇಳಿಕೆಗೆ ಸಹಿ ಬಿದ್ದ ನಂತರ ಸಹಜವಾಗಿಯೇ ಅದು ಕಾನೂನು ಬದ್ಧ ಒಪ್ಪಂದವಾಗಿ ಪರಿವರ್ತಿತವಾಗುತ್ತದೆ. ಮಾರ್ಚ್ ಮಧ್ಯದಲ್ಲಿ, ನಾವು ಆ ಕಾನೂನು ಒಪ್ಪಂದಕ್ಕೆ ಸಹಿ ಹಾಕುವ ವಿಶ್ವಾಸ ಹೊಂದಿದ್ದೇವೆ ಎಂದು ವಾಣಿಜ್ಯ ಕಾರ್ಯದರ್ಶಿ ರಾಜೇಶ್ ಅಗರ್ವಾಲ್ ಹೇಳಿದರು. ಕಾನೂನು ಪತ್ರಕ್ಕೆ ಸಹಿ ಹಾಕುವುದರಿಂದ ಕೆಲವು ಅಮೇರಿಕನ್ ಸರಕುಗಳ ಮೇಲಿನ ಭಾರತದಿಂದ ಸುಂಕ ಕಡಿತಕ್ಕೆ ಕಾರಣವಾಗುತ್ತದೆ.

---

300 ನೌಕರರ ಕಿತ್ತೆಸೆದ 'ವಾಷಿಂಗ್ಟನ್ ಪೋಸ್ಟ್'

ವಾಷಿಂಗ್ಟನ್ ಡಿಸಿ: ಅಮೆರಿಕದ ಪ್ರಮುಖ ದೈನಿಕ ವಾಷಿಂಗ್ಟನ್ ಪೋಸ್ಟ್ ಒಮ್ಮೆಲೇ 300 ಉದ್ಯೋಗಿಗಳನ್ನು ಕೆಲಸದಿಂದ ತೆಗೆದುಹಾಕಿ ಮನೆಗೆ ಕಳುಹಿಸಿದೆ.ರಿಟೇಲ್ ಮಾರಾಟ ಕ್ಷೇತ್ರದ ಬೃಹತ್ ಕಂಪನಿ 'ಅಮೆಜಾನ್'ನ ಸಂಸ್ಥಾಪಕ ಜೆಫ್ ಬೆಜೋಸ್ ಒಡೆತನಕ್ಕೆ ಸೇರಿದ 'ವಾಷಿಂಗ್ಟನ್ ಪೋಸ್ಟ್' ದೊಡ್ಡ ಪ್ರಮಾಣದಲ್ಲಿ ಉದ್ಯೋಗ ಕಡಿತ ಪ್ರಕ್ರಿಯೆ ಆರಂಭಿಸಿದೆ. ಒಟ್ಟು 300 ನೌಕರರನ್ನು ಮನೆಗೆ ಕಳುಹಿಸಲು ಪಟ್ಟಿ ಮಾಡಿಕೊಂಡಿದ್ದು, ಸ್ಥಳೀಯ ವರದಿಗಾರರು, ಕ್ರೀಡಾ ವಿಭಾಗ, ವಿದೇಶಿ ಬ್ಯುರೋಗಳ ಉದ್ಯೋಗಿಗಳು ಮತ್ತು ವಾಣಿಜ್ಯ ಸುದ್ದಿ ವಿಭಾಗದ ಪತ್ರಕರ್ತರನ್ನು ಕೆಲಸದಿಂದ ತೆಗೆದುಹಾಕಿದೆ.



ಕಾಂಗ್ರೆಸ್ ಪಕ್ಷದ ಹಿರಿಯ ಸಂಸದ, ತಿರುವನಂತಪುರಂ ಜನಪ್ರತಿನಿಧಿ ಶಶಿ ತರೂರ್ ಅವರ ಪುತ್ರ ಇಶಾನ್ ತರೂರ್ ವಾಷಿಂಗ್ಟನ್ ಪೋಸ್ಟ್ ಪತ್ರಿಕೆಯಲ್ಲಿ ಹಲವು ವರ್ಷ ಗಳಿಂದ ಅಂತಾರಾಷ್ಟ್ರೀಯ ವ್ಯವಹಾರಗಳ ಅಂಕಣಕಾರರಾಗಿದ್ದರು. ಈಗಿನ ಉದ್ಯೋಗ ಕಡಿತ ಪ್ರಕ್ರಿಯೆಯಲ್ಲಿ ಇಶಾನ್ ಕೂಡಾ ನೌಕರಿ ಕಳೆದುಕೊಂಡಿದ್ದಾರೆ. 'ವಾಷಿಂಗ್ಟನ್ ಪೋಸ್ಟ್ ಮಾಧ್ಯಮ ಸಂಸ್ಥೆಯ ಆಡಳಿತ ಮಂಡಳಿಯ ಈ ನಿರ್ಧಾರ ಜಾಗತಿಕ ಪತ್ರಿಕೋದ್ಯಮದ ಕರಾಳ ದಿನ' ಎಂದು ಹಲವು ಉದ್ಯೋಗಿಗಳು ನೋವು ತೋಡಿಕೊಂಡಿದ್ದಾರೆ.ಪ್ರತಿಷ್ಠಿತ ದಿನಪತ್ರಿಕೆ ಯೊಂದು ಈ ರೀತಿ ಏಕಾಏಕಿ ತನ್ನ ಸಿಬ್ಬಂದಿಯನ್ನು ಕೆಲಸದಿಂದ ವಜಾಗೊಳಿಸಿರುವುದು ನಿಜಕ್ಕೂ ನಾಚಿಕೆಗೇಡಿನ ಸಂಗತಿ ಎಂದು ಅನೇಕರು ಅಸಮಾಧಾನ ವ್ಯಕ್ತಪಡಿಸಿದ್ದಾರೆ.

ಹೃದಯ ಚೂರಾಗಿದೆ: ಇಶಾನ್ ತರೂರ್: 'ವಾಷಿಂಗ್ಟನ್ ಪೋಸ್ಟ್ ಪತ್ರಿಕೆಯ ಆಡಳಿತ ಮಂಡಳಿ ನನ್ನನ್ನು ಇಂದು ಕೆಲಸದಿಂದ ತೆಗೆದುಹಾಕಿದೆ. ದೇಶ-ವಿದೇಶಗಳಲ್ಲಿ ಕಾರ್ಯ ನಿರ್ವಹಿಸುವ ಅನೇಕ ಉತ್ತಮ ಕೆಲಸಗಾರರನ್ನೂ ತೆಗೆದುಹಾಕಲಾಗಿದೆ. 12 ವರ್ಷಗಳಿಂದ ಒಟ್ಟಿಗೆ ಕೆಲಸ ಮಾಡಿದ್ದ ನಾವೆಲ್ಲಾ ಈಗ ಭಾರವಾದ ಮನಸ್ಸಿನಿಂದ ಕಚೇರಿಯಿಂದ ಹೊರಗೆ ಹೆಜ್ಜೆ ಹಾಕಿದ್ದೇವೆ. ನನ್ನ ಹೃದಯ ಒಡೆದು ಚೂರಾಗಿದೆ. ಏಕಾಏಕಿಯಾಗಿ ನಡೆದಿರುವ ಈ ಕ್ರಮದಿಂದ ಆಘಾತಗೊಂಡಿದ್ದೇನೆ' ಎಂದೇ ಇಶಾನ್ ತರೂರ್ 'ಎಕ್ಸ್' ಸಂದೇಶದಲ್ಲಿ ಬರೆದಿದ್ದಾರೆ.

ಕೊರಿಯ ಲವರ್ ಗೇಮ್, ಧಾರಾವಾಹಿ, ಸಂಗೀತ-ನೃತ್ಯ ವೀಕ್ಷಣೆ ಚಟ | ಷೇರು ದಲ್ಲಾಳಿ ಅಪ್ಪನಿಗೆ 2 ಕೋಟಿ ರು. ಸಾಲ, ಕುಟುಂಬ ಬಲು ಭಾರ

3 ಸೋದರಿಯರ ಬದುಕನ್ನೇ ಆವರಿಸಿಕೊಂಡಿದ್ದ ಕೊರಿಯ

ಗಾಜಿಯಾಬಾದ್: ಉತ್ತರ ಪ್ರದೇಶದ ಗಾಜಿಯಾಬಾದ್‌ನ ಅಪಾರ್ಟ್‌ಮೆಂಟ್‌ನ 9 ಮಹಡಿಯಿಂದ ಜಿಗಿದು ಆತ್ಮಹತ್ಯೆ ಮಾಡಿಕೊಂಡ 3 ಪುಟ್ಟ ಸೋದರಿಯರಿಗೆ 'ಕೊರಿಯನ್ ಲವರ್ ಗೇಮ್'ವಷ್ಟೇ ವ್ಯಸನ ಆಗಿರಲಿಲ್ಲ. ಅವರ ಬದುಕಿನ ಬಹುಭಾಗವನ್ನು ಇಡೀ ಕೊರಿಯಾ ಆಕ್ರಮಿಸಿಕೊಂಡಿತ್ತು. ಕೊರಿಯ ಟಿವಿ ಧಾರವಾಹಿಗಳು, ಹಾಡು-ನೃತ್ಯ, ಕೊರಿಯ ಬಾಯ್ಸ್ ಲವ್ ಸ್ಟೋರಿಗಳು ನಿತ್ಯ ಬದುಕಿನ ಭಾಗವಾಗಿದ್ದವು. ಅವರು ಕೊರಿಯ ಮನರಂಜನೆಗೆ ಎಷ್ಟು ಅಂಟಿಕೊಂಡಿದ್ದರು ಎಂದರೆ ತಮ್ಮ ಹೆಸರಿಗೂ ಕೊರಿಯನ್ ಉಪನಾಮ ಜೋಡಿಸಿಕೊಂಡಿದ್ದರು.

ಸೋದರಿಯರ ಪುಟಾಣಿ ಡೇರಿಯಲ್ಲಿ ಈ ಅಂಶಗಳೆಲ್ಲಾ ದಾಖಲಾಗಿವೆ. ಕೊರಿಯನ್ ಹೆಸರುಗಳಲ್ಲಿಯೇ ಮೂವರೂ ಸೋದರಿಯರು 'ಇನ್‌ಸ್ಟಾಗ್ರಾಂ' ಖಾತೆಗಳನ್ನು ತೆರೆದಿದ್ದಾರೆ. ಅವರ ಈ ಇನ್‌ಸ್ಟಾ ಖಾತೆಗಳಿಗೆ ಹೆಚ್ಚಿನ ಸಂಖ್ಯೆಯ 'ಫಾಲೋವರ್ಸ್' ಇದ್ದರೆಂದು ತಿಳಿದುಬಂದಿದೆ.

ಮೊದಲ ಪತ್ನಿಗೆ ಮಕ್ಕಳಾಗದ ಕಾರಣ ನಾದಿನಿಯನ್ನೇ ಚೇತನ್ ಕುಮಾರ್‌ಗೆ ಮದುವೆಯಾಗಿದ್ದರು. 2ನೇ ಪತ್ನಿಗೆ ಮೂವರು ಹೆಣ್ಣು ಮಕ್ಕಳು ಜನಿಸಿದ ಬಳಿಕ ಮೊದಲ ಪತ್ನಿಗೆ ಒಬ್ಬ ಪುತ್ರ-ಪುತ್ರಿ ಜನನವಾಗಿತ್ತು. ಮೃತ ಮೂವರು ಸೋದರಿಯರಲ್ಲಿ ಒಬ್ಬಳು ಮೊದಲ ಪತ್ನಿ ಮಗಳು, ಇನ್ನಿಬ್ಬರು 2ನೇ ಪತ್ನಿಯ ಪುತ್ರಿಯರು.

ಪೊಲೀಸ್ ತನಿಖೆ ವೇಳೆ ಈ ಕುಟುಂಬದ ಹಲವು ಆಘಾತಕಾರಿ ಸಂಗತಿಗಳು ಒಂದೊಂದಾಗಿ ಹೊರಬಿದ್ದಿವೆ. ಪುತ್ರಿಯರು ಆನ್‌ಲೈನ್ ಗೇಮ್ ವ್ಯಸನಕ್ಕೆ ಸಿಲುಕಿದ್ದರೆ, ಅಪ್ಪ ಚೇತನ್ ಕುಮಾರ್ ಷೇರು ಹೂಡಿಕೆಯಲ್ಲಿ ಎಲ್ಲವನ್ನೂ ಕಳೆದುಕೊಂಡು 2 ಕೋಟಿ ರು. ಸಾಲಕ್ಕೆ ಸಿಲುಕಿದ್ದರು. ಹಣದ ಕೊರತೆ ಎಷ್ಟಿತ್ತು ಎಂದರೆ 15 ದಿನ ಹಿಂದೆ ದೊಡ್ಡ ಮಗಳು ನಿಶಿಕಾ(16) ಬಳಿಯಿದ್ದ ಸ್ಮಾರ್ಟ್‌ಫೋನ್ ಕಿತ್ತೊಯ್ದು ಮಾರಿ ಹಣ ಪಡೆದು ವಿದ್ಯುತ್ ಬಿಲ್ ಪಾವತಿಸಿದ್ದಾರೆ ಎಂದು ಪೊಲೀಸರು ತಿಳಿಸಿದ್ದಾರೆ.

ಒಂದೆಡೆ ಆರ್ಥಿಕ ಮುಗ್ಗಟ್ಟು, ಇಬ್ಬರು ಹೆಂಡತಿಯರು, ನಾಲ್ವರು ಪುತ್ರಿಯರು, ಒಬ್ಬ ಮಗ ಸೇರಿದಂತೆ 8 ಜನರ ದೊಡ್ಡ ಸಂಸಾರ ನಿರ್ವಹಣೆ ಚೇತನ್ ಕುಮಾರ್‌ಗೆ ಕಷ್ಟವಾಗಿತ್ತು. ಅದೇ ಕಾರಣಕ್ಕಾಗಿಯೇ ಏನೋ ಪುತ್ರಿಯರನ್ನು ಕೋವಿಡ್-19 ಲಾಕ್‌ಡೌನ್ ನಂತರದಲ್ಲಿ ಶಾಲೆ ಬಿಡಿಸಿದ್ದರು. ಮಗನನ್ನಷ್ಟೇ ಶಾಲೆಗೆ ಕಳುಹಿಸುತ್ತಿದ್ದರು. ಮನೆಯಲ್ಲೇ ಇದ್ದು ಮಂಕಾಗಿದ್ದ ಪುಟ್ಟ ಸೋದರಿಯರಿಗೆ ಜತೆಯಾಗಿದ್ದೇ ಕೊರಿಯನ್ ಗೇಮ್ಸ್, ಧಾರವಾಹಿ, ಸಂಗೀತ-ನೃತ್ಯ ಕಾರ್ಯಕ್ರಮಗಳು. ಹಾಗಾಗಿ ತಂದೆ ಮೊಬೈಲ್ ಕಿತ್ತೊಯ್ದ ದಿನ ನಿಶಿಕಾ ತುಂಬಾ ನೊಂದುಕೊಂಡಳು. 'ನೀವು ಹೀಗೆ ಮಾಡಬಾರದಿತ್ತು ಪಪ್ಪಾ, ನನ್ನಿಂದ ಮೊಬೈಲ್ ದೂರ ಮಾಡಬಾರದಿತ್ತು' ಎಂದು ಡೇರಿಯಲ್ಲಿ ಬರೆದಿದ್ದಳು. ಬಹುಶಃ ಆ ದಿನದಿಂದಲೇ ಸೋದರಿಯರ ಮನಸ್ಸಿನಲ್ಲಿ ಆತ್ಮಹತ್ಯೆ ಮಾಡಿಕೊಳ್ಳುವ ಇರಾದೆ ಮೂಡಿರಬಹುದು ಎಂದು ತನಿಖಾಧಿಕಾರಿ ಅಂದಾಜು ಮಾಡಿದ್ದಾರೆ.

ಆಟದ ಕೊನೆಯ ಹಂತ?

ಮೂವರು ಸಹೋದರಿಯರಾದ ನಿಶಿಕಾ (16), ಪ್ರಾಚಿ (14) ಮತ್ತು ಪಖಿ (12) ಆನ್‌ಲೈನ್‌ನಲ್ಲಿ ಆಡುತ್ತಿದ್ದ 'ಕೊರಿಯನ್ ಲವರ್ ಗೇಮ್' ಕೂಡಾ ಇತ್ತೀಚೆಗೆ ಕೊನೆ ಹಂತಕ್ಕೆ ಮುಟ್ಟಿತ್ತು. ಅಂದರ 50ನೇ ಹಂತದಲ್ಲಿ ಆತ್ಮಹತ್ಯೆ ಮಾಡಿಕೊಳ್ಳುವುದು ಆಟದ ಷರತ್ತಾಗಿತ್ತು. ಆ ಕಾರಣವಾಗಿಯೂ ಸೋದರಿಯರು ಆತ್ಮಹತ್ಮೆ ಮಾಡಿಕೊಂಡಿರುವ ಸಾಧ್ಯತೆ ಇದೆ ಎನ್ನಲಾಗಿದೆ. ತಂದೆ 15 ದಿನದ ಹಿಂದೆ ನಿಶಿಕಾಳ ಸ್ಮಾರ್ಟ್‌ಫೋನ್ ಕಿತ್ತೊಯ್ದ ಬಳಿಕ ಅಮ್ಮನ ಮೊಬೈಲ್ ಪಡೆದುಕೊಂಡು ಗೇಮಿಂಗ್ ಮುಂದುವರಿಸಿರಬಹುದು ಎನ್ನಲಾಗಿದೆ. ಹಾಗಾಗಿಯೆ ಪೊಲೀಸರು ಚೇತನ್ ಪತ್ನಿಯ ಮೊಬೈಲ್ ಫೋನನ್ನು ವಶಕ್ಕೆ ಪಡೆದು ವಿಧಿವಿಜ್ಞಾನ ಪ್ರಯೋಗಾಲಯಕ್ಕೆ ಕಳುಹಿಸಿಕೊಟ್ಟಿದ್ದಾರೆ ಎಂದು ತಿಳಿದುಬಂದಿದೆ.

ಡೇರಿಯಲ್ಲೇನಿದೆ?

'ಸಾರಿ ಪಾಪಾ. ಹಮ್ ಕೊರಿಯಾ ನಹಿ ಛೋಡ್ ಸಕ್ತೆ. ಕೊರಿಯಾ ಹಮಾರಿ ಜಿಂದಗೀ ಹೈ, ಕೊರಿಯಾ ಹುಮಾರಿ ಜಾನ್ ಹೈ, ಔರ್ ಆಪ್ ಹಮೇ ನಹಿ ಛುಡಾ ಸಕ್ತೆ. ಸಾರಿ ಪಾಪ, ಹಮ್ ಜಾನ್ ದೇ ರಹೇ ಹೈ'(ಪಪ್ಪಾ, ಕ್ಷಮಿಸಿ. ನಾವು ಕೊರಿಯಾ ಗೇಮ್ಸ್ ಬಿಡಲು ಸಾಧ್ಯವಿಲ್ಲ. ಕೊರಿಯಾವೇ ನಮ್ಮ ಜೀವನ, ಕೊರಿಯಾವೇ ನಮ್ಮ ಆತ್ಮ, ನೀವು ಅದರಿಂದ ನಮ್ಮನ್ನು ಬೇರ್ಪಡಿಸಲು ಸಾಧ್ಯವಿಲ್ಲ. ಕ್ಷಮಿಸಿ, ನಾವು ಜೀವ ತ್ಯಜಿಸುತ್ತಿದ್ದೇವೆ). ಸಾಯುವ ಮುನ್ನ ಮೂವರೂ ಸೋದರಿಯರ ದೇವರ ಕೋಣೆಗೆ ಹೋಗಿ ಪ್ರಾರ್ಥನೆ ಮಾಡಿದ್ದಾರೆ. ಅಲ್ಲಿಯೇ ತಮ್ಮ ಪುಟ್ಟ ಡೇರಿ ಮತ್ತು ಅಮ್ಮನ ಮೊಬೈಲ್ ಫೋನ್ ಇಟ್ಟಿದ್ದಾರೆ. ಸೋದರಿಯರ ಮರಣ ಪತ್ರ ಮತ್ತು ಡೇರಿ ಯನ್ನು ಪೊಲೀಸರು ವಶಪಡಿಸಿಕೊಂಡಿದ್ದಾರೆ. ಪುತ್ರಿ ಯರ ಕೈಬರಹವನ್ನು ಚೇತನ್‌ಕುಮಾರ್ ಗುರುತಿಸಿದ್ದಾರೆ.

ನೈಜೀರಿಯದಲ್ಲಿ ಮನೆಸುಟ್ಟು 191 ಜನರ ಕೊಂದ ಐಸಿಸ್

ಕ್ವಾರಾ: ನೈಜೀರಿಯ ದೇಶದಲ್ಲಿ ಇಸ್ಲಾಮಿಕ್ ಭಯೋತ್ಪಾದಕರು ನಾಗರಿಕರನ್ನು ಹಿಂಸಿಸುತ್ತಾ, ಆಸ್ತಿ ಹಾನಿ ಮಾಡುತ್ತಾ ಅಟ್ಟಹಾಸ ಮೆರೆದಿದ್ದಾರೆ. ದೇಶದ ವಿವಿಧೆಡೆ ಬುಧವಾರ ದಾಳಿ ನಡೆಸಿ ಒಟ್ಟು 191 ಜನರನ್ನು ಗುಂಡಿಕ್ಕಿ ಕೊಂದಿದ್ದಾರೆ. ನೈಜೀರಿಯದ ಪಶ್ಚಿಮ ಭಾಗದಲ್ಲಿನ ಕ್ವಾರಾ ರಾಜ್ಯದ ವೊರೊ ಮತ್ತು ನುಕು ಗ್ರಾಮಗಳಲ್ಲಿನ ಜನ ವಸತಿ ಪ್ರದೇಶದ ಮೇಲೆ ದಾಳಿ ಮಾಡಿದ ಇಸ್ಲಾಮಿಕ್ ಉಗ್ರರು ನೂರಾರು ಮನೆಗಳನ್ನು ಸುಟ್ಟು ಹಾಕಿದ್ದಾರೆ, ಅಂಗಡಿಗಳನ್ನು ಲೂಟಿ ಮಾಡಿದ್ದಾರೆ. ಜನರನ್ನು ಕಟ್ಟಿಹಾಕಿ 170 ಮಂದಿಯನ್ನು ಕೊಂದಿದ್ದಾರೆ.

ಮತ್ತೊಂದೆಡೆ ಕಟ್ಸಿನಾ ಭಾಗದಲ್ಲಿ 21 ಜನರನ್ನು ಕೊಂದು ಹಾಕಿದ್ದಾರೆ. ನೈಜೀರಿಯದಲ್ಲಿ ಇತ್ತೀಚಿನ ತಿಂಗಳಲ್ಲಿ ನಡೆದ ಅತ್ಯಂತ ಭೀಕರ ದಾಳಿ ಇದಾಗಿದೆ. ಇಸ್ಲಾಮಿಕ್ ಸ್ಟೇಟ್ ಉಗ್ರ ಸಂಘಟನೆಯ ಸಶಸ್ತ್ರ ಗುಂಪಾದ 'ಲಕುರಾವಾ' ಮಂಗಳವಾರ ಸಂಜೆ ದಾಳಿ ನಡೆಸಿದೆ ಎಂದು ಈ ಪ್ರದೇಶದ ಜನಪ್ರತಿನಿಧಿ ಮೊಹಮ್ಮದ್ ಉಮರ್ ಬಯೋ ಸುದ್ದಿಸಂಸ್ಥೆಗೆ ತಿಳಿಸಿದ್ದಾರೆ. ಆದರೆ, ದಾಳಿ ಹೊಣೆಯನ್ನು ಈವರೆಗೂ ಯಾವುದೇ ಉಗ್ರ ಸಂಘಟನೆ ಹೊತ್ತುಕೊಂಡಿಲ್ಲ.

ನೂರಾರು ಜನರ ರಕ್ತಸಿಕ್ತ ದೇಹಗಳು ನೆಲದ ಮೇಲೆ ಬಿದ್ದಿರುವುದನ್ನು, ಕೆಲವರ ಕೈಗಳು ಕಟ್ಟಲ್ಪಟ್ಟಿರುವುದನ್ನು ಮತ್ತು ಮನೆಗಳು ಉರಿಯುತ್ತಿರುವ ದೃಶ್ಯಗಳು ಸ್ಥಳೀಯ ಸುದ್ದಿವಾಹಿನಿಯ ಪ್ರಸಾರವಾಗಿವೆ. ನೈಜೀರಿಯದಲ್ಲಿ ಅರಾಜಕತೆ ನೆಲೆಸಿದೆ. ದೇಶದ ಈಶಾನ್ಯ ಭಾಗದಲ್ಲಿ ಐಸಿಸ್ ಉಗ್ರರು ಮತ್ತು ವಾಯುವ್ಯ, ಉತ್ತರ-ಮಧ್ಯ ಪ್ರದೇಶಗಳಲ್ಲಿ ಅಪಹರಣ, ಸುಲಿಗೆ ತೀವ್ರ ಹೆಚ್ಚಿದೆ.

2024ರ ಸೆ.15 ಫ್ಲೋರಿಡಾದ ವೆಸ್ಟ್‌ಪಾಮ್ ಬೀಚಲ್ಲಿ ಹತ್ಯೆ ಯತ್ನ | ಆರೋಪಿ ರಯಾನ್ ರೌತ್

ಟ್ರಂಪ್ ಹತ್ಯೆ ಯತ್ನ: ರೌತ್‌ಗೆ ಜೀವಾವಧಿ

ವಾಷಿಂಗ್ಟನ್: 2024ರ ಸೆ.15ರಂದು ವೆಸ್ಟ್ ಪಾಮ್ ಬೀಚ್‌ನ ಟ್ರಂಪ್ ಇಂಟರ್‌ನ್ಯಾಷನಲ್ ಗಾಲ್ಫ್ ಕ್ಲಬ್‌ನಲ್ಲಿ ಅಮೆರಿಕ ಅಧ್ಯಕ್ಷೀಯ ಚುನಾವಣಾ ಪ್ರಚಾರ ಕೈಗೊಂಡಿದ್ದಾಗ ಡೊನಾಲ್ಡ್ ಟ್ರಂಪ್ ಹತ್ಯೆಗೆ ಯತ್ನಿಸಿದ್ದ ಫ್ಲೋರಿಡಾ ಮೂಲದ ರಯಾನ್ ರೌತ್ (59) ಎಂಬಾತನಿಗೆ ಜಿಲ್ಲಾ ನ್ಯಾಯಾಲಯ ಜೀವಾವಧಿ ಶಿಕ್ಷೆ ವಿಧಿಸಿದೆ. ಆದರೆ, ತೀರ್ಪಿನ ವಿರುದ್ಧ ಮೇಲ್ಮನವಿ ಸಲ್ಲಿಸುವುದಾಗಿ ರಯಾನ್ ಪರ ವಕೀಲ ಮಾರ್ಟಿನ್ ರಾಸ್ ಹೇಳಿದ್ದಾರೆ.

ರಯಾನ್ ರೌತ್ ವಿರುದ್ಧ ಡೊನಾಲ್ಟ್ ಟ್ರಂಪ್ ಅವರ ಹತ್ಯೆಗೆ ಯತ್ನ ಸೇರಿದಂತೆ ಐದು ಬಗೆಯ ಆರೋಪಗಳನ್ನು ಹೊರಿಸಲಾಗಿತ್ತು. ಐದೂ ಆರೋಪಗಳಲ್ಲಿ ರೌತ್ ತಪ್ಪಿತಸ್ಥ ಎಂಬುದನ್ನು ಪ್ರಾಸಿಕ್ಯೂಷನ್ ಸಾಕ್ಷ್ಯಗಳ ಸಮೇತ ಸಾಬೀತುಪಡಿಸಿದೆ. ಐದು ತಿಂಗಳಲ್ಲಿಯೇ ವಿಚಾರಣೆ ಪೂರ್ಣಗೊಳಿಸಿದ ಫ್ಲೋರಿಡಾ ನಗರದ ಫೋರ್ಟ್ ಪಿಯರ್ಸ್ ನ್ಯಾಯಾಲಯದ ಜಿಲ್ಲಾ ನ್ಯಾಯಾಧೀಶರಾದ ಐಲೀನ್ ಕ್ಯಾನನ್ ಬುಧವಾರ ಶಿಕ್ಷೆ ಪ್ರಕಟಿಸಿದರು. ಇದೆಲ್ಲದಕ್ಕೂ ಮುನ್ನ ಸೆಪ್ಟೆಂಬರ್‌ನಲ್ಲಿ ವಿಚಾರಣೆ ಸಂದರ್ಭ ನ್ಯಾಯಾಲಯದಲ್ಲೇ ಆರೋಪಿ ರಯಾನ್ ರೌತ್ ಸ್ವತಃ ಇರಿದುಕೊಂಡು ಆತ್ಮಹತ್ಯೆ ಮಾಡಿಕೊಳ್ಳಲು ಯತ್ನಿಸಿದ್ದ.

ಫ್ಲೋರಿಡಾದ ಗಾಲ್ಫ್‌ಕ್ಲಬ್‌ನಲ್ಲಿ ಹತ್ಯೆಗೆ ಯತ್ನಿಸುವುದಕ್ಕೂ ಮುನ್ನ ರಯಾನ್, ಚುನಾವಣಾ ಪ್ರಚಾರ ಸಭೆ ನಡೆಯಲಿದ್ದ ಜಾಗಕ್ಕೆ ಮೊದಲೇ ಬಂದು ನೋಡಿಕೊಂಡು ಹೋಗಿದ್ದ. ಟ್ರಂಪ್ ನಡೆಸಿದ ಹಲವು ರ್‍ಯಾಲಿಗಳಿಗೂ ಹಾಜರಾಗಿ ಅಲ್ಲಿನ ಭದ್ರತಾ ವ್ಯವಸ್ಥೆಗಳನ್ನು ತಿಳಿದುಕೊಂಡಿದ್ದ. ಕೊನೆಗೆ ಟ್ರಂಪ್ ಹತ್ಯೆಗೆ ವೆಸ್ಟ್ ಪಾಮ್ ಬೀಚ್‌ನ ಟ್ರಂಪ್ ಗಾಲ್ಫ್ ಕ್ಲಬ್ ಸೂಕ್ತ ಸ್ಥಳ. ಅದು ಟ್ರಂಪ್ ಒಡೆತನಕ್ಕೇ ಸೇರಿದ ಗಾಲ್ಫ್ ಕ್ಲಬ್ ಆಗಿರುವುದರಿಂದ ಭದ್ರತಾ ಸಿಬ್ಬಂದಿ ಸಂಖ್ಯೆ ಕಡಿಮೆ ಇರಲಿದೆ ಎಂಬುದನ್ನೂ ಅರಿತುಕೊಂಡು ಹತ್ಯೆ ಯೋಜನೆ ಜಾರಿಗೆ ಮುಂದಾಗಿದ್ದು ಎಂದು ತನಿಖಾಧಿಕಾರಿಗಳು ದೋಷಾರೋಪ ಪಟ್ಟಿಯಲ್ಲಿ ತಿಳಿಸಿದ್ದರು.

ಮೊದಲಿಗೆ ರಯಾನ್, ಟ್ರಂಪ್ ಹತ್ಯೆ ಮಾಡಿದವರಿಗೆ 1.50 ಲಕ್ಷ ಡಾಲರ್ ಕೊಡುವುದಾಗಿ ಹೇಳಿಕೊಂಡಿದ್ದ. ಬಳಿಕ ತಾನೇ ಸೋವಿಯತ್ ಸ್ಟೈಲ್ ಸ್ನೈಪರ್ ಬಂದೂಕು ಹಿಡಿದು ರಂಗಕ್ಕಿಳಿದು ಟ್ರಂಪ್‌ಗೆ 126 ಅಡಿಗಳಷ್ಟು ಸಮೀಪದಿಂದಲೇ ಗುಂಡಿಕ್ಕಿ ಕೊಲ್ಲಲು ಯತ್ನಿಸಿ ಕಡೆಗೆ ಭದ್ರತಾ ಪಡೆಗಳಿಗೆ ಸಿಕ್ಕಿಬಿದ್ದ.

ಇದಕ್ಕೂ ಮುನ್ನವೇ ಕ್ರೂಕ್ಸ್‌ನಿಂದ ಯತ್ನ

2024ರ ಸೆ.15ರಂದು ಟ್ರಂಪ್ ಹತ್ಯೆಗೆ ರಯಾನ್ ಯತ್ನಿಸುವುದಕ್ಕೂ ಮುನ್ನ, ಅದೇ ವರ್ಷದ ಜುಲೈ 13ರಂದು ಪೆನ್ಸಿಲ್ವೇನಿಯಾದ ಬಟ್ಲರ್ ನಗರದಲ್ಲಿ ಚುನಾವಣಾ ಪ್ರಚಾರ ರ್‍ಯಾಲಿ ನಡೆದಿದ್ದಾಗಲೂ ಟ್ರಂಪ್ ಹತ್ಯೆ ಯತ್ನ ನಡೆದಿತ್ತು. ಟ್ರಂಪ್ ಮೇಲೆ 20 ವರ್ಷದ ಥಾಮಸ್ ಕ್ರೂಕ್ಸ್ ಎಂಬಾತ ಸ್ನೈಪರ್ ರೀತಿಯ ಬಂದೂಕಿನಿಂದ ಗುಂಡು ಹಾರಿಸಿ ಕೊಲ್ಲಲೆತ್ನಿಸಿದ್ದ. ವೇದಿಕೆಯಲ್ಲಿ ಒಬ್ಬರೇ ನಿಂತು ಭಾಷಣ ಮಾಡುತ್ತಿದ್ದ ಟ್ರಂಪ್ ಅವರ ಬಲಗಿವಿಯನ್ನು ಗುಂಡು ಸೋಕಿಕೊಂಡು ಹೋಗಿತ್ತು. ಟ್ರಂಪ್ ಕಿವಿಯಿಂದ ಭಾರೀ ಪ್ರಮಾಣದಲ್ಲಿ ರಕ್ತಸ್ರಾವವಾಗಿತ್ತು. ವೇದಿಕೆಯಲ್ಲಿದ್ದ ಟ್ರಂಪ್ ಥಟ್ಟನೆ ಕೆಳಕ್ಕೆ ಬಗ್ಗಿ ಕುಳಿತು ನಂತರದ ದಾಳಿಗಳಿಂದ ತಪ್ಪಿಸಿಕೊಂಡರು. ತಕ್ಷಣವೇ ಅಲರ್ಟ್ ಆದ ಭದ್ರತಾ ಪಡೆ ಸಿಬ್ಬಂದಿ, ಗುಂಡು ಹಾರಿಸಿದ ಯುವಕನನ್ನು ಹುಡುಕಿ ಸ್ಥಳದಲ್ಲೇ ಗುಂಡಿಕ್ಕಿ ಕೊಂದರು.

ಪ್ರತಿಪಕ್ಷ ಗದ್ದಲ, ಲೋಕಸಭೆ ಕಲಾಪ ಮತ್ತೆ ಮುಂದೂಡಿಕೆ

ದೆಹಲಿ: ಲೋಕಸಭೆಯಲ್ಲಿ ಗುರುವಾರವೂ ಗದ್ದಲ-ಕೋಲಾಹಲ-ಕಲಾಪ ಮುಂದೂಡಿಕೆ ಸರಣಿ ಮುಂದುವರಿಯಿತು. ತೀವ್ರ ಗದ್ದಲವಾದ ಹಿನ್ನೆಲೆ ಸ್ಪೀಕರ್ ಓಂ ಬಿರ್ಲಾ ಅವರು ಸದನದ ಕಲಾಪವನ್ನು ಮಧ್ಯಾಹ್ನ 3 ಗಂಟೆಗೆ ಮುಂದೂಡಿದರು.

ಮಾಜಿ ಸೇನಾಧಿಕಾರಿ ಎಂಎಂ ನರವಣೆ ಅವರು ರಚಿಸಿದ ಅಪ್ರಕಟಿತ ಕೃತಿಯನ್ನು ಸದನದಲ್ಲಿ ಪ್ರಸ್ತಾಪಿಸಲು ರಾಹುಲ್ ಗಾಂಧಿ ಮುಂದಾಗಿದ್ದಕ್ಕೆ ರಕ್ಷಣಾ ಸಚಿವ ರಾಜನಾಥ್ ಸಿಂಗ್ ಮತ್ತು ಗೃಹ ಸಚಿವ ಅಮಿತ್ ಶಾ ಮಂಗಳವಾರ ವಿರೋಧ ವ್ಯಕ್ತ ಪಡಿಸಿದ್ದರು. ಅಮೆರಿಕ -ಭಾರತ ನಡುವಿನ ವ್ಯಾಪಾರ ಒಪ್ಪಂದ ಕುರಿತು ಚರ್ಚೆಗೆ ಅವಕಾಶ ಕೊಡುತ್ತಿಲ್ಲ ಎಂದು ಪ್ರತಿಪಕ್ಷಗಳು ಬುಧವಾರ ಸದನದಲ್ಲಿ ಗದ್ದಲ ಮಾಡಿದ್ದವು.

ಗುರುವಾರ ಬೆಳಗ್ಗೆ ಕಲಾಪ ಆರಂಭವಾದಾಗಲೇ, ಲೋಕಸಭೆ ಪ್ರತಿಪಕ್ಷ ನಾಯಕರಿಗೇ ಮಾತನಾಡಲು ಆಡಳಿತ ಪಕ್ಷ ಅವಕಾಶ ನೀಡುತ್ತಿಲ್ಲ ಎಂದು ಪ್ರತಿಪಕ್ಷಗಳ ಸದಸ್ಯರು ಪ್ರತಿಭಟನೆ ವ್ಯಕ್ತಪಡಿಸಿದರು. ಇನ್ನೊಂದೆಡೆ, ಬುಧವಾರ ಪ್ರಧಾನಿ ಪೀಠದ ಬಳಿ ಪ್ರತಿ ಪಕ್ಷಗಳು ಮಹಿಳಾ ಸಂಸದರು ಘೇರಾವ್ ಮಾಡುವ ರೀತಿ ನಿಂತಿದ್ದನ್ನು ನೆನಪಿಸಿದ ಸ್ಪೀಕರ್ ಓಂ ಬಿರ್ಲಾ, ಪ್ರತಿಪಕ್ಷದವರು ಹೀಗೆ ಪ್ರತಿಭಟನೆ ನಡೆಸಿದ್ದು ಸಂಸದೀಯ ಗೌರವ ಮತ್ತು ನಿಯಮಾವಳಿಗಳಿಗೆ ವಿರುದ್ಧ ಎಂದು ತೀವ್ರ ಅಸಮಾಧಾನ ವ್ಯಕ್ತಪಡಿಸಿದರು.

ವಿಪಕ್ಷಗಳ ಈ ನಡೆ ಸದನದ ಶಿಸ್ತು, ಮತ್ತು ಅಧ್ಯಕ್ಷೀಯ ಸ್ಥಾನಕ್ಕೆ ಅಗೌರವ ತೋರಿದಂತಾಗಿದೆ. ಇಂತಹ ವರ್ತನೆಯಿಂದ ಸದನವನ್ನು ಸರಾಗವಾಗಿ ನಡೆಸುವುದು ಅಸಾಧ್ಯವಾಗುತ್ತದೆ ಎಂದು ಸ್ಪೀಕರ್ ಆಕ್ಷೇಪ ವ್ಯಕ್ತಪಡಿಸಿದರು.

ಎಂಎನ್‌ಸಿ ಕೆಲಸ ಬಿಟ್ಟು ಐಐಟಿ-ಜಿ ಇಂಜಿನಿಯರ್ ಜೋಡಿಯ 'ಪಾನಿಪೂರಿ' ಮಾರಾಟ ಸಾಹಸ

ಭಾರತದ ಪಾನಿಪೂರಿಗೆ ಲಂಡನ್‌ನಲ್ಲಿ ₹6 ಸಾವಿರ

ಲಂಡನ್: ವರ್ಷಗಳಿಂದ ಲಂಡನ್ ನಿವಾಸಿಗಳಾಗಿರುವ, 'ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ಟೆಕ್ನಾಲಜಿ-ಗುವಾಹಟಿ'(ಐಐಟಿ-ಜಿ)ಯಿಂದ ಇಂಜಿನಿಯರಿಂಗ್ ಪದವಿ ಗಳಿಸಿರುವ ಭಾರತೀಯ ದಂಪತಿ ಲಂಡನ್‌ನಲ್ಲಿ 'ಪಾನಿ ಪೂರಿ' ಮಾರುತ್ತಿದ್ದಾರೆ. ಮನಮೆಚ್ಚಿದ ಕೆಲಸ ಮಾಡುವ ಸಲುವಾಗಿ ಪತ್ನಿ ಬಹುರಾಷ್ಟ್ರೀಯ ಕಂಪನಿಯ ಲಕ್ಷಾಂತರ ರು. ವೇತನದ ನೌಕರಿಯನ್ನೇ ತ್ಯಜಿಸಿದ್ದಾರೆ.

ಅಂಕಿತಾ ಖಾಂಟೆ ಐಐಟಿ-ಗುವಾಹಟಿ ಕಾಲೇಜಿನಲ್ಲಿ ಇಂಜಿನಿಯರಿಂಗ್ ಪದವಿ ಬಳಿಕ ಬೆಂಗಳೂರಿನಲ್ಲಿ ಬಹುರಾಷ್ಟ್ರೀಯ ಸಾಫ್ಟ್‌ವೇರ್ ಕಂಪನಿಯಲ್ಲಿ 'ಪ್ರಾಡಕ್ಟ್ ಡಿಸೈನರ್' ಆಗಿದ್ದವರು. ಉತ್ತರ ಪ್ರದೇಶದ ಅಮನ್ ಕೃಷ್ಣಾರನ್ನು ಮದುವೆಯಾದರು. 2 ವರ್ಷ ಹಿಂದೆ ವೃತ್ತಿ ಬದುಕಲ್ಲಿ ದಿಢೀರ್ ಬದಲಾವಣೆ. ಅಮನ್‌ಗೆ ಲಂಡನ್‌ನ ಪ್ರತಿಷ್ಠಿತ ಬ್ಯಾಂಕ್‌ನಲ್ಲಿ ದೊಡ್ಡ ಸಂಬಳದ ಡೇಟಾ ಸೈಂಟಿಸ್ಟ್ ಹುದ್ದೆಗೆ ಆಹ್ವಾನ ಬಂದಿತು.

ಲಂಡನ್‌ನ ಉತ್ತಮ ಹವೆ-ಪ್ರಶಾಂತ ವಾತಾವರಣದಲ್ಲೂ ಅಂಕಿತಾಗೆ ಬೇಸರ ಶುರುವಾಯಿತು. ಸಮಯ ವ್ಯರ್ಥವಾಗುತ್ತಿದೆ ಎನಿಸಿತು. ಆಗ ಹೊಳೆದಿದ್ದೇ 'ಗೋಲ್ ಗೊಪ್ಪ'. ಉಬ್ಬಿದ ಪುಟ್ಟ ಪೂರಿಗಳ ಹೊಟ್ಟೆ ಚಿವುಟಿ, ಬೇಯಿಸಿದ ಆಲೂ, ಬಟಾಣಿ, ಕೊತ್ತುಂಬರಿ, ಜೀರಿಗೆ ಮಸಾಲೆಯನ್ನು ತುಂಬಿ ಖಾರವಾದ ಮಸಾಲೆ ಪಾನಿಗೆ ಅಜ್ಜಿ ತೆಗೆದು ಆಸ್ವಾದಿಸುತ್ತಾ ತಿನ್ನುವುದು ಅಂಕಿತಾಗೆ ಬಲು ಇಷ್ಟ. ಹಾಗಾಗಿ ಗಂಡ ಅಮನ್ ಮನಸ್ಸಿಗೂ ಪಾನಿ ಪೂರಿ ಕನಸು ತುಂಬಿದರು. ಮೊದಲಿಗೆ ಮನೆಯಲ್ಲೇ ಚಾಟ್ಸ್ ತಯಾರಿಸಿ ಗೆಳೆಯರ ಬಳಗ ಮತ್ತು ಪರಿಚಿತರಿಗೆ ಪೂರೈಸಲಾರಂಭಿಸಿದರು. ಭಾರತದ ರುಚಿಕರ ಚಾಟ್ಸ್ ಸಿಗುವುದೇ ಕಷ್ಟವಿರುವ ಲಂಡನ್‌ನಲ್ಲಿ ಅಂಕಿತಾರ 'ಧೋಲಿ ಕಢಿ' ಮತ್ತು ನಾಗ್‌ಪುರ್ ಸ್ಟೈಲ್‌ನ 'ಸಾಂಬಾರ್ ವಡಿ'ಗೆ ಭಾರಿ ಬೇಡಿಕೆ ಬಂದಿತು. ಕಲ್ಲಂಗಡಿ ಹಣ್ಣಿನ 'ಬೌಜಿ' ಜನಮೆಚ್ಚುಗೆ ಗಳಿಸಿತು. ಅಂಕಿತಾರ ಕೈರುಚಿಯ 'ಸಿಗ್ನೇಚರ್ ಎಲಿಮೆಂಟ್' ಎನಿಸಿಕೊಂಡಿತು. ಬಳಿಕ ಉದ್ಯಮ ವಿಸ್ತರಿಸಲು ನಿರ್ಧರಿಸಿದ ದಂಪತಿ ಜನದಟ್ಟಣೆ ಸ್ಥಳದಲ್ಲಿ 'ದಿ ಬೌಜಿ ಕ್ಲಬ್' ತೆರೆದರು. ಈಗ ಅವರ ರೆಸ್ಟೋರೆಂಟ್‌ನಲ್ಲಿ ಜನಜಂಗುಳಿ.

ಲಂಡನ್‌ನಲ್ಲಿ 'ದಿ ಬೌಜಿ ಕ್ಲಬ್'

ಅಂಕಿತಾಗೆ ಅಡುಗೆ ಕಲೆ ಒಲಿದಿದೆ. ಅದು ಅವರ ಬಲು ಇಷ್ಟದ ಕೆಲಸ. ಸಾಫ್ಟ್‌ವೇರ್ ಕ್ಷೇತ್ರದ ಪ್ರಾಡಕ್ಟ್ ಡಿಸೈನರ್ ಕೆಲಸಕ್ಕಿಂತ ಪಾನಿ ಪೂರಿ ಮತ್ತಿತರ ಚಾಟ್ಸ್ ತಯಾರಿಸುವುದೇ ಹೆಚ್ಚು ಖುಷಿ ಕೊಡುತ್ತಿದೆ. ಹಾಗಾಗಿ ಅಂಕಿತಾ ಪೂರ್ಣ ಪ್ರಮಾಣದಲ್ಲಿ 'ದಿ ಬೌಜಿ ಕ್ಲಬ್'ನಲ್ಲಿ ತೊಡಗಿಸಿಕೊಂಡಿದ್ದಾರೆ. ಉತ್ತರ ಪ್ರದೇಶದವರಾದ ಅಮನ್‌ಗೂ ಚಾಟ್ಸ್‌ಗಳ ಕುರಿತು ತುಸು ಹೆಚ್ಚೇ ತಿಳಿದಿದ್ದು, ಪತ್ನಿಗೆ ಸಾಥ್ ನೀಡಿದ್ದಾರೆ. ಅಂಕಿತಾ-ಅಮನ್‌ರ ಜನಪ್ರಿಯ 'ದಿ ಬೌಜಿ ಕ್ಲಬ್'ನಲ್ಲಿ ಒಂದು ಪ್ಲೇಟ್ ಪಾನಿ ಪೂರಿ ದರ 50 ಪೌಂಡ್. ಅಂದರೆ, 6 ಸಾವಿರ ರುಪಾಯಿ!

ಸಮಾಚಾರ ಸಣ್ಣದಲ್ಲ

ನಿಯಮ ಉಲ್ಲಂಘಿಸಿದ ಪಿಜಿಗಳಿಗೆ 2.5 ಲಕ್ಷ ದಂಡ

ಬೆಂಗಳೂರು: ದಕ್ಷಿಣ ನಗರ ಪಾಲಿಕೆಯ ವ್ಯಾಪ್ತಿಯಲ್ಲಿ ಪಿಜಿ ಗಳ ಹಾಗೂ ಹೋಟೆಲ್ ಗಳ ಪರಿಶೀಲನೆ ನಡೆಸಲಾಗಿದ್ದು, ಮಾರ್ಗಸೂಚಿ ಹಾಗೂ ಸುರಕ್ಷತಾ ನಿಯಮಗಳನ್ನು ಪಾಲಿಸದ ಪಿಜಿ ಹಾಗೂ ಹೋಟೆಲ್ ಗಳಿಂದ 2,57,100 ರು. ದಂಡ ವಸೂಲಿ ಮಾಡಲಾಗಿದೆ ಎಂದು ಆಯುಕ್ತ ಕೆ ಎನ್ ರಮೇಶ್ ಮಾಹಿತಿ ನೀಡಿದರು. ಬೆಂಗಳೂರು ದಕ್ಷಿಣ ನಗರ ಪಾಲಿಕೆಯ ವ್ಯಾಪ್ತಿಯಲ್ಲಿ ಜ.12ರಿಂದ ಫೆ.4ರವರೆಗೆ ಜಯ ನಗರ, ಬೆಂಗಳೂರು ದಕ್ಷಿಣ, ಬಿಟಿಎಂ ಲೇಔಟ್ ಹಾಗೂ ಬೊಮ್ಮನಹಳ್ಳಿ ವಿಧಾನಸಭಾ ಕ್ಷೇತ್ರಗಳಲ್ಲಿ ನಡೆಯುತ್ತಿರುವ ಪಿಜಿಗಳಲ್ಲಿ ಹಾಗೂ ಹೋಟೆಲ್ ಉದ್ದಿಮೆಗಳಲ್ಲಿ ಶುದ್ಧ ಕುಡಿಯುವ ನೀರು, ಶುಚಿತ್ವ, ಅಡುಗೆ ಕೋಣೆ ನೈರ್ಮಲ್ಯ, ಸುರಕ್ಷತೆ, ಉತ್ತಮ ಶೌಚಾಲಯ ವ್ಯವಸ್ಥೆ, ಅಗ್ನಿಶಾಮಕ ಸಾಧನಗಳು ಹಾಗೂ ಸಿ.ಸಿ.ಟಿ.ವಿ ಕ್ಯಾಮರಾ ಅಳವಡಿಕೆ ಮತ್ತು ಊಖಖಅನ ಆಹಾರ ಸುರಕ್ಷತಾ ಪ್ರಮಾಣ ಪತ್ರ ಇತ್ಯಾದಿ ಮೂಲಭೂತ ಸೌಕರ್ಯಗಳು ಇರುವ ಬಗ್ಗೆ ಪರಿಶೀಲನೆ ನಡೆಸಲಾಗಿದ್ದು, ನ್ಯೂನತೆಗಳು ಕಂಡು ಬಂದಂತಹ ಉದ್ದಿಮೆಗಳಿಗೆ ನೋಟಿಸ್ ಜಾರಿ ಮಾಡಿ ಒಟ್ಟು 2,06,500 ರು. ದಂಡ ವಿಧಿಸಲಾ ಗಿದ್ದು, 14 ಪಿ.ಜಿ ಗಳ ಅಡುಗೆ ಕೋಣೆಗಳನ್ನು ಮುಚ್ಚ ಲಾಗಿದೆ. ಇದರ ಜತೆಗೆ ಕೋಟ್ಪಾ ಕಾಯಿದೆ (ಸಾರ್ವಜನಿಕ ಧೂಮಪಾನ ನಿಷೇಧ) ಅಡಿ ನಿಯಮ ಉಲ್ಲಂಘಿಸಿದ ಉದ್ದಿಮೆಗಳಿಗೂ 50,600 ರು.ದಂಡ ವಿಧಿಸಲಾಗಿದೆ ಎಂದು ಮಾಹಿತಿ ನೀಡಿದರು.

ರಸ್ತೆ ಗುಡಿಸಲು ಹೊಸ ಯಂತ್ರಗಳ ಪರಿಚಯ

ಬೆಂಗಳೂರು: ರಸ್ತೆ ಗುಡಿಸಲು ಜಿಬಿಎ ವತಿಯಿಂದ ಹೊಸ ಯಂತ್ರಗಳನ್ನು ಪರಿಚಯಿಸಿದ್ದು, ಜತೆಗೆ ಪೌರಕಾರ್ಮಿಕರಿಗೆ ಹೋಟೆಲ್‌ಗಳಲ್ಲಿ ಶೌಚಾಲಯವನ್ನು ಬಳಸಲು ಅವಕಾಶ ನೀಡಲಾಗುವುದು ಎಂದು ಹೇಳಲಾಗಿದೆ. ರಸ್ತೆ ಗುಡಿಸಲು ಪೊರಕೆಗಳ ಬದಲಾಗಿ ಯಾಂತ್ರೀಕೃತ ಶುಚಿಗೊಳಿಸುವ ಯಂತ್ರಗಳ ಬಳಕೆಗೆ ಗುರುವಾರ ಬೆಂಗಳೂರು ಉತ್ತರ ನಗರ ಪಾಲಿಕೆ ವ್ಯಾಪ್ತಿಯ ಸಹಕಾರನಗರದ ಪಾರ್ಕ್ ಬಳಿಯ 1ನೇ ಮುಖ್ಯ ರಸ್ತೆಯಲ್ಲಿ ಆಯುಕ್ತ ಪೊಮ್ಮಲ ಸುನೀಲ್ ಕುಮಾರ್ ಪ್ರಾಯೋಗಿಕ ಚಾಲನೆ ನೀಡಿದ್ದು, ಶುಚಿಗೊಳಿಸುವ ಯಂತ್ರಗಳನ್ನು ತಾವೇ ಚಲಾಯಿಸಿ ಅದರ ಸಾಧಕ ಬಾಧಕಗಳನ್ನು ಖುದ್ದು ಪರಿವೀಕ್ಷಣೆ ನಡೆಸಿದರು. ಪೌರಕಾರ್ಮಿಕರಿಗೆ ಇವುಗಳ ಬಳಕೆಯ ಬಗ್ಗೆ ಹೆಚ್ಚಿನ ಮಾಹಿತಿಯನ್ನು ನೀಡಲಾಯಿತು. ಸ್ವಚ್ಛ ಸುಂದರ ನಗರವನ್ನಾಗಿಸಲು ಯಾವ ರೀತಿಯ ಕೆಲಸಗಳನ್ನು ನಿರ್ವಹಿಸಬೇಕು ಎನ್ನುವ ಸೂಚನೆಗಳನ್ನು ಸಹ ನೀಡಿದರು. ಸಾಂಕೇತಿಕ ಚಾಲನೆ ಕಾರ್ಯಕ್ರಮದ ನಂತರ ಮಾತನಾಡಿ, ಬೆಂಗಳೂರು ಉತ್ತರ ನಗರ ಪಾಲಿಕೆಯ ವ್ಯಾಪ್ತಿಯಲ್ಲಿ ದೈನಂದಿನ ರಸ್ತೆ ಸ್ವಚ್ಛತಾ ಕಾರ್ಯವನ್ನು ಉನ್ನತೀಕರಣಗೊಳಿಸಲು ಹಾಗೂ ಪೌರಕಾರ್ಮಿಕರ ಕೆಲಸವನ್ನು ಸರಳೀಕರಣಗೊಳಿಸುವ ನಿಟ್ಟಿನಲ್ಲಿ ಯಾಂತ್ರೀಕೃತ ಶುಚಿಗೊಳಿಸುವ ಯಂತ್ರಗಳ ಬಳಕೆಗೆ ಚಾಲನೆ ನೀಡಲಾಗಿದೆ. ಕಸ ಗುಡಿಸುವ ಯಂತ್ರಗಳು, ಬ್ಲೋವರ್ ಮಷೀನ್, ರಸ್ತೆ ಕಸವನ್ನು ಶೇಖರಣೆ ಮಾಡಲು ಟ್ರಾಲಿ ಡಸ್ಟ್ ಬಿನ್‌ಗಳನ್ನು ಪ್ರಾಯೋಗಿಕವಾಗಿ ಉಪಯೋಗಿಸಲಾಗುತ್ತದೆ. ಸುರಕ್ಷತಾ ದೃಷ್ಟಿಯಿಂದ ಟ್ರಾಫಿಕ್ ಕೋನ್‌ಗಳನ್ನು ಸಹ ಖರೀದಿಸಲಾಗಿದೆ ಎಂದು ಮಾಹಿತಿ ನೀಡಿದ್ದಾರೆ.

ಗುತ್ತಿಗೆ ಅವಧಿ ಮುಗಿದ ಆಸ್ತಿ ವಶಕ್ಕೆ ಸೂಚನೆ

ಬೆಂಗಳೂರು: ಗುತ್ತಿಗೆ ಆಧಾರದ ಮೇಲೆ ಸಾರ್ವಜನಿಕರಿಗೆ, ಸಂಘ-ಸಂಸ್ಥೆಗಳಿಗೆ ಇನ್ನಿತರೆ ಉಪಯೋಗಕ್ಕಾಗಿ ನೀಡಲಾಗಿರುವ ಕೇಂದ್ರ ನಗರ ಪಾಲಿಕೆಗೆ ಸೇರಿದ ಸ್ವತ್ತುಗಳನ್ನು ಪಟ್ಟಿ ಮಾಡುವಂತೆ ಅಧಿಕಾರಿಗಳಿಗೆ ಕೇಂದ್ರ ನಗರ ಪಾಲಿಕೆ ಆಯುಕ್ತ ರಾಜೇಂದ್ರ ಚೋಳನ್ ಸೂಚನೆ ನೀಡಿದರು. ಕಂದಾಯ ವಿಭಾಗದ ಅಧಿಕಾರಿಗಳಸಭೆಯಲ್ಲಿ ಮಾತನಾಡಿ, ಗುತ್ತಿಗೆ ನೀಡಲಾದ ಜಾಗಗಳ ಪೈಕಿ ಗುತ್ತಿಗೆ ಅವಧಿ ಮುಕ್ತಾಯಗೊಂಡ ಸ್ವತ್ತು ಗುತ್ತಿಗೆ ಪಡೆದ ಸಂಘ-ಸಂಸ್ಥೆ/ ಸಾರ್ವ ಜನಿಕರಿಗೆ ನೋಟಿಸ್ ಜಾರಿ ಮಾಡಲು ಹಾಗೂ ಇದಕ್ಕೆ ಪ್ರತ್ಯುತ್ತರಕ್ಕಾಗಿ 15 ದಿನಗಳ ಕಾಲಾ ವಕಾಶ ನೀಡಬೇಕು. 15 ದಿನದೊಳಗಾಗಿ ನೋಟಿಸ್ ಗೆ ಯಾವುದೇ ರೀತಿಯ ಉತ್ತರ ಬಾರದಿ ದ್ದಲ್ಲಿ ಅಂತಹ ಸ್ವತ್ತುಗಳನ್ನು ನಗರ ಪಾಲಿಕೆ ವಶಕ್ಕೆ ಪಡೆದು ಕೊಳ್ಳಿದುರಸ್ಥಿಯಲ್ಲಿರುವ ನಗರ ಪಾಲಿಕೆಯ ಕಚೇರಿಗಳನ್ನು ನವೀಕರಣಗೊಳಿಸಿ ಸುಸ್ಥಿತಿಯಲ್ಲಿರಿಸಲು ಸಿಬ್ಬಂದಿ ದೈನಂದಿನ ಕಾರ್ಯನಿರ್ವಹಣೆಗೆ ಅನುಕೂಲವಾಗಲು ಹಾಗೂ ಸಾರ್ವಜನಿಕರ ಕೆಲಸಕಾರ್ಯಗಳಿಗೆ ಅನುವಾಗುವಂತೆ ಅಗತ್ಯ ಪೀಠೋಪಕರಣಗಳನ್ನು ಅಳವಡಿಸಿಕೊಳ್ಳಲು ಸೂಚನೆ ನೀಡಿದರು.

ನಾಳೆ ಸಂಗೀತೋತ್ಸವ

ಬೆಂಗಳೂರು: ಗುರುಗಾನ ಲಹರಿ ಸಂಗೀತ ಅಕಾಡೆಮಿ ವತಿಯಿಂದ 16 ನೇ ಸಂಗೀತೋತ್ಸವ ಹಾಗೂ ಪುಟ್ಟ ಶ್ರೀ ಸಮ್ಮಾನ್ ಪ್ರಶಸ್ತಿ ಪ್ರದಾನ ಸಮಾರಂಭ ಕಾರ್ಯಕ್ರಮ ಫೆ.7 ರಂದು ನಗರದ ಕನ್ನಡ ಸಾಹಿತ್ಯ ಪರಿಷತ್ತಿನ ಶ್ರೀಕೃಷ್ಣರಾಜ ಪರಿಷತ್ ಮಂದಿರದಲ್ಲಿ ಆಯೋಜಿಸಲಾಗಿದೆ ಎಂದು ಸಂಸ್ಥೆ ಪ್ರಕಟಣೆಗೆ ತಿಳಿಸಿದೆ. ಕಾರ್ಯಕ್ರಮದಲ್ಲಿ ಪಂ. ಸತೀಶ್ ಹಂಪಿಹೊಳಿ, ನಿವೃತ್ತ ನ್ಯಾಯಮೂರ್ತಿ ಸಂತೋಷ್ ಹೆಗ್ಡೆ, ಕಥಕ್ ನೃತ್ಯ ಕಲಾವಿದೆ ವಿದುಷಿ ಪೂರ್ಣಾ ಆಚಾರ್ಯ, ಸಂಸ್ಥೆಯ ಅಧ್ಯಕ್ಷ ಪಂ. ಶಿವಾನಂದ್ ಹೇರೂರ್ ಸೇರಿದಂತೆ ಇನ್ನಿತರರು ಉಪಸ್ಥಿತರಿರಲಿದ್ದಾರೆ. ಈ ವೇಳೆ ಪುಟ್ಟ ಶ್ರೀ ಸಮ್ಮಾನ್ ಪ್ರಶಸ್ತಿಯನ್ನು ಹಿಂದೂಸ್ತಾನಿ ಶಾಸ್ತ್ರೀಯ ಗಾಯಕ ಪಂ. ವಾಗೀಶ್ ಭಟ್ ಹಾಗೂ ವಿದ್ವಾನ್ ಪ್ರಭು ರಾವ್ ಸೊನ್ನ ಅವರಿಗೆ ಪ್ರದಾನ ಮಾಡಲಾಗುವುದು ಹಾಗೂ ಪಂ. ಶಿವಾನಂದ್ ಹೇರೂರ್, ವಿದ್ವಾನ್ ಗೌರವ್ ಅಗ್ನಿಹೋತ್ರಿ, ವಿದುಷಿ ಅಮೃತ ತ್ರಿಪಾಠಿ ಹಾಗೂ ಸಂಸ್ಥೆಯ ವಿದ್ಯಾರ್ಥಿಗಳಿಂದ ವಿವಿಧ ಗಾನಪ್ರಕಾರಗಳ ಪ್ರಸ್ತುತಿ ಇರಲಿದೆ ಎಂದು ಸಂಸ್ಥೆ ಪ್ರಕಟಣೆಯಲ್ಲಿ ತಿಳಿಸಿದೆ.

---

600 ಭೂ ಮಾಲೀಕರಿಂದ ಜಮೀನು ನೀಡಲು ಒಪ್ಪಿಗೆ, 400ಕ್ಕೂ ಹೆಚ್ಚು ಜನರಿಗೆ ಪರಿಹಾರ ವಿತರಣೆ: ಡಿಸಿಎಂ ಡಿ.ಕೆ.ಶಿವಕುಮಾರ್

ಒಂದೂವರೆ ವರ್ಷದಲ್ಲಿ ಬೆಂಗಳೂರು ಬಿಸಿನೆಸ್ ಕಾರಿಡಾರ್ ಪೂರ್ಣ

ವಿಶ್ವವಾಣಿ ಸುದ್ದಿಮನೆ ಬೆಂಗಳೂರು

ಮುಂದಿನ ಒಂದೂವರೆ ವರ್ಷದಲ್ಲಿ ಮೊದಲ ಹಂತದ ಬೆಂಗಳೂರು ಬಿಸಿನೆಸ್ ಕಾರಿಡಾರ್ ಯೋಜನೆ ಪೂರ್ಣಗೊಳಿಸಲಿದ್ದೇವೆ ಎಂದು ಡಿಸಿಎಂ ಡಿ.ಕೆ. ಶಿವಕುಮಾರ್ ತಿಳಿಸಿದರು.

ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಬಿಡಿಎ ಅಧಿಕಾರಿಗಳೊಂದಿಗೆ ಬೆಂಗಳೂರು ಬಿಸಿನೆಸ್ ಕಾರಿಡಾರ್ (ಉತ್ತರ ಹಾಗೂ ದಕ್ಷಿಣ) ಬಗ್ಗೆ ಪರಿಶೀಲನೆ ಸಭೆ ನಡೆಸಿದೆ. ಭೂಮಿ ಮಾಲೀಕರಿಗೆ ಪರಿಹಾರದ ಚೆಕ್, ಪ್ರಮಾಣ ಪತ್ರ, ಟಿಡಿಆರ್ ನೀಡಿದ್ದೇನೆ. ಕೆಲವರು ಶೇ.35 ವಾಣಿಜ್ಯ ಭೂಮಿ ಯನ್ನು ಪರಿಹಾರವಾಗಿ ಪಡೆದರೆ, ಮತ್ತೆ ಕೆಲವರು ಟಿಡಿಆರ್, ಚೆಕ್ ಮೂಲಕ ಹಣ ಪಡೆದಿದ್ದಾರೆ. ಕಂದಾಯ ಭೂಮಿ ಇದ್ದ ಕಡೆ ಮಾರುಕಟ್ಟೆ ಮೌಲ್ಯದ ಮೂರು ಪಟ್ಟು ಹಣ ನೀಡಿದ್ದೇವೆ. ಬಿಬಿಎಂಪಿ ವ್ಯಾಪ್ತಿಯಲ್ಲಿ ಎರಡು ಪಟ್ಟು ನೀಡಿದ್ದೇವೆ. 650ಕ್ಕೂ ಹೆಚ್ಚು ಜನ ಒಮ್ಮತದಿಂದ ಭೂಮಿ ಬಿಟ್ಟುಕೊಟ್ಟು ಪರಿಹಾರ ಪಡೆಯುತ್ತಿದ್ದಾರೆ, ಇದರಲ್ಲಿ 400 ಜನರಿಗೆ ವಿತರಣೆ ಮಾಡಿದ್ದೇವೆ ಎಂದು ತಿಳಿಸಿದರು.

2 ದಿನಗಳಲ್ಲಿ ಇ ಖಾತಾ ಅರ್ಜಿ ವಿಲೇವಾರಿಗೆ ಸೂಚನೆ: ಇ ಖಾತೆ ವಿಚಾರದಲ್ಲಿ ತೊಂದರೆ ಎದುರಾ ಗುತ್ತಿದೆ ಎಂಬ ಮನವಿ ಬಂದ ಹಿನ್ನೆಲೆಯಲ್ಲಿ ನಗರಾ ಭಿವೃದ್ಧಿ ಇಲಾಖೆ ಕಾರ್ಯದರ್ಶಿ ಹಾಗೂ ಇ ಖಾತಾ ಅಧಿಕಾರಿಗಳ ಜತೆ ಸಭೆ ಮಾಡಿದ್ದೇನೆ. ಯಾರೇ ಅರ್ಜಿ ಹಾಕಿದರೂ 2 ದಿನಗಳಲ್ಲಿ ತೀರ್ಮಾನ ಮಾಡ ಬೇಕು. ಏನಾದರೂ ಸಮಸ್ಯೆ ಇದ್ದರೆ ನೂರು ಜನರ ಪರಿಶೀಲನಾ ತಂಡವನ್ನು ರಚಿಸಲಾಗಿದ್ದು, ಅವರು ಪರಿಶೀಲನೆ ಮಾಡಲಿದ್ದಾರೆ. 24 ಗಂಟೆ ಒಳಗೆ ಶೇ.60ರಷ್ಟು ಇ ಖಾತಾ ವಿತರಣೆ ಮಾಡುವ ವ್ಯವಸ್ಥೆ ನಡೆಯುತ್ತಿದೆ. 9.34 ಲಕ್ಷ ಅರ್ಜಿಗಳ ಪೈಕಿ 9.31 ಲಕ್ಷ ಅರ್ಜಿಗಳನ್ನು ವಿಲೇವಾರಿ ಮಾಡಲಾಗಿದೆ ಎಂದು ತಿಳಿಸಿದರು.

ಬಿ ಖಾತಾಯಿಂದ ಎ ಖಾತಾ ಪರಿವರ್ತನೆ ವಿಚಾರದಲ್ಲಿ 7 ಸಾವಿರ ಜನ ಅರ್ಜಿ ನೀಡಿದ್ದು, ಅವರು ನಕ್ಷೆ ನೀಡಬೇಕಿತ್ತು. ಈಗ ನಮ್ಮ ಅಧಿಕಾರಿ ಗಳೇ ಸ್ಥಳಕ್ಕೆ ಹೋಗಿ ನಕ್ಷೆ ರೂಪಿಸುವ ಕೆಲಸ ಮಾಡಬೇಕು ಎಂದು ಸೂಚಿಸಿದ್ದೇನೆ. ಜಿಬಿಎ ಹಾಗೂ ಪಾಲಿಕೆಗಳು 15 ದಿನಗಳಲ್ಲಿ ಬಿ ಖಾತಾಯಿಂದ ಎ ಖಾತಾ ಅನುಮೋದನೆ ಮಾಡಬೇಕು ಎಂದು ಸೂಚಿಸಲಾಗಿದೆ ಎಂದು ತಿಳಿಸಿದರು.



ಬಿಡಿಎಯಿಂದ ನಿರ್ಮಿಸಲಾಗುತ್ತಿರುವ ಬೆಂಗಳೂರು ಬಿಸಿನೆಸ್ ಕಾರಿಡಾರ್ ಯೋಜನೆಯ ಭೂ ಮಾಲೀಕರಿಗೆ ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರು ಪರಿಹಾರ ಪತ್ರಗಳನ್ನು ವಿತರಿಸಿದರು.

> ಕೇಂದ್ರ ಬಜೆಟ್‌ನಲ್ಲಿ ಯಾವುದೇ ಅನುದಾನ ಕೊಟ್ಟಿಲ್ಲ, ಸಹಾಯ ಮಾಡಿಲ್ಲ. ಟನಲ್ ರಸ್ತೆ ವಿಚಾರದಲ್ಲಿ ಬಿಲ್ಡ್ ಆಪರೇಟ್ ಮಾದರಿ ಇದ್ದು, ಸರಕಾರ ಕೇವಲ 40% ಮಾತ್ರ ನೀಡಲಿದೆ. ನಾವು ಬೇರೆ ರಾಜ್ಯಗಳ ಯೋಜನೆ ನೋಡಿದ್ದೇವೆ. ಇಲ್ಲಿ ಯೋಜನೆ ಮಾಡುವವರೇ ರಿಸ್ಕ್ ತೆಗೆದುಕೊಳ್ಳಬೇಕು.
> -ಡಿ.ಕೆ.ಶಿವಕುಮಾರ್, ಉಪಮುಖ್ಯಮಂತ್ರಿ

ಭೂಮಾಲೀಕರಿಗೆ ಪರಿಹಾರ ವಿತರಣೆ

ಬಿಡಿಎಯಿಂದ ನಿರ್ಮಿಸಲಾಗುತ್ತಿರುವ ಬೆಂಗಳೂರು ಬಿಸಿನೆಸ್ ಕಾರಿಡಾರ್ ಯೋಜನೆಯ ಭೂ ಮಾಲೀಕರಿಗೆ/ರೈತರಿಗೆ ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರು ಚೆಕ್ ಮೂಲಕ ನಗದು ಪರಿಹಾರ ಹಾಗೂ ವಾಣಿಜ್ಯ ಅಭಿವೃದ್ಧಿ ಪಡಿಸಿದ ನಿವೇಶನಗಳ ಪರಿಹಾರ ಪತ್ರಗಳನ್ನು ವಿತರಿಸಿದರು. ಕಾಳತಮ್ಮನಹಳ್ಳಿ ಗ್ರಾಮದ ಸರ್ವೆ ನಂ.113/2ರಲ್ಲಿನ ಒಟ್ಟು 2 ಎಕರೆ 09 ಗುಂಟೆ ವಿಸ್ತೀರ್ಣದ ಭೂಮಾಲೀಕ ಎನ್. ವೆಂಕಟೇಶ್ ಬಿನ್ ನಂಜಪ್ಪ ಮತ್ತು ಎಸ್.ಎನ್. ಆನಂದ್ ಕುಮಾರ್ ಬಿನ್ ನಂಜಪ್ಪ ಅವರಿಗೆ 65:35 ಅನುಪಾತದ ಯೋಜನೆಯಡಿ, 18,657 ಚದರ ಅಡಿ ವಿಸ್ತೀರ್ಣದ ಅಭಿವೃದ್ಧಿ ಹೊಂದಿದ ಪ್ರದೇಶದ ಪ್ರಮಾಣ ಪತ್ರವನ್ನು ವಿತರಿಸಿದರು.

ವಾಸುದೇವಪುರ ಗ್ರಾಮದ ಸರ್ವೆ ನಂ. 21ರಲ್ಲಿನ 4 ಎಕರೆ 36 ಗುಂಟೆ ವಿಸ್ತೀರ್ಣದ ಭೂಮಾಲೀಕ ಮೆ: ಗ್ರೀನ್ ಆರ್ಚರ್ಡ್ಸ್ ಫಾರ್ಮ್ ಹೌಸಸ್ ರವರಿಗೆ 65 : 35 ಅನುಪಾತದ ಯೋಜನೆಯಡಿ 41086.5 ಚದರ ಅಡಿ ವಿಸ್ತೀರ್ಣದ ಅಭಿವೃದ್ಧಿ ಹೊಂದಿದ ಪ್ರದೇಶದ ಪ್ರಮಾಣ ಪತ್ರವನ್ನು ವಿತರಿಸಿದರು. ಬಿದರೇನ ಅಗ್ರಹಾರದ ಸರ್ವೆ ನಂ. 9/14ರ 0-01 ಇ ಎಕರೆಗೆ ಮತ್ತು ಸರ್ವೆ ನಂ. 14/9ರ 0-4 ಟ ಎಕರೆಗೆ ಭೂಮಾಲೀಕ ಸಿ.ಎ. ಬಾಲಕೃಷ್ಣ ಅವರಿಗೆ ಕ್ರಮವಾಗಿ 15,00,000ರು. ಮತ್ತು 1,71,00,000 ರು. ಪರಿಹಾರ ನೀಡಲಾಯಿತು.

ಆವಲಹಳ್ಳಿ ಗ್ರಾಮದ ಸರ್ವೆ ನಂ. 32/1ರ 2-33 ಎಕರೆಗೆ ಭೂಮಾಲೀಕ ಸಿ.ಎ. ಚಂದ್ರಶೇಖರ್, ಪುರುಷೋತ್ತಮ ಮತ್ತು ಶಾರದ ಅವರಿಗೆ 24,69,59,761 ರು., ಚೀಮಸಂದ್ರ ಗ್ರಾಮದ ಸರ್ವೆ ನಂ. 66ರ 1-36 ಎಕರೆಗೆ ಭೂಮಾಲೀಕ ಕೃಷ್ಣಮೂರ್ತಿಯವರಿಗೆ ರೂ. 15,67,50,000/- ಪರಿಹಾರ ವಿತರಿಸಲಾಯಿತು. ಇದೇ ಗ್ರಾಮದ ಸರ್ವೆ ನಂ. 64/3ರ 0-36 ಎಕರೆ ಮತ್ತು 64/4ರ 0-30 ಎಕರೆಗೆ ಭೂಮಾಲೀಕ ಮುನಿಯಪ್ಪ ಅವರಿಗೆ ಕ್ರಮವಾಗಿ 7,42,50,000 ರು. ಮತ್ತು 6,18,75,000 ರು.ಗಳ ಚೆಕ್‌ನ್ನು ವಿತರಿಸಿದರು.

ದಿಢೀರ್ ಮೆಟ್ರೋ ದರ ಏರಿಕೆ ಮಾಡಿರುವುದು ರಾಜ್ಯದ ಜನತೆಗೆ ಆರ್ಥಿಕ ಹೊರೆಯಾಗಿದೆ: ಬಿವೈವಿ

ಪಕ್ಷದ ರಾಷ್ಟ್ರಾಧ್ಯಕ್ಷರ ಜತೆ ವಿಜಯೇಂದ್ರ ಚರ್ಚೆ

ದೆಹಲಿ: ಬಿಜೆಪಿ ರಾಷ್ಟ್ರೀಯ ಅಧ್ಯಕ್ಷ ನಿತಿನ್ ನಬೀನ್ ಅವರನ್ನು ಭೇಟಿ ಮಾಡಿರುವ ರಾಜ್ಯಾಧ್ಯಕ್ಷ ಬಿ.ವೈ. ವಿಜಯೇಂದ್ರ ಮಹತ್ವದ ಮಾತುಕತೆ ನಡೆಸಿದ್ದಾರೆ.

ದೆಹಲಿಯಲ್ಲಿ ಪಕ್ಷದ ರಾಷ್ಟ್ರಾಧ್ಯಕ್ಷರನ್ನು ಭೇಟಿ ಮಾಡಿ ಮುಂಬರುವ ಬಾಗಲಕೋಟೆ ಮತ್ತು ದಾವಣಗೆರೆ ದಕ್ಷಿಣ ಕ್ಷೇತ್ರಗಳ ಉಪ ಚುನಾವಣೆಗಳು, ಜಿಬಿಎ ಚುನಾವಣೆ ಬಗ್ಗೆ ಸಮಗ್ರವಾಗಿ ಚರ್ಚಿಸಿದ್ದಾರೆ. ಅಲ್ಲದೆ ರಾಜ್ಯದಲ್ಲಿ ಪಕ್ಷ ಸಂಘಟನೆ ಸಂಬಂಧ ಚರ್ಚೆ ಮಾಡಿದ್ದಾರೆ. ಈ ಬಗ್ಗೆ ಸುದ್ದಿಗಾರರೊಂದಿಗೆ ಮಾತನಾಡಿದ ಬಿ.ವೈ. ವಿಜಯೇಂದ್ರ, ಮುಖ್ಯವಾಗಿ ವಿಧಾನಪರಿಷತ್ತಿನ ಪದವೀಧರ ಮತ್ತು ಶಿಕ್ಷಕರ ಕ್ಷೇತ್ರದ 4 ಸ್ಥಾನಗಳಿಗೆ ನಡೆಯಲಿರುವ ಚುನಾವಣೆಯ ನಮ್ಮ ಅಭ್ಯರ್ಥಿಗಳ ಪಕ್ಷದ ರಾಷ್ಟ್ರಾಧ್ಯಕ್ಷ ನಬೀನ್ ಜೊತೆ ಚರ್ಚೆ ಮಾಡಲಾಗಿದೆ. ಮುಂದೆ ಯಾವ ನಿಟ್ಟಿನಲ್ಲಿ ಸಾಗಬೇಕೆಂಬ ವಿಷಯದಲ್ಲಿ ಮಾರ್ಗದರ್ಶನ ಪಡೆದುಕೊಂಡಿದ್ದೇನೆ ಎಂದರು.

ಬೆಂಗಳೂರು ಮೆಟ್ರೋ ದರ ಏರಿಕೆಯಿಂದ ಮಹಾನಗರದ ಜನತೆಗೆ ಹೊರೆ ಆಗಲಿದೆ. ಬೆಂಗಳೂರಿನ ಟ್ರಾಫಿಕ್ ಸಮಸ್ಯೆ ಇನ್ನಷ್ಟು ಬಿಗಡಾಯಿಸಲಿದೆ. ಬೆಂಗಳೂರು ನಗರದಲ್ಲಿ ಟ್ರಾಫಿಕ್ ಪರಿಸ್ಥಿತಿ ಏನಾಗಿದೆ ಎಂದು ತಮಗೆಲ್ಲ ಗೊತ್ತಿದೆ. ಬೆಂಗಳೂರು ಮಹಾ ನಗರದಲ್ಲಿ ದಿನೇದಿನೇ ವಾಹನಗಳ ದಟ್ಟಣೆಯಿಂದ ಸಂಚಾರ ಮಾಡಲ ಸಾಧ್ಯ ಎಂಬಂತಾಗಿದೆ. ಬೆಂಗಳೂರು ನಗರ ಎಂದೊಡನೆ ಅದರ ವಿಚಾರ ಕೇವಲ ಭಾರತದಲ್ಲಷ್ಟೇ ಅಲ್ಲ. ಇಡೀ ಜಗತ್ತಿನಲ್ಲಿ ಚರ್ಚೆ ಆಗುತ್ತದೆ ಎಂದು ತಿಳಿಸಿದರು. ರಾಜ್ಯ ಸರಕಾರವು ಈ ರೀತಿ ಅವೈಜ್ಞಾನಿಕವಾಗಿ ಶಿಫಾರಸು ಮಾಡುವುದು, ದರ ಏರಿಸುವುದು ಗಾಯದ ಮೇಲೆ ಬರೆ ಎಳೆಯುವ ಕೆಲಸ ಎಂದರು.

ರಾಜ್ಯ ಸರಕಾರವು ಕೇವಲ ಮೆಟ್ರೋ ವಿಚಾರದಲ್ಲಷ್ಟೇ ಅಲ್ಲ, ಕಳೆದ ಎರಡೂವರೆ ವರ್ಷದಲ್ಲಿ ಅಬಕಾರಿ ತೆರಿಗೆ, ಸ್ಟಾಂಪ್ ಡ್ಯೂಟಿ ಸೇರಿ ರಾಜ್ಯದ ಜನರಿಗೆ ಬರೆ ಎಳೆಯುವ ಕೆಲಸವನ್ನೇ ಮಾಡುತ್ತ ಬಂದಿದೆ. ಮೆಟ್ರೋ ದರದ ವಿಚಾರದಲ್ಲೂ ಇದೇರೀತಿ ಮುಂದುವರೆಸಿದ್ದಾರೆ ಎಂದು ಟೀಕಿಸಿದರು.

ಶಿವಲಿಂಗೇಗೌಡರು ಒಬ್ಬ ಹಿರಿಯ ಶಾಸಕರು. ಅವರು ಯಾವ ಪಕ್ಷದಲ್ಲಿದ್ದಾರೆಂಬ ಬಗ್ಗೆ ನಾನು ಚರ್ಚಿಸಲು ಹೋಗುವುದಿಲ್ಲ. ವಿಪಕ್ಷದವರು ಹೋರಾಟ ಮಾಡುವುದು, ಸದನದ ಬಾವಿಗೆ ಇಳಿಯುವುದು ಸಹಜ. ಆದರೂ, ಹಿರಿಯ ಶಾಸಕರಾಗಿ ನಮ್ಮ ಶಾಸಕರ ಬಗ್ಗೆ, ಅವರ ಕುಟುಂಬದವರ ಕುರಿತು, ಅವರ ಪತ್ನಿ ವಿಷಯದಲ್ಲಿ ಮಾತನಾಡಿದ್ದನ್ನು ಖಂಡಿಸುತ್ತೇನೆ. ಹಿರಿಯ ಶಾಸಕರು ನಮ್ಮಂಥವರಿಗೆ ಮತ್ತು ಮೊದಲ ಬಾರಿ ಗೆದ್ದ ಶಾಸಕರಿಗೆ ಮಾದರಿ ಆಗಿರಬೇಕಾಗುತ್ತದೆ. ಅಂಥ ಹಿರಿಯ ಶಾಸಕರೇ ಈ ರೀತಿ ಹೇಳಿಕೆ ಕೊಟ್ಟು, ಅಡ್ಡದಾರಿಯಲ್ಲಿ ಹೋಗಿ ನಮ್ಮ ಶಾಸಕರಿಗೆ ಅಗೌರವ ತೋರಿದ್ದಾರೆ. ಸದನದ ಪಾವಿತ್ರ್ಯತೆ ಹಾಳು ಮಾಡಿದ್ದಾರೆ ಎಂದರು.

ಶರಣು ಸಲಗಾರ್ ಅವರಿಗೂ ದೂರವಾಣಿ ಮೂಲಕ ಚರ್ಚೆ ಮಾಡಿದ್ದೇನೆ. ಇದು ಖಂಡಿತ ಸರಿಯಲ್ಲ. ಇನ್ನು ಮುಂದೆಯಾದರೂ ಶಿವಲಿಂಗೇಗೌಡರು ತಮ್ಮ ನಡವಳಿಕೆಯನ್ನು ತಿದ್ದಿಕೊಳ್ಳಬೇಕು ಎಂದು ತಿಳಿಸಿದರು.

- ಎರಡೂವರೆ ವರ್ಷದಲ್ಲಿ ಕಾಂಗ್ರೆಸ್ ಸರಕಾರ ರಾಜ್ಯದಲ್ಲಿ ಸ್ಟಾಂಪ್ ಡ್ಯೂಟಿ, ಅಬಕಾರಿ ಸುಂಕ ಹೆಚ್ಚಳ
- ನಮ್ಮ ಶಾಸಕರ ಪತ್ನಿ ವಿಚಾರದಲ್ಲಿ ಶಿವಲಿಂಗೇಗೌಡರು ಮಾತನಾಡಿರುವುದು ಖಂಡನೀಯ
- ತಮ್ಮ ನಡವಳಿಕೆ ತಿದ್ದಿಕೊಳ್ಳಲು ಶಿವಲಿಂಗೇಗೌಡರಿಗೆ ತಿಳಿಸಿರುವೆ

ನೀರಿನ ದರ ಹೆಚ್ಚಳ ವದಂತಿ

ಬೆಂಗಳೂರು: ನಮ್ಮ ಮೆಟ್ರೋದ ಬಳಿಕ ಇದೀಗ ನೀರಿನ ದರ ಹೆಚ್ಚಳವಾಗಲಿದೆ ಎನ್ನುವ ಮಾತುಗಳು ಕೇಳಿ ಬಂದಿದ್ದು, ಇದಕ್ಕೆ ಜಲಮಂಡಳಿ ಅಧ್ಯಕ್ಷ ಡಾ. ವಿ ರಾಮ್ ಪ್ರಸಾತ್ ಮನೋಹರ್ ಸ್ಪಷ್ಟನೆ ನೀಡಿದ್ದಾರೆ.

ಮೆಟ್ರೋ ದರ ಹೆಚ್ಚಳದ ಬೆನ್ನಲ್ಲೇ ಕಾವೇರಿ ನೀರಿನ ದರವೂ ಶೀಘ್ರವೇ ಶೇ.3ರಷ್ಟು ಏರಿಕೆಯಾಗುವ ಸಾಧ್ಯತೆಯಿದೆ. ಪ್ರತಿ ವರ್ಷ ನೀರಿನ ದರ ಏರಿಕೆ ಆಗಬೇಕು ಎಂದು ಆಡಳಿತ ಸುಧಾರಣಾ ಸಮಿತಿ ಶಿಫರಾಸು ಮಾಡಿತ್ತು. ಈ ಶಿಫಾರಸಿನ ಅನ್ವಯ ಬೆಂಗಳೂರು ಜಲಮಂಡಳಿ ನೀರಿನ ದರವನ್ನು ಏರಿಕೆ ಮಾಡಲು ಮುಂದಾಗಿದ್ದು, ಏಪ್ರಿಲ್1 ರಿಂದ ನೀರಿನ ದರ ಏರಿಕೆಯಾಗುವ ಸಾಧ್ಯತೆಯಿದೆ. ಕಳೆದ ವರ್ಷದ ಏಪ್ರಿಲ್‌ನಲ್ಲಿ ಗೃಹ ಬಳಕೆದಾರರಿಗೆ ಪ್ರತಿ ಲೀಟರ್‌ಗೆ ಕನಿಷ್ಠ 0.15 ಪೈಸೆ ಗರಿಷ್ಠ 1 ಪೈಸೆ ಹೆಚ್ಚಳ ಮಾಡಿದ್ದರೆ ವಾಣಿಜ್ಯ ಬಳಕೆಗೆ ಪ್ರತಿ ಲೀಟರ್ ಗರಿಷ್ಠ 1.90 ಪೈಸೆಯವರೆಗೆ ಏರಿಕೆ ಮಾಡಲಾಗಿತ್ತು. ಈ ಬಾರಿಯೂ ಏಪ್ರಿಲ್‌ನಲ್ಲಿ ನೀರಿನ ದರ ಹೆಚ್ಚಳವಾಗಲಿದೆ ಎನ್ನುವ ಮಾತುಗಳು ಕೇಳಿ ಬಂದಿದೆ. ಬೆಂಗಳೂರಿನಲ್ಲಿ ಕುಡಿಯುವ ನೀರಿನ ದರ ಹೆಚ್ಚಳವಾಗಲಿದೆ ಎಂಬ ವದಂತಿಯನ್ನು ಬೆಂಗಳೂರು ಜಲಮಂಡಳಿ ಅಧ್ಯಕ್ಷ ರಾಮ್ ಪ್ರಸಾತ್ ಮನೋಹರ್ ನಿರಾಕರಿಸಿದ್ದು, ನೀರಿನ ದರ ಏರಿಕೆ ಮಾಡುವ ಯಾವುದೇ ಪ್ರಸ್ತಾವನೆ ಇಲ್ಲ ಎಂದು ಸ್ಪಷ್ಟಪಡಿಸಿದ್ದಾರೆ.

ವಂಚಕ ಸುಜಯೇಂದ್ರ ಹಗರಣಗಳ ಸರದಾರ

ವಿಶ್ವವಾಣಿ ಸುದ್ದಿಮನೆ ಬೆಂಗಳೂರು

- ಅಮಿತ್ ಶಾ ಆಪ್ತನೆಂದು ಹೇಳಿಕೊಂಡು ಮತ್ತಷ್ಟು ವಂಚನೆ

ಕೇಂದ್ರ ಸಚಿವ ಅಮಿತ್ ಶಾ ಅವರ ಆಪ್ತ ಎಂದು ಹೇಳಿಕೊಂಡು ತಿರುಗುತ್ತಿದ್ದ ಖತರ್ನಾಕ್ ವಂಚಕ ಸುಜಯೇಂದ್ರ, ಎಂಬಾತನ ಹಲವು ಹಗರಣಗಳು ಬೆಳಕಿಗೆ ಬಂದಿವೆ.

ಅಧಿಕಾರ ಮತ್ತು ಪ್ರಭಾವ ದುರುಪಯೋಗಪಡಿಸಿಕೊಂಡು ಈತ ನಡೆಸುತ್ತಿದ್ದ ಹಗರಣಗಳು ಒಂದೊಂದಾಗಿ ಹೊರಬರುತ್ತಿವೆ. ರಾಜ್ಯ ಪಾಲರ ವಿಶೇಷ ಕಾರ್ಯದರ್ಶಿ ಪ್ರದೀಪ್ ಅವರು ನೀಡಿದ ದೂರಿನ ಮೇರೆಗೆ ವಿಧಾನಸೌಧ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ. ರಾಜ್ಯಪಾಲರ ನಕಲಿ ಸಹಿ, ಲೋಕಭವನದ ಅಧಿಕೃತ ಲೆಟರ್ ಹೆಡ್ ಬಳಸಿ ವಂಚನೆ ಎಸಗಿದ್ದಾನೆ .

2025ರಲ್ಲಿ ವಿಟಿಯು ಕುಲಪತಿಗೆ ಪತ್ರ ಬರೆದು, ರಾಜ್ಯಪಾಲರೇ ಶಿಫಾರಸು ಮಾಡಿದ್ದಾರೆ. ಒಬ್ಬ ವಿದ್ಯಾರ್ಥಿಗೆ ಸೀಟು ಮಂಜೂರು ಮಾಡುವಂತೆ ಸೂಚಿಸಿದ್ದ ಎಂದು ಹೇಳಲಾಗಿದೆ. ಈ ಹಿಂದೆ ಜಮ್ಮು ಕಾಶ್ಮೀರದ ವೈದ್ಯರಿಗೆ ತಾನು ಕೇಂದ್ರದಲ್ಲಿ ಪ್ರಭಾವಿ ವ್ಯಕ್ತಿ ಎಂದು ನಂಬಿಸಿ 2.5 ಕೋಟಿ ರು. ವಂಚಿಸಿದ್ದ. ಈ ಪ್ರಕರಣದಲ್ಲಿ ಬಂಧಿಸಿದ್ದರು. ಈತನ ಮನೆಯಲ್ಲಿ ಕೇಂದ್ರ ಗೃಹ ಸಚಿವಾಲಯ, ಲೋಕಭವನದ ನಕಲಿ ಲೆಟರ್ ಹೆಡ್‌ಗಳು, ನಕಲಿ ಸೀಲು ಪತ್ತೆಯಾಗಿದ್ದವು.

ವಂಚನೆ ಪ್ರಕರಣದಲ್ಲಿ ಜೈಲು ಸೇರಿದ್ದ ಈತ, ಇತ್ತೀಚೆಗಷ್ಟೇ ಜಾಮೀನಿನ ಮೇಲೆ ಹೊರಬಂದಿದ್ದ. ಹೊರಬಂದ ಬೆನ್ನಲ್ಲೇ ಈತನ ಹಳೆಯ ನಕಲಿ ಪತ್ರಗಳ ಹಗರಣ ಬಯಲಾಗಿದೆ. ವಿಧಾನಸೌಧ ಠಾಣೆಯಿಂದ ಕೇಸನ್ನು ವಿಜಯನಗರ ಠಾಣೆಗೆ ಕೇಸ್ ವರ್ಗಾಯಿಸಲಾಗಿದೆ. ನಕಲಿ ಪತ್ರಗಳು ಪತ್ತೆಯಾದ ಹಿನ್ನೆಲೆಯಲ್ಲಿ ಪೊಲೀಸರು ಸುಜಯೇಂದ್ರನಿಗೆ ವಿಚಾರಣೆಗೆ ಹಾಜರಾಗುವಂತೆ ನೋಟಿಸ್ ನೀಡಿದ್ದಾರೆ. ಸುಜಯೇಂದ್ರನ ಮನೆಯಲ್ಲಿ ಪತ್ತೆಯಾಗಿರುವ ದಸ್ತಾವೇಜುಗಳ ನೋಡಿದರೆ, ವಂಚನೆ ಜಾಲ ದೊಡ್ಡದಿದೆ ಎಂಬ ಅನುಮಾನವಿದೆ. ಕೇವಲ ವಿಟಿಯು ಮಾತ್ರವಲ್ಲದೆ, ರಾಜ್ಯದ ಪ್ರತಿಷ್ಠಿತ ವಿವಿಯಗಳ ಹಲವು ನಕಲಿ ಶಿಫಾರಸು ಪತ್ರಗಳು ಪತ್ತೆಯಾಗಿವೆ. ಈ ವಂಚನೆ ಜಾಲದಲ್ಲಿ ಶಿಕ್ಷಣ ಇಲಾಖೆ ಅಧಿಕಾರಿಗಳ ಕೈವಾಡವಿದೆ ಎನ್ನಲಾಗಿದ್ದು, ನಕಲಿ ಪತ್ರಗಳನ್ನು ಸರಿಯಾಗಿ ಪರಿಶೀಲಿಸದೆ ಸೀಟು ಮಂಜೂರು ಸಾಧ್ಯತೆ ಬಗ್ಗೆ ತನಿಖೆ ನಡೆಯುತ್ತಿದೆ.

ಸಾಮಾಜಿಕ ಜಾಲತಾಣಕ್ಕೆ ಮೂಗುದಾರ ಹಾಕಲು ತಂತ್ರ

ವಿಶ್ವವಾಣಿ ಸುದ್ದಿಮನೆ ಬೆಂಗಳೂರು

ಸಾಮಾಜಿಕ ಜಾಲತಾಣಗಳ ಮೇಲೆ ಕಣ್ಣಿಡಲು ರಾಜ್ಯ ಸರಕಾರ ನಿರ್ಧರಿಸಿದ್ದು, ಕೃತಕ ಬುದ್ಧಿಮತ್ತೆ(ಎಐ) ಚಾಲಿತ ಸೋಷಿಯಲ್ ಮೀಡಿಯಾ ಅನಾಲಿಟಿಕ್ಸ್ ಸಲ್ಯೂಷನ್ ತಂತ್ರಾಂಶವನ್ನು 67.20 ಕೋಟಿಗಳ ಅಂದಾಜು ಮೊತ್ತದಲ್ಲಿ ಅಳವಡಿಸಲು ಸಚಿವ ಸಂಪುಟ ಸಭೆ ನಿರ್ಧರಿಸಿದೆ.

ಮುಖ್ಯಮಂತ್ರಿ ಸಿದ್ದರಾಮಯ್ಯ ನೇತೃತ್ವದಲ್ಲಿ ನಡೆದ ಸಚಿವ ಸಂಪುಟ ಸಭೆಯ ನಂತರ ಕಾನೂನು ಸಚಿವ ಎಚ್.ಕೆ.ಪಾಟೀಲ್ ಮಾಹಿತಿ ನೀಡಿ, ಸಾಮಾಜಿಕ ಜಾಲತಾಣವನ್ನು ತಪ್ಪು ದಾರಿಗೆ ಬಳಸುವ ಪ್ರಯತ್ನಕ್ಕೆ ಬ್ರೇಕ್ ಹಾಕಲು ಸರಕಾರ ನಿರ್ಧರಿಸಿದೆ. ಇದಲ್ಲದೆ ವಂಚನೆ ತಡೆಯಲು, ಉಗ್ರಗಾಮಿಗಳನ್ನ ಗುರುತಿಸುವ ವಿಚಾರವೂ ಸೇರಿದಂತೆ ವೆಬ್‌ಸೈಟ್‌ಗಳ ಮೇಲೆ ನಿಗಾ ಇಡುವುದು, ಸುಳ್ಳು ಸುದ್ದಿ ಹರಡುವುದಕ್ಕೆ ಕಡಿವಾಣ ಹಾಕಲು ಎಐ ತಂತ್ರಾಂಶ ಬಳಸಲು ನಿರ್ಧರಿಸಲಾಗಿದೆ ಎಂದರು.

ಇದರಡಿ ಮಕ್ಕಳ ರಕ್ಷಣೆ ತಂತ್ರಾಂಶ ನಿಯಂತ್ರಣ, ವೆಬ್ ಸೈಟ್‌ಗಳ ಮೇಲೆ ನಿಗಾ, ಡಿಜಿಟಲ್ ಕಂಟೆಂಟ್ ಮೇಲೆ ಕಡಿವಾಣ ಹಾಕಲು ಎಐ ತಂತ್ರಜ್ಞಾನದ ಮೂಲಕ ಕಡಿವಾಣ ಹಾಕಲು ನಿರ್ಧರಿಸಲಾಗಿದೆ. ಒಂದು ವೇಳೆ ಸುಳ್ಳು ಸುದ್ದಿ ಹರಡಿದರೆ ತಕ್ಷಣ ಅಲರ್ಟ್ ಆಗುತ್ತದೆ. ಇದು ಸರಕಾರದ ಗಮನಕ್ಕೆ ಕೂಡಲೇ ಬರುತ್ತದೆ. ಇಂತಹ ವಿಚಾರಗಳನ್ನು ಪರಾಮರ್ಶಿಸಿ ಕಣ್ಣಿಡಲು ಇದು ಸಹಕಾರಿಯಾಗಲಿದೆ ಎಂದರು.

ಎಸ್‌ಐಆರ್ ಚರ್ಚೆ ಮುಂದೂಡಿಕೆ

ಪೊಲೀಸ್ ಎಸ್ಟಾಬ್ಲಿಷ್ ಮೆಂಟ್ ಬೋರ್ಡ್ ಗೆ ತಿದ್ದುಪಡಿ ತರಲು ಮುಂದಾಗಿದ್ದು, ಈ ಸಂಬಂಧ ವಿಧೇಯಕ ತರಲು ಸಂಪುಟ ನಿರ್ಧರಿಸಿದೆ. ಇದರಲ್ಲಿ ಕೆಲವು ಬದಲಾವಣೆ ಮಾಡಲಾಗುತ್ತಿದ್ದು, ವಾಪಸ್ ಪಡೆಯುವುದಕ್ಕೆ ನಿಯಮ ಸೇರಿದಂತೆ ಕರ್ತವ್ಯ ಉಲ್ಲಂಘನೆ, ನಿರಾಕರಣೆ ಮೇಲೆ ಕ್ರಮ ಕೈಗೊಳ್ಳಲು ಪೊಲೀಸರ ನೆಗ್ಲಿಜೆನ್ಸಿ ವಿರುದ್ಧ ಕ್ರಮಕ್ಕೆ ಅವಕಾಶ ಕಲ್ಪಿಸಲು ನಿರ್ಧರಿಸಲಾಗಿದೆ. ಅದರಂತೆ ಎಸ್‌ಐಆರ್ ಬಗ್ಗೆ ಸಂಪುಟ ಸಭೆಯಲ್ಲಿ ಚರ್ಚೆಯಾಗಿದ್ದು, ಹೆಚ್ಚಿನ ಮಾಹಿತಿ ಹಿನ್ನೆಲೆಯಲ್ಲಿ ಚರ್ಚೆ ಅಪೂರ್ಣವಾಗಿದ್ದು, ಮುಂದಿನ ಸಂಪುಟ ಸಭೆಗೆ ಮುಂದೂಡಿಕೆಯಾಗಿದೆ.

ಕರ್ನಾಟಕ ಅಲ್ಪಸಂಖ್ಯಾತರ ಅಭಿವೃದ್ಧಿ ನಿಗಮದಲ್ಲಿ 2013-14 ರಿಂದ 2018-19ನೇ ಸಾಲಿನವರೆಗೆ ವಿವಿಧ ಯೋಜನೆಗಳಡಿ ನೀಡಲಾಗಿರುವ ಸಾಲಕ್ಕೆ ಒ.ಟಿ.ಎಸ್‌ಗೆ ಅವಕಾಶ ನೀಡಲಾಗಿದೆ. ಇದರಿಂದಾಗಿ ಯೋಜನೆಯ ಮೂಲಕ ಬಾಕಿ ಇರುವ 714 ಕೋಟಿ ರು. ವಸೂಲಾತಿ ಮಾಡಲು ಅವಕಾಶ ಸಭೆ ನಿರ್ಧರಿಸಿದೆ. ಒಟ್ಟು 981 ಕೋಟಿ ರು. ಸಾಲ ನೀಡಲಾಗಿತ್ತು ಎಂದರು. ಮೌಲಾನ ಅಜಾದ್ ಮಾದರಿ ಶಾಲೆಗೆ ಸ್ವಂತ ನಿವೇಶನ ಖರೀದಿಗೆ ಸಂಪುಟ ಒಪ್ಪಿಗೆ ನೀಡಿದೆ. ಅಲ್ಲದೆ ಸಾರಥಿ ಯೋಜನೆಯಡಿ ಆಟೋ ಖರೀದಿಗೆ, 19.18 ಕೋಟಿ ವೆಚ್ಚದಲ್ಲಿ ಇವೆಂಡಿಂಗ್ ವಾಹನ ಖರೀದಿಗೆ ಒಪ್ಪಿಗೆ ನೀಡಲಾಗಿದ್ದು, ಸಹಾಯಧನ ಒದಗಿಸಲು ಸರಕಾರ ಒಪ್ಪಿದೆ. ಇದು ಜಿಬಿಎ ವ್ಯಾಪ್ತಿಯಲ್ಲಿ ಫಲಾನುಭವಿಗಳಿಗೆ ಹಂಚಿಕೆಯಾಗಲಿದೆ ಎಂದರು.

ಮತಪತ್ರದಲ್ಲಿ ಸ್ಥಳೀಯ ಸಂಸ್ಥೆ ಚುನಾವಣೆ: ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ (ತಿದ್ದುಪಡಿ) ವಿಧೇಯಕ, 2026ಕ್ಕೆ ಅನುಮೋದನೆ ನೀಡಲು ತೀರ್ಮಾನಿಸಲಾಗಿದ್ದು, ಜಿಲ್ಲಾ ಮತ್ತು ತಾಲೂಕು ಪಂಚಾಯತ್ ಚುನಾವಣೆಯಲ್ಲಿ ಮತಪತ್ರ ತರಲು ವಿಧೇಯಕಕ್ಕೆ ಅಸ್ತು ಎಂದಿದೆ. ಈಗಾಗಲೇ ಜಿಬಿಎ ಚುನಾವಣೆಯಲ್ಲಿ ಮತಪತ್ರ ತರಲು ಸರಕಾರ ತೀರ್ಮಾನ ಮಾಡಿತ್ತು. ವಿಧೇಯಕದ ತಿದ್ದುಪಡಿ ಅಡಿ ಗ್ರಾಮ ಪಂಚಾಯತ್ ಸೇರಿದಂತೆ ಜಿಪಂ-ತಾಪಂ ಚುನಾವಣೆಯಲ್ಲಿ ಮತಪತ್ರ ಬಳಕೆ ಬಗ್ಗೆ ತೀರ್ಮಾನ ಕೈಗೊಳ್ಳಲಾಗಿದೆ.

ಪ್ರಮುಖಾಂಶ

- ಜಕ್ಕೂರಿನಲ್ಲಿ ನೀರು ಸಂಸ್ಕರಣಾ ಘಟಕ ನಿರ್ಮಾಣಕ್ಕೆ 39 ಕೋಟಿ ಅನುದಾನ
- ವನ್ಯಜೀವಿ ಹಾವಳಿ ತಡೆಗೆ ನಾಗರಹೊಳೆ ಅಭಯಾರಣ್ಯದಲ್ಲಿ ರೈಲ್ವೆ ಬ್ಯಾರಿಕೇಡ್‌ಗೆ ನಿರ್ಮಾಣಕ್ಕಾಗಿ 11.65 ಕೋಟಿ ರು.,
- ಉಡುಪಿ ಜಿಲ್ಲೆ ಕೊಲ್ಲೂರು ಶ್ರೀ ಮೂಕಾಂಬಿಕಾ ದೇವಾಲಯದಲ್ಲಿ ನೂತನ ಸೌಪರ್ಣಿಕಾ ಅತಿಥಿಗೃಹ ನಿರ್ಮಾಣ ಕಾಮಗಾರಿಗೆ 16.00 ಕೋಟಿ ರು.,
- ಉತ್ತರ ಕನ್ನಡ ಜಿಲ್ಲೆಯ ಹೊನ್ನಾವರ ತಾಲೂಕಿನ ಮಂಕಿ ಗ್ರಾಮದಲ್ಲಿ 20 ಗುಂಟೆ ಜಮೀನನ್ನು ಕಾಂಗ್ರೆಸ್ ಕಛೇರಿ ಕಟ್ಟಡ ನಿರ್ಮಾಣಕ್ಕೆ ಮಂಜೂರು ಮಾಡಲಾಗಿದೆ.
- ಕಲಬುರಗಿ, ಯಾದಗಿರಿ, ಬೀದರ್, ಕೊಪ್ಪಳ, ಬಳ್ಳಾರಿ, ರಾಯಚೂರಿನಲ್ಲಿ 100 ಕೋಟಿ ವೆಚ್ಚದಲ್ಲಿ ದೊಡ್ಡ ಪ್ರಮಾಣದಲ್ಲಿ ಅರಣ್ಯೀಕರಣ ಪ್ರಕ್ರಿಯೆಗೆ ಚಾಲನೆ ನೀಡಲಾಗುತ್ತಿದೆ.

ನಿಟ್ಟೆ ಕಾಲೇಜ್ ಆಫ್ ಫಾರ್ಮಸಿಟಿಕಲ್ ಸೈನ್ಸಸ್‌ನ ಘಟಿಕೋತ್ಸವದಲ್ಲಿ ಡಾ.ಬಿ.ಸಿ.ಭಗವಾನ್ ಅಭಿಪ್ರಾಯ

ಔಷಧೀಯ ವಲಯ ಆರೋಗ್ಯ ಕ್ಷೇತ್ರದ ಆಧಾರಸ್ತಂಭ

ಬೆಂಗಳೂರು: ಔಷಧೀಯ ವಲಯ ಈಗ ಕೇವಲ ವಾಣಿಜ್ಯೋದ್ಯಮವಾಗಿ ಉಳಿದಿಲ್ಲ. ಅದು ಸಾರ್ವಜನಿಕ ಆರೋಗ್ಯ ಕ್ಷೇತ್ರದ ಪ್ರಮುಖ ಆಧಾರಸ್ತಂಭ ಎಂದು ರಾಜೀವ್ ಗಾಂಧಿ ಆರೋಗ್ಯ ವಿಜ್ಞಾನಗಳ ವಿಶ್ವವಿದ್ಯಾಲಯದ ಕುಲಪತಿ ಡಾ.ಬಿ.ಸಿ.ಭಗವಾನ್ ತಿಳಿಸಿದರು.

ನಗರದ ನಿಟ್ಟೆ ಕಾಲೇಜ್ ಆಫ್ ಫಾರ್ಮಸಿಟಿಕಲ್ ಸೈನ್ಸಸ್‌ನ ದ್ವಿತೀಯ ಘಟಿಕೋತ್ಸವದಲ್ಲಿ ಮಾತನಾಡಿದ ಅವರು, ರೋಗಕ್ಕೆ ಚಿಕಿತ್ಸೆ, ನಾಣ್ಯದ ಒಂದು ಮುಖವಾದರೆ, ಅದರ ತಡೆಗಟ್ಟುವಿಕೆ ಇನ್ನೊಂದು ಮುಖ. ಔಷಧೀಯ ವಲಯ ಈ ಮಹತ್ವದ ಕಾರ್ಯವನ್ನು ಯಶಸ್ವಿಯಾಗಿ ನಿರ್ವಹಿಸುತ್ತಿದೆ. ಸಿಡುಬು, ಏಡ್ಸ್, ಕೋವಿಡ್ ನಿರ್ಮೂಲನೆಗೆ ಔಷಧೀಯ ವಲಯ ನೀಡಿದ ಕಾಣಿಕೆ ಸ್ಮರಣೀಯ. ನೂತನ ಪದವೀಧರರು ನಿಜಕ್ಕೂ ಅದೃಷ್ಟವಂತರು. ಏಕೆಂದರೆ ಅವರು ವಿನೂತನ ಬಹುಶಿಸ್ತೀಯ ಪಠ್ಯಕ್ರಮದಲ್ಲಿ ವ್ಯಾಸಂಗ ಮಾಡಿದ್ದಾರೆ. ಇದರಿಂದ ಭವಿಷ್ಯದ ದಿನಗಳಲ್ಲಿ ಈ ಔಷಧ ವಿಜ್ಞಾನಿಗಳು ತಮ್ಮ ಸಂಶೋಧನೆಗಳಿಂದ ಸಾರ್ವಜನಿಕರ ಆರೋಗ್ಯ ಕಾಪಾಡಿಕೊಳ್ಳುವ ನಿಟ್ಟಿನಲ್ಲಿ ಹೊಸತುಗಳನ್ನು ಪರಿಚಯಿಸಲಿದ್ದಾರೆ ಎಂದರು.

ನಿಟ್ಟೆ ಪರಿಗಣಿತ ವಿಶ್ವವಿದ್ಯಾಲಯದ ಕುಲಪತಿ ಡಾ.ಎಂ.ಎಸ್.ಮೂಡಿತ್ತಾಯ ಮಾತನಾಡಿ, ಔಷಧ ವಿಜ್ಞಾನಿಗಳು ಆಧುನಿಕ ತಂತ್ರಜ್ಞಾನದ ಆವಿಷ್ಕಾರಗಳನ್ನು ಅಧ್ಯಯನಿಸಿ ಅವುಗಳ ನೆರವಿನಿಂದ ತಮ್ಮ ಸಂಶೋಧನೆಗಳ ವೇಗವನ್ನು ಅಧಿಕಗೊಳಿಸಿಕೊಳ್ಳಬೇಕು. ಆದರೆ ಕೃತಕ ಬುದ್ಧಿಮತ್ತೆಯಿಂದ ಸಂಶೋಧನೆಗಳ ಬೆನ್ನೆಲುಬಾಗಳಿದೆ ಎಂದರು.

ಪದವಿ ಪ್ರದಾನ ಸಮಾರಂಭದಲ್ಲಿ ಒಟ್ಟು 63 ವಿದ್ಯಾರ್ಥಿಗಳು ಬ್ಯಾಚುಲರ್ ಆಫ್ ಪಾರ್ಮಸಿಟಿಕಲ್ ಸೈನ್ಸಸ್ ಪದವಿ ಸ್ವೀಕರಿಸಿದರು. ವಿದ್ಯಾರ್ಥಿನಿ ಲಾವಣ್ಯ ವಿಶ್ವವಿದ್ಯಾಲಯ ಮಟ್ಟದಲ್ಲಿ ಅತ್ಯುತ್ತಮ ಅಂಕಗಳನ್ನು ಗಳಿಸಿದ್ದಕ್ಕಾಗಿ ಚಿನ್ನದ ಪದಕ ಸ್ವೀಕರಿಸಿದರು.

ಈ ವೇಳೆ ತೇಜನಾ ಕನ್ಸಲ್ಟಿಂಗ್ ಎಲ್‌ಎಲ್‌ಪಿಯ ಸಂಸ್ಥಾಪಕ ಡಾ. ಕ್ರತೀಶ್ ಭೋಪಣ್ಣ, ನಿಟ್ಟೆ ಮೀನಾಕ್ಷಿ ತಾಂತ್ರಿಕ ಮಹಾವಿದ್ಯಾಲಯದ ಪ್ರಾಂಶುಪಾಲ ಡಾ.ಎಚ್.ಸಿ.ನಾಗರಾಜ್, ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾಲಯದ ಕಾರ್ಯಕಾರಿ ಸಮಿತಿ ಸದಸ್ಯ ಡಾ.ಕರುಣಾಕರ ರೈ, ನಿಟ್ಟೆ ಕಾಲೇಜ್ ಆಫ್ ಫಾರ್ಮಸಿಟಿಕಲ್ ಸೈನ್ಸಸ್‌ನ ಪ್ರಾಂಶುಪಾಲೆ ಡಾ.ವಿ.ಕುಸುಮ ದೇವಿ, ಪ್ರಾಧ್ಯಾಪಕಿ ವೇದಾ ಬಿ. ಹಚ್ಚೊಳ್ಳಿ ಸೇರಿದಂತೆ ಇನ್ನಿತರರು ಉಪಸ್ಥಿತರಿದ್ದರು.

ನಿಟ್ಟೆ ಕಾಲೇಜ್ ಆಫ್ ಫಾರ್ಮಸಿಟಿಕಲ್ ಸೈನ್ಸಸ್‌ನ ದ್ವಿತೀಯ ಘಟಿಕೋತ್ಸವದಲ್ಲಿ 63 ವಿದ್ಯಾರ್ಥಿಗಳಿಗೆ ಬ್ಯಾಚುಲರ್ ಆಫ್ ಪಾರ್ಮಸಿಟಿಕಲ್ ಸೈನ್ಸಸ್‌ನ ಪದವಿ ಪ್ರದಾನ ಮಾಡಲಾಯಿತು. ಈ ವೇಳೆ ರಾಜೀವ್ ಗಾಂಧಿ ಆರೋಗ್ಯ ವಿಜ್ಞಾನಗಳ ವಿಶ್ವವಿದ್ಯಾಲಯದ ಕುಲಪತಿ ಡಾ.ಬಿ.ಸಿ.ಭಗವಾನ್, ನಿಟ್ಟೆ ಪರಿಗಣಿತ ವಿಶ್ವವಿದ್ಯಾಲಯದ ಕುಲಪತಿ ಡಾ.ಎಂ.ಎಸ್. ಮೂಡಿತ್ತಾಯ, ಕನ್ಸಲ್ಟಿಂಗ್ ಎಲ್‌ಎಲ್‌ಪಿಯ ಸಂಸ್ಥಾಪಕ ಡಾ.ಕ್ರತೀಶ್ ಭೋಪಣ್ಣ ಸೇರಿ ಹಲವರು ಉಪಸ್ಥಿತರಿದ್ದರು.

ಸಮಾಚಾರ ಸಣ್ಣದಲ್ಲ

ಫೆ.8ಕ್ಕೆ ಪ್ರಶಸ್ತಿ ಪ್ರದಾನ ಸಮಾರಂಭ

ಬೆಂಗಳೂರು: ದೆಹಲಿ ಕರ್ನಾಟಕ ಸಂಘದ ವತಿಯಿಂದ ಪ್ರಶಸ್ತಿ ಪ್ರದಾನ ಸಮಾರಂಭ ಹಾಗೂ ಸಾಂಸ್ಕೃತಿಕ ಕಾರ್ಯಕ್ರಮ ಫೆ.8 ರಂದು ದೆಹಲಿಯ ದೆಹಲಿ ಕರ್ನಾಟಕ ಸಂಘದ ಸಭಾಂಗಣದಲ್ಲಿ ಆಯೋಜಿಸಲಾಗಿದೆ ಎಂದು ಸಂಘದ ಅಧ್ಯಕ್ಷ ಸಿ.ಎಂ. ನಾಗರಾಜ ಪ್ರಕಟಣೆಗೆ ತಿಳಿಸಿದ್ದಾರೆ. ಕಾರ್ಯಕ್ರಮದ ಮುಖ್ಯ ಅತಿಥಿಗಳಾಗಿ ವಿಶ್ವವಾಣಿ ಪ್ರಧಾನ ಸಂಪಾದಕ ವಿಶ್ವೇಶ್ವರ ಭಟ್ ಭಾಗವಹಿಸಲಿದ್ದು, ಕಾರ್ಯಕ್ರಮದಲ್ಲಿ ರಾಷ್ಟ್ರಕವಿ ಕುವೆಂಪು ಪ್ರಶಸ್ತಿಯನ್ನು ಸಾಹಿತಿ ಡಾ. ಹಂಪ ನಾಗರಾಜಯ್ಯ ಮತ್ತು ಡಾ.ಪ್ರಧಾನ ಗುರುದತ್ ಅವರಿಗೆ, ಡಾ.ಶಿವರಾಮ ಕಾರಂತ ಪ್ರಶಸ್ತಿಯನ್ನು ಪಟ್ಲ ಸತೀಶ್ ಶೆಟ್ಟಿ ಮತ್ತು ಕೆರೆಮನೆ ಶಿವಾನಂದ ಹೆಗಡೆ ಅವರಿಗೆ, ಡಾ.ಸರೋಜಿನಿ ಮಹಿಷಿ ಪ್ರಶಸ್ತಿಯನ್ನು ಸಾಹಿತಿ ಬಿ.ಆರ್. ಲಕ್ಷ್ಮಣರಾವ್ ಮತ್ತು ಡಾ.ಲತಾ ರಾಜಶೇಖರ್ ಅವರಿಗೆ, ಕನ್ನಡ ಭಾರತಿ ರಂಗ ಪ್ರಶಸ್ತಿಯನ್ನು ಟಿ. ಎಸ್. ನಾಗಾಭರಣ ಮತ್ತು ಚರಣ್ ರಾಜ್ ಅವರಿಗೆ ಪ್ರದಾನ ಮಾಡಲಾಗುವುದು ಎಂದು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಪಿಎಚ್‌ಡಿ ಪ್ರದಾನ

ಬೆಂಗಳೂರು: ಬೆಂಗಳೂರು ಜಲಮಂಡಳಿ ಮುಖ್ಯ ಅಭಿಯಂತರ ರಾಜೀವ್‌ಕೆ. ಎನ್ ಅವರು ರೇವಾ ವಿಶ್ವವಿದ್ಯಾಲಯದ ಸಿವಿಲ್ ಎಂಜಿನೀಯರಿಂಗ್

ವಿಭಾಗದಲ್ಲಿ ಮಂಡಿಸಿದ 'ಕಾಂಕ್ರೀಟ್ ತಯಾರಿಕೆಯಲ್ಲಿ ಸಂಸ್ಕರಿಸಿದ ನೀರಿನ ಬಳಕೆ' ವೈಜ್ಞಾನಿಕ ಪ್ರಬಂಧಕ್ಕೆ ಪಿಎಚ್‌ಡಿ ನೀಡಿ ಗೌರವಿಸಿದೆ. ಐಐಎಸ್‌ಸಿಯಲ್ಲಿ, ಕಾಂಕ್ರೀಟ್ ತಯಾರಿಕೆಯಲ್ಲಿ ಸಂಸ್ಕರಿಸಿದ ನೀರನ್ನು ಬಳಸಿದಾಗ ಅದರ ಬಲ ಮತ್ತು ಗುಣಮಟ್ಟ ಹೇಗಿರುತ್ತದೆ ಎಂಬ ಪ್ರಯೋಗಾರ್ಥ ಪರೀಕ್ಷೆಗಳನ್ನು ನಡೆಸಲಾಗಿದ್ದು, ಇವರ ಸಂಶೋಧನಾ ಪ್ರಬಂಧಗಳು ಜಾಗತಿಕ ಮಟ್ಟದ 5 ಪ್ರತಿಷ್ಠಿತ ಅಂತಾರಾಷ್ಟ್ರೀಯ ಜರ್ನಲ್‌ಗಳಲ್ಲಿ ಪ್ರಕಟಗೊಂಡಿವೆ.

ದರ್ಶನ ರೆಡ್ಡಿಗೆ ಪ್ರಶಸ್ತಿ

ಬೆಂಗಳೂರು: ಭಾರತೀಯ ಆಂತರಿಕ ಔಷಧ ಸೇವೆಯನ್ನು ಗುರುತಿಸಿ ಭಾರತೀಯ ವೈದ್ಯರ ಸಂಘ ಕೊಡಮಾಡುವ ಅತ್ಯುನ್ನತ ಪ್ರಶಸ್ತಿ ಇಂಡಿಯನ್ ಕಾಲೇಜ್ ಆಫ್ ಫಿಸಿಶಿಯನ್ಸ್ ಫೆಲೋಶಿಪ್ (ಎಫ್‌ಐಸಿಪಿ)ಗೆ ಈ ಬಾರಿ ಬೆಂಗಳೂರಿನ ಆಲ್ಟಿಯಸ್ ಆಸ್ಪತ್ರೆ ಆಂತರಿಕ ವೈದ್ಯಕೀಯ ವಿಭಾಗದ ಎಂ.ಡಿ. ಡಾ.ದರ್ಶನ ರೆಡ್ಡಿ ಭಾಜನರಾಗಿದ್ದಾರೆ. ಆಂತರಿಕ ಔಷಧ, ಮಧುಮೇಹ ಮತ್ತು ಅಂತಃಸ್ರಾವಶಾಸ್ತ್ರದಲ್ಲಿ ಅವರ ವಿಶಿಷ್ಟ ಸೇವೆ, ಸಂಶೋಧನೆ ಹಾಗೂ ಬೋಧನೆಯನ್ನು ಗೌರವಿಸಿದೆ.

ದೂರಕ್ಕೆ ಅನುಗುಣವಾಗಿ ಕನಿಷ್ಠ 1 ರು.ನಿಂದ ಗರಿಷ್ಠ 5 ರು.ವರೆಗೆ ದರ ಹೆಚ್ಚಳ | ಫೆ.9ರಿಂದ ಅನ್ವಯ

ನಮ್ಮ ಮೆಟ್ರೋದಿಂದ ಪರಿಷ್ಕೃತ ಟಿಕೆಟ್ ದರ ಪ್ರಕಟ

ವಿಶ್ವವಾಣಿ ಸುದ್ದಿಮನೆ ಬೆಂಗಳೂರು

ನಮ್ಮ ಮೆಟ್ರೋ ಟಿಕೆಟ್ ದರವನ್ನು ಹೆಚ್ಚಿಸಿದ್ದು, ಫೆ.9ರಿಂದ ಜಾರಿಗೆ ಬರುವಂತೆ ಮೆಟ್ರೋ ಟಿಕೆಟ್ ದರವನ್ನು ಶೇ.5ರಷ್ಟು ಹೆಚ್ಚಳ ಮಾಡಲಾಗಿದೆ ಎಂದು ಅಧಿಕೃತವಾಗಿ ಘೋಷಿಸಿದೆ.

ಮೆಟ್ರೋ ಟಿಕೆಟ್ ದರವನ್ನು ಶೇ.5ರಷ್ಟು ಏರಿಕೆ ಮಾಡಲು ರಾಜ್ಯ ಸರಕಾರ ಅನುಮೋದನೆ ನೀಡಿದ್ದು, ಮೆಟ್ರೋ ನಿಗಮವು ಈ ಬಗ್ಗೆ ಸಿದ್ಧತೆ ನಡೆಸಿದೆ. ಕಳೆದ ವರ್ಷ ಫೆಬ್ರವರಿ 9 ರಂದು ದಾಖಲೆಯ ಶೇ.101.5 ರಷ್ಟು ದರ ಏರಿಕೆ ಮಾಡಲಾಗಿತ್ತು. ಈ ನಿರ್ಧಾರವು ಪ್ರಯಾಣಿಕರು ಮತ್ತು ಸಾರ್ವಜನಿಕರಿಂದ ತೀವ್ರ ಆಕ್ರೋಶಕ್ಕೆ ಕಾರಣವಾಗಿತ್ತು. ವ್ಯಾಪಕ ವಿರೋಧ ವ್ಯಕ್ತವಾದ ನಂತರ, ಮೆಟ್ರೋ ನಿಗಮವು ದರವನ್ನು ಸುಮಾರು ಶೇ.70 ರಷ್ಟು ಇಳಿಕೆ ಮಾಡಿತ್ತು. ಆದರೆ, ಈಗ ಮತ್ತೊಮ್ಮೆ ಅದೇ ಫೆಬ್ರವರಿ 9 ರಂದು ಶೇ.5 ರಷ್ಟು ದರ ಹೆಚ್ಚಳಕ್ಕೆ ಮೆಟ್ರೋ ನಿಗಮ ಮುಂದಾಗಿದೆ.

ಮೆಟ್ರೋ ರೈಲ್ವೆ ಕಾಯಿದೆ 2002ರಡಿಯಲ್ಲಿ ರಚಿಸಲಾದ ಫೇರ್ ಫಿಕ್ಸೇಷನ್ ಕಮಿಟಿ ಶಿಫಾರಸಿನಂತೆ ಈ ದರ ಪರಿಷ್ಕರಣೆ ಮಾಡಲಾಗಿದ್ದು, ಹೆಚ್ಚುತ್ತಿರುವ ಕಾರ್ಯಾಚರಣೆ ವೆಚ್ಚ ಸರಿದೂಗಿಸಲು ಈ ಕ್ರಮ ಅನಿವಾರ್ಯವಾಗಿದೆ. ದೂರಕ್ಕೆ ಅನುಗುಣವಾಗಿ ಕನಿಷ್ಠ 1 ರು.ನಿಂದ ಗರಿಷ್ಠ 5 ರು.ವರೆಗೆ ದರ ಹೆಚ್ಚಳವಾಗಿದೆ. ಹೊಸ ದರವು ಫೆ.9ರಿಂದ ಜಾರಿಗೆ ಬರಲಿದೆ ಎಂದು ತಿಳಿಸಿದೆ.

ಭವಿಷ್ಯದಲ್ಲಿ ದೊಡ್ಡ ಮತ್ತು ದಿಢೀರ್ ದರ ಹೆಚ್ಚಳದ ಅಗತ್ಯವನ್ನು ತಪ್ಪಿಸಲು, ಆರ್ಥಿಕ ಸುಸ್ಥಿರತೆ ಮತ್ತು ಸೇವಾ ವಿಶ್ವಾಸಾರ್ಹತೆಯನ್ನು ಖಚಿತಪಡಿಸಿಕೊಳ್ಳಲು ಈ ಅಲ್ಪ ವಾರ್ಷಿಕ ಪರಿಷ್ಕರಣೆಯನ್ನು ಉದ್ದೇಶಿಸಲಾಗಿದ್ದು, ಈ ವಿಧಾನವು ಹಣದುಬ್ಬರ ಮತ್ತು ನಿರ್ವಹಣಾ ವೆಚ್ಚಗಳನ್ನು ಕ್ರಮೇಣವಾಗಿ ಸರಿದೂಗಿಸಲು ಅನುವು ಮಾಡಿಕೊಡುತ್ತದೆ. ಇದರಿಂದಾಗಿ ಪ್ರಯಾಣಿಕರನ್ನು ತೀವ್ರವಾದ ದರ ಏರಿಕೆಗಳಿಂದ ರಕ್ಷಿಸುತ್ತದೆ ಎಂದು ತಿಳಿಸಿದೆ. ಪ್ರಯಾಣಿಕರಿಗೆ ಸುರಕ್ಷಿತ, ವಿಶ್ವಾಸಾರ್ಹ, ಸಮಯಪ್ರಜ್ಞೆ ಮತ್ತು ಕೈಗೆಟುಕುವ ಸೇವೆ ಒದಗಿಸಲು ಮೆಟ್ರೋ ಬದ್ಧವಾಗಿದ್ದು, ಸಮತೋಲನ ದರದಲ್ಲಿ ವಿಸ್ತರಿಸುತ್ತಿರುವ ಜಾಲದಲ್ಲಿ ಉನ್ನತ ಗುಣಮಟ್ಟದ ಸೇವೆ, ಸುರಕ್ಷತೆ ಮತ್ತು ನಿರ್ವಹಣೆಯನ್ನು ಕಾಯುದುಕೊಳ್ಳುವ ಅಗತ್ಯದೊಂದಿಗೆ ಪ್ರಯಾಣಿಕರ ಕೈಗೆಟಕುವ ದರವನ್ನು ಮುಂದುವರಿಸಲಾಗುವುದು ಎಂದು ತಿಳಿಸಿದೆ.

ಪರಿಷ್ಕೃತ ಮೆಟ್ರೋ ದರ ಪಟ್ಟಿ

- 0-2 ಕಿ.ಮೀ: ರು.10 ರಿಂದ ರು.11ಕ್ಕೆ ಏರಿಕೆ
- 2-4 ಕಿ.ಮೀ: ರು.20 ರಿಂದ ರು.21ಕ್ಕೆ ಏರಿಕೆ
- 4-6 ಕಿ.ಮೀ: ರು.30 ರಿಂದ ರು.32ಕ್ಕೆ ಏರಿಕೆ
- 6-8 ಕಿ.ಮೀ: ರು.40 ರಿಂದ ರು.42ಕ್ಕೆ ಏರಿಕೆ
- 8-10 ಕಿ.ಮೀ: ರು.50 ರಿಂದ ರು.53ಕ್ಕೆ ಏರಿಕೆ
- 10-15 ಕಿ.ಮೀ: ರು.60 ರಿಂದ ರು.63ಕ್ಕೆ ಏರಿಕೆ
- 15-20 ಕಿ.ಮೀ: ರು.70 ರಿಂದ ರು.74ಕ್ಕೆ ಏರಿಕೆ
- 20-25 ಕಿ.ಮೀ: ರು.80 ರಿಂದ ರು.84ಕ್ಕೆ ಏರಿಕೆ
- 25 ಕಿ.ಮೀ ಮೇಲ್ಪಟ್ಟು: ರು.90 ರಿಂದ ರು.95ಕ್ಕೆ ಏರಿಕೆ

ರಿಯಾಯಿತಿ ಮುಂದುವರಿಕೆ

- ಸ್ಮಾರ್ಟ್ ಕಾರ್ಡ್/ಎನ್‌ಸಿಎಂಸಿ ಬಳಕೆದಾರರಿಗೆ ಅಸ್ತಿತ್ವದಲ್ಲಿರುವ ಎಲ್ಲ ರಿಯಾಯಿತಿಗಳ ಮುಂದುವರಿಕೆ
- ಪೀಕ್ ಸಮಯದಲ್ಲಿ ಶೇ.5 ರಿಯಾಯಿತಿ
- ಪೀಕ್ ಅಲ್ಲದ ಸಮಯದಲ್ಲಿ ಶೇ.10 ರಿಯಾಯಿತಿ
- ಭಾನುವಾರ ಮತ್ತು ಮೂರು ಗೊತ್ತುಪಡಿಸಿದ ರಾಷ್ಟ್ರೀಯ ರಜಾದಿನಗಳಲ್ಲಿ ಶೇ.10 ರಿಯಾಯಿತಿ

ಮಾರ್ಗ	ಇಂದಿನ ದರ	ಹೊಸ ದರ
ಆರ್.ವಿ ರೋಡ್ -ಬೊಮ್ಮಸಂದ್ರ	60 ರು.	63 ರು.
ಮೆಜೆಸ್ಟಿಕ್ - ವೈಟ್ ಫೀಲ್ಡ್	80 ರು.	84 ರು.
ಮೆಜೆಸ್ಟಿಕ್ - ಬೊಮ್ಮಸಂದ್ರ	80 ರು.	84 ರು.
ಮೆಜೆಸ್ಟಿಕ್ - ಚೆಲ್ಲಘಟ್ಟ	60 ರು.	63 ರು.
ವೈಟ್ ಫೀಲ್ಡ್ - ಚೆಲ್ಲಘಟ್ಟ	90 ರು.	95 ರು.
ಸಿಲ್ಕ್ ಇನ್ಸ್ಟಿಟ್ಯೂಟ್ - ಮಾದಾವರ	90 ರು.	95 ರು.

ದೋಷಪೂರಿತ ದರ ಪರಿಷ್ಕರಣೆಯನ್ನು ಮುಂದುವರಿಸಲು ರಾಜ್ಯ ಸರಕಾರ ಅನುಮತಿಸಬಾರದು. ವಾರ್ಷಿಕ ದರ ಏರಿಕೆಯನ್ನು ತಡೆಹಿಡಿಯಬೇಕು ಮತ್ತು ಅಗತ್ಯವಿದ್ದರೆ, ಸಾರ್ವಜನಿಕ ಹಿತಾಸಕ್ತಿಯಲ್ಲಿ ದರಗಳಲ್ಲಿ ಸುಧಾರಣೆ ಜಾರಿಗೆ ತರಲು ಹೊಸ ದರ ನಿಗದಿ ಸಮಿತಿಯನ್ನು ರಚಿಸಬೇಕು ಎಂದು ಕೇಂದ್ರ ಸಚಿವರಿಗೆ ಮನವಿ ಮಾಡಿದ್ದೇವೆ. ಸಚಿವರು ಸಕಾರಾತ್ಮಕವಾಗಿ ಸ್ಪಂದಿಸಿದ್ದಾರೆ.

- ತೇಜಸ್ವಿ ಸೂರ್ಯ, ಬೆಂಗಳೂರು ದಕ್ಷಿಣ ಸಂಸದ

ದರ ಏರಿಕೆ ನಮ್ಮ ವ್ಯಾಪ್ತಿಗೆ ಬರಲ್ಲ

ಮೆಟ್ರೋ ದರ ಏರಿಕೆಗೆ ಸರಕಾರ ಒಪ್ಪಿಗೆ ನೀಡಿದೆ ಎಂಬ ಸುದ್ದಿ ಹರಿದಾಡುತ್ತಿದೆ. ಆದರೆ ನನ್ನ ಬಳಿಗೆ ಇನ್ನು ಯಾವುದೇ ಫೈಲ್ ಬಂದಿಲ್ಲ.

ಕೇಂದ್ರ ಸರಕಾರದ ಕಾರ್ಯದರ್ಶಿ, ಬಿಎಂಆರ್‌ಸಿಎಲ್ ಮುಖ್ಯಸ್ಥರ ಸಮಿತಿ ಇದೆ. ಅವರು ಬೆಲೆ ಏರಿಕೆ ತೀರ್ಮಾನ ಮಾಡಿದ್ದು, ನನಗೆ ಅಧಿಕೃತ ಮಾಹಿತಿ ಬಂದಿಲ್ಲ. ನಾನು ಮಾಧ್ಯಮಗಳಲ್ಲಿ ವರದಿ ನೋಡಿದ್ದೇನೆ. ಬಿಜೆಪಿಯವರು ತಮ್ಮದೇ ಕೇಂದ್ರ ಸಚಿವರಿಗೆ ಈ ವಿಚಾರ ಹೇಳಬೇಕು. ಅವರು ಹೇಳಲು ಸಾಧ್ಯವೇ? ಮೆಟ್ರೋ ದರ ಏರಿಕೆ ವಿಚಾರ ರಾಜ್ಯ ಸರಕಾರದವರೆಗೆ ಬರುವುದಿಲ್ಲ. ಕೇಂದ್ರದ ಸಚಿವಲಯದ ಕಾರ್ಯದರ್ಶಿ ಈ ಸಮಿತಿಯ ಮುಖ್ಯಸ್ಥರು. ರಾಜ್ಯದಿಂದ ನಾಲ್ಕು ಜನ ಪ್ರತಿನಿಧಿ ಇದ್ದರೂ ತೀರ್ಮಾನ ಮಾಡುವುದು ಅವರೇ ಎಂದು ಡಿಸಿಎಂ ಡಿ.ಕೆ.ಶಿವಕುಮಾರ್ ತಿಳಿಸಿದರು.

ಬಿಜೆಪಿ ನಾಯಕರ ಆಕ್ಷೇಪ

ವರ್ಷದ ಹಿಂದಷ್ಟೇ ಮೆಟ್ರೋ ದರ ಏರಿಸಿ, ಇದೀಗ ಮತ್ತೆ ದರ ಏರಿಕೆಗೆ ಮುಂದಾಗಿರುವ ಬಿಎಂಆರ್‌ಸಿಎಲ್ ನಡೆಗೆ ಬಿಜೆಪಿ ನಾಯಕರು ತೀವ್ರ ವಿರೋಧ ವ್ಯಕ್ತಪಡಿಸಿದ್ದಾರೆ. ಇದೇ ವಿಷಯಕ್ಕೆ ಸಂಬಂಧಿಸಿದಂತೆ ಕೇಂದ್ರ ಸಚಿವ ಮನೋಹರ್ ಲಾಲ್ ಖಟ್ಟರ್ ಅವರನ್ನು ಭೇಟಿಯಾಗಿರುವ ಬೆಂಗಳೂರು ದಕ್ಷಿಣ ಸಂಸದ ತೇಜಸ್ವಿ ಸೂರ್ಯ, ಫೆ.9ರಿಂದ ಕರ್ನಾಟಕದ ಕಾಂಗ್ರೆಸ್ ನೇತೃತ್ವದ ರಾಜ್ಯ ಸರಕಾರ ಮೆಟ್ರೋ ಪ್ರಯಾಣ ದರ ಏರಿಕೆಯನ್ನು ಜಾರಿಗೆ ತಂದಿದ್ದು, ವ್ಯಾಪಕ ಸಾರ್ವಜನಿಕ ವಿರೋಧವನ್ನು ಕಡೆಗಣಿಸಿ ಪ್ರಯಾಣಿಕರ ಮೇಲೆ ಅನಗತ್ಯ ಹೊರೆಯನ್ನು ಹೇರಿದೆ. ಆದ್ದರಿಂದ ದರ ನಿಗದಿ ಸಮಿತಿಯನ್ನು ಪುನರ್‌ರಚಿಸುವಂತೆ ಹಾಗೂ ದರ ಏರಿಕೆ ಮಾಡದಂತೆ ಕ್ರಮವಹಿಸಬೇಕು ಎಂದು ಕೇಂದ್ರ ಸಚಿವ ಖಟ್ಟರ್ ಅವರಿಗೆ ಮನವಿ ಮಾಡಿದ್ದಾರೆ.

ಬೃಹತ್ ಹಿಂದೂ ಸಮಾಜೋತ್ಸವ ನಾಳೆ

ಬೆಂಗಳೂರು: ಆರ್‌ಎಸ್‌ಎಸ್ ಸಂಘದ 100ನೇ ವರ್ಷದ ಪ್ರಯುಕ್ತ ಗೋವಿಂದರಾಜನಗರ ಹಿಂದೂ ಸಮಾಜೋತ್ಸವ ಆಯೋಜನಾ ಸಮಿತಿ ವತಿಯಿಂದ ಫೆ.7ರಂದು ಸಂಜೆ 4 ಗಂಟೆಗೆ ಬಿಜಿಎಸ್ ಆಟದ ಮೈದಾನದಲ್ಲಿ ಬೃಹತ್ ಹಿಂದೂ ಸಮಾಜೋತ್ಸವವನ್ನು ಆಯೋಜಿಸಲಾಗಿದೆ.

ಅಂದು ಸಂಜೆ 4 ಗಂಟೆಗೆ ಪ್ರಶಾಂತನಗರ ವೃತ್ತದಿಂದ ಬಿಜಿಎಸ್ ಆಟದ ಮೈದಾನದ ವರೆಗೆ ಭವ್ಯ ಶೋಭಾಯಾತ್ರೆ ನಡೆಯಲಿದೆ. ಬೆಂಗಳೂರು ನಗರದಲ್ಲಿ ನಡೆಯಲಿರುವ ಭವ್ಯ ಮತ್ತು ಐತಿಹಾಸಿಕ ಶೋಭಾಯಾತ್ರೆಯಾಗಿದ್ದು, 25 ಸಾವಿರಾರು ಹಿಂದೂ ಕಾರ್ಯಕರ್ತರು ಭಾಗವಹಿಸಲಿದ್ದಾರೆ. ಬಾಲ ಶ್ರೀರಾಮ ವೇಷಧಾರಿಗಳು, ಅಯೋಧ್ಯೆಯ ಶ್ರೀರಾಮ ಮಂದಿರದ ಮಾದರಿ, ಬಾಲರಾಮ ಮತ್ತು ಹನುಮಂತ ದೇವರ ಪ್ರತಿಕೃತಿಗಳು, ಹಿಂದೂ ಧರ್ಮದ ಸಾಂಸ್ಕೃತಿಕ ವೈಭವವನ್ನು ಪ್ರತಿಬಿಂಬಿಸುವ ಸ್ತಬ್ಧಚಿತ್ರಗಳು ಶೋಭಾಯಾತ್ರೆಯ ವಿಶೇಷ ಆಕರ್ಷಣೆಯಾಗಿವೆ ಎಂದು ಸುದ್ದಿಗೋಷ್ಠಿಯಲ್ಲಿ ಭರತಾರಣಿ ಆಶ್ರಮದ ಅಧ್ಯಕ್ಷರಾದ ಮಾತಾಜಿ ವಿವೇಕಮಯೀ ಅವರು ತಿಳಿಸಿದರು.

ಸಂಜೆ 6 ಗಂಟೆಗೆ ನಡೆಯುವ ಸಭಾ ಕಾರ್ಯಕ್ರಮವು ಆದಿಚುಂಚನಗಿರಿ ಶಾಖಾ ಮಠದ ಶ್ರೀ ಸೌಮ್ಯನಾಥ ಸ್ವಾಮೀಜಿ ದಿವ್ಯ ಸಾನಿಧ್ಯದಲ್ಲಿ ನಡೆಯಲಿದೆ. ಹಿರಿಯ ಸಾಮಾಜಿಕ ಕಾರ್ಯಕರ್ತ ಬಿ.ಎಲ್. ಸಂತೋಷ್ ಅವರು ದಿಕ್ಸೂಚಿ ಭಾಷಣ ಮಾಡಲಿದ್ದಾರೆ. ಸಭಾ ಕಾರ್ಯಕ್ರಮದಲ್ಲಿ ಭಜನೆ, ಸಾಂಸ್ಕೃತಿಕ ಕಾರ್ಯಕ್ರಮಗಳು, 1000 ಮಕ್ಕಳಿಂದ ಸಾಮೂಹಿಕ ವಂದೇ ಮಾತರಂ ಮತ್ತು ಮಲ್ಲಕಂಭ , ಗೀತೆ ಗಾಯನ ಕಾರ್ಯಕ್ರಮಗಳು ನಡೆಯಲಿವೆ.

ಜೈವಿಕ ಇಂಧನ ಅಭಿವೃದ್ಧಿಗೆ ₹100 ಕೋಟಿ ಅನುದಾನ ಕೊಡಿ

ಬೆಂಗಳೂರು: ಕರ್ನಾಟಕ ರಾಜ್ಯ ಜೈವಿಕ ಇಂಧನ ಅಭಿವೃದ್ಧಿ ಮಂಡಳಿಯ ಅಧ್ಯಕ್ಷ ಎಸ್. ಈ. ಸುಧೀಂದ್ರ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವ ಪ್ರಿಯಾಂಕ್ ಖರ್ಗೆ ಅವರನ್ನು ಭೇಟಿಯಾಗಿ 2026-27ರ ಬಜೆಟ್ ಪೂರ್ವಭಾವಿ ಸಭೆಯಲ್ಲಿ ಮಂಡಳಿಗೆ ಅನುದಾನದ ಬೇಡಿಕೆ ಕುರಿತು ಸಮಾಲೋಚನೆ ನಡೆಸಿದರು.

ಈ ವೇಳೆ ಕರ್ನಾಟಕ ರಾಜ್ಯ ಜೈವಿಕ ಇಂಧನ ಅಭಿವೃದ್ಧಿ ಮಂಡಳಿಯ ಅಧ್ಯಕ್ಷ ಎಸ್. ಈ. ಸುಧೀಂದ್ರ, 2026 - 27 ಹಾಗೂ ಮುಂದಿನ ಐದು ವರ್ಷಗಳ ಜೈವಿಕ ಇಂಧನ ಕ್ಷೇತ್ರದ ಬೆಳವಣಿಗೆಯ ರೂಪು ರೇಷೆಗಳನ್ನು ಹಾಗೂ ಅನುಷ್ಠಾನ ಪ್ರಕ್ರಿಯೆಯನ್ನು ಆಯವ್ಯಯ ಬೇಡಿಕೆಯೊಂದಿಗೆ ಅಂಕಿ ಅಂಶಗಳ ಸಮೇತ ವಿವರಿಸಲಾಗಿದೆ. ಪ್ರಸ್ತುತ ಸಾಲಿನಲ್ಲಿ ಜೈವಿಕ ಇಂಧನ ಕ್ಷೇತ್ರದ ಪೂರಕ ಚಟುವಟಿಕೆ ಗಳನ್ನು ಕೈಗೊಳ್ಳಲು, ಮೂಲಸೌಕರ್ಯಗಳ ಅಭಿವೃದ್ಧಿಗಾಗಿ 100 ಕೋಟಿ ರು.ಗಳ ಅನುದಾನ ನೀಡುವಂತೆ ಬೇಡಿಕೆ ಸಲ್ಲಿಸಲಾಗಿದ್ದು, ಇದರಿಂದ ಮುಂದಿನ ಐದು ವರ್ಷಗಳಲ್ಲಿ ಜೈವಿಕ ಇಂಧನ ಉತ್ಪಾದನೆ ಹೆಚ್ಚಿಸಲು, ಹೊಸ ಉತ್ಪಾದನಾ ಘಟಕಗಳ ನಿರ್ಮಾಣ, ಸಂಪನ್ಮೂಲ ಕ್ರೋಡೀಕರಣ ಹಾಗೂ ಮಾರುಕಟ್ಟೆ ವಿಸ್ತರಣೆ ಕಾರ್ಯಗಳನ್ನು ಕೈಗೊಳ್ಳುವ ಉದ್ದೇಶವನ್ನು ಹೊಂದಿದೆ ಎಂದರು. ಈ ವೇಳೆ ಸಭೆಯಲ್ಲಿ ಮಂಡಳಿಯ ವ್ಯವಸ್ಥಾಪಕ ನಿರ್ದೇಶಕ ಶಿವಶಂಕರ್ ಎಲ್, ಉಪ ಅರಣ್ಯ ಸಂರಕ್ಷಣಾಧಿಕಾರಿ ಲೋಹಿತ್ ಬಿ. ಆರ್, ಯೋಜನಾ ಸಲಹೆಗಾರ ಡಾ. ದಯಾನಂದ ಜಿ. ಎನ್, ಪ್ರಸಾದ್ ರಬ್ಬ ಪ್ರಗಡ, ಕಾನೂನು ಸಲಹೆಗಾರ ಸಂತೋಷ್ ಬಿ. ಎಸ್ ಸೇರಿದಂತೆ ಇನ್ನಿತರರು ಉಪಸ್ಥಿತರಿದ್ದರು.

ರಾಜ್ಯ ಜೈವಿಕ ಇಂಧನ ಅಭಿವೃದ್ಧಿ ಮಂಡಳಿಯ ಅಧ್ಯಕ್ಷ ಎಸ್. ಈ. ಸುಧೀಂದ್ರ ಅವರು ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಸಚಿವ ಪ್ರಿಯಾಂಕ್ ಖರ್ಗೆ ಅವರನ್ನು ಭೇಟಿಯಾಗಿ ಮಂಡಳಿಯ ಅನುದಾನದ ಬೇಡಿಕೆ ಕುರಿತು ಮನವಿ ಪತ್ರ ಸಲ್ಲಿಸಿದರು.

ಮಂಧಾನಾ-ಜಾರ್ಜಿಯಾ ಭರ್ಜರಿ ಆಟ | ಡಬ್ಲ್ಯುಪಿಎಲ್: 2ನೇ ಬಾರಿ ಕಪ್ ಗೆದ್ದ ಆರ್‌ಸಿಬಿ

ಮತ್ತೆ ನಮ್ಗೇ ಕಪ್

ವಡೋದರಾ: ನಾಲ್ಕನೇ ಆವೃತ್ತಿಯ ಮಹಿಳಾ ಪ್ರೀಮಿ ಯರ್ ಲೀಗ್ (ಡಬ್ಲ್ಯುಪಿ ಎಲ್) ಟೂರ್ನಿಯಲ್ಲಿ ಸ್ಮೃತಿ ಮಂಧಾನಾ ನಾಯಕತ್ವದ ಆರ್‌ಸಿಬಿ ತಂಡವು ಚಾಂಪಿಯನ್ ಆಗಿ ಹೊರ ಹೊಮ್ಮಿದ್ದು, ಫೈನಲ್‌ನಲ್ಲಿ ಆರ್‌ಸಿಬಿ 6 ವಿಕೆಟ್‌ಗಳಿಂದ ಜಯ ಗಳಿಸಿದೆ. ಜೆಮಿಮಾ ರೊಡ್ರಿ ಗಸ್ ನಾಯಕತ್ವದ ಡೆಲ್ಲಿ ಕ್ಯಾಪಿಟಲ್ಸ್ ತಂಡ ನಾಲ್ಕನೇ ಬಾರಿಯೂ ಪ್ರಶಸ್ತಿ ಸುತ್ತಿನಲ್ಲಿ ಮುಗ್ಗರಿಸಿದೆ.

ಇಲ್ಲಿನ ಬಿಸಿಎ ಸ್ಟೇಡಿಯಂನಲ್ಲಿ ಗೆಲ್ಲಲು 204 ರನ್‌ಗಳ ಕಠಿಣ ಗುರಿ ಬೆನ್ನತ್ತಿದ ಆರ್‌ಸಿಬಿ ಆರಂಭದಲ್ಲೇ ಗ್ರೇಸ್ ಹ್ಯಾರಿಸ್ ವಿಕೆಟ್ ಕಳೆದುಕೊಂಡು ಆಘಾತಕ್ಕೊಳಗಾಯಿತು, 7 ಎಸೆತಗಳಲ್ಲಿ ಎರಡು ಬೌಂಡರಿ ಸಹಿತ 9 ರನ್ ಗಳಿಸಿದ್ದರು.

ಮಂಧನಾ-ವೋಲ್ಸ್ ಭರ್ಜರಿ ಆಟ: ಎರಡನೇ ವಿಕೆಟ್‌ಗೆ ನಾಯಕಿ ಸ್ಮೃತಿ ಮಂಧಾನಾ ಹಾಗೂ ಜಾರ್ಜಿಯಾ ವೋಲ್ ಸ್ಫೋಟಕ ಶತಕದ ಜತೆಯಾಟವಾಡುವ ಮೂಲಕ ತಂಡಕ್ಕೆ ಆಸರೆಯಾದರು. ಇಬ್ಬರೂ ಡೆಲ್ಲಿ ಬೌಲರ್‌ಗಳ ಮೇಲೆ ಒತ್ತಡ ಹೇರಿದರು. ಮಂಧಾನಾ ಕೇವಲ 23 ಎಸೆತಗಳನ್ನು ಎದುರಿಸಿ ಅರ್ಧಶತಕ ಪೂರೈಸಿದರು, ಮತ್ತೊಂದು ತುದಿಯಲ್ಲಿ ವೋಲ್ ಕೂಡಾ ಅರ್ಧಶತಕ ಗಳಿಸಿದರು. ಎರಡನೇ ವಿಕೆಟ್‌ಗೆ ಈ ಜೋಡಿ ಕೇವಲ 92 ಎಸೆತಗಳಲ್ಲಿ 165 ರನ್‌ಗಳ ಜತೆಯಾಟವಾಡುವ ಮೂಲಕ ತಂಡವನ್ನು ಗೆಲುವಿನ ಹೊಸ್ತಿಲಲ್ಲಿ ತಂದು ನಿಲ್ಲಿಸಿದರು. ವೋಲ್ 79 ರನ್ ಸಿಡಿಸಿದರೆ, ನಾಯಕಿ ಸ್ಮೃತಿ ಮಂಧಾನಾ ಕೇವಲ 41 ಎಸೆತಗಳಲ್ಲಿ 12 ಬೌಂಡರಿ ಹಾಗೂ 3 ಸಿಕ್ಸರ್ ಸಹಿತ 87 ರನ್ ಬಾರಿಸಿದರು. ಕೊನೆಯಲ್ಲಿ ನಡಿನ್ ಡಿ ಕ್ಲಾರ್ಕ್ ಮತ್ತು ರಾಧಾ ಯಾದವ್ ಆರ್‌ಸಿಬಿಯ ಗೆಲುವಿನ ರನ್ ಬಾರಿಸಿದರು. ಆರ್‌ಸಿಬಿ 19.4 ಓವರ್‌ಗಳಲ್ಲಿ 4 ವಿಕೆಟ್‌ಗೆ 204 ರನ್ ಗಳಿಸಿ ಗೆಲುವಿನ ಕೇಕೆ ಹಾಕಿತು.

ಡೆಲ್ಲಿ ಉತ್ತಮ ಮೊತ್ತ: ಟಾಸ್ ಸೋತು ಬ್ಯಾಟಿಂಗ್‌ಗೆ ಇಳಿದ ಡೆಲ್ಲಿ ಉತ್ತಮ ಆರಂಭವನ್ನು ಪಡೆಯಿತು. ಆರಂಭಿಕ ಬ್ಯಾಟರ್‌ಗಳಾದ ಲಿಜೆಲ್ಲೆ ಲೀ ಮತ್ತು ಶಫಾಲಿ ವರ್ಮಾ ತಂಡಕ್ಕೆ ಭದ್ರ ಬುನಾದಿ ಹಾಕಿದರು. 13 ಬಾಲ್‌ಗಳಿಂದ 20 ರನ್ ಗಳಿಸಿದ ಶಫಾಲಿ ವರ್ಮಾ ಅರುಂಧತಿ ರೆಡ್ಡಿ ಬೌಲಿಂಗ್‌ನಲ್ಲಿ ರಿಚಾ ಘೋಷ್‌ಗೆ ಕ್ಯಾಚ್ ನೀಡಿ ಔಟ್ ಆದರು. ಆ ಬಳಿಕ ಲಿಜೆಲ್ಲೆ ಲೀ ಮತ್ತು ಲಾರಾ ವೋಲ್ವಾರ್ಟ್ ಮಧ್ಯೆ 2ನೇ ವಿಕೆಟ್ ಜತೆಯಾಟ ಉತ್ತಮವಾಗಿಯೇ ಸಾಗಿತು. ತಂಡದ ಮೊತ್ತ 72 ಆದಾಗ 30 ಬಾಲ್‌ಗಳಿಂದ 37 ರನ್ ಗಳಿಸಿದ್ದ ಲಿಜೆಲ್ಲೇ ಲೀ ಅವರು ನಡಿನ್ ಡಿ ಕ್ಲರ್ಕ್ ಬೌಲಿಂಗ್‌ನಲ್ಲಿ ಗ್ರೇಸ್ ಹ್ಯಾರಿಸ್ ಬೌಲಿಂಗ್‌ನಲ್ಲಿ ವಿಕೆಟ್ ಕಳೆದುಕೊಂಡರು. ನಂತರ ಲಾರಾ ವೋಲ್ವಾರ್ಟ್ ಮತ್ತು ಡೆಲ್ಲಿ ನಾಯಕಿ ಜೆಮಿಮಾ ರಾಡ್ರಿಗಸ್ 3ನೇ ವಿಕೆಟ್‌ಗೆ ಭರ್ಜರಿ ಪ್ರದರ್ಶನ ನೀಡಿದರು. ಕೇವಲ 37 ಬಾಲ್‌ಗಳನ್ನು ಎದುರಿಸಿದ್ದ ಜೆಮಿಮಾ ಅರ್ಧ ಶತಕ (57) ಗಳಿಸಿ ಸಯಾಲಿ ಸದ್ಘರೆ ಬೌಲಿಂಗ್‌ನಲ್ಲಿ ನಡಿನ್ ಡಿ ಕ್ಲಾರ್ಕ್‌ಗೆ ಕ್ಯಾಚ್ ನೀಡಿ ಪೆವಿಲಿಯನ್ ಸೇರಿದರು. 4ನೇ ವಿಕೆಟ್‌ಗೆ ಜತೆಗೂಡಿದ ಲಾರಾ ವೋಲ್ವಾರ್ಟ್-ಚಿನೆಲ್ಲೆ ಹೆನ್ರಿ ಅವರು ಆರ್‌ಸಿಬಿ ಬೌಲರ್‌ಗಳನ್ನು ಹಿಗ್ಗಾಮುಗ್ಗಾ ಕಾಡಿದರು. ಈ ಜೋಡಿ 55 ರನ್‌ಗಳನ್ನು ಸಂಪಾದಿಸಿತು. 25 ಬಾಲ್‌ಗಳಿಂದ 44 ರನ್ ಗಳಿಸಿದ್ದ ವೋಲ್ವಾರ್ಟ್ ಕೊನೆಯ ಬಾಲ್‌ನಲ್ಲಿ ರನ್‌ಔಟ್ ಆದರು. ಗ್ರೇಸ್ ಹೆನ್ರಿ 15 ಬಾಲ್‌ಗಳಿಂದ 35 ಗಳಿಸಿ ಅಜೇಯರಾಗುಳಿದರು. 20 ಓವರ್‌ಗಳಲ್ಲಿ ಡೆಲ್ಲಿ ಕ್ಯಾಪಿಟಲ್ಸ್ ತಂಡವು 4 ವಿಕೆಟ್‌ಗೆ 203 ರನ್ ಗಳಿಸಿತ್ತು.

ರಣಜಿ ಕ್ರಿಕೆಟ್: ಅಂತಿಮ 8ರ ಘಟ್ಟದ ಪಂದ್ಯಗಳು

ಇಂದಿನಿಂದ ಕರ್ನಾಟಕ ಮುಂಬೈ ಕ್ವಾ. ಫೈನಲ್

ಕರ್ನಾಟಕ
ಪಡಿಕ್ಕಲ್ (ನಾಯಕ), ಮಾಯಾಂಕ್, ಕೆ.ಎಲ್. ರಾಹುಲ್, ಕರುಣ್ ನಾಯರ್, ಕೆ.ವಿ. ಅನೀಶ್, ಸ್ಮರಣ್, ಶ್ರೇಯಸ್ ಗೋಪಾಲ್, ಕೃತಿಕ್ ಕೃಷ್ಣ, ಎಂ. ವೆಂಕಟೇಶ್, ವಿದ್ಯಾಧರ್ ಪಾಟೀಲ್, ವಿದ್ವತ್ ಕಾವೇರಪ್ಪ, ಪ್ರಸಿದ್ಧ್ ಕೃಷ್ಣ, ಮೊಹ್ಸಿನ್ ಖಾನ್, ಶಿಖರ್ ಶೆಟ್ಟಿ, ಕೆ.ಎಲ್. ಶ್ರೀಜಿತ್.

ಮುಂಬೈ
ಶಾರ್ದುಲ್ ಠಾಕೂರ್, ಆಕಾಶ್ ಆನಂದ್, ತುಷಾರ್ ದೇಶಪಾಂಡೆ, ಶಿವಮ್ ದುಬೆ, ತನುಷ್ ಕೋಟ್ಯಾನ್, ಮುಶೀರ್ ಖಾನ್, ಅಜಿಂಕ್ಯಾ ರಹಾನೆ, ಹಾರ್ದಿಕ್ ತಾಮೋರ್, ಸಿಲ್ವೆಸ್ಟರ್ ಡಿ'ಸೋಜಾ, ಅಖಿಲ್ ಹೆರ್ವಾಡ್ಕರ್, ಇರ್ಫಾನ್ ಉಮರ್, ಸರ್ಫರಾಜ್ ಖಾನ್.

ರಣಜಿ ಕ್ವಾ.ಫೈನಲ್ ಪಂದ್ಯಗಳು

ಮುಂಬೈ	VS	ಕರ್ನಾಟಕ	ಮುಂಬೈ
ಜಾರ್ಖಂಡ್	VS	ಉತ್ತರಾಖಂಡ	ಜಮ್ಶೆಡ್‌ಪುರ
ಮಧ್ಯಪ್ರದೇಶ	VS	ಜಮ್ಮು ಮತ್ತು ಕಾಶ್ಮೀರ	ಇಂದೋರ್
ಬೆಂಗಾಲ್	VS	ಆಂಧ್ರ	ಬಂಗಾಳ ಅಕಾಡೆಮಿ, ಕಲ್ಯಾಣಿ

ಮುಂಬೈ: ಇಂದಿನಿಂದ ಇಲ್ಲಿ ಆರಂಭವಾಗುವ ರಣಜಿ ಟ್ರೋಫಿ ಕ್ರಿಕೆಟ್ ಟೂರ್ನಮೆಂಟ್‌ನ ಕ್ವಾರ್ಟರ್ ಫೈನಲ್ ಪಂದ್ಯದಲ್ಲಿ ಕರ್ನಾಟಕವು ಮುಂಬೈಯನ್ನು ಎದುರಿಸಲಿದೆ.

ಲೀಗ್‌ನಲ್ಲಿ ಗೆಲ್ಲಲೇಬೇಕಾದ ಕೊನೆಯ ಪಂದ್ಯದಲ್ಲಿ ಕರ್ನಾಟಕ ತಂಡ ಕ್ವಾರ್ಟರ್ ಫೈನಲ್‌ಗೆ ಲಗ್ಗೆ ಇಡಲು ಅತ್ಯುತ್ತಮ ಪ್ರದರ್ಶನ ನೀಡಿತು. ನಾಯಕ ದೇವದತ್ ಪಡಿಕ್ಕಲ್ ಅಜೇಯ 120 ರನ್ ಗಳಿಸುವ ಮೂಲಕ ಕರ್ನಾಟಕ ತಂಡ ಪಂಜಾಬ್ ವಿರುದ್ಧ ಐದು ವಿಕೆಟ್‌ಗಳ ಜಯ ಸಾಧಿಸಿತು. ಪಂಜಾಬ್ ವಿರುದ್ಧ ರೋಮಾಂಚಕ ಗೆಲುವು ಸಾಧಿಸುವ ಮೂಲಕ ಕೊನೆಯ ತಂಡವಾಗಿ ಕ್ವಾರ್ಟರ್ ಫೈನಲ್ ಪ್ರವೇಶಿಸಿದ ಕರ್ನಾಟಕ ತಂಡವು ಈ ಋತುವಿನಲ್ಲಿ ಬಿ ಗುಂಪಿನಿಂದ ಅಗ್ರ 8 ತಂಡಗಳಲ್ಲಿ ಒಂದೆನಿಸಿತು. ನಾಯಕ ನಾಗಿ ದೇವದತ್ ಪಡಿಕ್ಕಲ್ ರಾಜ್ಯ ತಂಡವನ್ನು ಮುನ್ನಡೆಸಲಿದ್ದಾರೆ. ಗಾಯಾಳು ವಾಗಿದ್ದ ಕಾರಣಕ್ಕೆ ಮಧ್ಯಪ್ರದೇಶ ಮತ್ತು ಪಂಜಾಬ್ ವಿರುದ್ಧ ಆಡುವ ಅವಕಾಶ ಕಳೆದು ಕೊಂಡಿದ್ದ ಕರುಣ್ ನಾಯರ್ ಕ್ವಾರ್ಟರ್ ಫೈನಲ್ ಆಡಲು ಕರ್ನಾಟಕ ತಂಡಕ್ಕೆ ಮರಳಿಫಿದ್ದಾರೆ. ಆದರೆ ಮಂಡಿ ರಜ್ಜು ಗಾಯದಿಂದ ಬಳಲುತ್ತಿರುವ ವೇಗಿ ವಿ. ವೈಶಾಕ್ ಪಂದ್ಯಕ್ಕೆ ಅಲಭ್ಯರಾಗಿದ್ದಾರೆ.

ಭಾರತದ ವೇಗಿ ರಾಣಾಗೆ ಗಾಯ

ಮುಂಬೈ: ಟಿ20 ವಿಶ್ವಕಪ್‌ಗೆ ಮುನ್ನ ನಡೆದ ತಂಡ ದಕ್ಷಿಣ ಆಫ್ರಿಕಾ ವಿರುದ್ಧದ ಏಕೈಕ ಅಭ್ಯಾಸ ಪಂದ್ಯದಲ್ಲಿ ಭಾರತ ತಂಡದ ವೇಗಿ ಹರ್ಷಿತ್ ರಾಣಾ ಪಂದ್ಯದ ವೇಳೆ ಗಾಯಗೊಂಡರು. ಕೇವಲ ಒಂದು ಓವರ್ ಮಾತ್ರ ಬೌಲಿಂಗ್ ಮಾಡಿ ಪಂದ್ಯದಿಂದ ಹಿಂದೆ ಸರಿದರು ಪಂದ್ಯದ ಎರಡನೇ ಓವರ್ ಎಸೆಯಲು ಪ್ರಯತ್ನಿಸುವಾಗ ರಾಣಾ ಎರಡು ಬಾರಿ ರನ್ ಅಪ್‌ನಿಂದ ಹೊರ ನಡೆದರು. ನಂತರ ಮೊಣಕಾಲು ಹಿಡಿದುಕೊಂಡು ಮೈದಾನದಿಂದ ಹೊರಕ್ಕೆ ಹೋದರು. ಗಾಯವು ಗಂಭೀರವಾಗಿದೆಯೇ ಎಂಬುದು ಇನ್ನೂ ತಿಳಿದಿಲ್ಲ. ಟೀಕೆಗಳ ನಡುವೆಯೂ, ಹರ್ಷಿತ್ ರಾಣಾ ಕಳೆದ 12 ತಿಂಗಳಿನಿಂದ ತಂಡದಲ್ಲಿ ಸತತ ವಾಗಿ ಸ್ಥಾನ ಪಡೆದಿದ್ದಾರೆ.

ವಿಶ್ವ ಲೆಜೆಂಡ್ಸ್ ಪ್ರೊ ಟಿ20 ಲೀಗ್: ಪುಣೆ ಪ್ಯಾಂಥರ್ಸ್‌ಗೆ ಫೈನಲ್‌ನಲ್ಲಿ ಸೋಲು

ದುಬೈ ರಾಯಲ್ಸ್‌ಗೆ ಲೆಜೆಂಡ್ಸ್ ಪ್ರಶಸ್ತಿ

ಗೋವಾ: ಶಿಖರ್ ಧವನ್ ಹಾಗೂ ಮನ್ವಿಂದರ್ ಬಿಸ್ಲಾ ಅವರ ಸ್ಫೋಟಕ ಅರ್ಧಶತಕಗಳ ಬಲದಿಂದ ದುಬೈ ರಾಯಲ್ಸ್ ತಂಡವು ಚೊಚ್ಚಲ ಆವೃತ್ತಿಯ ವಿಶ್ವ ಲೆಜೆಂಡ್ಸ್ ಪ್ರೊ ಟಿ20 ಲೀಗ್ ಟೂರ್ನಿಯ ಫೈನಲ್ ಹಣಾಹಣಿಯಲ್ಲಿ ಪುಣೆ ಪ್ಯಾಂಥರ್ಸ್ ವಿರುದ್ಧ 8 ವಿಕೆಟ್‌ಗಳ ಗೆಲುವು ಸಾಧಿಸಿತು. ಟೂರ್ನಿಯ ನಿರ್ಣಾಯಕ ಹಂತದಲ್ಲಿ ಅದ್ಭುತ ಫಾರ್ಮ್ ತೋರಿದ ರಾಯಲ್ಸ್ ತಂಡ, ಅದ್ಭುತ ಚೇಸಿಂಗ್ ಪ್ರದರ್ಶನದ ಮೂಲಕ ಗೆಲುವನ್ನು ತನ್ನದಾಗಿಸಿಕೊಂಡಿತು. ಪಂದ್ಯದಲ್ಲಿ ಟಾಸ್ ಗೆದ್ದ ಪುಣೆ ಪ್ಯಾಂಥರ್ಸ್ ಮೊದಲು ಬ್ಯಾಟ್ ಮಾಡಲು ನಿರ್ಧರಿಸಿತು. ಒಂದು ಹಂತದಲ್ಲಿ ಸ್ಫೋಟಕ ಬ್ಯಾಟಿಂಗ್ ಮಾಡಿ ಅರ್ಧಶತಕ ಬಾರಿಸಿ ಆಡುತ್ತಿದ್ದ ಮಾರ್ಟಿನ್ ಗಪ್ಟಿಲ್ (62 ರನ್) ಹಾಗೂ ಪುಣೆ ಪ್ಯಾಂಥರ್ಸ್ ನಾಯಕ ಕೈರೊನ್ ಪೊಲಾರ್ಡ್ ಅವರನ್ನು ಪಿಯೂಷ್ ಚಾವ್ಲಾ ಬೇಗನೇ ಔಟ್ ಮಾಡುವ ಮೂಲಕ ಪಂದ್ಯಕ್ಕೆ ತಿರುವು ನೀಡಿದರು, ಆದರೆ ಶೇನ್ ವ್ಯಾಟ್ಸನ್ ಕೇವಲ 24 ಎಸೆತಗಳಲ್ಲಿ ಅಜೇಯ ಅರ್ಧಶತಕ ಸಿಡಿಸಿ ಮಿಂಚಿದರು. ಇದರಿಂದಾಗಿ ಪುಣೆ ಪ್ಯಾಂಥರ್ಸ್ ತಂಡವು 20 ಓವರ್‌ಗಳಲ್ಲಿ 4 ವಿಕೆಟ್ ನಷ್ಟಕ್ಕೆ 195 ರನ್‌ಗಳನ್ನು ಕಲೆಹಾಕಿತು. ಗುರಿ ಬೆನ್ನತ್ತಿದ ದುಬೈ ರಾಯಲ್ಸ್ ಉತ್ತಮ ಆರಂಭ ಪಡೆಯಿತು. ಮನ್ವಿಂದರ್ ಬಿಸ್ಲಾ ಆಕರ್ಷಕ ಅರ್ಧಶತಕ ದೊಂದಿಗೆ ಇನ್ನಿಂಗ್ಸ್‌ಗೆ ಮುನ್ನಡೆ ನೀಡಿ ದರು. ಇನ್ನೊಂದು ತುದಿಯಲ್ಲಿ ಟೂರ್ನಿ ಯುದ್ದಕ್ಕೂ ಅದ್ಭುತ ಫಾರ್ಮ್‌ನಲ್ಲಿದ್ದ ನಾಯಕ ಶಿಖರ್ ಧವನ್ ಮತ್ತೊಂದು ಅರ್ಧಶತಕ (64 ರನ್) ಬಾರಿಸಿ ಚೇಸಿಂಗ್ ಅನ್ನು ಜೀವಂತವಾಗಿರಿಸಿದರು. ಧವನ್ ವಿಕೆಟ್ ಅನ್ನು ಡ್ವೇನ್ ಬ್ರಾವೋ ಪಡೆದರು.

ಇಂದು ಭಾರತ-ಇಂಗ್ಲೆಂಡ್ ಫೈನಲ್

ಹರಾರೆ: ಇಲ್ಲಿ ಇಂದು ನಡೆಯುವ ಅಂಡರ್ 19 ವಿಶ್ವಕಪ್ ಕ್ರಿಕೆಟ್ ಫೈನಲ್ ಪಂದ್ಯದಲ್ಲಿ ಭಾರತವು ಇಂಗ್ಲೆಂಡ್ ವಿರುದ್ಧ ಸೆಣಸಾಡಲಿದೆ. ಭಾರತ ಅಂಡರ್-19 ತಂಡವು ವಿಶ್ವಕಪ್ ಇತಿಹಾಸದಲ್ಲಿ ಹತ್ತನೇ ಬಾರಿಗೆ ಫೈನಲ್ ತಲುಪಿದೆ. ಬೇರೆ ಯಾವುದೇ ತಂಡಕ್ಕೂ ಇಷ್ಟು ಬಾರಿ ಫೈನಲ್‌ಗೆ ತಲುಪಲು ಸಾಧ್ಯವಾಗಿಲ್ಲ. ಭಾರತದ ನಂತರ ಆಸ್ಟ್ರೇಲಿಯಾ ಈ ಪಟ್ಟಿಯಲ್ಲಿ ಎರಡನೇ ಸ್ಥಾನದಲ್ಲಿದೆ, ಅದು ಇದುವರೆಗೆ ಆರು ಬಾರಿ ಫೈನಲ್ ಆಡಿದೆ. ಅಂಡರ್ 19 ಟೂರ್ನಿಯಲ್ಲಿ ಐದು ಬಾರಿ ಚಾಂಪಿಯನ್ ಆಗಿ ಹೊರಹೊಮ್ಮಿರುವ ಭಾರತ ಅತೀ ಹೆಚ್ಚು ಟ್ರೋಫಿ ಗೆದ್ದ ತಂಡ ಎನಿಸಿಕೊಂಡಿದೆ. 2000ನೇ ಇಸವಿಯಲ್ಲಿ ಮೊದಲ ಬಾರಿಗೆ ಅಂಡರ್-19 ಪ್ರಶಸ್ತಿಯನ್ನು ಟೀಮ್ ಇಂಡಿಯಾ ಗೆದ್ದುಕೊಂಡಿತ್ತು.

ವಿಟಾಕೀಸ್

ವಿಭಿನ್ನ ಶೀರ್ಷಿಕೆಯ ಫೆಬ್ರವರಿ 30

ಬಿಗ್‌ಬಾಸ್ ಖ್ಯಾತಿಯ ಅಭಿಷೇಕ್ ಶ್ರೀಕಾಂತ್ ಕಿರುತೆರೆಯಲ್ಲಿ ಪ್ರಸಿದ್ಧ ಪಡೆದಿದ್ದರು. ಈಗ ಬೆಳ್ಳಿತೆರೆಯಲ್ಲೂ ಮಿಂಚಲು ಸಿದ್ಧವಾಗಿದ್ದಾರೆ. ಅಭಿಷೇಕ್ ಫೆಬ್ರವರಿ 30 ಎಂಬ ಚಿತ್ರದಲ್ಲಿ ಪ್ರಮುಖ ಪಾತ್ರದಲ್ಲಿ ಅಭಿನಯಿಸುತ್ತಿದ್ದಾರೆ. ಸದ್ಯ ಈ ಚಿತ್ರದ ಟ್ರೇಲರ್ ರಿಲೀಸ್ ಆಗಿದೆ. ಸೈಕಲಾಜಿಕಲ್ ಥ್ರಿಲ್ಲರ್ ಕಥಾಹಂದರ ಒಳಗೊಂಡ ಫೆಬ್ರವರಿ 30 ಚಿತ್ರವನ್ನು ಎಂ.ಎಲ್.ಪ್ರಶಾಂತ್ ನಿರ್ದೇಶನ ಮಾಡಿದ್ದಾರೆ. ಶಂಕರ ಮೂವೀಸ್ ಇಂಟರ್ ನ್ಯಾಷನಲ್ ಬ್ಯಾನರ್‌ನಲ್ಲಿ ಜೋಸೆಫ್ ಬೇಬಿ ಬಂಡವಾಳ ಹೂಡಿದ್ದಾರೆ. ಅಭಿಷೇಕ್‌ಗೆ ನಾಯಕಿಯಾಗಿ ಸಾಹಿತ್ಯಾ ಶೆಟ್ಟಿ ಬಣ್ಣಹಚ್ಚಿದ್ದು, ಉಳಿದಂತೆ ಅಕ್ಷಯ್, ಮನೋಜ್, ಶಿವಕುಮಾರ್ ಮುಂತಾದವರು ತಾರಾಗಣದಲ್ಲಿದ್ದಾರೆ.

ಫೆಬ್ರವರಿ 30 ಎಂದಾಗ ಎಲ್ಲರಿಗೂ ಆಶ್ಚರ್ಯವಾಗುತ್ತದೆ. ಯಾಕೆ ಈ ಶೀರ್ಷಿಕೆಯನ್ನು ಆಯ್ದುಕೊಂಡಿದ್ದೇವೆ ಎನ್ನುವುದು ಸಿನಿಮಾ ನೋಡಿದ ಮೇಲೆ ತಿಳಿಯುತ್ತದೆ. ಇದೊಂದು ಸೈಕಾಲಜಿಕಲ್ ಥ್ರಿಲ್ಲರ್ ಸಿನಿಮಾ ಎಂದು ನಿರ್ದೇಶಕ ಪ್ರಶಾಂತ್ ಹೇಳಿದರು. ಇದು ನನ್ನ ಮೊದಲ ಹಾರಾರ್ ಸಿನಿಮಾ. ಇಲ್ಲಿವರೆಗೂ ಈ ರೀತಿಯ ಪಾತ್ರದಲ್ಲಿ ಕಾಣಿಸಿಕೊಂಡಿರಲಿಲ್ಲ. ನಿರ್ದೇಶಕ ಪ್ರಶಾಂತ್ ಅವರು ಕಥೆ ಹೇಳಿದಾಗ ತುಂಬಾ ಹಿಡಿಸಿತು. ಎಲ್ಲರಿಗೂ ಇಷ್ಟವಾಗುವ ಮತ್ತು ಕನೆಕ್ಟ್ ಆಗುವ ಸ್ಟೋರಿ ಈ ಸಿನಿಮಾದಲ್ಲಿದೆ ಎಂದು ಅಭಿಷೇಕ್ ತಿಳಿಸಿದರು. ಫೆಬ್ರವರಿ ಯಲ್ಲಿ ಇರುವುದೇ 28 ದಿನ. ಆದ್ರೆ ಈ ಸಿನಿಮಾಗೆ ಫೆಬ್ರವರಿ 30 ಅಂತ ಶೀರ್ಷಿಕೆ ಯಾಕೆ ಇಟ್ಟಿದ್ದೇವೆ ಎಂಬುದಕ್ಕೆ ಒಂದು ಕಾರಣವೂ ಇದೆ ಎಂದು ಚೇತನ್ ಹೇಳಿದರು.

ಫಾರ್ಗಾ ಕಾಡುವ, ಸೆಳೆಯುವ ಚಿತ್ರ

ಅರುಣ್ ರಾಮ್‌ಪ್ರಸಾದ್

ಪ್ರಶಾಂತ್.ಟಿ.ಆರ್

ಕನ್ನಡದಲ್ಲಿ ಅಪರೂಪ ಎನ್ನಬಹುದಾದ ಹಾರರ್, ಆ್ಯಕ್ಷನ್, ಥ್ರಿಲ್ಲರ್ ಜಾನರ್‌ನ ಫಾರ್ಗ ತೆರೆಗೆ ಬಂದಿದೆ. ಈ ಚಿತ್ರದ ಮೂಲಕ ಅರುಣ್ ರಾಮ್‌ಪ್ರಸಾದ್ ಚಂದನವನಕ್ಕೆ ಪರಿಚಿತರಾಗುತ್ತಿದ್ದಾರೆ. ಮೊದಲ ಚಿತ್ರದಲ್ಲಿಯೇ ನಿರೀಕ್ಷೆ ಮೂಡಿಸಿರುವ ಅರಣ್ ತಮ್ಮ ಸಿನಿಮಾದ ಕುರಿತಂತೆ ವಿ.ಸಿನಿಮಾಸ್ ನೊಂದಿಗೆ ಮಾತನಾಡಿದ್ದಾರೆ.

- **ವಿ.ಸಿ : ಈ ಕಥೆ ಒಪ್ಪಿಕೊಳ್ಳಲು ಕಾರಣ?**
- **ಅರುಣ್:** ನಿರ್ದೇಶಕರು ಬಂದು ಕಥೆ ಹೇಳಿದಾಗ, ನಾನು ಪ್ರೊಡಕ್ಷನ್ ಮ್ಯಾನೇಜರ್ ಆಗಿ ಕಥೆ ಆಲಿಸುತ್ತಿದ್ದೆ. ಫಾರ್ಗಾ ಕಥೆ ಕೇಳುತ್ತಾ, ಕೇಳುತ್ತಾ ಒಮ್ಮೆಗೆ ಆಶ್ಚರ್ಯವಾಯಿತು. ಹೊಸ ಲೋಕಕ್ಕೆ ಹೋಗಿ ಬಂದಂತಾಯ್ತು. ಈ ಚಿತ್ರಕ್ಕಾಗಿ ನಿರ್ದೇಶಕರು ಹೊಸ ಪ್ರತಿಭೆಯನ್ನು ಹುಡುಕುತ್ತಿದ್ದರು. ಅದಾಗಲೇ ನಾನೂ ಕೂಡ ನೀನಾಸಂನಲ್ಲಿ ಅಭಿನಯ ತರಬೇತಿ ಮುಗಿಸಿ ಬಂದಿದ್ದೆ. ಹಾಗಾಗಿ ನಿರ್ದೇಶಕರು ನನ್ನನ್ನೇ ನಾಯಕ ನನ್ನಾಗಿ ಚಿತ್ರಕ್ಕೆ ಆಯ್ಕೆ ಮಾಡಿದರು.
- **ವಿ.ಸಿ: ಚಿತ್ರಕ್ಕೆ ತಯಾರಿ ಹೇಗಿತ್ತು?**
- **ಅರುಣ್:** ನಿರ್ದೇಶಕರು ಕಥೆ ಹೇಳುತ್ತಿದ್ದಂತೆ ಒಮ್ಮೆ ಅಲ್ಲಿ ಬರುವ ಪಾತ್ರಗಳು ನನ್ನ ಮನಸನ್ನು ಆವರಿಸಿದವು. ಅದೇ ಲೋಕದಲ್ಲಿ ಪಯಣಿಸುತ್ತಿದ್ದೆ. ಚಿತ್ರದಲ್ಲಿ ಹಾರರ್, ಥ್ರಿಲ್ಲರ್ ಎಲ್ಲವೂ ಬೆರೆತಿದೆ. ಭರ್ಜರಿ ಆ್ಯಕ್ಷನ್ ಕೂಡ ಇದೆ. ನಾನು ನೀನಾಸಂ ತರಬೇತಿ ಮುಗಿಸಿ ಬರುತ್ತಿದ್ದಂತೆ ನನ್ನ ತಂದೆ ನನ್ನನ್ನು ಕಲರಿಪಯಟ್ಟು ತರಬೇತಿಗೆ ಕಳುಹಿಸಿದರು. ಅಲ್ಲಿ ಹಲವು ಪಟ್ಟುಗಳನ್ನು ಕಲಿತೆ. ಅದು ಫಾರ್ಗಾ ಚಿತ್ರದ ಸಾಹಸ ಸನ್ನಿವೇಶ ಗಳಲ್ಲಿ ಅಭಿನಯಿಸಲು ಸಾಧ್ಯವಾಯಿತು.
- **ವಿ.ಸಿ : ಚಿತ್ರದಲ್ಲಿನ ರೈಟರ್ ಪಾತ್ರ ಚಾಲೆಂಜಿಂಗ್ ಅನ್ನಿಸಿತೆ ?**
- **ಅರುಣ್:** ಚಿತ್ರದಲ್ಲಿ ನನ್ನ ಪಾತ್ರ ಹಲವು ಶೇಡ್‌ಗಳಲ್ಲಿ ಸಾಗುತ್ತವೆ. ಅದರಲ್ಲಿ ರೈಟರ್ ಪಾತ್ರವೂ ಒಂದು. ಸಾಮಾನ್ಯವಾಗಿ ಬರಹಗಾರ ಅಂದಾ ಕ್ಷಣ, ಅದೇ ಹಳೆ ಜುಬ್ಬ, ದಾಡಿ ನಮ್ಮ ಕಣ್ಣಮುಂದೆ ಬರುತ್ತದೆ. ಆದರೆ ಇಂದಿನ ದಿಕ್ಕೆ ಹೊಂದುವಂತೆ ರೈಟರ್ ಹೇಗಿರಬೇಕು ಎಂಬುದನ್ನು ಕಲ್ಪಿಸಿಕೊಂಡು ಅದೇ ರೀತಿಯ ಪಾತ್ರ ಸೃಷ್ಟಿಸಿ, ನಿರ್ವಹಿಸಿದ್ದೇನೆ. ರೈಟರ್ ಪಾತ್ರ ನಿಜವಾಗಿಯೂ ಹೊಸತನ ತಂದಿದೆ.
- **ವಿ.ಸಿ : ಹಿರಿಯ ಕಲಾವಿದರೊಂದಿಗೆ ಅಭಿನಯಿಸಿದ ಅನುಭವ ಹೇಗಿತ್ತು ?**
- **ಅರುಣ್:** ಫಾರ್ಗಾ ನನ್ನ ಚೊಚ್ಚಲ ಸಿನಿಮಾ ಈ ಚಿತ್ರದಲ್ಲಿ ಹಿರಿಯ ಕಲಾವಿದರೊಂದಿಗೆ ಅಭಿನಯಿಸಿದ್ದು ಖುಷಿಕೊಟ್ಟಿದೆ. ನಾನು ಬಾಲ್ಯ ದಿಂದಲೂ ಸಾಯಿ ಕುಮಾರ್ ಅವರ ಸಿನಿಮಾಗಳನ್ನು ನೋಡಿಕೊಂಡು ಬೆಳೆದವನು. ಈಗ ಮೊದಲ ಚಿತ್ರದಲ್ಲಿ ಅವರ ಜತೆಗೆ ಅಭಿನಯಿಸಿದ್ದು ಖುಷಿ ಕೊಟ್ಟಿದೆ. ಅವರಿಂದ ಸಾಕಷ್ಟು ಕಲಿತ್ತಿದ್ದೇನೆ.

> ಫಾರ್ಗಾ ಸಿನಿಮಾದ ಕಥೆ ಮನಸಿಗೆ ಹಿಡಿಸಿತು. ಹಾಗಾಗಿ ನಾನೇ ನಿರ್ಮಾಣ ಮಾಡಲು ಒಪ್ಪಿದೆ. ಶಶಿಧರ್ ಕಥೆ ಹೇಳಿದ ರೀತಿ ಇಷ್ಟವಾಯಿತು. ಇದು ಮಾಮೂಲಿ ಸಿನಿಮಾ ಅಲ್ಲ, ವಿಭಿನ್ನ ರೀತಿಯ ಸಿನಿಮಾ. ತೆರೆಯಲ್ಲಿ ಚಿತ್ರ ನೋಡಿ ಎಲ್ಲರೂ ಖಂಡಿತಾ ಮೆಚ್ಚುತ್ತಾರೆ. ಈ ಸ್ಟೋರಿ ಮತ್ತೆ ಮತ್ತೆ ಬಿಡದೆ ಕಾಡುತ್ತದೆ.
> **-ಅಶ್ವಿನಿ ರಾಮ್‌ಪ್ರಸಾದ್** ನಿರ್ಮಾಪಕ

> ಇದು ಕರಾವಳಿ ಭಾಗದಲ್ಲಿ ತೆರೆದುಕೊಳ್ಳುವ ಕಥೆ. ಅಲ್ಲಿ ಫಾರ್ಗಾ ಎಂಬ ಮಹರ್ಷಿ ನೆಲೆಸಿದ್ದರಿಂದ ಆ ಊರಿಗೆ ಫಾರ್ಗಾ ಎಂದೇ ಹೆಸರು ಬಂತು. ಆ ಹಳ್ಳಿಗೆ ಹೋದವರು ಯಾರೂ ಮರಳಿ ಬರುವುದಿಲ್ಲ. ಅದು ಯಾಕೆ, ಏನು ಎಂಬುದನ್ನು ಸಿನಿಮಾದಲ್ಲಿ ರೋಚಕವಾಗಿ ಕಟ್ಟಿಕೊಡಲಾಗಿದೆ.
> **-ಶಶಿಧರ್** ನಿರ್ದೇಶಕ



ಸಾಯಿಕುಮಾರ್ ನಿಗೂಢ ಕೋಟೆ

ಹಿರಿಯ ನಟ ಸಾಯಿ ಕುಮಾರ್ ಕನ್ನಡ ಚಿತ್ರರಂಗಕ್ಕೆ ಬಂದು ಐವತ್ತು ವರ್ಷಗಳೇ ಕಳೆದಿವೆ. ಪೊಲೀಸ್ ಪಾತ್ರಗಳಲ್ಲಿಯೇ ಹೆಚ್ಚು ಗಮನ ಸೆಳೆದ ಸಾಯಿಕುಮಾರ್ ಆ ಬಳಿಕ ವಿಭಿನ್ನ ಪಾತ್ರಗಳಲ್ಲಿಯೂ ಬಣ್ಣಹಚ್ಚಿ ರಂಜಿಸಿದರು. ಈಗ ಫಾರ್ಗಾ ಚಿತ್ರದಲ್ಲಿ ತನಿಖಾಧಿಕಾರಿಯಾಗಿ ಕಾಣಿಸಿಕೊಂಡಿದ್ದಾರೆ. ನನ್ನ ಐವತ್ತು ವರ್ಷಗಳ ಸಿನಿ ಜರ್ನಿಯಲ್ಲಿ ಹಲವು ಪಾತ್ರಗಳನ್ನು ನಿರ್ವಹಿಸಿದ್ದೇನೆ. ಆದರೆ ಫಾರ್ಗಾದ ಪಾತ್ರ ನನ್ನನ್ನು ಬಹುವಾಗಿ ಕಾಡಿತು. ನಿರ್ದೇಶಕ ಶಶಿಧರ್ ಒಳ್ಳೆಯ ಕಥೆಯನ್ನು ಸಿದ್ಧಮಾಡಿಕೊಂಡು, ಯಥಾವತ್ತಾಗಿ ತೆರೆಗೆ ತಂದಿದ್ದಾರೆ. ಸಿನಿಮಾ ನೋಡುತ್ತಿದ್ದರೆ ಫಾರ್ಗಾದ ಊರಿನೊಳಗೆ ಪ್ರವೇಶಿ ಬಂದಂತಾಗುತ್ತದೆ. ಇಲ್ಲಿ ಪ್ರತಿ ಪಾತ್ರಗಳು ಪ್ರಮುಖವಾಗಿವೆ. ನಾಯಕ ನಟ ಅರುಣ್‌ಗೆ ಇದು ಚೊಚ್ಚಲ ಚಿತ್ರ, ವಾದರೂ ಅವರು ಎಲ್ಲಿಯೂ ಹೊಸಬರು ಅನ್ನಿಸಲೇ ಇಲ್ಲ. ನುರಿತ ಕಲಾ ವಿದನಂತೆ ಮೆಚ್ಚುವಂತೆ ನಟಿಸಿದ್ದಾರೆ. ಆ ಮೂಲಕ ಚಂದನವನದಲ್ಲಿ ಭರವಸೆಯ ನಟನಾಗಿ ಗುರುತಿಸಿಕೊಂಡಿದ್ದಾರೆ. ಮುಂದೆ ಚಿತ್ರರಂಗದಲ್ಲಿ ಅರುಣ್ ಅವರಿಗೆ ಒಳ್ಳೆಯ ಭವಿಷ್ಯವಿದೆ ಎಂದು ಸಾಯಿ ಕುಮಾರ್ ಮೆಚ್ಚಿ ಕೊಂಡಾಡಿದ್ದಾರೆ.

> ನಾನು ಅಭಿನಯಿಸುವ ಚಿತ್ರದಲ್ಲಿ ನಾಯಕನಿಗಿಂತ ಕಥೆಯೇ ಪ್ರಧಾನವಾಗಿರಬೇಕು, ಅಂತಹ ಸ್ಟೋರಿಯನ್ನು ಹುಡುಕು ತ್ತಿದ್ದೆ, ಅದೇ ಸಮಯಕ್ಕೆ ಫಾರ್ಗಾದ ಕಥೆ ಸಿಕ್ಕಿತು. ನಿರ್ದೇಶಕರು ಅದ್ಭುತವಾಗಿ ಚಿತ್ರದ ಕಥೆ ಹೆಣೆದು ಅಷ್ಟೇ ಸೊಗಸಾಗಿ ಸಿನಿಮಾ ನಿರ್ದೇಶನ ಮಾಡಿದ್ದಾರೆ.

ಬಾಗಲಕೋಟೆ
SMART MOVIZ
ರಾಣೆಬೆನ್ನೂರು
SMART MOVIZ
ಬೆಳಗಾವಿ
ನಿರ್ಮಲಾ
PVR INOX
KAPEEL CINEMAS
Bharath Cinemas
ಕನಕಗಿರಿ
ರಾಧಿಕ
ಕಲಬುರ್ಗಿ
PVR INOX
MIRAJ
ಕೊಪ್ಪಳ
ಶಿವೇ
ಗಂಗಾವತಿ
ಕನಕದುರ್ಗಾ
ರಾಯಚೂರು
MIRAJ
ಶಿವಮೊಗ್ಗ
MULTIPLEX
ಭದ್ರಾವತಿ
ಸತ್ಯ
Bharath Cinemas
ಕಡೂರು
ವಿಜಯಲಕ್ಷ್ಮೀ
ಶಿಕಾರಿಪುರ
ಮಾಲತೇಶ
ಚನ್ನಗಿರಿ
ಲಕ್ಷ್ಮೀ
ಗುಲ್ಬರ್ಗ
ತ್ರಿವೇಣಿ
ಬಿಜಾಪುರ
ಡ್ರೀಮ್ ಲ್ಯಾಂಡ್
ಮಂಗಳೂರು
SP CINEMAS
PVR INOX
cinépolis
Bharath Cinemas
Cine GALAXY
ಉಡುಪಿ
Bharath Cinemas
ಮಣಿಪಾಲ
PVR INOX
cinépolis
ಕುಂದಾಪುರ
Bharath Cinemas
ಪಡುಬಿದ್ರೆ
Bharath Cinemas
ಪುತ್ತೂರು
Bharath Cinemas
ಹಾಗೂ ರಾಜ್ಯಾದ್ಯಂತ

ಅನುಪಮಾ
7.1 DOLBY DIGITAL 4K ULTRA HD 4ಆಟ

AMB CINEMAS KAPALI
ಬೆಂಗಳೂರು
ಮಾಗಡಿ ರೋಡ್
VEERESH CINEMAS
ಉಲ್ಲಾಳ್
ಶ್ರೀ ವಜ್ರೇಶ್ವರಿ
ಜೆ.ಪಿ ನಗರ
ಸಿದ್ಧೇಶ್ವರ
ವಿದ್ಯಾಪೀಠ
ಚಂದ್ರೋದಯ
ಮಲ್ಲತ್ತಳ್ಳಿ
ವಿ ಆರ್ ಸಿನಿಮಾಸ್
ಅವಲಹಳ್ಳಿ
ವೆಂಕಟೇಶ್ವರ
ಹರಿನಗರ
ವಿನಾಯಕ

PVR INOX
MALL OF ASIA
NEXUS | ORION
REX | GT | VR MALL
LIDO | MANTRI | RMZ
SWAGATH | CENTRAL
GARUDA | YELAHANKA
VAISHNAVI | REGALIA
MARKET CITY SPIRIT
UPTOWN | BHARATIYA
GLOBAL | FALCONCITY
NEIGHBOURHOOD
SBR | BROOKFIELD
VEGACITY
cinépolis
ETA | MEENAKSHI
ORION EAST | LULU
SHANTINIKETAN | SJR
ROCKLINE mall & cinemas

GOPALAN CINEMAS
Gopalan Mall, Sirsi Circle, Mysore Road. Bangalore
ARCH | GRAND
INNOVATION
INNOVATION BTM
SIGNATURE
LEGACY
MIRAJ
SUNKADAKATTE
CINEPHILE THE MOVIE HUB
HSR LAYOUT
INNOVATIVE MULTIPLEX
MARATHALLI
KINO CINEMAS
SEEGEHALLI
MOVIETIME CINEMAS
R R NAGARA
new fangled
M G ROAD

ತುಮಕೂರು
ಗಾಯತ್ರಿ
PVR INOX
ತಿಪ್ಪಟೂರು
ಲಕ್ಷ್ಮೀ
ಹಗರಿಬೊಮ್ಮನಹಳ್ಳಿ
ಕೊಟ್ಟೂರೇಶ್ವರ
ಚಿಕ್ಕಬಳ್ಳಾಪುರ
ವಾಣಿ
ಕೋಲಾರ
ಭವಾನಿ
ಮೈಸೂರು
ಅಡ್ಲೋ
PVR INOX
DRC CINEMAS ENTERTAINMENT UNLIMITED
GARUDA | FORUM
SATYAM | CENTRO
VISION CINEMAS
ಮಂಡ್ಯ
ಸಂಜಯ್
ಹಾಸನ
ಪಿಕ್ಚರ್ ಪ್ಯಾಲೇಸ್

ಚಿತ್ರದುರ್ಗ
ವೆಂಕಟೇಶ್ವರ
ದಾವಣಗೆರೆ
ವಸಂತ
MOVIETIME CINEMAS
ಮುಧೋಳ್
ಸೂರ್ಯವಂಶಿ
ಹೊಸಪೇಟೆ
ಸರಸ್ವತಿ
ಹುಬ್ಬಳ್ಳಿ
ಸುಧಾ
LAXMI CITY PRIDE MULTIPLEX
cinépolis
ಬಳ್ಳಾರಿ
MOVIETIME CINEMAS
ನಟರಾಜ
ಧಾರವಾಡ
ಸಂಗ್ರಾಮ
PVR INOX